ಭಕುತ ನೀ ಪೂರ್ವ ಜನ್ಮಾಂತರದಿ ಗುರುಕೃಪೆಯ ಪಡೆದಿರಲು ಶಾಸ್ತ್ರಜ್ಞಾನ ॥
ವಿಕಸಿತವು ಮಾಗಿಹುದು ವೀರಮಾಹೇಶ್ವರರ ।
ಪ್ರಕಟಿತಂದೆನಿಸಲು ಮೂಲಮಂ ದೊರಕುವುದು ।

ಸುಕ (?) ರೂಪದಿಂದೆ ಪೋಗೆಂದು ಬೆಸನವನೀಯೆ ಕೈಕೊಂಡೆ ನೀಕಾವ್ಯವ ॥೨೪॥
ಶ್ರೀಮಹಾನೂರೊಂದ್ವಿರಕ್ತರ ಚರಿತ್ರೆಯನು ।
ಪ್ರೇಮದಿಂದಲಿ ಪೇಳ್ದ ಕವಿವರನದಾರೆನಲು ।
ಕಾಮಾರಿ ಭಕ್ತ [ರ] (ಜನ) ಚರಣಕಿಂಕರ ಬಾಲಕನು ಮೋದಿ ರುದ್ರಭಕ್ತ ॥
ನೇಮಿಸಿದ ನೀ ಕಾವ್ಯ ತಪ್ಪ ತಡೆಯುಳ್ಳೊಡಂ ।
ಸ್ವಾಮಿ ಭೃತ್ಯನ ತೊದಲ್ನುಡಿಯೆಂದು ಪಾಲಿಸುತ ।
ನೇಮಗಣಛಂದಸ್ಸು ನವರಸಾಲಂಕಾರಗಳತಿದ್ದಿ ಕರು [ಣಪಮಾಳ್ಪು] [ಣೆಸುವ್ರ
ದು] ॥ ೨೫ ॥

* * * *

ಶಿವಶಿವಾ ಎಂಬ ತೊದಲ್ನುಡಿ ಸ್ಮರಣೆ ಬಲದಿಂದೆ ।
ವಿವರಿಸಿದೆ ಸೂಕ್ಷ್ಮಗ್ರಾಹ್ಯದೊಳು ಕಲ್ಯಾಣದಾ ।
ಬವಣೆಯಂ ಬಾಲನುಡಿಯಲಿ ಪೇಳ್ದ ಸುಕಥೆಯಂ ಪಾಲಿಸುತ ಲಾಲಿಸುವುದು ॥
ಶಿವಭಕ್ತ ಹೃದಯದಲಿ ಶಿವನಿರ್ಪನೆಂಬುದಂ ।
ವಿವರದಿ ರಹಸ್ಯಾಗಮಾದಿಗಳು ಸಾರುತಿವೆ ।
ಶಿವನ ಕಲ್ಯಾಣ ಚಾರಿತ್ರವಂ ಪೇಳುವೆನು ಕೃತಿಗೆಯಿದು ಪ್ರಥಮ ಸಂಧಿ ॥೧೨೮॥

Colophon :

ಅಂತು ಸಂಧಿ ೧ ಕ್ಕಂ ಪದನು ೧೨೮ ಕ್ಕಂ ಮಂಗಳ ಮಹಾಶ್ರೀ.

End :

ಪರಿವರ್ಧಿನಿ॥ ರುದ್ರಗಣಂಗಳು ನಟಿಸುವ ಚರಿತೆಯ ।
ರುದ್ರನ ಬೆಸನದಿ ರುದ್ರನು ಪೇಳ್ವ ।
ರುದ್ರನ ಭಕ್ತರು ನಿಳದರೆ ತಿದ್ದಿರಿ ತಪ್ಪುಗಳುಳ್ಳನಿತು ।
ಕ್ಷುದ್ರಾಹಂಕಾರದಿ ತಿಳಯದೆ ನಿಂದಿಪ । (?)
ಬುದ್ಧಿಯ ಹೀನರ ರುದ್ರನು ಮೆಚ್ಚನು ।
ರುದ್ರನ ತುತಿಕವನಂಗಳ ದೂಷಿಸೆ ಬಿದ್ದರು ನರಕದೊಳು ॥ ೧೪೦ ॥

ಭಾಮಿನಿ॥ ಶಾಲಿವಾಹನ [ಶಕಷೋಡಶಶತ] (ಶತಕಷೋಡಶ) ॥
ಮೇಲೆ ಪಂಚದಶಾಷ್ಟವತ್ಸಕ ।
ಕಾಲಪಿಂಗಳ ನಾಮವತ್ಸರ ಮಾರ್ಗಶಿರ ಬಹುಳ ॥
ಮೂಲಷಾಡ್ಯಾದಿತ್ಯವಾರದಿ ।
ಲೀಲೆಯಿಂದೆ ವಿರಕ್ತಚರಿತೆಯ ।
ಭಾಲಲೋಚನ ರುದ್ರಭಕ್ತನು ಪೇಳ್ದ ಷಟ್ಪದಿಯ ॥ ೧೪೧ ॥
ಶರಣು ಏಕಾದಶ ರುದ್ರಗಣ । (?)
ಶರಣು ವೀರಗಣ ಪ್ರಮಥಗಣ ।
ಶರಣು ಮಂಗಳವಾದ ಮಹಗಣ ಬಸವಗಣ ಕುಲಕೆ ॥ (?)
ಶರಣು ಪೂರ್ವಪುರಾತಸ್ತೋಮಕೆ (?)
ಶರಣು ನೂರೊಂದು ವಿರಕ್ತರ ಪದ । (?)
ಕರುಣದಿಂದಲಿ ಮುಗಿಯೆ ಪೇಳದ ಶರಣು ಶರಣಾರ್ತಿ ॥ ೧೪೨ ॥

ಶಾ. ವಿ.॥ ಇಂತೀ [ವಿ] ರಕ್ತರ ಲೀಲೆ ಲೋಲ ಚರಿತಂ ಸದ್ಭಕ್ತಿಯೊಳ್ ಲಾಲಿಸು- ।
ತ್ತಂತರಂಗವು (?) ಶುದ್ಧವಾಗೆ ಬರೆದೋದಲ್ ಜ್ಞಾನಭಕ್ತಿ ಪ್ರದಂ ॥
ಶಾಂತಾಲಿಂಗನು (?) ನಾಗಲಿಂಗಗುರು ವೀರಶ್ಯಾಣ್ಯ ಮಾಹೇಶ್ವರಂ (?)
ಚಿಂತಿತಾರ್ಥವ ನಿತ್ತು ರಕ್ಷಿಸುವರು ಶ್ರೀಯಿಷ್ಟಲಿಂಗೇಶ್ವರಾ ॥ ೧೪೩ ॥

Colophon :

ಅಂತು ಸಂಧಿ ೬ ಕ್ಕಂ ಪದನು ೭೪೦ ಕ್ಕಂ ಮಂಗಳ ಮಹಾಶ್ರೀ.

(ವಿ-ವಿ)—

ಸಮಗ್ರ. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿಲ್ಲ. ತಪ್ಪುಗಳು ಹೇರಳವಾಗಿವೆ. ಪುಸ್ತಕದ ಕೊನೆಯಲ್ಲಿ 'ಈ ನೂರೊಂದು ವಿರಕ್ತರ ಕಾವ್ಯ ಬರೆದಾತ ದಾರು ಎಂದರೆ ಸಕಲರಿಗೆ ಕರುಣದ ಕಂದನಾದಂಥ ನಮ್ಮ ಬರೆಸುವ ವೀರಸಂಗಯ್ಯನ ತನುಜ ವೀರಬಸಯ್ಯನು ಬರೆದಂಥ ಪುಸ್ತಕ' ಎಂದಿದೆ.

ಇದು ಕೆಲವು ಷಟ್ಪದಿಗಳಲ್ಲಿ ಬರೆದಿದೆ. ಸಂಧಿ ೬. ಪದ್ಯಗಳು ೭೪೦. ಶಿವಭಕ್ತರಿಂದ ನೂರೊಂದು ವಿರಕ್ತರ ಚರಿತೆಯು ಇದರಲ್ಲಿ ಉಕ್ತವಾಗಿದೆ. ಈ ಗ್ರಂಥವನ್ನು ರಚಿಸುವುದಕ್ಕೆ ಕಾರಣವು ಉದಾಹೃತ ಭಾಗದ 'ಪರವಾದಿಗಳ' ಎಂಬುದಾದಿಯಾದ ನಾಲ್ಕು ಪದ್ಯಗಳಲ್ಲಿ ಹೇಳಿದೆ. ಗ್ರಂಥದಾದಿಯಲ್ಲಿ ಶಿವಸ್ತುತಿಯಿದೆ. ಬಳಿಕ ಕವಿ ಶಾಂಭವಿ, ಗಣೇಶ, ವೀರೇಶ, ಭದ್ರಕಾಳಿ, ಭೃಂಗಿ, ನಂದಿ, ಸ್ಕಂದ ಇವರನ್ನು ಸ್ತುತಿಸಿದ್ದಾನೆ. ಶಿವಭಕ್ತರಾದ ಬಸವಾದಿಗಳನ್ನು ನುತಿಸಿ ಪೂರ್ವಕವಿಗಳಲ್ಲಿ ಹರಿಹರ ಮುಂತಾದವರನ್ನು ಹೊಗಳಿದ್ದಾನೆ. ಗ್ರಂಥ ನಿರ್ಮಾಣ ಕಾಲವನ್ನು ಸೂಚಿಸುವ ಒಂದು ಪದ್ಯವು ಇದರಲ್ಲಿ ತಪ್ಪಾಗಿ ಬರೆದಿದೆ. ಕೊನೆಯಲ್ಲಿ ಒಂದು ಶಾರ್ದೂಲ ವಿಕ್ರೀಡಿ ವೃತ್ತವಿದೆ. ಅದೂ ತಪ್ಪಾಗಿದೆ.

ಕವಿ ಮೋದಿರುದ್ರನೆಂಬುವನು. ವೀರಶೈವಮತದವನು. ಇವನು ಪಂಚಪೋದ್ಭವ ಕಾವ್ಯವೆಂಬ ಮತ್ತೊಂದು ಗ್ರಂಥವನ್ನೂ ಬರೆದುದಾಗಿ ಗೊತ್ತಾಗುತ್ತದೆ. ಮೇಲೆ ಉದ್ಧರಿಸಿರುವ ಗ್ರಂಥನಿರ್ಮಾಣ ಕಾಲವನ್ನು ಸೂಚಿಸುವ ಪದ್ಯದಿಂದ ಇವನು ವಿರಕ್ತರ ಕಾವ್ಯವನ್ನು ಶಾಲಿ. ಶಕ. ೧೬೫೮ ನೆಯ ಪಿಂಗಳ ಸಂವತ್ಸರದಲ್ಲಿ ಎಂದರೆ ಕ್ರಿ.ಶ. 1736 ರಲ್ಲಿ ಬರೆದನೆಂದು ತಿಳಿಯುತ್ತದೆ.

No. 1054. ವಿರಕ್ತರಕಾವ್ಯ by ಮೋದಿ ರುದ್ರ-
VIRAKTARAKĀVYA BY MŌDI RUDRA.

Substance, paper. Size, 10·7/16 × 9·7/16 inches. Pages, 235. Lines, 20 on a page. Extent, 2,750 granthas. Character, Kannada. Condition, good. Appearance, new. Mode of writing, good.

Restored in 1938–39 from the Ms. described above (No. 1053).

Complete in 6 sandhis.

(ವಿ-ವಿ.)—

ಸಮಗ್ರವಾಗಿದೆ. ಇದು ಹಿಂದಣ (೧೦೫೩) ನಂಬರಿನಲ್ಲಿ ವರ್ಣಿತವಾದ ಪ್ರತಿಯ ಪ್ರತಿಕೃತಿಯು.

No. 1055. ವೀರೇಶ್ವರ ಚರಿತ್ರೆ by ಚೆನ್ನಣ.
VĪREŚVARA CARITRE BY CENNAṆA.

Substance, palm-leaf. Size, 12-7/16 × 1-3/16 inches. Pages, 42. Lines, 5 to 6 on a page. Extent, 370 granthas. Character, Kannada. Condition, much injured. Appearance, old. Mode of writing, not bad.

Begins on fol. 1*a* of the Ms. described under No. 497 *ante*.

Incomplete.

Deals with the puranic legend about the birth of Vīrabhadra and the destruction of the scarifice performed by Dakṣa, at the desire of God Śiva who was offended by Dakṣa, for not inviting him (Siva) for the sacrifice.

The author *Cennaṇa* is the son of Sōmēśvara. His date is about 1650 A.D.

Beginning :

ಸಾಂಗತ್ಯ ॥ ಶ್ರೀಮದಗಜೆಯು ಮುಖಾಂಬುಜ ದಿನಕರ ।
ತಾಮರಸೋದ್ಭವ ವಂದ್ಯ ॥
ಪ್ರೇಮದಿ ಹುಲಿಗೆರೆ ಪುರದ ಸೋಮೇಶ್ವರ ।
ಕಾಮಿತ ಫಲವೀವುದೆನಗೆ ॥ ೧ ॥
ಸಲೆ ಪುಂಡರೀಕ ಪದ್ಮಾಕರದೊಳು ।
ನೆಲಸಿಯಾದಯ್ಯ ನಿಚ್ಛಯನು ॥
ಸಲಿಸಿ ವಾದಿಗಳ ಭಂಗಿಸಿದ ಸೋಮೇಶ್ವರ ।
ಒಲಿದೀವುದೆನಗೆ ಸನ್ಮತಿಯು ॥ ೨ ॥

*　　　*　　　*　　　*

ಶಿವಧರ್ಮರೂಪ ಶಿವಾಚಾರಕುಲದೀಪ ।
ತವೆ ಮುಕ್ತಿಕಾಮಿನಿರೂಪ ॥
ಭವಭಕ್ತಿರಸಕೂಪ ಬಸವ ಸಾತ್ವತ ।
ಭುವನಪಾಲಕ ಪಾಲಿಸೆನ್ನ ॥ ೯ ॥
ಕಱೆತೆಗೊರಲನ ನೇತ್ರತ್ರಯವಂತಿರ್ಪ ।
ಕೆಱೆತೆಯು ಪದ್ಮರಸಾರ್ಯರಿಗೆ ॥
ಹರಿದೇವೇಶಗೆ ಪಾಲ್ಕುರಿಕೆ ಸೋಮೇಶ್ವರ ।
ಗುರುಗಳಿಗಾನೆಱಗುವೆನು ॥ ೧೦ ॥
ಪೊಡವಿ ಪವಿತ್ರ (?) ನಿರ್ಮಲಚಾರಿತ್ರ ವು ।
ಗ್ಗಡದ ಕೃಪಾರಸ ನೇತ್ರ ॥
ಜಡೆಯು ಕೊಡುವ ಗುರುರಾಯ ನಿಮ್ಮಯ ಪದ ।
ಒಡದೆನ್ನ ಪಾಲಿಸುತ್ತಿರಲಿ ॥ ೧೨ ॥

*　　　*　　　*　　　*

ಧಾರಿಣಿಯೊಳು ಕೈಲಾಸವೆಂದೆನಿಸಿರ್ದ ।
ವೀರಶೈವಾಚಾರಪೂರ ॥
ಚಾರು ಗುಮ್ಮಳಪುರವನು ಪಾಲಿಪ ಪೆಮ್ಮ ।
ಸಾರಾಧ್ಯರಿಗೆಱಗುವೆನು ॥ ೧೪ ॥
ಹರವಿರಹಿತ್ರಯಾಗವ ಮಾಡೆ ದಕ್ಷನು ।
ಪುರಮಥನನು ಕೋಪಿಸಲು ॥
ವರವೀರಭದ್ರನೊಗೆದ ಕಥನವ ವಿ ।
ಸ್ತರಿಪೆನು ಸುಜನರಾಲಿಪುದು ॥ ೧೫ ॥
ಕೃತಿನಾಮವು ವೀರೇಶ್ವರಚರಿತೆ ಯಿಂ- ।
ಕೃತಿಪತಿ ವೀರೇಶ್ವರನು ॥
ಕ್ಷಿತಿಪಾಲರು ಶಿವಭಕ್ತತತಿ ಯಿಂ ।
ಕೃತಿ(ಯು) ರಾಜಿ [ಪಿ] (ಪರು) ಜಗದೊಳ್ ॥ ೧೬ ॥
ವರವೀರಶೈವಾಚಾರ್ಯ ಮಹೇಶ ಪಾ- ।
ದರಸರ ಸುತ ರಾಮೇಶ ।
ಗುರುವಿನಾತ್ಮಜ ಸೋಮೇಶ್ವರ ಕರುಣಾ- ।
ಕರಧಿ ವಿರಾಜಿಸುತಿಹನು ॥ ೧೭ ॥
ಭೂಮಿಯೊಳಾ ಸೋಮೇಶ್ವರಸುತನಭಿ ।
ರಾಮ ಸುಜನ ಸುಪ್ರೇಮ ॥
ಕಾಮಿತಜನಸುರಧೇನು ಚೆನ್ನಣ ನಿ ।
ಸ್ಸೀಮ ಕವೀಶನೊಪ್ಪುವನು ॥ ೧೮ ॥
ಶಿವಶರಣರ ಭೃತ್ಯನು ಸತ್ಕೃತ್ಯನು (ಮ) ।
ತ್ಯವಿರಳವಾಗಿ ಸುಜ್ಞಾನಿ ॥
ಸುವಿವೇಕಿ ರಸಿಕರ ದೇವ ಚೆನ್ನಣ ಸ ।
ತ್ಕವಿರಾಯನೊರೆದ ನೀ ಕೃತಿಯ ॥ ೧೯ ॥

* * * *

ನವರಸಭಾವ ವಿಚಿತ್ರವಲಂಕಾರ ।
ಸವಿ ರೀತಿ ಮೃದುಪದಬಂಧ ॥
ಇವು ದೊರೆಕೊಳ್ಳದ ಕವಿತೆ ಕವಿತೆಯೆ ಎಂದು ।
ಸುವಿವೇಕಿಗಳು ನುಡಿವರು ॥ ೨೦ ॥
ವರ್ಣಕಕಾವ್ಯಕೇತಕಲಕ್ಷಣವನಾ- ।
ಕರ್ಣಿಸಿ ಸತ್ಕವಿಜನರು ॥
ಕರ್ಣಾಟಜಾಣರ (?) ಕರ್ಣಾಮೃತವೆನೆ ।
ವರ್ಣಿಸಿದವನೀ ಕೃತಿಯ ॥ ೨೧ ॥
ಕಡುಚಾಣ್ಮೆ ಕಾಣಿಸಿ ತುಡುಕಲು ಸವಿನುಡಿ ।
ಬಿಡದೆ ರಸಿಕರೆದೆಗಳನು ॥

ಪೊಡೆವಿಯೊಳೆಸೆವ ಸುಜಾಣರ ಕರ್ಣಕೆ ।
ತೊಡಿಗೆಯಾಗಿಹುದೆನ್ನ ಕಾವ್ಯಂ ॥ ೩೨ ॥

*　　*　　*　　*

Colophon :

ಇದು ದಕ್ಷಾಧ್ವರಹರವೀರೇಶನ ।
ಸದಮಲ ಸತ್ಕೃತಿಯೊಳಗೆ ॥
ಚದುರರ ಮನಮರಿದುಂಬಿಗಲರಗಂಧಿ ।
ಯಾದಿಸಿದ ಪ್ರಥಮದ ಸಂಧಿ ॥ ೩೩ ॥

End :

ಓಡಿತು ಕತ್ತಲೆ ಬಾಡಿತು ನೈದಿಲು ।
ಪಾಡಿತು ಕಮಲದಿ ತುಂಬಿ ॥
ಕೂಡಿತು ಕೋಕವಲ್ಲಭೆಯನು ಮೂಡಲು ।
ಮೂಡಿತು ರವಿಮಂಡಲವು ॥ ೯೦ ॥
ಲೋಲೆಶಾರದೆಯ ವೀಣೆಯ ಸವಿನುಡಿಯಿಂದ ।
ಮೇಲೆನಿಸುವುದೆನ್ನ ಕೃತಿಯು ॥
ಲಾಲಿಪ ರಸಿಕ [ಸುಜಾಣ] (ಸಜ್ಜನರ) ಸಮೂಹವ
ಪಾಲಿಪ ವೀರೇಶ್ವರನು ॥ ೯೧ ॥
ಇದು ದಕ್ಷಾಧ್ವರಹರ ವೀರೇಶ್ವರನ ।
ಸದಮಲ ಸತ್ಕೃತಿಯೊಳಗೆ ॥
ಚದುರ ಮನಮಱಿದುಂಬಿಗಲರಗಂಧಿ- ।
ಯಾದಿಸಿದ ಮೂರನೆ(ಯ) ಸಂಧಿ ॥ ೯೨ ॥
ಲೋಕೇಶ ಶಂಕರ ನಾಕೇಶನಮಿತ ಪಿ ।
ನಾಕೇಶ ಭೂಗಿರಿಕುಲ ಸ ॥
ಲ್ಲಾಕಾಶಕೇಶ ದರ್ವೀಕರಧರ ಗಿರಿ ।
ಜಾಕಾಂತ ಜಯ ಸೋಮೇಶ ॥ ೧ ॥
ಶಿವನಿಂದೆ ಗೆಯ್ಯಕೆ . . . ದಿದಕ್ಷನು ಅಭ ।
ವ ವೀರಭದ್ರ ದಧೀಚಿ (?)
ಭುವನಗಳೆಲ್ಲ ನಡುಗೆ ಕೋಪದಿ ಶಾ- ।
ಪವನಿತ್ತುದನು ಸುರುವೆನು ॥ ೨ ॥
ಉದಯಸಮಯದೊಳು ನಿತ್ಯನೇಮವ ಮಾಡಿ ।
ತದನಂ[ಕದ] (ತರ)ದೊಳು ದಕ್ಷ ॥
ಸದನವ ಹೊರಗಂ . . . . . . ।

(೯-ಬಿ.)—

ಅಸಮಗ್ರ. ೩ ಸಂಧಿಗಳಿವೆ. ೪ ನೆಯದರ ಆದಿಭಾಗದಲ್ಲಿ ೩ ಪದ್ಯಗಳಿವೆ. ೩ ನೆಯ ಪದ್ಯವು ಅಸಂಪೂರ್ಣವಾಗಿದೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಪ್ರಸಾದಚಾರಿತ್ರವಿದೆ. ಅದು ಹಿಂದೆ ೪೯೭ ನೆಯ ನಂಬರಿನಲ್ಲಿ ವರ್ಣಿತವಾಗಿದೆ.

ಇದು ಸಾಂಗತ್ಯದಲ್ಲಿ ಬರೆದಿದೆ. ಗ್ರಂಥದಾದಿಯಲ್ಲಿ ಹುಲಿಗೆರೆಪುರದ ಸೋಮೇಶ್ವರಸ್ತುತಿಯಿದೆ. ಬಳಿಕ ಕವಿ ಪಾರ್ವತಿ, ವೀರಭದ್ರ, ಭದ್ರಕಾಳಿ, ಗಣಪತಿ, ಷಣ್ಮುಖ ಇವರನ್ನು ಪರಿಪರಿಯಿಂದ ಸ್ತುತಿಸಿದ್ದಾನೆ. ಕಥಾ ಗರ್ಭವನ್ನು "ಪರವಿರಹಿತ * * * ಸುಜನರಾಲಿಪುದು" ಎಂಬ ಪದ್ಯದಲ್ಲಿ ಹೇಳಿದ್ದಾನೆ. ಬಸವ, ಕೆಱೆಯ ಪದ್ಮರಸ, ಹರಿದೇವ, ಪಾಲ್ಕುರಿಕೆ ಸೋಮೇಶ್ವರ ಮುಂತಾದ ಶಿವಭಕ್ತರುಗಳನ್ನು ಸ್ತುತಿಸಿದ್ದಾನೆ. ಉಳಿದ ವಿಷಯಗಳನ್ನು ಉದಾಹೃತಭಾಗಗಳಲ್ಲಿ ನೋಡಿ ತಿಳಿಯುವುದು.

ಕವಿ ಚೆನ್ನಣನೆಂಬುವನು. ಇವನ ತಂದೆ ಸೋಮೇಶ್ವರನು. ತಾತ ರಾಮೇಶಗುರು. ಮುತ್ತಾತ ವೀರಶೈವಾಚಾರ್ಯ ಮಹೇಶ ಮಾದರಸನು ಇವನ ಸ್ಥಳವು ಹುಲಿಗೆರೆಯಾಗಿರಬಹುದೋ ಏನೋ? ಕವಿಯ ಕಾಲವು ಕ್ರಿ.ಶ.ಸ. ೧೬೫೦ ಇರಬಹುದೆಂದು ಕವಿಚರಿತ್ರೆ (ಸಂಪುಟ ೨, ಪುಟ ೪೩೨) ಯಲ್ಲಿ ಹೇಳಿದೆ.

No. 1056. ವೀರೇಶ್ವರಚರಿತ್ರೆ by ಚೆನ್ನಣ-
VĪREŚVARA CARITRE BY CENNAṆA.

Substance, paper. Size, 10-7/16 × 9-7/16 inches. Pages, 24. Lines, 20 on a page. Extent, 370 granthas. Character, Kannada. Condition, good. Appearance, new.

Restored in 1934–35 from the Ms. described above (No. 1055).
Begins on page 1 of the Ms. described under No. 753 *ante*.
Incomplete.

(ವಿ-ವಿ.)—

ಅಸಮಗ್ರ. ಇದು ಹಿಂದಣ ೧೦೫೫ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪತ್ರಿಕೆಯು, ಇದರೊಡನೆ ಪ್ರಸಾದ ಚಾರಿತ್ರವಿದೆ.

No. 1057. ಶುಕಸಪ್ತತಿ by ಶರಜಾನಾಗ.
ŚUKASAPTATI BY ŚARAJĀNĀGA.

Substance, Śrītāla. Size, 8⅝ to 9 × 1¾ to 1⅞ inches. Pages, 760. Lines, 8–10 on a page. Extent, 8,000 granthas. Character, Kannada. Condition, much injured. Appearance, old. Mode of writing, good.

Incomplete. Contains up to the end, but wants from the 41st verse of the 54th sandhi to the 19th verse of the 59th sandhi in the middle and one or two verses in the end.

Written in Bhāmini Ṣaṭpadi metre, it describes the seventy stories in 70 sandhis narrated one on each day, by a parrot to *Vahnirāja*, with a view to prevent the latter from having illegal connection with the wife of his servant *Dēvadāsa*. It goes to say that there was once a controversy between sage Nārada and God Agni in Indra's court regarding the wisdom of Śukamaharṣi, and in order to test the Ṛṣi,

God Agni was born as Vahnirāja, sage Nārada as a spy of him and Indra and his wife Śaci were born as the servants of Vahnirāja. The parrot that narrated the stories was no other than the sage Śuka. The stories are all full of high morals.

The author Śarajānāga appears to have been a minister of *Bhava-kṣitiśa,* details regarding whom are lacking.

Beginning :

ಭಾ.ಷ.॥ ಶ್ರೀ ಶಿವನ (ಸು) ಕುಮಾರ ಸಕಲ ಸು ।
ರಾಸುರಾರ್ಚಿತಪಾದಪದ್ಮ ವಿ ।
ಶೇಷಗುಣಯುತ ವಿಮಲಗಾತ್ರ ವಿಚಿತ್ರಚಾರಿತ್ರ ॥
ಮೂಷಕಪ್ರಿಯ ಮುದನಿವರ್ಧನ ।
ಪಾಶಮೋದಕ ಪರಶುಧರ ವಿ ।
ಘ್ನೇಶ ದಯೆಯಿಂದೊಲಿದು ಕರುಣಿಸು ಮತಿಗೆ ಮಂಗಳವ ॥ ೧ ॥

*　　　*　　　*　　　*

ಹರಕವಿಗಳಂಘ್ರಿಯನು ಧ್ಯಾನಿಸಿ ।
ಹರಕವಿಗಳಡಿಗೆರಗಿ ಮತ್ತಾ ।
ವರಕವಿಗಳಗೆ ನಮಿಸಿ ಹಿರಿಯರ ಕಟಾಕ್ಷದಲಿ ॥
ಹರುಷದಿಂ ಶುಕನನ್ನಿಭೂಭುಜ ।
ಗರುಹಿದತಿ ಕೌಶಲ್ಯ ಕಥೆಯನು ।
ವಿರಚಿಸುವೆನಿದನಾದರದಿ ಲಾಲಿಪುದು ಸಜ್ಜನರು ॥ ೧೨ ॥

*　　　*　　　*

ವೇದಶಾಸ್ತ್ರಪುರಾಣದರ್ಥಗ ।
ಳಾದಿಗೊಂಡಿಹವೀ ಕೃತಿಯೊಳದ ।
ನಾದರಿಸಿ ಕೇಳುವರ ಭೀಷ್ಟವು ಸಿದ್ಧಿಯಾದಪುದು ॥
ಸಾದರದಿ ಕೇಳ್ವರಿಗೆ ಪರಮ ವಿ ।
ನೋದವಾಗಿಹುದೀ ಕೃತಿಗೆ ಸಮ ।
ವಾದ ಕತೆಯಿಲ್ಲೆಂದು ಕೊಂಡಾಡುವರು ಕೋವಿದರು ॥ ೧೫ ॥
ಧರಣಿಗುತ್ತಮನಾಗಿ ರಾಜಿಪ ।
ದೊರೆ ಕೆಳದಿ(ಯ) ಭವಕ್ಷಿತೀಶನ ।
ಚರಣಕಮಲವ ಭೃಂಗ ಶರಜಾನಾಗಸನ್ಮಂತ್ರಿ ॥
ವಿರಚಿಸಿದನೀ ಪುಣ್ಯಕಥೆಯನು ।
ಹರುಷದಿಂ ಕೇಳ್ವರಿಗೆ ಕೊಡಗಿಯ ।
ಪುರದ ಶಂಕರನಾರಾಯಣ(?)ನಿತ್ತಪನು ಸಂಪದವ ॥ ೧೬ ॥

Colophon :

(ಸಂಧಿ ೧ ಕ್ಕಂ ಪದನು ೧೬ ಕ್ಕಂ ಮಂಗಳ ಮಹಾ ಶ್ರೀ.)

ಸೂಚನೆ॥ ರತುಸವನು ತಹುದೆಂದು ವಹ್ನಿ ।
ಕ್ಷಿತಿಪ ತನ್ನಯ ದೇವದಾಸನ ।
ನತಿಹರುಷದಿಂ ಸತಿಯು ಕಾಖಿಸಿದ ॥

* * *

ಇಂತು ಪೇಳುತ್ತಿರಲು ದಿನಪನು ।
ಸಂತಸದಲುದಿಸಲ್ಕೆ ಭೂಪನ ।
ನಂತಹರ್ಷಿತನಾಗಿ ಶುಕನನು ಪಿರಿದು ಕೊಂಡಾಡಿ ॥
ಶಾಂತಮನದವನಾಗಿ ಮಿಗೆ ತ ।
ನ್ನಂತೆ ಸರ್ವರ ಕಾಂಬ ಬುದ್ಧಿಯು ।
ನಾಂತು ನಿಜಮಂದಿರಕೆ ನಡೆದನು ನಲಿಸುತೊಲವಿನಲಿ ॥ ೪೫ ॥
ವೇದಶಾಸ್ತ್ರ (*) (*) ಕೋವಿದರ ॥ ೪೬ ॥

Colophon :

ಅಂತು ಸಂಧಿ ೬೯ ಕ್ಕಂ ಪದನು ೨೪೯೧ ಕ್ಕಂ ಮಂಗಳಮಹಾ ಶ್ರೀ.

ಸೂ.॥ ದಿವಸವೆಪ್ಪತ್ತರಲಿ ನೃಪ ಬರ ।
ಅವಿರಳದಿ ಶುಕನೊಂದು ಕತೆಯನು ।
ವಿವರಿಸಲು ಬೆಳಗಾಗೆ ಬಂದನು ತನ್ನ ಮಂದಿರಕೆ ॥ ಪಲ್ಲ ॥

End :

ತಿಳವಿಕೆಯೊಳಱುವತ್ತು ಕತೆಯನು ।
ತಳುವದೆಯೆ ಕೇಳ್ವವರಿಗಿರದೆಯೆ ।
ನಳಿನಸಂಭವಪದವಿ ದೊರೆವುದು ಭರತಭಕ್ತಿಗಳ ॥
ಪೆಳವಿಗೆಯೊಳೆಪ್ಪತ್ತನುಂ ನಸು ।
ಬಳಲದೆಯೆ ಕೇಳಲ್ಕೆ (ಮುಕ್ತಿಯು) ।
(ತಳೆವ)ದೆದು ಸಿದ್ಧಾಂತಮುನಿಕುಲವರ್ಯ ಕೇಳೆಂದ ॥ ೩೦ ॥
ಹರುಬುಗಳು ಪಿರಿದಾದವರ್ಗಳು ।
ಮರಳ ರುಜೆ . . . . ನರರವರ್ಗಳು ।
ಹರುಷದಿಂದೊಂದೇ ಪದವ ಕೇಳಲ್ಕೆಮ . . . , ॥
(ದುರಿತ) ಪರಿಹರ ವಾಗುವುದು ಪವ ।

(ವಿ.ವಿ.)—

ಅಸಮಗ್ರ. ಕೊನೆಯಲ್ಲಿ ಸ್ವಲ್ಪಭಾಗವಿಲ್ಲ. ಇಲ್ಲವಾದರೆ ಪೂರ್ಣವೆನ್ನಬಹುದಿದ್ದಿತು. ಓಲೆಗಳು ೧-೨೩೫, ಆ ಮೇಲೆ ೨೫೪ ಎಂದು ಗುರುತಿಸಿದೆ. ೨೩೬ ನೆಯ ಸಂಖ್ಯೆಗೆ ಬದಲಾಗಿ ೨೫೪ ಎಂದು ಬರೆಹಗಾರನು ಗುರುತಿಸಿಕೊಂಡು ಮುಂದುವರಿದಿದ್ದಾನೆ. ಓಲೆಗಳು ೩೩೦-೩೩೩ ಇಲ್ಲ. ಕೊನೆಯ ಓಲೆಯ ಸಂಖ್ಯೆ ೪೮೨. ಸಂಧಿಗಳು ೧-೫೭ ಪೂರ್ಣವಾಗಿವೆ. ೫೪ ರ ೪೧ ನೆಯ ಪದ್ಯದಿಂದ ೫೯ ರ ೧೯ ನೆಯ ಪದ್ಯದವರೆಗೆ (ಓಲೆಗಳು ೩೩೦-೩೩೩) ಇಲ್ಲ. ಬಳಿಕ ಕೊನೆಯ ಸಂಧಿ (೭೦ ನೆಯ ಸಂಧಿ) ಯ ೩೧ ನೆಯ ಪದ್ಯದವರೆಗೂ ಇದೆ. ಅತಿ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಭಾಮಿನೀಷಟ್ಪದಿಯಲ್ಲಿ ಬರೆದಿದೆ. ಸಂಧಿಗಳು ೭೦, ಪದ್ಯಗಳು ಸುಮಾರು ೩೦೩೦. ಕಥಾಗರ್ಭ :— ದೇವೇಂದ್ರನೋಲಗದಲ್ಲಿ ಶುಕಮಹರ್ಷಿಯು ಜ್ಞಾನದ ವಿಷಯವಾಗಿ ನಾರದನಿಗೂ ಅಗ್ನಿಗೂ ಮಾತು ನಡೆದು, ತತ್ಪರೀಕ್ಷಾರ್ಥವಾಗಿ ಅಗ್ನಿಯು ವಹ್ನಿರಾಜನಾಗಿಯೂ, ನಾರದನು ರಾಜನ ಗೂಢಚರನಾಗಿಯೂ, ದೇವೇಂದ್ರನು ಪತ್ನಿಯಾದ ಶಚಿಯೊಡನೆ ದೇವದಾಸನೆಂಬ ಹೆಸರಿನಿಂದ ವಹ್ನಿರಾಜನ ಭೃತ್ಯನಾಗಿಯೂ ಶುಕಮಹರ್ಷಿಯು ದೇವದಾಸನ ಮನೆಯಲ್ಲಿ ಶುಕವಾಗಿಯೂ ಭೂಮಿಯಲ್ಲಿ ಹುಟ್ಟುವರು. ರಾಜನು ತನ್ನ ಭೃತ್ಯನ ಮಡದಿಯ ರೂಪಕ್ಕೆ ಮೋಹಗೊಂಡವನಾಗಿ ದೇವದಾಸನನ್ನು ವ್ಯಾಜದಿಂದ ದ್ವೀಪಾಂತರಕ್ಕೆ ಕಳುಹಿಸಿ ಅವನ ಮನೆಗೆ ಬರುತ್ತಿರಲು ಅಲ್ಲಿ ಶುಕರೂಪವಿಂದಿರುತ್ತಿದ್ದ [ಶುಕಮಹರ್ಷಿಯು ರಾಜನನ್ನು ಕುಪಥದಲ್ಲಿ ಕಾಲಿಡದಂತೆ ಮಾಡುವ ಉದ್ದೇಶದಿಂದ ಅವನಿಗೆ ದಿನಕ್ಕೊಂದೊಂದರಂತೆ ಎಪ್ಪತ್ತು ದಿನಗಳಲ್ಲಿ ಹೇಳಿರುವ ಕತೆಗಳು ಇದರಲ್ಲಿ ಉಕ್ತವಾಗಿವೆ. ಇವು ಜ್ಞಾನಬೋಧಕಗಳಾಗಿಯೂ ಮನೋರಂಜಕಗಳಾಗಿಯೂ ಇರುವುವು.

ಗ್ರಂಥದಾದಿಯಲ್ಲಿ ವಿಘ್ನೇಶಸ್ತುತಿಯಿದೆ. ತರುವಾಯ ಕವಿ ಮೃಡ, ವಿಷ್ಣು, ಶಂಕರ ನಾರಾಯಣ, ಮೂಕಾಂಬೆ, ಲಕ್ಷ್ಮಿ, ಶಾರದೆ, ಷಣ್ಮುಖ, ವಿಶ್ವೇಶ್ವರ (ವೀರಭದ್ರ), ಭಾಸ್ಕರ ಇವರುಗಳನ್ನು ಪರಿಪಾಡಿಯಿಂದ ಸ್ತುತಿಸಿದ್ದಾನೆ. ಆ ಮೇಲೆ ಪ್ರಹ್ಲಾದ, ನಾರದ, ಪರಾಶರ, ಪುಂಡರೀಕ, ವೇದವ್ಯಾಸ, ಅಂಬರೀಶ, ಶುಕ, ಶೌನಕ ಭೀಷ್ಮಾದ್ಯರನ್ನೂ ಅಷ್ಟದಿಕ್ಪಾಲಕರನ್ನೂ ನುತಿಸಿ ಹರಹರಿಕವಿಗಳನ್ನು ಸ್ಮರಿಸಿ ಕಥಾಗರ್ಭವನ್ನು ಹೇಳಿದ್ದಾನೆ.

ಕವಿ ಶರಜಾನಾಗನೆಂಬುವನು. ಇವನ ಊರು ಕೊಡಗಿಯಾಗಿರಬಹುದು. ಇವನು ಕೆಳದಿಯ ಭವಕ್ಷಿತೀಶನ ಮಂತ್ರಿಯಾಗಿದ್ದಂತೆ ಗೊತ್ತಾಗುತ್ತದೆ. ಈ ಭವಕ್ಷಿತೀಶನಾರೆಂಬುದೂ ಯಾವ ಕಾಲದಲ್ಲಿದ್ದನೆಂಬುದೂ ಗೊತ್ತಾಗುವುದಿಲ್ಲ. 'ಭವ' ಎಂಬುದರ ಸ್ಥಾನದಲ್ಲಿ 'ಶಿವ' ಎಂಬ ಪದವನ್ನು ಸುಲಭವಾಗಿ ಹಾಕಬಹುದಾಗಿರುವಾಗ 'ಶಿವ' ಎಂಬ ಅರ್ಥದಲ್ಲಿ 'ಭವ' ಎಂದು ಪ್ರಯೋಗಿಸಿರಬಹುದೆಂದೂ ಹೇಳಲು ಸಾಧ್ಯವಿಲ್ಲ. ಈ ಕಾರಣದಿಂದ ಶಿವಪ್ಪನಾಯಕನೆಂದರ್ಥ ಮಾಡುವುದಕ್ಕೂ ಆಗದು. 'ಭದ್ರಕ್ಷಿತೀಶ' ಎಂಬುದಕ್ಕೆ ಬದಲಾಗಿ 'ಭವಕ್ಷಿತೀಶ' ಎಂದು ಬಿದ್ದಿರಬಹುದೆಂಬುದನ್ನೂ ಊಹಿಸುವುದಕ್ಕಾಗುವುದಿಲ್ಲ. ಹೇಗೂ ಇವನು ಕೆಳದಿಯರಸರ ಕಾಲದವನೆಂಬುದು ಗೊತ್ತಾಗುತ್ತದೆ. ಇವನ ಕಾಲವು ಸು. ೧೭ ನೆಯ ಶತಮಾನವಾಗಿರಬಹುದು.

No. 1058. ಶುಕಸಪ್ತತಿ by ಶರಜಾನಾಗ.
ŚUKASAPTATI BY ŚARAJĀNĀGA.

Substance, paper. Size, 10-7/16 × 9-7/16 inches. Pages, 890. Lines, 20 on a page. Extent, 8,000 granthas. Character, Kannada. Condition, good. Appearance, new.

Restored in 1938–39 from the Ms. described above (No. 1057).

Bound in two volumes.

(ವಿ-ವಿ)--

ಅಸಮಗ್ರ. ಇದು ಹಿಂದಣ (೧೦೫೭ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತ್ಯಂತರವಾಗಿದೆ.

No. 1059. ಶೃಂಗಾರಶತಕ (ಸಾಂಗತ್ಯ) by ಚಿಕುಪಾಧ್ಯಾಯ-
SṚNGĀRAŚATAKA BY CIKUPĀDHYĀYA.

Substance, palm-leaf. Size, 11¼ × 1-1/16 inches. Pages, 29. Lines, 4 on a page. Extent, 150 granthas. Character, Kannada. Condition, very much injured. Appearance, old. Mode of writing, good.

Begins on fol. 53*a* of the Ms. described under No. 257 *ante*.
Complete in 102 stanzas.

Describes the conversation of the Gōpīs who are attracted by the lovely appearance of Śri Kṛṣṇa. For details regarding author see No. 219 *ante*.

Beginning :

ಸಾಂಗತ್ಯ ॥ ಶ್ರೀಪತಿ ಕೃಷ್ಣನ ರೂಪನೀಕ್ಷಿಸಿ . . . |
. . . .
. . . . . ಸರಸಸ |
ಲ್ಲಾಪದಿರವನೊರೆದಪೆನು ॥ ೧ ॥

* * *

ಮಾರನ ಮದದಾನೆ ಮಧುವಿನ ಮಸದೇವಿ |
ನೀರಜಾರಿಯು ನವನಿಧಿಯು ॥
ಮಾರುತನಧಿಕಸರ್ವಸ್ವವೆ ಬಾರೆಂಬು |
ದಾರ ಶ್ರೀಕೃಷ್ಣನೆಲ್ಲಿಹನೆ ॥ ೮ ॥
ಕಲೆಯು ನೆಲೆಯು ಕಂಡು ಕಾಮಿಸಿ ಕಾತರ |
ದೊಲವರಿತೊಂದು ತೋರಿಸುತ ॥
ಸಲವರಿತೊಲ್ಮೆ . . . . ದಲ್ಮೆಯು ಕಾಣುವ |
ಗೆಲಗೆಯ್ಯ ಕೃಷ್ಣನೆಲ್ಲಿಹನೆ ॥ ೯ ॥
ಕುಂದರದನೆ ಕುವಲಯಲೋಚನೆ ಪೂ |
ರ್ಣೇಂದುವದನೆ ಕೋಮಲಾಂಗಿ ॥
ಬಂದುಗೆಬಾಯುಳ್ಳ ಬಾರೆಂಬ ಕೃಷ್ಣನೆ |
ನೆಂದು ನಾನೊಲಿದಪ್ಪುವೆನೆ ॥ ೧೦ ॥

End :

ಅನಿಮಿಷಾಂಗನೆಯಂತೆಪೆಯಾಟಗೆಟ್ಟ ಭೋ |
ಗಿನಿಯಂತೆ ಕಾಲಾಟಪ್ರಡುಗಿ |
ಘನಕಿನ್ನರಿ ಯೋಗಿನಿಪ್ರಳಂದಿಯರಂತೆ |
ವನಿತೆಯರ್ಗಳು ಕೃಷ್ಣ ಸಲಹು ॥ ೯೩ ॥
ಅರಕ್ಕರವೆ ನನ್ನಾರಕ್ಕರವಿ |
ನ್ನಾರಕ್ಕರ ಸಾಕೆಂದು ॥
ಸಾರಿಸಾರಿಗೆ[ಜೀವಿ] (ಜಪಿ) ಸುತಯಿದುಯೆನಗನು |
ಸಾರಿಯಿಂದಿಹಳೋವು ಕೃಷ್ಣ ॥ ೯೮ ॥

ಅದ್ರಿಯು ಶ್ರೇತ್ತು ಲೋಕಕೆ ಮುದ್ರೆಯಾಗಿರ್ದು ।
ಮುದ್ರೆಯೊಳ್ನೆಲಸಿದ ಮಹಿಮಾ ॥
ಮದ್ಧೃದಯದೊಳಿರ್ದು ನೆರೆದುಳ್ಳುಹೆನ್ನನು ।
ಮುದ್ರಾಧಾರಣರಾಣ್ಮ ಕೃಷ್ಣ ॥ ೯೯ ॥
ಅಪ್ರತಿರೂಪಿಂ ಜಗತ್ಪ್ರಸಿದ್ಧಿಯನಾಂತು ।
ಸುಖಪ್ರಾಪ್ತಿವೆತ್ತ ನೀರೆಯರ ॥
ಕ್ಷಿಪ್ರದೊಳೊಲಿಸಿ ರಕ್ಷಿಸುವಲ್ಲಿ ಶ್ರೀ ಕೃಷ್ಣ ।
ನಪ್ರತಿಮಾಂಕನೆನಿಸನೆ ॥ ೧೦೦ ॥
ಪದಿನಾರು ಸಾಸಿರನೀರೆಯರೊಲ್ಮೆಯ ।
ಪದನರಿದವರೊರೆದಂತೆ ॥
ಮದನಸಾಮ್ರಾಜ್ಯವನಿತ್ತು ಮನ್ನಿಸುವನೆ ।
ಮದನನಯ್ಯನೆ ಕೃಷ್ಣ ಸಲಹು ॥ ೧೦೧ ॥
ಚಿಕದೇವರಾಯ ನೊಲವುವೆತ್ತ ಸಚಿವ ಶ್ರೀ ।
ಚಿಕುಪಾಧ್ಯರಿಂದೀ ಶತಕ ॥
ಪ್ರಕಟಿಸಿತಿದನೋದಿ ಕೇಳ್ದ ಮನುಜ ನಿಕ ।
ರಕೆ ಮಂಗಳಮಪ್ಪ ಶ್ರೀ ಶ್ರೀ ॥ ೧೦೨ ॥

Colophon :

ಶೃಂಗಾರ ಶತಕಂ ಸಂಪೂರ್ಣಂ.

(ವಿ.ಸೂ.)—

ಸಮಗ್ರಂ ಅತ್ಯಂತ ಶಿಥಿಲವಾದ ಪ್ರತಿ. ಬರೆವಣಿಗೆ ಚೆನ್ನಾಗಿದೆ. ಇದರೊಡನೆ "ಶ್ರೀರಂಗ ಮಾಹಾತ್ಮ್ಯ" ಮುಂತಾದ ಹಲವು ಗ್ರಂಥಗಳಿವೆ. ಆ ಬಗೆಗೆ ಹಿಂದಣ ೨೪೭ ನೆಯ ನಂಬರನ್ನು ನೋಡುವುದು.

ಇದು ಸಾಂಗತ್ಯದಲ್ಲಿ ಬರೆದಿದೆ. ಪದ್ಯಗಳ್ ೧೦೨. ಇದರಲ್ಲಿ ಕೃಷ್ಣನ ರೂಪವನ್ನು ಕಂಡು ಮೋಹಿಸಿ ಸ್ತ್ರೀಯರಾಡುವ ಸರಸಸಲ್ಲಾಪದಿರವು ವರ್ಣಿತವಾಗಿದೆ. ಕವಿ ಚಿಕುಪಾಧ್ಯಾಯನೆಂಬುವನು. ಈತನು "ಶ್ರೀರಂಗಮಾಹಾತ್ಮ್ಯ, ವಿಷ್ಣುಪುರಾಣ ಮುಂತಾಗಿ ಅನೇಕ ಗ್ರಂಥಗಳನ್ನು ರಚಿಸಿದ್ದಾನೆ. ಈತನ ವಿಷಯವಾಗಿ ಹೆಚ್ಚು ತಿಳಿಯಬಯಸುವವರು ಹಿಂದಣ ೨೧೯ ನೆಯ ನಂಬರನ್ನು ನೋಡುವುದು.

No. 1060. ಶೃಂಗಾರ ಶತಕ (ಸಾಂಗತ್ಯ) by ಚಿಕುಪಾಧ್ಯಾಯ-

SṚNGĀRA ŚATAKA (SĀNGATYA) BY CIKUPĀDHYĀYA.

Substance, paper. Size, 10⅜ × 9⅛ inches. Pages, 21. Lines, 20 on a page. Extent, 150 granthas. Character, Kannada. Condition, good. Appearance, new. Mode of writing, good.

Restored in 1930-31 from the Ms. described above.

Complete.

(ವಿ-ವಿ.)—

ಸಮಗ್ರ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದು ಇದರ ಹಿಂದಣ ಸಂಖ್ಯೆನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ.

No. 1061. ಶ್ವೇತನಸಾಂಗತ್ಯ by ಮಲ್ಲಿಕಾರ್ಜುನ-

ŚVĒTANASĀNGATYA BY MALLIKĀRJUNA.

Substance, palm-leaf. Size, $10\frac{7}{8} \times 1\frac{1}{4}$ inches. Pages, 48. Lines, 6 on a page. Extent, 420 granthas. Character, Kannada. Condition, extremely injured. Appearance, old. Mode of writing, fair.

Contains up to the 44th stanza of the 3rd sandhi.

Describes the story of one Śvēta, a devotee of Śiva. The work is also known as *Siddhasāngatya*, *Gaṇasāngatya*, and *Kālabhanjanacaritre*.

The author, *Mallikārjuna* is a Vīraśaiva poet and he wrote this work at the instance of *Nañjēśvara*. For details see extracts below :

Beginning :

ಸಾಂಗತ್ಯ ॥ ಶ್ರೀ ಕನಕಾಚಲವಾಸಕಪರ್ದಿಸು ।
ಧಾಕರಶೇಖರ ನಿತ್ಯ ॥
ಲೋಕನಿಕರಪರಿಪಾಲಕಶಂಭು ಪಿ ।
ನಾಕಿ ಸಲಹು ಸಜ್ಜನರ ॥ ೧ ॥
ಪಂಕಜನಾಭ ಸುರೇಂದ್ರನಮಿತಪದ ।
ಪಂಕಜ ಗಿರಿಜಾರಮಣ ॥
ಶಂಕರ ಪರಮೇಶ್ವರ ಭವನಾಶ ಭ ।
ಯಂಕರಹರ ಸಲಹೆನ್ನ ॥ ೨ ॥
ಕ್ರೂರಜಲಂಧರ ತಾರಕವೈರಿ ಕು ।
ಮಾರಸಹೋದರ ಜನಕ ।
ನಾರದೆಯುನುಡಗಮನತೋಜನಪದ । (?)
ವಾರಿಜಶಿವ ರಕ್ಷಿಪುದು ॥ ೩ ॥

*   *   *

ಈಶನ ಸುಗುಣನಿವೇಶನ ಸುರಪದ ।
ಕೇಶನ ಧರ್ಮ . . . . ॥
ಕೋಶನ ದುರಿತವಿನಾಶನ ಗುರು ಬಸ ।
ವೇಶನ ಪದಕೆಱಗುವೆನು ॥ ೭ ॥
ಕಂತುಹರನು ಚರಲಿಂಗಶರಣಜನ ।
ಚಿಂತಾ . . . . . ಗೊಳಗೂರ ॥
ಶಾಂತೇಶ್ವರ ಗುರುರಾಯನ ಪಾದಕೆ ।
ಸಂತಸದಿಂ ಶರಣೆಂಬೆ ॥ ೮ ॥
ಶ್ರೀಗುರು ಭಕ್ತಾಗ್ರಣೀಶ್ವರರಸ್ವಯ

ಸಾಗರಚಂದ್ರಮನೆ . , .
(ಇಲ್ಲಿಂದ ಮುಂದಕ್ಕೆ ಒಂದೋಲೆಯ ಭಾಗವಿಲ್ಲ)
. . . . ॥
ಮಲ್ಲಣಾರ್ಯರ ಕೃಪೆಯಿಂದ ।
ಲೌಲ್ಯವೆನಿಸಿದನು ಭಕ್ತರ ಮಧ್ಯದಿ ।
ಮಲ್ಲಿಕಾರ್ಜುನ ಕವಿರಾಜ ॥ ೧೯ ॥
ಎಂದು ಶಿವನ ಸದ್ಭಕ್ತರ ಮಧ್ಯದೊ ।
ಳಂದವಡೆದು ಕೀರ್ತಿಸುತ ॥
ಮುಂದೆ ಕೃಪೆಯೊಳೆನ್ನೊಡೆಯನು ಬಳಿಕಲಿಂ ।
ತೆಂದನು ನಂಜೇಶ್ವರನು ॥ ೨೦ ॥
ಮಲ್ಲಿಕಾರ್ಜುನಕವಿವಲ್ಲಭ ಸಂಸ್ಕೃತ ।
ದಲ್ಲಿ ಸಮರ್ಥನು ನೀನು ॥
ಇಲ್ಲಿ ಸಕಲಭಕ್ತಜನ ಕೇಳ್ವಂದದಿ ।
[ಸೊಲ್ಲು] (ಸೊಲ್ಲಿಸು) ಕನ್ನಡಬಾಷೆಯಲಿ ॥ ೨೧ ॥
ಶ್ವೇತನು ಕುಸುಮುಸಮಾ . . . . ಂದಲಿ ॥
ಪ್ರೇತಪತಿಯ ಸೊಕ್ಕ ಮುರಿದ ॥
ಭೂತನಾಥನ ಲೀಲೆಯನುಸುರೆಂದೆನ ।
ಲೀ ತೆಱದಿಂ ಪೇಳುವೆನು ॥ ೨೨ ॥

* * *

ಘುಡುಘುಡಿಸುತಲೆಮದೂತರು ಶ್ವೇತನ ।
ಜಡದೇಹವ ಹಿಡಿತಂದು ॥
ಒಡೆಯನ ಮುಂದಿಟ್ಟು ನಿಲಿಸಿದರಾತನು ॥
ಪಡೆದ ಪಾತಕವ ಕೇಳದನು ॥ ೧೪೦ ॥
ಅಂಜದಿರಂಜದಿರೆನುತ . . . ಪಿಟಕುಲ ।
ಪುಂಜನಮಿಗೆ ಮನ್ನಿಸುತ ॥
ಕಂಭಸಖನ ಪುತ್ರನ ಸಮ್ಮುಖದಲಿ ।
ರಂಜಿಸಿ ಭಟರಿರಿಸಿದರು ॥ ೧೪೧ ॥
ನಂಜೇಶ್ವರಮುನಿ ಪೇಳಿಸಿದೀ ಕಾಲ ।
ಭಂಜನ ಚಾರಿತ್ರದೊಳಗೆ ॥
ಕುಂಜರದಾನವಹರನಣುಗರು ಕೇಳ ।
ರಂಜಿಪುದಿಲ್ಲಿಗೆ ಸಂಧಿ ॥ ೧೪೨ ॥
ಶರಣಮುಕಾಂಬುಜಕಾಂತ ದಿವಾಕರ ।
ಪರಮೇಶ್ವರನವತಾರ ॥
ಕರುಣಿಸು ಗೂಳೂರ ಸಿಂಹಾಸನಾಗ್ರಣಿ ।
ಗುರುಶಾಂತೇಶ್ವರದೇವ ॥ ೧೪೩ ॥

Colophon :

ಅಂತು ಸಂಧಿ ೧ ಕ್ಕಂ ಪದನು ೧೬೩ ಕ್ಕಂ ಮಂಗಳಮಹಾಶ್ರೀ.

ಕೈಟಭರಿಪು ಶತಕೋಟಿಧರಾಜ ಕಿ ।
ರೀಟವಿಮಂಡಿತಚರಣ ॥
ಸಾಟಕಹಸ್ತ ನಿಶಾಟಕುಮುದಸಖ ।
ಜೂಟ ವಿಮಲ ಸಲಹೆನ್ನ ॥ ೧ ॥
ಶ್ವೇತನನೀ ಪರಿಯಿಂದಲಿ ವಿಕ್ರಮ ।
ದೂತರು ಯಮಲೋಕದಲಿ ॥
ಪ್ರೇತಪತಿಯ ಮುಂದೆ ನಿಲಿಸಿದರಕ್ಕಟ ।
ಪಾತಕವೆಂಬುದು ಕಷ್ಟ ॥ ೨ ॥

End :

ಎಂದು ಪೇಳುತ ನಯದಿಂದಾ ಶ್ವೇತನ ।
ಸಂದೇಹವೆಲ್ಲವ ಬಿಡಿಸಿ ॥
ನಂದೀಶ್ವರನ ಸಮೀಪಕೆ ಕರಕೊಂಡು ।
ಬಂದು ನಮಸ್ಕರಿಸಿದಳು ॥ ೪೩ ॥
ಉಗ್ರನ ಭಕ್ತಿಜ್ಞಾನವಿಚಾರ ಸ ।
ಮಗ್ರವ ತೋಜಿಸಿ ಧರ್ಮ ॥
ವಿಗ್ರಹನೆನಿಸುವ ನಂದೀಶನಿಂದಲೆ ।
. . . . ॥

(ವಿ.-ವಿ.)—

ಅಸಮಗ್ರ. ಸಂಧಿಗಳು ೧, ೨ ಸಮಗ್ರ. (೧ ನೆಯ ಸಂಧಿಯಿರುವ ಭಾಗದಲ್ಲಿ ೨ ಓಲೆಗಳಿಲ್ಲ). ೩ ನೆಯ ಸಂಧಿಯಲ್ಲಿ ೪೪ ಪದ್ಯಗಳವೆ. ಕೊನೆಯ ಪದ್ಯ ಪೂರ್ಣವಿಲ್ಲ. ಈ ಪುಸ್ತಕದಲ್ಲಿ ಒಟ್ಟು ೨೮೮ ಪದ್ಯಗಳಿರುವ (೧, ೨ ಸಂಧಿಗಳಲ್ಲಿ ೨೪೪ ಪದ್ಯಗಳು ೩ ನೆಯದರಲ್ಲಿ ೪೪, ಒಟ್ಟು ೨೮೮) ಭಾಗವು ಮಾತ್ರ ಇದೆ. ಇದರಲ್ಲಿ ೨ ನೆಯ ಮತ್ತು ೧೩ ನೆಯ ಓಲೆಗಳಿಲ್ಲ. ಕೊನೆಯ ಓಲೆಯ ಸಂಖ್ಯೆ ೨೬. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಸಾಂಗತ್ಯದಲ್ಲಿ ಬರೆದಿದೆ. ಅಂತ್ಯ ಭಾಗವು ಇಲ್ಲವಾಗಿ ಈ ಗ್ರಂಥದ ಪದ್ಯ ಸಂಖ್ಯೆಗಳನ್ನು ಹೇಳಲು ಸಾಧ್ಯವಿಲ್ಲ. ಮೂರು ಸಂಧಿಗಳುಳ್ಳದೆಂದು ಹೇಳಬಹುದು. ಇದಕ್ಕೆ ಕಾರಣವನ್ನು ಮುಂದಣ ೧೦೬೩ ನೆಯ ನಂಬರಿನಲ್ಲಿ ನೋಡುವುದು. ಕಥಾಗರ್ಭವು 'ಶ್ವೇತನು ಕುಸುಮ (*) (*) (*) ಪೇಳುವೆನು' ಎಂಬ ಉದಾಹೃತ ಪದ್ಯದಲ್ಲಿರುವುದಾಗಿದೆ. ಗ್ರಂಥದಾದಿಯಲ್ಲಿ ಈಶ್ವರಸ್ತುತಿಯಿದೆ. ಬಳಿಕ ಕವಿ ಪಾರ್ವತಿ, ಷಣ್ಮುಖ, ವೀರಭದ್ರ ಇವರುಗಳನ್ನು ಸ್ತುತಿಸಿದ್ದಾನೆ. ತರುವಾಯ ಬಸವನನ್ನೂ ಗೂಳೂರ ಶಾಂತೇಶ್ವರ ಗುರುವನ್ನೂ ಸ್ತುತಿಸಿದ್ದಾನೆ. ಈ ಗ್ರಂಥವನ್ನು ಬರೆಯುವಂತೆ ತನ್ನನ್ನು ನಂಜೇಶ್ವರನು ಪ್ರೇರಿಸಿದಂತೆ ಕವಿ ಹೇಳಿದ್ದಾನೆ. ಸಮುದ್ರ ವರ್ಣನೆಯಿಂದ ಕತೆಯು ಆರಂಭವಾಗಿದೆ. ಈ ಗ್ರಂಥವು ಶ್ವೇತನ ಕತೆಯನ್ನೊಳಗೊಂಡುದಾದುದರಿಂದ ಶ್ವೇತನ ಸಾಂಗತ್ಯವೆಂದು ಹೆಸರುಗೊಂಡಿದೆ. ಇದಕ್ಕೆ ಸಿದ್ಧಸಾಂಗತ್ಯವೆಂದೂ, ಗಣಸಾಂಗತ್ಯವೆಂದೂ ಹೆಸರುಗಳಿರುವಂತೆ ತೋರುತ್ತದೆ. 'ನಂಜೇಶ್ವರಮುನಿ ಪೇಳಿಸಿದೀ ಕಾಲಭಂಜನ ಚಾರಿತ್ರವೆಂತೆಲೂ ಕರೆಯಬಹುದಾಗಿದೆ.

ಕವಿ ಮಲ್ಲಿಕಾರ್ಜುನನೆಂಬವನು. ವೀರಶೈವಮತದವನು. 'ಮಲ್ಲಿಕಾರ್ಜುನರ ಕೃಪೆಯಿಂದ ಕೌಶಲ್ಯವೆನಿಸಿದನು ಭಕ್ತರ ಮಧ್ಯದಿ ಮಲ್ಲಿಕಾರ್ಜುನ ಕವಿರಾಜ' ಎಂದು ಕವಿ ತನ್ನ ವಿಷಯವಾಗಿ ಹೇಳಿಕೊಂಡಿದ್ದಾನೆ. ಈ ಮಲ್ಲಿಕಾರ್ಜುನನು ಗುಬ್ಬಿಯ ಮಲ್ಲಣಾರ್ಯನೆಂದೂ ಕವಿ ಅವನ ಶಿಷ್ಯನಾಗಿರಬೇಕೆಂದೂ ಕವಿಚರಿತ್ರಕಾರರು ಊಹಿಸಿ ಕವಿಯ ಕಾಲವನ್ನು ಸು. ಕ್ರಿ.ಶ. ೧೪೮೦ನೇ ಎಂದು ಗುರುತಿಸಿದ್ದಾರೆ. (ಕವಿಚರಿತೆ ಸಂಪುಟ ೨, ಪುಟ ೧೩೨). ಈ ಗ್ರಂಥವನ್ನು ಬರೆಯುವಂತೆ ಕವಿಯನ್ನು ಪ್ರೇರಿಸಿದ ನಂಜೇಶ್ವರನ ಮತ್ತು ಗೂಳೂರ ಶಾಂತೇಶ್ವರಗುರುವಿನ ವಿಷಯವು ಗೊತ್ತಾಗುವುದಾದರೆ ಕವಿಯ ಕಾಲನಿರ್ಣಯವು ಇನ್ನೂ ದೃಢವಾಗಬಹುದು.

No. 1062. ಶ್ವೇತನ ಸಾಂಗತ್ಯ by ಮಲ್ಲಿಕಾರ್ಜುನ.
ŚVĒTANA SĀṄGATYA BY MALLIKĀRJUNA.

Substance, paper. Size, 10-7/16 × 9-7/16 inches. Pages, 28. Lines, 20 on a page. Extent, 420 granthas. Character, Kannada. Condition, good. Appearance, new.

Restored in 1939–40 from the Ms. described above (No. 1061).

Begins on page 1. The other works herein are :—(1) *Bhāgavatatātparya*, page 29, (2) *Gāyatryartha*, page 32.

Incomplete.

(ಏ-ಏ.)—

ಅಸಮಗ್ರ. ಇದು ಹಿಂದಣ (೧೦೬೧ ನೆಯ) ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯು. ಕಾಗದದ ಪ್ರತಿ. ಸಂಧಿಗಳು ೧, ೨ ಮತ್ತು ೩ ನೆಯದರಲ್ಲಿ ಮೊದಲಿಂದ ೪೪ ಪದ್ಯಗಳು ಇವೆ.

No. 1063. ಶ್ವೇತನ ಸಾಂಗತ್ಯ by ಮಲ್ಲಿಕಾರ್ಜುನ.
ŚVĒTANA SĀṄGATYA BY MALLIKĀRJUNA.

Substance, palm-leaf. Size, 11-5/16 × 1-3/16 inches. Pages, 46. Lines, 5 on a page. Extent, 330 granthas. Character, Kannada. Condition, extremely injured. Appearance, old. Mode of writing, good.

Incomplete. Contains up to the 90th stanza of the 3rd sandhi with an additional portion at the end and a few variations. The last four stanzas are given below. In these stanzas reference is made to Śvēta going to Kailāsa. From this it has to be understood that the work should be complete in 3 sandhis.

End :

(೩ ನೆಯ ಸಂಧಿಯ ೮೭ ನೆಯ ಪದ್ಯದಿಂದ)

ಸಾಂಗತ್ಯ ॥ ನೋಡು ನಾರದ ಕಾಲನ ಮೇಲೆ ಚಹದಿಯ ।

. . . . ಭವನ ॥

ನೋಡೆಂದು ಶಂಕರನಖಿಳಗಣಂಗಳ ।

ಕೊಡೆ ನುಡಿದನರ್ತಿಯಲಿ ॥
ಇಂದುಧರನ ನಿಜರೂಪನು ನೋಡುತ ।
ಬಂದು ನಮಸ್ಕರಿಸುತಲಿ ॥
ನಿಂದು ಬಳಿಕ ಕೊಂಡಾಡುತಲಿರ್ದನು ।
ಸೌಂದರ್ಯಮಯನಾ ಶ್ವೇತ ॥
ಹರಹರ ಶಿವಶಿವ ಶಂಕರ ಶಶಿಧರ ॥
ಹರಿಯಜರಱಿಯದ ಭವನ ॥
ಪರಮನಿರಾಯಾಸದಿಂದಲಿ ಕಂಡೆನು ।
ಸರಿಯುಂಟೆ ನಿಮಗೆಂದ ॥ (?)
ಕೊಂಡಾಡುವ ನೋಡುವ ಶ್ವೇತನ ಕರೆ ।
ಕೊಂಡು ಪುಷ್ಪಕದೊಳಗಿರಿಸಿ ॥
ಕೊಂಡು ಬಂದನು ಕೈಲಾಸಕ್ಕೆ ನಲವಿಂದ ।
ಕಂ * * * *

(ವಿ-ವಿ.)—

ಅಸಮಗ್ರ. ಮೊದಲ ಸಂಧಿಯ ೨೭ ನೆಯ ಪದ್ಯದಿಂದ ೩ ನೆಯ ಸಂಧಿಯ ೯೦ ನೆಯ ಪದ್ಯದವರೆಗೂ ಇದೆ. ಈ ಮಧ್ಯದಲ್ಲಿ ಗ್ರಂಥಪಾತವೂ ಉಂಟು. ಹಿಂದೆ ವರ್ಣಿತವಾಗಿರುವ ಪ್ರತಿಗೂ ಇದಕ್ಕೂ ಅಲ್ಲಲ್ಲಿ ಒಂದೆರಡು ಪದ್ಯಗಳ ವ್ಯತ್ಯಾಸವೂ ತೋರಿಬರುವುದು. ಹಿಂದಣ ಪ್ರತಿಗಿಂತಲೂ ಇದರಲ್ಲಿ ಕೊನೆಯಲ್ಲಿ ಹೆಚ್ಚು ಪದ್ಯಗಳಿರುವ ಕಾರಣದಿಂದ ಆ/ ಕಡೆಯ ಭಾಗದಿಂದ ನಾಲ್ಕು ಪದ್ಯಗಳನ್ನು ಉದ್ಧರಿಸಿ ಮೇಲೆ ಬರೆಯಲಾಗಿದೆ. ಮುಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯು ಇದರ ಪ್ರತಿಕೃತಿ.

ಈ ಮೇಲೆ ಉದ್ಧರಿಸಿರುವ ಪದ್ಯಭಾಗದಲ್ಲಿ ಶ್ವೇತನು ಪುಷ್ಪಕದಲ್ಲಿ ಕುಳಿತು ಕೈಲಾಸಕ್ಕೆ ಹೋದ ವಿಷಯವು ಸೂಚಿತವಾಗಿರುವುದರಿಂದ ಈ ಸಂಧಿಗೇ ಈ ಕತೆಯು ಮುಗಿಯುತ್ತದೆಂದು ಊಹಿಸಬೇಕಾಗುತ್ತದೆ. ಆದುದರಿಂದ ಈ ಗ್ರಂಥವು ೩ ಸಂಧಿಗಳುಳ್ಳುದೆಂದು ಹೇಳಬಹುದು. ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಉಳಿದ ವಿಷಯಗಳನ್ನು ಹಿಂದೆ ವರ್ಣಿತವಾಗಿರುವ ಏತದ್ಗ್ರಂಥದಿಂದ ನೋಡಿ ತಿಳಿಯುವುದು.

No. 1064. ಶ್ವೇತನ ಸಾಂಗತ್ಯ by ಮಲ್ಲಿಕಾರ್ಜುನ-
ŚVĒTANA SĀNGATYA BY MALLIKĀRJUNA.

Substance, paper. Size, $10\frac{5}{8} \times 9\frac{3}{8}$ inches. Pages, 22. Lines, 20 on a page. Extent, 330 granthas. Character, Kannada. Condition, good. Appearance, new.

Restored in 1933–34 from the Ms. described above (No. 1063).

Incomplete.

(ವಿ-ವಿ.)—

ಅಸಮಗ್ರ. ಹಿಂದಣ (೧೦೬೩ ನೆಯ) ನಂಬರಿನಲ್ಲಿ ವರ್ಣಿತವಾದ ಪ್ರತಿಯ ಪ್ರತಿಕೃತಿಯಾಗಿದೆ. ಕಾಗದದ ಪ್ರತಿ.

No. 1065. ಸಾನಂದಗಣೇಶ್ವರ ಸಾಂಗತ್ಯ by ಓದುವಗಿರಿಯ-
SĀNANDAGAṆĒŚVARA SĀṄGATYA BY ŌDUVAGIRIYA.

Substance, plam-leaf. Size, 16-3/16 × 1¼ inches. Pages, 55. Lines, 5 on a page. Extent, 750 granthas. Character, Kannada. Condition, extremely injured. Appearance, old. Mode of writing, good.

Begins on fol. 1*a* of the Ms. described under No. 683 *ante*.

Complete in 6 sandhis.

Describes the story of one sage "Sānandagaṇēśa." The name of the author is 'Ōduvagiriya' who studied under '*Kanteyadēva*.' He is also the author of *Hariścandra Sāṅgatya* and he lived in about 1525 A.D.

Beginning :

ಸಾಂಗತ್ಯ ॥ ಶ್ರೀಮದಮರಗಣ . . . ಸುರಾಚಿತ ।
ಕಾಮರಸಾಂಘ್ರಿಯುಗಳಕೆ ॥
ಪ್ರೇಮ . . . ನೆರಗುವೆ ಗಿರಿಜಾವರ ।
ಸ್ವಾಮಿ ಸಲಹು ಶಶಿಧರನೆ ॥ ೧ ॥
ಭುವನಕುನ್ನತ ಬಲು ಮೇರುವಿಲ್ಲಗೆಯ್ಯ ।
ಸವಡಿಸಾಸಿರಜಿಹ್ವೆಯುವನ ॥
ತವೆ ಹೆದೆಗಟ್ಟಿ ದಾನವರೂರ ನೆರೆಗೆದ್ದ ।
ಶಿವ ಕೊಡುವ (ನಕ್ಕ) ಮಂಗಳವ ॥ ೨ ॥

* * *

ಗುರುವಂಕಪತಿ ಪುರಾಣದ ವಿರೂಪಾಕ್ಷನ ।
ವರಗರ್ಭಶರಧಿ ಚಂದ್ರಮನು ॥
ಪರಮಪಾವನಮೂರ್ತಿ ಕಂತೆಯ ದೇವರ ।
ಚರಣವನಾ ಬಲಗೊಂಬೆ ॥ ೭ ॥
ಛಂದದಲಂಕಾರ (ವ್ರೊಂದಿದವ) ದಿಪ್ರಾಸು ।
ಬಿಂದುಪೆಂಬೀ ಗಣಸೇವ ॥
ಒಂದುವನರಿತವನಲ್ಲ ಬಲ್ಲರು ನಿಮ್ಮ ।
ಕಂದಪೆಂದೋದಿ ತಿದ್ದುವುದು ॥ ೮ ॥
ಪುಲುಹಣ ಮಯೂರನುದ್ಭಟ ದೇವಯ್ಯ ।
ಹಲಯುಧ ಕವಿ ಕಾಳಿದಾಸ ॥
ಸುಲು . . ಹಂಪೆಯ ಹರೀಶ್ವರ ರಾಘವಾಂಕನ ।
ಬಲಗೊಂಡು ಪೇಳ್ವೆನೀ ಕೃತಿಯ ॥ ೯ ॥
ಕೃತಿನಾಮವೆಂತೆನೆ ಪೇಳ್ವೆನು ನಿರಯಾಧಿ- ।
ಪತಿಯ ಪಟ್ಟಣವ ಕೊಳ್ಳೊಂಡು ॥
ಶಿತಿಕಂಠನಿರ್ದ ಕೈಲಾಸಕ್ಕೆ ಕೊಂಡೊಯ್ದ ।
ಯತಿ ಸಾನಂದೇಶ ಚಾರಿತ್ರ ॥ ೧೦ ॥

ಬಣ್ಣಿಸಲಳವೆ ಜೊನ್ನೊಡಲನಗ್ಗದ ಸಿರಿ- ।
ವೆಣ್ಣೊಗೆದೆಡೆಯನೊ . . . . ॥
. . . . . ಮನಕೆ ಗೋಚರಿಸುವ ಶರವಭ್ರ ।
ವರ್ಣದಿಂದೆಸೆವ ವಾರಿಧಿಯ ॥ ೧೧ ॥

*   *   *   *

ಸರ್ವಜೀವರ ಮೇಲೆ ದಯಾಭರಿತನು ಯಾವ ।
ಗರ್ವದಲ್ಲಣನು ತಾನೆಂದು ॥
ಗೀರ್ವಾಣವಾಹನ ವೃಷಭಸಿಂಧುರ ಕೋಟಿ ।
ಶರ್ವಾಣಿವರ ಕೃಪೆಯಿಂದ ॥ ೫೫ ॥
ಇನಿತಪಡೆದು ಮುನಿಜನಕಗ್ರಗಣ್ಯನೆಂ- ।
ದೆನಿಸಿ ಸಾನಂದನಂತಿರಲು ॥
ಘನತಪೋಧನರಿರ್ಪ ನೈಮಿಶಾರಣ್ಯಕ ।
ಮುನಿಸುತ ಬಂದೇಕ ಸಂಧಿ ॥

Colophon :

ಪ್ರಥಮ ಸಂಧಿ ಮಂಗಳ ಮಹಾ ಶ್ರೀ.

End :

ಧರೆಯೊಳಪ್ರತಿಮ ಶ್ರೀಗಿರಿಯ ಮಲ್ಲೇಶನ ।
ಚರಣಕಮಲಮಧುಕರನು ॥
ವರಕವಿಶರಧಿ ಚಂದ್ರಮ ನೆರೆಯೋದುವ ।
ಗಿರಿಯ ಬೇಳದನೀ . . . . . . ॥ ೨೦ ॥
ಕಾಲನ ಗೆಲಬೇಕಾದರೆ ಧಾತ್ರಿಯ ।
ಮೇಲೆ ರಂಜಿಪ ನರರೆಲ್ಲ ॥
ಮೇಲುಗೆಯ್ಯಾಗ ಬೇಕಾದಡೀ ಕೃತಿಯನು ।
ಲಾಲಿಸಿಯೇಕ ಚಿತ್ತದಲಿ ॥ ೨೩ ॥
ಕರೆದು ದಾನವ ಕೊಟ್ಟ ಫಲ ಪುಣ್ಯತೀರ್ಥವ ।
ಚರಿಸಿದ ಫಲ ಪಂಚಾಕ್ಷರಿಯ ॥
ಸ್ಮರಿಸಿದ ಫಲ ಶಿವಪೂಜೆಯ ಫಲವಿದ ।
ಧರೆಯೊಳಗಾರು ಕೇಳದರೆ ॥ ೨೪ ॥
ಇಂದ್ರನ ಭೋಗ ಮುಕುಂದನ ಸೊಬಗರ- ।
ವಿಂದಭವನ ಚಾತುರ್ಯ ॥
ಚಂದ್ರನ ಕಾಂತಿಯಹುದು ಕೇಳದವರಿಗೆ ।
ಸಂಧಿಯಾರಾಯಿತೀ ಕೃತಿಗೆ ॥ ೨೫ ॥

Colophon :

ಅಂತು ಸಂಧಿ ೬ ಕ್ಕಂ ಪದನು ೪೪ ಕ್ಕಂ ಮಂಗಳ ಮಹಾ ಶ್ರೀ.

(ವಿ-ವಿ.)—

ಸಮಗ್ರ. ಅಂತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಪುಸ್ತಕದಾದಿಯಲ್ಲಿ 'ಪರಿಧಾವಿ ಸಂವತ್ಸರದಲ್ಲು ಮಾಘ ಬ. ೧ ರಲ್ಲು ಕೆಂಬಲ್ಲ ಚಿನ್ನವರದ ಚಿಖಣಾ . . . . . ರುದ್ರಯ್ಯನ ಮಗ ಗುರುಲಿಂಗಯ್ಯನ ಪುಸ್ತಕ. ಸಾನಂದ ಗಣೇಶ್ವರನ ಸಾಂಗತ್ಯದ ಪುಸ್ತಕವ ಬರೆದಾತ ಕವಿ ನಂಜಯ್ಯ' ಎಂದಿದೆ. ಈ ಪುಸ್ತಕದೊಂದಿಗೆ ಇನ್ನೂ ಕೆಲವು ಪುಸ್ತಕಗಳಿವೆ. ಅವುಗಳನ್ನು ೬೭೩ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಸಾಂಗತ್ಯದಲ್ಲಿ ಬರೆದಿದೆ. ಸಂಧಿಗಳು ೬, ಪದ್ಯಗಳು ೪೮೦. ಇದರ ಕಥಾಗರ್ಭವು 'ಕೃತಿನಾಮವೆಂತೆನೆ (*) (*) (*) ಸಾನಂದ ಗಣೇಶ ಚಾರಿತ್ರ' ಎಂಬ ಪದ್ಯದಲ್ಲಿ ಹೇಳಿದೆ. ಗ್ರಂಥದಾದಿಯಲ್ಲಿ ಶಿವ, ಗಣಪತಿ, ಗುರುಸ್ತುತಿಗಳು ಕ್ರಮವಾಗಿವೆ. ಕವಿಯ ಗುರು ಕಂತೆಯ ದೇವನೆಂದು ಗೊತ್ತಾಗುತ್ತದೆ. ಪೂರ್ವ ಕವಿಗಳಲ್ಲಿ ಮಲುಹಣ ಮುಂತಾದವರನ್ನು ಸ್ಮರಿಸಿದ್ದಾನೆ.

ಕವಿ ಓದುವಗಿರಿಯ ನೆಂಬವನು. ಇವನು ಹರಿಶ್ಚಂದ್ರ ಸಾಂಗತ್ಯವನ್ನೂ ಬರೆದಿದ್ದಾನೆ. ಇವನ ಕಾಲವು ಸು. ಕ್ರಿ. ಶ. ೧೫೨೫ ಎಂದು ಕವಿ ಚರಿತೆಯಲ್ಲಿ ಹೇಳಿದೆ.

No. 1066. ಸಾನಂದಗಣೇಶ್ವರ ಸಾಂಗತ್ಯ by ಓದುವಗಿರಿಯ-

SĀNANDAGAṆĒŚVARASĀṄGATYA BY ŌDUVAGIRIYA

Substance, paper. Size, 10⅝ × 9½ inches. Pages, 88. Lines, 20 on a page. Extent, 750 granthas. Character, Kannada. Condition, good. Appearance, new.

Restored in 1939–40 from the Ms. described above.

Begins on page 1. The other works herein are :—(1) *Śivapāramya-viṣaya*, page 88, (2) *Samādhikriyāvacana*, page 96, (3) *Raṭṭamata*, page 104, (4) *Sahasragaṇanāmatārāvali*, page 110, (5) *Kālacakra* page 123.

Complete in 6 sandhis.

(ವಿ-ವಿ.)—

ಸಮಗ್ರ. ಇದು ಹಿಂದಿನ (೧೦೬೫ ನೆಯ) ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪುತ್ರಿಕೆಯಾಗಿದೆ. ಕಾಗದದ ಪ್ರತಿ. ಇದರೊಡನೆ ೧. ಶಿವ ಪಾರಮ್ಯ ವಿಷಯ, ೨. ಸಮಾಧಿಕ್ರಿಯಾವಚನವು, ೩. ರಟ್ಟಮತ, ೪. ಸಹಸ್ರಗಣನಾಮತಾರಾವಳಿ, ೫. ಕಾಲ ಚಕ್ರ— ಈ ಪುಸ್ತಕಗಳೂ ಬರೆದು ಸೇರಿಸಿವೆ.

No. 1067. ಸಾನಂದಗಣೇಶ್ವರ ಸಾಂಗತ್ಯ by ಓದುವಗಿರಿಯ-

SĀNANDAGAṆĒŚVARASĀṄGATYA BY ŌDUVAGIRIYA.

Substance, palm-leaf. Size, 16¼ × 1⅜ inches. Pages, 33. Lines, 5 to 6 on a page. Extent, 350 granthas. Character, Kannada. Condition, very much injured. Appearance, old. Mode of writing, good.

Begins on fol. 2*a*. The other works herein :—(1) *Vaidya*, fol. 1*a*, (2) *Nītiśāstrasamuccaya* (some Sanskrit ślokas with Kannaḍa ṭīkā) fol. 19*a*.

Foll. 18*b* and 19*b* are left blank.

Incomplete ; contains sandhis 2—4.

Complete.

Same work as that described above.

(ವಿ-ವಿ.)—

ಅಸಮಗ್ರ. ಸಂಧಿಗಳು ೨-೪ ಇವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವು. ಇದರೊಡನೆ ವೈದ್ಯ, ನೀತಿ ಶಾಸ್ತ್ರಸಮುಚ್ಚಯ (ಕರ್ಣಾಟಕ ಟೀಕೆಯೊಡನೆ ಸಂಸ್ಕೃತ ಶ್ಲೋಕಗಳು) ಇವೂ ಇವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1068. ಸಾನಂದಗಣೇಶ್ವರ ಸಾಂಗತ್ಯ by ಓದುವಗಿರಿಯ.

SĀNANDAGAṆĒŚVARA SĀṄGATYA BY ŌDUVAGIRIYA.

Substance, palm-leaf. Size, 14 × 1 to 1½ inches. Pages, 45. Lines, 5 to 6 on a page. Extent, 350 granthas. Character, Kannada. Condition, extremely injured. Appearance, old. Mode of writing, good.

Incomplete ; contains sandhis 1—3 and 1—52 stanzas in the 4th sandhi.

Same work as that described above.

(ವಿ-ವಿ.)—

ಅಸಮಗ್ರ. ಸಂಧಿಗಳು ೧-೩, ೪ ನೆಯದರಲ್ಲಿ ಮೊದಲಿಂದ ೫೨ ಪದ್ಯಗಳೂ ಇವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವು. ಕಡೆಯ ಓಲೆಯ ಒಂದು ಪಕ್ಕದಲ್ಲಿ 'ಕೂಜಂತಂ ರಾಮರಾಮೇತಿ' ಈ ಮೊದಲಾದ ೬ ಸಂಸ್ಕೃತ ಶ್ಲೋಕಗಳಿವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1069. ಸಾನಂದಗಣೇಶ್ವರ ಸಾಂಗತ್ಯ by ಓದುವಗಿರಿಯ.

SĀNANDAGAṆĒŚVARA SĀṄGATYA BY ŌDUVAGIRIYA.

Substance, palm-leaf. Size, 10⅞ × 1·5/16 inches. Pages, 80. Lines, 6 on a page. Extent, 800 granthas. Character, Kannada. Condition, much injured. Appearance, old. Mode of writing, not bad.

Begins on fol. 66*a*. The other work herein is :—*Hariscandrasāngatya* fol. 1*a*.

Complete.

Same work as that described above.

(ವಿ-ವಿ.)—

ಸಮಗ್ರ ೧-೬ ಸಂಧಿಗಳು. ಪದ್ಯಗಳು ೪೪೧-೬೬ ನೆಯ ಓಲೆಯಲ್ಲಿ ಆರಂಭವಾಗುತ್ತದೆ. ಮೊದಲಿನ ಎರಡು ಓಲೆಗಳು ಮುರಿದಿವೆ. ಕೊನೆಯ ಓಲೆಯ ಸಂಖ್ಯೆ ೧೦೫. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ಪುಸ್ತಕದ ಕೊನೆಯಲ್ಲಿ "ಹರಿಣಪುರದ ಸಿಂಹಾಸನಾಧೀಶ್ವರ । ಗುರು ಕೆಂಪ ನಂಜೇಶ್ವರ (ನ ॥ ಕ) ರಜಾತ ನಂಜಯ ಬರೆಸಿಹ ಹರಿಶ್ಚಂದ್ರ । ಚರಿತೆ ಸಾನಂದ ಕೃತಿ [ಯನು] ॥ ಸಂಪೂರ್ಣ ಮಂಗಳ ಮಹಾಶ್ರೀ" ಎಂದಿದೆ. ಇದರೊಡನೆ ೧-೬೫ ಓಲೆಗಳಲ್ಲಿ ಹರಿಶ್ಚಂದ್ರ ಸಾಂಗತ್ಯವಿದೆ. ಅದು ಮುಂದಣ ೧೧೧೮ ನೆಯ ನಂಬರಿನಲ್ಲಿ ವರ್ಣಿತವಾಗಿದೆ. ಅದರ ಕೊನೆಯಲ್ಲಿಯೂ "ಹರಿಣಪುರದ ಸಿಂಹಾಸನಾಧೀಶ್ವರ ಗುರು ಕೆಂಪ ನಂಜೇಶ್ವರನ ॥ ಕರಜಾತ ನಂಜಯ್ಯ ಬರೆಸಿದ ಹರಿಶ್ಚಂದ್ರ' ಚರಿತೆಯ ಚೆನ್ನಾರ್ಯ ನಿಂದ ॥" ಎಂದು ಬರೆದಿದೆ. ಈ ಮೇಲಿನ ಎರಡು ಪದ್ಯಗಳೂ ಹೆಚ್ಚಿನ ಮಟ್ಟಿಗೂ ಒಂದೇ ತೆರನಾಗಿವೆ. ಲಿಪಿಯನ್ನು ನೋಡಿದರೆ ಎರಡು ಗ್ರಂಥಗಳನ್ನೂ ಒಬ್ಬನೇ ಪ್ರತಿ ಮಾಡಿರ ಬೇಕೆಂದು ಹೇಳಬೇಕಾಗಿದೆ. ಓಲೆಗಳಲ್ಲಿ ಸಂಖ್ಯೆಯು ಎರಡು ಗ್ರಂಥಗಳಿಗೂ ಸೇರಿಸಿ ೧ ರಿಂದ ೧೦೫ ರ ವರೆಗೆ ಕ್ರಮವಾಗಿ ಕೊಟ್ಟಿದೆ. ಪುಸ್ತಕದ ಆದಿಯಲ್ಲಿ ಬರೆಹಗಾರನು "ಶ್ರೀ ಗುರು ಕೆಂಪ ನಂಜೇಶ್ವರಾಯ ನಮಃ" ಎಂದು ಬರೆದಿದ್ದಾನೆ. ಈ ಕಾರಣಗಳಿಂದ ಸಾನಂದ ಗಣೇಶ್ವರ ಸಾಂಗತ್ಯದ ಪ್ರತಿಯ ಕೊನೆಯ ಪದ್ಯದಲ್ಲಿ ಬರೆಹಗಾರನ ಹೆಸರಿಲ್ಲದಿದ್ದರೂ ಅದು ಪ್ರತಿ ಮಾಡಿದವನಿಗೆ ಸಂಬಂಧಿಸಿದುದಲ್ಲದೆ ಗ್ರಂಥ ಕರ್ತನಿಗಲ್ಲವೆಂದೂ, ಎರಡು ಗ್ರಂಥಗಳನ್ನೂ ಪ್ರತಿ ಮಾಡಿದವನು ಚೆನ್ನಾರ್ಯನೆಂಬವನೆಂದೂ ತಿಳಿಯುತ್ತದೆ.

ಕರ್ಣಾಟಕ ಕವಿ ಚರಿತ್ರಕಾರರು ಓದುವಗಿರಿಯನ (ವಿಷಯವಾಗಿ) ''ಹರಿಣಪುರ ಸಿಂಹಾಸನಾಧೀಶ ಗುರುಕೆಂಪ ನಂಜೇಶ್ವರನುದರಜಾತ ನಂಜಯ್ಯನು ಈ ಎರಡು ಗ್ರಂಥಗಳನ್ನು ತನ್ನಿಂದ ಬರೆಸಿದಂತೆ ಹೇಳುತ್ತಾನೆ" ಎಂದೂ, 'ಈತನು ಸಾನಂದ ಗಣೇಶ್ವರ ಸಾಂಗತ್ಯ, ಹರಿಶ್ಚಂದ್ರ ಸಾಂಗತ್ಯ ಇವುಗಳನ್ನು ಬರೆದಿದ್ದಾನೆ; ಹರಿಶ್ಚಂದ್ರ ಸಾಂಗತ್ಯದಲ್ಲಿ ಸಂಧಿ ೬, ಪದ್ಯ ೪೪೧" ಎಂದೂ ಬರೆದಿದ್ದಾರೆ. [ಇಲ್ಲಿರುವ ಪ್ರತಿಯ ಮೇಲೆ ನಿರ್ದೇಶಿಸಿದ ಪದ್ಯದಲ್ಲಿ "ನಂಜೇಶ್ವರನ ರಜಾತ" ಎಂದಿದೆ. ಮಧ್ಯದಲ್ಲಿ ಒಂದು ಅಕ್ಷರವು ಹುಳು ತಿಂದು ಹೋಗಿದೆ. ಕವಿ ಚರಿತ್ರಕಾರರು ನಕಾರದ ಮೇಲೆ ಉಕಾರ ಚಿಹ್ನೆಯೂ, ದಕಾರವೂ ನಷ್ಟವಾಗಿರುವುದಾಗಿ ಭಾವಿಸಿರಬಹುದು. ಆದರೆ ಇದರೊಡನಿರುವ ಹರಿಶ್ಚಂದ್ರ ಸಾಂಗತ್ಯದ ಪ್ರತಿಯ ಕೊನೆಯಲ್ಲಿರುವ ಪದ್ಯವನ್ನು ನೋಡಿದರೆ ಕಕಾರವೊಂದೇ ನಷ್ಟವಾಗಿರಬಹುದೆಂದು ಹೇಳಬಹುದು. ಆದ್ದರಿಂದ ಮೇಲೆ ನಿರ್ದೇಶಿಸಲ್ಪಟ್ಟ ನಂಜಯ್ಯನು ಕೆಂಪ ನಂಜೇಶನ ಕರಜಾತನೇ ಹೊರತು ಉದರ ಜಾತನಿರಲಾರನೆಂದು ತೋರುತ್ತದೆ.]

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1070. ಸಾನಂದ ಚರಿತ್ರ by ಕುಮಾರ ಪದ್ಮರಸ alias ಶರಣ ಕವಿ.

SĀNANDACARITRE BY KUMĀRAPADMARASA *Alias* ŚARAṆAKAVI.

Substance, palm-leaf. **Size**, 15½ × 1-5/16 inches. **Pages**, 294. **Lines**, 4–6 on a page. **Extent**, 4,000 granthas. **Character**, Kannada. **Condition**, very much injured. **Appearance**, old. **Mode of writing**, good.

Complete in 9 sandhis.

A poetic rendering in Kannada describing the story of *Sānanda,* which forms a portion of *Skāndapurāṇa.* It is written in Ṣaṭpadi metres and the most part of the work consists of "*Kusumaṣaṭpadi.*" The author *Kumārapadmarasa* states that he wrote this at the instance of his father "*Kereya Padmarasa*" who wrote at first the original of this work in Sanskrit. In the "Karṇāṭaka Kavicaritre" Vol. I, Page 216 it is stated that the author lived in 1180 A.D.

The short summary of the story is as follows:—Sānanda was a devotee of God Śiva and was the son of the sage *Pūrṇavitta.* Once, hearing that many sinners are suffering from several unbearable torments in the hell he came to grief and went there and released them from their misery by the greatness of "Pancākṣari."

Beginning :

ಯತ್ಕಟಾಕ್ಷನಿಪಾತೇನ ಮಲಿನೋಽಪಿ ವಿಮಲಾಯತೇ ॥
ವಂದೇ ಶ್ರೀಮಾಚಿದೇವಾರ್ಯಂ ಕೃಪಾನಿರ್ಭರ ಚೇತಸಂ ॥

ಉ ॥ ದೋರ ಸಮುದ್ರವೆಂಬ ಪೆಸರಿಂದೆಸೆದೊಪ್ಪುವ ರಾಜಧಾನಿಯೊಳ್ ।
ಧೀರ ನೃಸಿಂಹ ಭೂವರ ನಿರುತ್ತರೆ ದೇಶವ ಪಾಲಿಸುತ್ತು ವಿಶೊ- ॥
ಪೂರ್ಣರಮಣೀಯ ರಾಜನ ಸಮೀಪಕೆ ಬಂದನು ಮಾಂಧ್ರದೇಶದಿಂ ।
ನಾರಣಭೃತ್ಯ ತ್ರೈಭುವನ ತಾತನೆನಿಪ್ಪನದೊರ್ವ ವೈಷ್ಣವಂ ॥ ೧ ॥

ಪು. ವಿ. ॥ ಶಿವನಿಲ್ಲಂ (?) ಶಿವ ಭಕ್ತಿಯಿಲ್ಲ ಶಿವ ಸಿದ್ಧಾಂತಂ ದಿಟಂ ಮುನ್ನಮಿ- ।
ಲ್ಲ ವಿಚಾರಂ ಪುಸಿತಥ್ಯಮಂ . . . ವನಜಾಕ್ಷಂ ದೈವಮಾ ವೈಷ್ಣವಂ ॥
ಸುವಿಶಾಲಂ ನಿಜಭಕ್ತಿಗೆಂದೆನುತ ಪತ್ರಾಲಂಬನಂಗೆಯ್ಯಲಾ- ।
ಭವಿಯೊಳ್ ವಾದಿಸಿಗೆಲ್ದ ಪದ್ಮರಸನೀ ಸಾನಂದ ಚಾರಿತ್ರದಿಂ ॥ ೨ ॥

ಉ. ॥ ಅಂದವಿವೇಕದಿಂವಲರಿ ವೈಷ್ಣವ ಬೌದ್ಧರನಾರ್ಹತಾಂತರಾ- ।
ಳಾಂಧರ ಭ್ರಷ್ಟತಾರ್ಕಿಕರ ಕೂಡತಿವಾದಿಸಿ ವೇದ ಶಾಸ್ತ್ರದಿಂ ॥
ದಂದು ವಿರೋಧಿವಾದಿಯೆನಿಸುತ್ತಿಹ ವೈಷ್ಣವನಂ ವಿಭಾಡಿಸು- ।
ತ್ತಿಂದುಧರೈಕ ಭಕ್ತಿರಸ ಪದ್ಮರಸಾರ್ಯನು ಕಾಯ್ದನುರ್ವಿಯೊಳ್ ॥ ೩ ॥

ವಚನ ॥ ಸಕಲ ಜನ ಸೇವ್ಯದೋರಾಂಬುಧಿಯ ರಾಮಣ್ಣಗಳ ಪೇಳಲು ಲೋಕಕಂ ಪ್ರಭಾತ . . . ಪೆರ್ಮೆಗಾಪಣ ತ್ರಿಭುವನತಾತನು ಮೆನಿಪ್ಪ ವೈಷ್ಣವನಂತಾ ವಿಭು ಪದ್ಮರಸಾರ್ಯರ್ ರೊಳ್ಳಗಿದ ಭಯವ ಬೇಡುತ್ತುಮಿರ್ದ ಬಿಲ್ದರ್ಳದೆ ॥ ೪ ॥

ಹಂಪೆಯ ರಾಘವದೇವರ ವಾಕ್ಯ :—

ಕಂ ॥ ಅಹುದಹುದು ಸೂರ್ಯನಿದಿರೊಳ್ ।
ಬಹುತಮ ವಿದಿರಾಗಬಹುದೆ ತ್ರಿಭುವನತಾತಂ ॥
ಬಹುವಿಧದೆ ಪದ್ಮನಿದಿರೊಳ- ।
ಗಹಹಕ್ಕಟ ನುಗ್ಗುನುಸಿ . . ದಾಸಿ ಕೆಟ್ಟಂ ॥ (?) ೫ ॥

ಹುಳಿಗೆರೆಯ ವೊಾಯಿದೇವ ಪುರಾಣಭಟ್ಟ ಬೇಳಕೆ :—

ಕಂ ॥ ತನುವೆಂಟು ಶಿವನವಂ ತಾ
ತನುವಿನೊಳವರ್ದಿರ್ದು ಬೇರೆ ದೈವಂ ಸವುಯಂ ॥
ತನಗೆನಗೆಂಬರ ಶಿರವಂ ।
ಎನಗಂ ಸೆಂಡಾಡಲಾಸ್ತು ಮನವಕ್ರಾಂತಂ ॥ ೬ ॥

* * * * *

ಶ್ರೀ ಶಿವಾದ್ವೈತಸಾಕಾರ ಸಿದ್ಧಾಂತಂ ಸಮುದೀರಿತಂ ।
ಸಾನಂದ ಚರಿತಂ ಶಾಸ್ತ್ರಂ ಪದ್ಮರಾಜ ಮಹಾತ್ಮನಾ ॥

* * * *

ಕು. ಷ. ॥ ಇದು ನಂದಿನಾಥೇಶ ।
ಗದಿತವಾನಂದೈಕ- ।
ದುದಧಿ ಸಾನಂದಾಖ್ಯ ಚರಿತೆಯೊಳಗೆ ॥
ಮುದದಿಂದೆ ಶರಣ ಕವಿ ।
ಪದೆದು ಕನ್ನಡಿಸಿದೀ ।
ಮೊದಲ ಸಂಧಿಯು ಭಕ್ತಿಗಿದುವೆ ಸಂಧಿ ॥ ೯೭ ॥

Colophon :

ಶ್ರೀ ಶಿವಾದ್ವೈತ ಸಾಕಾರಸಿದ್ಧಾಂತ ಸಾನಂದ ಚರಿತೆಯ ಎರಡನೆಯ ಸಂಧಿ ಸಮಾಪ್ತಂ.
ಇನ್ನೀ. ದಂಗಳಂ ಪ್ರತ್ಯೇಕ ಪ್ರತ್ಯೇಕ ಕಥೆಗಳ ಸಾಕ್ಷಿವಾಕ್ಯಂಗಳಂ ಬರೆವಲ್ಲಿ . . . . ರಕ್ಕಂಜೆ ಜಗತ್ಪ್ರಸಿದ್ಧವಾಗಿರ್ದವರ್ಕೆಯುಂ ಪಲವು ವಾಕ್ಯದಲ್ಲದೆ ಕಥೆ ಮಾಡಿಯದಕ್ಕೆಯುಂ ಸಾಕ್ಷಿವಾಕ್ಯಂಗಳಂ ಬಿಟ್ಟಿಳದವಱವಱ ಕಡೆಕಡೆಯಲ್ಲಿಯ ವ . . ಸಾಕ್ಷಿವಾಕ್ಯಂಗಳನೊಡನೊಡನೆ ಬರೆವುತ್ತಂ ಬಂದೆನದನಱಿದು ಕೂಡಿಯೋದುತ್ತುಂ ಬಹುದು.

End :

ಭಾ. ಷ. ॥ ಪಾಲಿಸುಗೆ ಯೀ ಕೃತಿಯ ನನುದಿನ ।
ಪಾಲಿಸುಗೆ ಶಿವನವರ್ಗಳರ್ತಿಯಿ- ।
ನಾಳಯಿನ್ನಂ ರಕ್ಷಿಸುಗೆ ತಮ್ಮೊಕ್ಕುದನೆಯಿಕ್ಕಿ ॥
ಲೀಲೆಯಿಂ ಸದ್ಭಕ್ತರೊಲವಿಂ ।
ಲಾಲಿಸುಗೆ ಮುದದಿಂದೆ ಮದ್ಗುರು ।
ಶೂಲಿ ಶ್ರೀ ಗುರುರೂಪ ವಿಶ್ವೇಶ್ವರ ಶರಣು ಶರಣು ॥ ೧೩೦

Colophon :

ಇದು ಪರಮನಂದೀಶರೊರೆಯಿಂ ।
ಪುದಿದ ಸಾನಂದೇಶ ಚರಿತದೊ- ।
ಳ್ಳದು ಮಹೇಶಾಸ್ಥಾನದುತ್ತಮ ವರ್ಣನದ ಸಂಧಿ ॥
ಇದು ಶರಣಕವಿ ಪದುಮದೇವಂ ।
ಪದೆದು ಕನ್ನಡದಿಂದೆ ಮುದ್ರಿಸಿ- ।
ದೊದವಿದೊಂಬತ್ತನೆಯ ಸಂಧಿ ಸಮಾಪ್ತ ಶಿವಮಸ್ತು ॥

ಶ್ರೀ ಶಿವಾದ್ವೈತ ಸಾಕಾರ ಸಿದ್ಧಾಂತಂ ಸಮುದೀರಿತಂ ।
ಸಾನಂದ ಚರಿತಂ ಶಾಸ್ತ್ರಂ ಪದ್ಮರಾಜ ಮಹಾತ್ಮನಾ ॥

ಅಂತು ಈ ಪುರಾಣದಲ್ಲು ಷಟ್ಪದಿಗಳು ೭೯೧, ಎರಡು ರಗಳೆ; ಇದಕ್ಕೆ ಗ್ರಂಥಗಳು ४೩೦೦.

The scribe adds:—

ಪ್ಲವ ಸಂವತ್ಸರ ಮಾರ್ಗಶಿರ ಬ. ೧೦ ರಲ್ಲು ಶ್ರೀ ಮನ್ಮಹಾನಾಡ ಪ್ರಭು ಬಿಜ್ಜಾವರದ ಇಮ್ಮಡಿ ಚಿಕ್ಕಪ್ಪ ಗೌಡರು ಬರೆಸಿದ ಸಾನಂದ ಪುರಾಣಂ. ಇದನು ಬರೆದಾತನು ಯಜ್ಞನಾರಾಯಣ ದೀಕ್ಷಿತರವುಗ ವಿಶ್ವನಾಥನು. ಇದ ಬರೆಸಿದ ಯಿಮ್ಮಡಿ ಚಿಕ್ಕಪ್ಪ ಗೌಡರಿಗೆ . . . . ಅಷ್ಟೈಶ್ವರ್ಯವೂ, ಈಶ್ವರ ಕೃಪಾ ದೃಷ್ಟಿಯೂ ಆ ಚಂದ್ರಾರ್ಕ ವುಸ್ತು.

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಕೆಲವು ಓಲೆಗಳು ಮುರಿದು ಹುಡಿಯಾಗಿವೆ. ಲಿಪಿ ಉತ್ತಮವಾಗಿದೆ.

ಇದು ಷಟ್ಪದೀ ರೂಪವಾದುದು. ಆದಿಯಲ್ಲಿ ಕಂದ, ವೃತ್ತ, ವಚನಗಳೂ ಇವೆ. ಕುಸುಮ ಷಟ್ಪದಿ ಹೆಚ್ಚು. ಒಂಭತ್ತು ಸಂಧಿಗಳಿವೆ. ಈ ಚರಿತ್ರವನ್ನು (ಸ್ಕಾಂದ ಪುರಾಣದಲ್ಲಿ) ನಂದೀಶನು ಸನತ್ಕುಮಾರನಿಗೆ ಹೇಳಿದ್ದಾನೆ. ಪೂರ್ಣ ವಿತ್ತನೆಂಬ ಋಷಿಯ ಮಗ ಸಾನಂದ ನೆಂಬುವನು. ಜನರ ನರಕ ಬಾಧೆಯನ್ನು ತಪ್ಪಿಸುವ ಸಲುವಾಗಿ ಹೊರಟು ಪಂಚಾಕ್ಷರೀ ಮಹಿಮೆಯಿಂದ ನಾರಕಿಗಳಿಗೆ ಸದ್ಗತಿಯನ್ನುಂಟು ಮಾಡಿದನೆಂಬುದು ಇದರಲ್ಲಿ ಉಕ್ತ ವಿಷಯವು. ಈ ಗ್ರಂಥವನ್ನು "ಪಂಚಾಕ್ಷರೀ ಮಹಿಮೆ" ಎಂದೂ ಕರೆಯಬಹುದು.

"ಹರಚರಮೂವರ ಪರಮ । ವಿರಚಿತ ಶ್ಲೋಕ । ಬಂಧುರ ದೇವ ಭಾಷೆಯಂ ಕನ್ನಡಿಸಿದೆಂ ॥ ಗುರು ಕೆರೆಯ ಪದ್ಮರಸ ವರಸುತನು ಪದುಮಿಗಂ । ಧರಣಿಯೊಳ್ ಸ್ತ್ರೀ ಬಾಲ ಸಾಧ್ಯವಾಗೆ" ಎಂಬುದರಿಂದ ಕವಿ (ಕುಮಾರ) ಪದ್ಮರಸನು ತಂದೆಯಾದ ಕೆರೆಯ ಪದ್ಮರಸನಾಜ್ಞೆಯಿಂದ ಸಂಸ್ಕೃತದಲ್ಲಿರುವ ಇದನ್ನು ಕನ್ನಡಕ್ಕೆ ಪರಿವರ್ತಿಸಿರುವಂತೆ ಗೊತ್ತಾಗುತ್ತದೆ. ಕವಿಗೆ ಶರಣ ಕವಿ ಎಂಬ ವ್ಯವಹಾರವೂ ಉಂಟು. ಒಂದು ವೇಳೆ ಇದು ಬಿರುದಾಗಿರಬಹುದು. ಕೆರೆಯ ಪದ್ಮರಸನು ದ್ವಾರ ಸಮುದ್ರದ ನೃಸಿಂಹ ಬಲ್ಲಾಳರಾಯನ ಸಭೆಯಲ್ಲಿ ತ್ರಿಭುವನ ತಾತ ನೆಂಬ ವೈಷ್ಣವಾಚಾರ್ಯನನ್ನು ವಾದದಲ್ಲಿ ಜಯಿಸಿದಾಗ ದೇವರಾಂಬುಧಿಯ ರಾಮಣ್ಣ, ರಾಘವಾಂಕ, ಹುಲಿಗೆರೆಯ ಮಾಯಿದೇವ, ಪುರಾಣ ಭಕ್ತ ಮುಂತಾದವರು ಪದ್ಮರಸನನ್ನು ಸ್ತುತಿಸಿರುವುದಾಗಿ ಇದರಿಂದ ಗೊತ್ತಾಗುತ್ತದೆ. ಕವಿಯ ಕಾಲವು ಸು. ೧೧೮೦ ಎಂದು ಕವಿ ಚರಿತ್ರಕಾರರ ಮತವು. ಉಳಿದ ವಿಷಯಗಳನ್ನು ಉದಾಹೃತ ಭಾಗಗಳಿಂದಲೂ ಕವಿಚರಿತೆ ಯಿಂದಲೂ ತಿಳಿಯುವುದು.

No. 1071. ಸಾನಂದ ಚರಿತ್ರೆ by ಕುಮಾರ ಪದ್ಮರಸ.

SĀNANDACARITRE BY KUMĀRA PADMARASA.

Substance, palm-leaf. Size, $17\frac{1}{4} \times 1$ to $1\frac{1}{4}$ inches. Pages, 234. Lines, 5–8 on a page. Extent, 3,400 granthas. Character, Kannada. Condition, extremely injured. Appearance, old. Mode of writing, not good.

Incomplete.

Same work as that described above.

(ವಿ-ವಿ.)—

ಅಸಮಗ್ರ. ಆದ್ಯಂತ ಭಾಗಗಳು ಹೋಗಿವೆ. ಇದು ತುಂಬಾ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿಲ್ಲ.

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1072. ಸಿದ್ಧರಾಮೇಶ್ವರ ಚರಿತ್ರೆ.

SIDDHARĀMEŚVARA CARITRE.

NOTE.—For description *vide* Introduction.

No. 1073. ಸಿರುಮನ ಸಾಂಗತ್ಯ by ಸಿದ್ಧ

SIRUMANA SĀṄGATYA BY SIDDHA.

Substance, palm-leaf. Size, 11-5/16 × 1¼ inches. Pages, 141. Lines, 5 on a page. Extent, 1,020 granthas. Character, Kannada. Condition, injured. Appearance, old. Mode of writing, good.

Wants first and 16th fol. otherwise complete in five sandhis.

An historical poem in the sāṅgatya metre describing the story of the battle of the shepherd *Sirumana*, king of *Būdihālu* with *Gunḍayya Sāluva Narasingaraya* of *Candragiri* in which Sirumana was killed.

The name of the author is stated as '*Siddha*' at the beginning of the work and at the end of the work, it is stated as "*Malla.*" Vīrayya' a Vīraśaiva by religion was the father of Malla.

Beginning :

ಸಾಂಗತ್ಯ ॥ . . . . ।
ಉರದಲಿ ರತ್ನಹಾರಗಳ್ ॥
ಸರಸಿಜಭವನರ್ಧಾಂಗಿಯ ಬಲಗೊಂಡು ।
ವಿರಚಿಸಿ ಪೇಳ್ವೆನೀ ಕೃತಿಯ ॥ ೭ ॥
ಶಿವಕವಿಗಳ ಭೃತ್ಯನ ಬಿನ್ನಪವನು ।
ವಿವರಿಸಿ ಕೇಳಿ ಸಜ್ಜನರು ॥
ಭುವನವರಿಯೆ ಗೊಲ್ಲ ಸಿರುಮನ ಕೃತಿಯನು ।
ಪವಣಿಸಿ ಸಿದ್ಧನೊರೆದನು ॥ ೮ ॥
ಪೃಥ್ವಿಯರಿಯೆ ವರ್ಣಿಸುವೊಡೆ ಬೂದಿಹಾಳು ।
ಪ್ರಥಮ ಕಲ್ಯಾಣವೆಂದೆನಿಸಿ ॥
ಅತಿಶಯ ಗುರು ಪೂಜೆ ಜಂಗಮಾರ್ಚನೆಯನು ।
ಸ್ತುತಿಸುವರಿಗಗೋಚರವು ॥ ೯ ॥
ವ್ಯಾಸನ ತೋಳಂದ ಪೃಷಭದ ಜದ್ದಿನಿ । (?)
ರಾಸೆಯ ಮಠವು ರಂಜಿಸಿತು ॥
ಈಶ್ವರ ತಪಸ್ವಿ ವೀರೇಶ್ವರಲಿಂಗನು ।
ಬಸವನಿಹುದ ನೇಸೆಂಬೆ ॥ (?) ೧೦ ॥
ಕೇರವನ ಹೂದೋಟವು ಬಾಳೆಯ ವನ ।

ಮೆರೆವ ಚೆಂದೆಂಗು ಖರ್ಜೂರ ॥
ತುರುಗಿ ಬೆಳೆದ ಕ್ರಮುಕದ ಮರನಲ್ಲಲ್ಲಿ ।
ಬರೆವಿಲ್ಲವಾ ದೇಶದೊಳಗೆ ॥ ೧೧ ॥

End :

ಗುಂಡರಾಜನ ವರಸುತನಿಂದು ಸಿರುಮಯ್ಯ ।
ಕಂಡ ಸುಕೃತಸ್ವರ್ಗವನು ॥
ಕೊಂಡ ಚಲವ ಬಿಡದಳಿದನೆಂದು [ಸಿರುಮ] ಭೂ- ।
ಮಂಡಲದೊಳು ಪಸರಿಸಿತು ॥ ೧೧೪ ॥
ವರಕಶಿ ನೇಸರುಳ್ಳನ್ನ ಕವಿ ಕೀರ್ತಿಯು ।
ಸಿರುಮ ಪಡೆದ ಜಗದೊಳಗೆ ॥
ಹರನ ಪುರಕೆ ನಡೆದನು ತನ್ನ ಪ್ರೊಕ್ಕಲು ।
ವರಸುತಸತಿಯರು ಸಹಿತ ॥ ೧೧೫ ॥
ಈಶ್ವರನೊಡ್ಡೋಲಗದ ಬಾಗಿಲ ಭ- ।
ದ್ರಾಸನಮಂದಿರವಾಗಿ ॥
ವೋಸವಾಗದವ್ರೊಲು ಸೋಮೇಶನೊಲಿಯೆ ಕೈ- ।
ಲಾಸದೊಳಹ ಸಂಧಿ ಮುಗಿಯೆ ॥ ೧೧೬ ॥
ಉಸುರೊಗ್ಗಿನ ಶಿವಶರಣರೆಲ್ಲರ ಶಿಶು ।
ಕುಶಲ ಶಿವಲೀಲೆ ವೀರಯ್ಯನ ॥
ರಸಿಕನ ಮಗ ಮಲ್ಲನಿಂತು ಪೇಳದನಿದ ।
ಹೊಸದಾಗಿ ಸಿರುಮನ ಕೃತಿಯು ॥ ೧೧೭ ॥

Colophon :

ಅಂತು ಸಂಧಿ ೫ ಕ್ಕಂ ಪದನು ೬೨೯ ಕ್ಕಂ ಮಂಗಳ ಮಹಾ ಶ್ರೀ.

(ವಿ.ವಿ.)—

ಸಮಗ್ರವೆನ್ನಬಹುದು. ೧, ೧೬ ನೆಯ ಈ ಎರಡು ಓಲೆಗಳು ಹೋಗಿವೆ. ಕೊನೆಯ ಓಲೆ ೭೩ ನೆಯದು. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಪುಸ್ತಕದ ಕೊನೆಯಲ್ಲಿ 'ಚೈತ್ರ ಬಹುಳ ೧೦ ಲ್ಲು ದುಂದುಭಿ ಸಂವತ್ಸರದಲು ಬರೆದ ತುರುವೆ ಕೆರೆಯ ಗೋಪುರದ ವಿನಾಯಕನ ಪಾದಪದ್ಮಂಗಳೇ ಗತಿ. ಬೇಟಿ ರಾಯಸ್ವಾಮಿಯ ಪಾದವೇ ಗತಿ. ಪರುವತ್ತ ಮಲ್ಲಿ ಕಾರ್ಜುನ ದೇವರ ಪಾದವೇ ಗತಿ. ಗಂಗಾಧರ ಸ್ವಾಮಿಯ ಪಾದವೇ ಗತಿ' ಎಂದಿದೆ.

ಇದು ಸಾಂಗತ್ಯದಲ್ಲಿ ಬರೆದಿದೆ. ಸಂಧಿ ೫, ಪದ್ಯಗಳು, ೬೨೯. ಬೂದಿಹಾಳಗೊಡೆಯ ನಾದ ಗೊಲ್ಲ ಸಿರುಮನು ಚಂದ್ರಗಿರಿಯ ಗುಂಡಯ್ಯ ಸಾಳುವ ನರಸಿಂಗರಾಯನೊಡನೆ ಕಾದಿ ಕೈಲಾಸವನ್ನು ಪಡೆದ ಕತೆಯೆ ಇದಕ್ಕೆ ವಿಷಯವು. ಇದು ಚರಿತ್ರಾಂಶವನ್ನೊಳಗೊಂಡ ಕಾವ್ಯವಾಗಿದೆ.

ಕವಿಯ ಹೆಸರನ್ನು ಗ್ರಂಥದಾದಿ ಭಾಗದಲ್ಲಿ ಸಿದ್ಧನೆಂದೂ ಅಂತ್ಯದಲ್ಲಿ ಮಲ್ಲನೆಂದೂ ಹೇಳಿದೆ. ಈ ಮಲ್ಲನ ತಂದೆ ವೀರಯ್ಯನೆಂಬುವನು. ವೀರಶೈವಮತದವನು. ಗ್ರಂಥಕರ್ತನ ವಿಷಯವಾಗಿ ಹೆಚ್ಚಾಗಿ ಏನೂ ತಿಳಿದು ಬರುವುದಿಲ್ಲ.

No. 1074. ಸೊಬಗಿನ ಸೋನೆ by ದೇಪರಾಜ-

SOBAGINA SŌNE BY DĒPARĀJA.

Substance, palm-leaf. Size, 13 × 1⅛ inches. Pages, 372. Lines, 5 to 6 on a page. Extent, 4,250 granthas. Character, Kannada. Condition, much injured. Appearance, old.

Begins on fol. 1*a* of the Ms. described under No. 658 *ante*.

Complete in 33 sandhis.

The work is written in Sāngatya and the story runs as follows :—Vikrama, son of *Jayaśekhara,* king of *Śasivoḷalu* and *Śurabhāvati* went out on a long tour with his two friends *Māḷava* and *Madhura*. When they were on tour, Māḷava married *Kañjare,* daughter of the king of *Kaśmīra,* and *Madhura* married *Vasante,* daughter of the king of *Śrīdharapura* ; while *Patriṇī* daughter of *Makarasēkhara* and *Prītānane* was given in marriage to *Vikrama.*

The following account is given in Kavicaritre regarding the author :—The author is *Dīparāya,* son of *Kampa. Sangama,* the founder of the Vijayanagar empire had two sons, *Kampa* and *Bukkarāya* 1353—1377 and Bukkarāya had a son called *Kampa.* Kampa II may be presumed to be the father of the author. The date of Dēparāya, in that case, can be fixed as 1410 A.D.

Date of transcription :—Tuesday, the sixth day in the 2nd half of the lunar month Āśvayuja in the year Nandana.

Name of the scribe :—*Timmayya,* son of *Tāyūra Upādya.*

Beginning :

ಶಾ. ವಿ. ॥ ಶ್ರೀಮದ್ದೇವರ ದೇವ ವಂದಿತ ಜನಕ್ಕಾನಂದ ವಾರಾಂನಿಧೀ।
ಧೀಮನ್ನಾರದ ಗಾನತೋಷಿತ ಮನಾ ನಾಗ . . ರಚ್ಛೇದಕಾ ॥
ಕಾಮೋದ್ದಂಡ ವಿಘಾತ ದಕ್ಷಕ ಕಳಂಕಾಂ (ಕಾಂ) ಕನೇ ರಕ್ಷಿಸೋ।
ಸಾಮಾಮ್ನಾಯ ಪಯಃ ಪಯೋಧಿಗುಡುಪಾ ಪಂಪಾವಧೂಟೀವರಾ ॥
ಶ್ರೀಗಿರಿಜಾತನು ಸರಸಿಯೊಳೊಗೆದು ವಿ-।
ರಾಗಿ ಪುರೋದಕಂ (ಜಗಳ) ॥
ಮೋಗಹರ್ದಿನಿಗಂಪಿಗೆ ಸೋತು ಕಣ್ತುಂಬಿ-।
ಯಾಗಿ ಮೋಹಿಪ ಶಿವ ಸಲಹೆನ್ನ ॥೧॥
ಶ್ರೀಗಿರಿಜಾಕುಚ ಕುಂಕುಮದಮಲ ಪ-।
ರಾಗಾಂಕಿತ ಭಾಸುರವಕ್ಷ ॥
ಭೋಗಾಲಂಕೃತ (ನಾದ) ಮಹೇಶ್ವರ-।
ನೀಗ ಪಾಲಿಸು ತ್ರಿಜಗವನು॥ ೨ ॥

ಕಂಜಾಕ್ಷನುತ ಮಂಜುಳಪಾದ ಕಂಜ ।
ಕುಂಜರ ದೈತ್ಯ ಭಂಜನ ॥
ನಂಜುಭಾಜನ ಕಂಜಬಾಂಧವರಾಜಥ- ।
ನಂಜಯಾಂಬಕ ತ್ರಿಯಂಬಕ ಜಯ ॥ ೩ ॥

*　　　*　　　*

ಕಾಲ ಪಿಡಿವೆ ವಾಲ್ಮೀಕಿಯ ಚಾಚುವೆ ।
ಭಾಳವ ಬಾಣನಡಿಗಳೊಳು ॥
ಕಾಳಿದಾಸಗೆ ದಾಸನಪ್ಪೆನುಳಿದ ಕವಿ ।
ಜಾಲಕ ಜಯ ಎಂದು ಬಲಗೊಂಬೆ ॥ ೧೪ ॥
ಪದಪದ್ಧತಿ ಸೆ . ಸ ಬಿನ್ನವೊ ರಸ । (?)
ಚದುರೋಕ್ತಿ ಬೆಡಗು ಬಿನ್ನಣರೀತಿ ॥
ಒದವಿಹುವೆಯ್ದೆ ಕಂಪಜ ದೇಪಭೂಪ ಪೇ- ।
ಳದ ಕಾವ್ಯಮಿದು ಶಿವನೊಲವಿಂದ ॥ ೧೫ ॥
ಜಾಣರ ಮಚ್ಚು ರಸಿಕರ ರಸಾಯನ ।
ವಾಣಿಯ ಸಿರಿ ಭಾವಕರಿಗೆ ॥
ಮಾಣಿಕಗನ್ನಡಿ ಕೇಳ್ವ ಕೋವಿದರಿಗೆ ।
ಪ್ರಾಣ ದೇಪಭೂಪ ನೊಳ್ನುಡಿ ॥ ೧೬ ॥
ಸಂಗಮೇಂದ್ರನ ಕುಲವಿಂಗಡಲಿಗೆ ನೆರೆ,
ಡಿಂಗಳೆನಿಪ ಕಂಪಸುತಕೇಳಾ ॥
ಕಂಗೊಳಸುವ ದೇಪನೃಪ ಮುನ್ನರಿಯದ
ಹುಂಗಳವಪೊಂದು ಕತೆ ಪೇಳ್ಗಾ ॥ ೧೭ ॥

*　　　*　　　*

ಉ. ಮಾ. ॥ ಶ್ರೀನಗರಾಜನಾತ್ಮಜೆ ನಿಜೇಶನ ಮಸ್ತಕದಿಂದುವಂ ಸುಕೇ- ।
ಳೀನವವಿಂದವರ್ಧ ಬೆಱತಿಯೆಲ್ಲಿಯದೆಂದೊಡಡಂಗಿ ತೀಗಳ್ ॥
ಭೂನುತ ವಿದ್ರುಮಾಧರದೊಳಿಂದು ವರಾಧರವುಂತುಡುಂಕಲ- ।
ಜ್ಞಾನತೆಯಾದ ಶಂಕರಿಯನಪ್ಪಿದ ಶಂಕರನೋವುಗುರ್ವಿಯಂ ॥

Colophon :

ಅಂತುಸಂಧಿ ೧ ಕ್ಕಂ ಪದನು ೬೫ಕ್ಕಂ ಮಂಗಳಮಹಾಶ್ರೀ.

ಮ. ವಿ. ॥ ತುಡುಕಲ್ಬಲ್ಲದೆ ರಾಗವೊಮ್ಮೆರಜೆ ತಾಂ ಸಾರಲ್ಕದೇಂ ತಕ್ಕುದೇ ।
ಅಡಸಲ್ಕಂಜದೆ ಚಿಂತೆ ಕಾಡುವುದೆ ತಾಂ [ರೋ] (ತಾ) ಪತ್ರಯಂ ಕಾಯ್ದುಕ-॥
ಣ್ಣಿಡ [ಲಂತೊಪ್ಪ] (ಲೇಂತೋರ್ಪ)ದೆ ಲಕ್ಷ್ಮಿಮಾರ್ಜನಜನಂ ಮುಂತಾದ ವಿಕ್ಕೆಲ್ಲರುಂ ।
ಕೆಡಿಸಲ್ಬಲ್ಲರೆ ನಿಮ್ಮಡಿಂಗರಿಗರಂ ಪಂಪಾವಿರೂಪೇಶರಾ ॥ ೧ ॥

End :

ನುತಸಹಕಾರ ದೊಳೊಪ್ಪುವಾ ಮಲ್ಲಿಕಾ- ।
ಲತೆಯನೊಂದಿಪ ಬಸಂತನವೊಲು ॥

ಕ್ಷಿತಿಪ ವಿಕ್ರಮನೊಳಾ ಕುವರಿಯ ಮಾತುಳ ।
ನತಿಸಂತಸದಿ ಕೈಗೂಡಿಸಿದನು ॥ 92 ॥
ಸುರಭಾವತಿಯ ಕಂಜರೆಯ ವಸಂತೆಯ ।
ವರವನಜನ [ಕತೆ] ನಾಗರವಕ್ಕಿ ॥
ಬರಗೆಯ ಕತೆಯ ಪತ್ರಿಣಿಯ ಸಿಂಗರವನು ।
ವಿರಚಿಸಿದನು ದೇಪನರನಾಥ ॥ ೯೩ ॥

ತಳರಡಿದಳದಲತೆಗೆ ಹತ್ತಿ ಕೆಂಬೇಱತೆ ।
ತಲೆವೆಱತೆ ನೇಹಗಲಹವಾಂತ ॥
ಚೆಳವೆಟ್ಟು ಮಗಳ ಕಾಲ್ಗೆರಗಿ ತಿಳಿಸಿಕೊಡೆ ।
ನಲಿವು ಮಾದೇವ ಸಲಹುಗೆಮ್ಮ ॥

Colophon :

ಅಂತು ಸಂಧಿ ೧೨ ಕ್ಕಂ ಪದನು ೮೨೩ ಕ್ಕಂ ಉಭಯ ಸಂಧಿ ೩೩ ಕ್ಕಂ ಪದನು ೨೪೧೭ ಕ್ಕಂ ವೃತ್ತ ೨೬ ಕ್ಕಂ ವೃತ್ತಸಹಪದ ೨೪೪೫ ಕ್ಕಂ ಮಂಗಳ ಮಹಾಶ್ರೀ.

(ವಿ-ವಿ.)—ಸಮಗ್ರ. ೩೩ ಸಂಧಿಗಳಿವೆ. ಏಳು ಕತೆಗಳೂ ಇವೆ. ಸುರಭಾವತಿಯ ಕತೆ ೧-೪ ಸಂಧಿಗಳು. ೨-ಕಂಜರಿಯ ಕತೆ ೫-೭ ಸಂಧಿಗಳು, ೩-ವಸಂತೆಯ ಕತೆ ೮-೧೦ ಸಂಧಿಗಳು, ೪-ವನಜನ ಕತೆ ೧೧-೧೩ ಸಂಧಿಗಳು, ೫. ನಾಗರವಕ್ಕಿಯ ಕತೆ ೧೪-೧೭ ಸಂಧಿಗಳು, ೬-ಬರಗಿಯ ಕತೆ ೧೮-೨೧ ಸಂಧಿಗಳು, ೭-ಪತ್ರಿಣಿಯ ಶೃಂಗಾರ ೧೨ ಸಂಧಿಗಳು. ಒಟ್ಟು ೩೩ ಸಂಧಿಗಳು. ೧೬ ನೆಯ ಓಲೆಯ ಒಂದು ಪಕ್ಕದಲ್ಲಿ ಮಾತ್ರ ಬರೆದಿದೆ. ೧೮, ೧೦೭ ನೆಯ ಓಲೆಗಳು ಸ್ವಲ್ಪ ಮುರಿದಿವೆ. ಕೊನೆಯ ಓಲೆ ೧೮೬ ನೆಯದು. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಕೊನೆಯಲ್ಲಿ "ನಂದನ ಸಂವತ್ಸರದ ಆಶ್ವೀಜ ಬಹುಳ ಷಷ್ಠಿಯು ಮಂಗಳವಾರದಲ್ಲೂ ತಾಯೂರ ಉಪಾಧ್ಯರ ಮಗ ತಿಮ್ಮಯ್ಯನು ಬರೆದ ಸೊಬಗಿನ ಸೋನೆಯ ಪುಸ್ತಕಕ್ಕೆ ಮಂಗಳ ಮಹಾ ಶ್ರೀ." ಎಂದಿದೆ. ಈ ಪುಸ್ತಕದೊಡನೆ ಶಿವಾಕ್ಷರಮಾಲೆ, ಲಿಂಗಾರ್ಚನರಗಳೆ ಇವಿವೆ. ತರುವಾಯ ಸೊಬಗಿನ ಸೋನೆಯ ಭಾಗವುಳ್ಳ ೩ ಓಲೆಗಳಿವೆ.

ಇದು ಸಾಂಗತ್ಯದಲ್ಲಿ ಬರೆದಿದೆ. ಸಂಧಿಗಳು ೩೩. ಪದ್ಯಗಳು ೨೪೪೫. ಗ್ರಂಥದಾದಿಯಲ್ಲಿ ಪಂಪಾಧೀಶನಸ್ತುತಿಯಿದೆ. ಬಳಿಕ ಕವಿವಾಣಿ, ತೋಱತೆಗಲ್ಲ ಬೆನಕ (ವಿನಾಯಕ), ಗುರು ಇವರನ್ನು ಸ್ತುತಿಸಿದ್ದಾನೆ. ತರುವಾಯ ಗ್ರಂಥದ ಪೆಮರ್ಪ, ಪೂರ್ವಕವಿಸ್ಮರಣೆ ತನ್ನ ವಂಶ ಮುಂತಾದುವನ್ನು ಹೇಳಿ ಕತೆಯನ್ನಾರಂಭಿಸಿದ್ದಾನೆ. ಅಷ್ಟಾದಶಕಾವ್ಯಾಂಗಗಳಲ್ಲಿ ಸಾಧ್ಯವಾದಷ್ಟನ್ನು ಇದರಲ್ಲಿ ಸೇರಿಸಿರುವೆನೆಂದು ಹೇಳಿದ್ದಾನೆ.

ಕಥಾಗರ್ಭ :—ಸಸಿವೊಳಲಿನರಸ ಜಯ ಶೇಖರನಿಗೂ ಆತನರಸಿ ಸುರಭಾವತಿಗೂ ಈಶ್ವರ ವರಪ್ರಸಾದದಿಂದ ಜನಿಸಿದ ವಿಕ್ರಮನು ತನ್ನಗೆಳೆಯರಾದ ಮಾಳವ ಮಧುರರೊಡನೆ ದೇಶಾಟನಮಾಡುತ್ತ ಕಾಶ್ಮೀರ ರಾಜಪುತ್ರಿ ಕಂಜರೆಯನ್ನು ಮಾಳವನಿಗೂ, ಶ್ರೀ ಧರ ಪುರದರಸನ ಸುತೆ ವಸಂತೆಯನ್ನು ಮಧುರನಿಗೂ ಲಗ್ನಮಾಡಿಸಿ ತಾನು ಮಕರಶೇಖರ (ಮಾತುಳ) ಪ್ರೇತಾನನೆಯರ ದುಹಿತೆಯಾದ ಪತ್ರಿಣಿಯನ್ನು ವರಿಸುವನು.

ಈ ಕತೆಯು ಬಲು ಚೆಲುವಾದುದು. ನಾಗರಹಕ್ಕಿಯ ವಿಷಯವು ಈ ಕತೆಗೆ ಬಹಳ ಪುಷ್ಟಿಯನ್ನುಂಟುಮಾಡಿದೆ. ವನಜ ಮತ್ತು ಬರಗೆಯರ ವೃತ್ತಾಂತಗಳು ವಸ್ತುರಚನೆಗೆ ಎಷ್ಟರಮಟ್ಟಿಗೆ ನೆರವಾಗಿದೆಯೆಂಬುದು ಈ ಕತೆಯನ್ನೋದುವುದರಿಂದ ಮನಗಾಣಬಹುದು.

ಕವಿ ದೇಪರಾಜನೆಂಬುವನು. ಇವನು ತನ್ನ ವಿಷಯವಾಗಿ ಹೇಳಿಕೊಂಡಿರುವ ಅಂಶವನ್ನು ಮೇಲೆ ಉದ್ಧರಿಸಿದೆ. ಈ ಕೆಳಗೆ ವರ್ಣಿತವಾಗಿರುವ ವಿತದ್ಗ್ರಂಥಗಳ ಪೈಕಿ ೧೦೭೫ ನೆಯ ನಂಬರಿನ ಪ್ರತಿಯ ಒಂದೆಡೆಯಲ್ಲಿ ಓದುವ ತ್ರ್ಯಂಬಕದೇವನಿಂದ ಕನ್ನಡದಲ್ಲಿ ಚಿತ್ರಾಂಶ ಕವಿತ್ವವನ್ನು ಕಲಿತವನಾದ ಮಾಯಿಭೂಸುರ ಸೂನು ದೇವೇಂದ್ರನೆಂಬುವನು ಸೊಬಗಿನ ಸೋನೆಯನ್ನು ಬರೆದಿರುವುದಾಗಿ ಸೂಚಿಸುವ ಕೆಲವು ಪದ್ಯಗಳಿವೆ. ಆದರೆ ಆ ಸೊಬಗಿನ ಸೋನೆಯು ಇದರಿಂದ ಭಿನ್ನವೆಂದು ಹೇಳಬೇಕಾಗಿದೆ. ಈ ವಿಷಯಕ್ಕೆ ಮುಂದಣ ೧೦೭೫ ನೆಯ ನಂಬರನ್ನು ನೋಡುವುದು.

No. 1075. ಸೊಬಗಿನ ಸೋನೆ by ದೇಪರಾಜ.

SOBAGINA SŌNE BY DĒPARĀJA.

Substance, palm-leaf. Size, $19\frac{7}{8} \times 1\frac{5}{8}$ inches. Pages, 135. Lines, 7 to 9 on a page. Extent, 3,500 granthas. Character, Kannada. Condition, extremely injured. Appearance, old. Mode of writing, good.

Begins on fol. 1*a* of the Ms. described under No. 909 *ante*.

Complete in 35 sandhis.

Name of the scribe :—Vīraṇṇoḍeya, son of Virūpākṣa.

Same work as that described above.

(ವಿ-ವಿ.)—ಸಮಗ್ರ. ೩೫ ಸಂಧಿಗಳೆಂದು ಗುರುತಿಸಿದೆ. ಹಿಂದೆ ವರ್ಣಿತವಾಗಿರುವ ಸಂಪೂರ್ಣಪ್ರತಿ (೩೩ ಸಂಧಿಗಳನ್ನುಳ್ಳುದು)ಗೆ ಇದು ಸಮನಾಗಿದೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿಶುದ್ಧವಾಗಿದೆ. ಪುಸ್ತಕದಾದಿಯಲ್ಲಿ 'ಸೊಬಗಿನ ಸೋನೆ ಪುಸ್ತಕ ಬರೆದವನು ಪುರಾಣದ ವಿರೂಪಾಕ್ಷ . . . . . ವ (ಪ್ರೊ)ಡೆ ದೇವರು' ಎಂದೂ, ಅಂತ್ಯದಲ್ಲಿ ". . . . ಹೇಂದ್ರಜಾಲವ ನಿರ್ಮಿಸಿದ ಕಲ್ಲಹಳ್ಳಿ ದೇವರಸಯ್ಯನು ಬಲ್ಲಂತೀ ಕೃತಿಯನು ಸೇರಿಸಿದೆನು ಬಲ್ಲ ಜಾಣರ ಕೃಪೆಗಾನು ? . . ರ ಶ್ರಾವಣ ಶುದ್ಧ ೧ ರಲ್ಲು ಪುರಾಣದ ವಿರೂಪಾಕ್ಷದೇವರ ಮಗ ವೀರಣ್ಣೊಡೆಯ ದೇವರು ತಮಗೆ ಬರೆದ ಸೋನೆ, ಕಥೆ ಸಮಾಪ್ತ" ಎಂದೂ ಇದೆ. ಇದರೊಡನೆ ಕುಮಾರರಾಮನ ಕತೆ (ಸಂಧಿ ೧-೩ ಪೂರ್ಣ, ೪ ನೆಯದರಲ್ಲಿ ೧-೬೦ ಪದ್ಯಗಳು) ಇದೆ. ಅದು ಹಿಂದೆ ೯೦೯ ನೆಯ ನಂಬರಿನಲ್ಲಿ ವರ್ಣಿತವಾಗಿದೆ.

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1076. ಸೊಬಗಿನ ಸೋನೆ by ದೇಪರಾಜ.
SOBAGINA SŌNE BY DĒPARĀJA.

Substance, palm-leaf. Size, 11-11/16 × 1¼ inches. Pages, 343. Lines, 6-7 on a page. Extent, 3,400 granthas. Character, Kannada. Condition, very much injured. Appearance, old. Mode of writing, good.

Incomplete.

Contains sandhis 1–29 complete.

Date of transcription :—Tenth day of the bright fortnight of the lunar month. Āśvayuja in the year Śubhakṛt.

Name of the scribe :—Kāśīpati *Upādya*, son of *Rāmarasayya.*

Same work as that described above.

(ವಿ-ವಿ.)—

ಅಸಮಗ್ರ. ೨೯ ಸಂಧಿಗಳಿವೆ. ಇವು ಹಿಂದಣ ೧೦೭೪ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಸಂಪೂರ್ಣ ಪ್ರತಿಯ ೧-೨೭ ಸಂಧಿಗಳಿಗೆ ಸರಿಹೋಗುತ್ತವೆ. ಪುಸ್ತಕದ 'ಪತ್ರಿಣಿಯ ಶೃಂಗಾರ'ದ ಐದನೆಯ ಮತ್ತು ಆರನೆಯ ಸಂಧಿಗಳು ಇದರಲ್ಲಿ ಒಂದಾಗಿಸಿ ಐದನೆಯದಾಗಿ ಪರಿಗಣಿಸಲ್ಪಟ್ಟಿದೆ.

ಇದು ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಪುಸ್ತಕದ ಕೊನೆಯಲ್ಲಿ "ಶುಭಕೃತು ಸಂವತ್ಸರದ ಆಶ್ವೀಜಶುದ್ಧ ೧೦ ಲು ಶ್ರೀಮತು ರಾಮರಸಯ್ಯನವರ ಕುಮಾರ ಕಾಶೀಪತಿ ಉಪಾಧ್ಯರು ಬರೆದ ಸೊಬಗಿನ ಸೋನೆ ಪುಸ್ತಕ[ಕ್ಕೆ] (೦) ಸಂಪೂರ್ಣಂ" ಎಂದಿದೆ. ಇದರಲ್ಲಿ ಓಲೆ ೧೧ ನೆಯದು ಮುರಿದಿದೆ. ಅನೇಕ ಓಲೆಗಳು ಅರ್ಧ ಹುಳುತಿಂದು ಹೋಗಿವೆ. ೪೧, ೧೦೪, ೧೪೭ ಈ ಮೂರು ಓಲೆಗಳಿಲ್ಲ. '೭೩' ಈ ಸಂಖ್ಯೆಯಲ್ಲಿ ಎರಡು ಓಲೆಗಳಿವೆ. ಕೊನೆಯ ಓಲೆಯ ಸಂಖ್ಯೆ ೧೭೪. ಇದರ ಒಂದು ಪಕ್ಕದಲ್ಲಿ ಮಾತ್ರ ಬರೆದಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1077. ಸೊಬಗಿನ ಸೋನೆ by ದೇಪರಾಜ.
SOBAGINA SŌNE BY DĒPARĀJA.

Substance, palm-leaf. Size, 13⅜ × 1 5/16 inches. Pages, 293. Lines, 5–7 on a page. Extent, 3,600 granthas. Character, Kannada. Condition, much injured. Appearance, old. Mode of writing, not good.

Incomplete.

Contains sandhis 1–30 complete.

Same work as that described above.

(ವಿ-ವಿ.)—

ಅಸಮಗ್ರ. ಇದರಲ್ಲಿರುವ ಮೊದಲ ಇಪತ್ತಾರು ಸಂಧಿಗಳು, ಈ ಗ್ರಂಥಗಳ ಸಾಲಿನಲ್ಲಿ ಮೊದಲು ವರ್ಣಿತವಾಗಿರುವ (೩೩ ಸಂಧಿಗಳನ್ನುಳ್ಳ) ಪೂರ್ಣ ಪ್ರತಿಯ ೧-೨೬ ಸಂಧಿಗಳಿಗೆ ಸಮನಾಗಿವೆ. ಅನಂತರದ ನಾಲ್ಕು ಸಂಧಿಗಳಿಗೆ ಆ ಗ್ರಂಥದಲ್ಲಿ ಹೋಲಿಕೆ ಬರುವುದಿಲ್ಲ.

'ಅಸಿದಾಳನ ಕತೆ' ಎಂದು ಹೇಳಿ ಈ ಸಂಧಿಗಳನ್ನು ಬರೆದಿದೆ. ಒಟ್ಟು ಇದರಲ್ಲಿರುವ ಸಂಧಿಗಳು ಮೂವತ್ತು. ಇದು ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಈ ಪ್ರತಿಯಲ್ಲಿ ೨೩, ೩೮ ನೆಯ ಎರಡು ಓಲೆಗಳಿಲ್ಲ. ೩೪ ನೆಯ ಓಲೆಯು ಬರೆಯದೆ ಬಿಟ್ಟಿದೆ. ಕೊನೆಯ ಓಲೆ ೧೪೦ ನೆಯದು. ಅದರ ಒಂದೇ ಪಕ್ಕದಲ್ಲಿ ಬರೆದಿದೆ.

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1078. ಸೊಬಗಿನ ಸೋನೆ by ದೇಪರಾಜ.
SOBAGINA SŌNE BY DĒPARĀJA.

Substance, palm-leaf. Size, 13-5/16 × 1¼ inches. Pages, 282. Lines, 6–8 on a page. Extent, 3,400 granthas. Character, Kannada. Condition, very much injured. Apperance, old. Mode of writing, good.

Incomplete.

Contains from the beginning to the 36th stanza of the 31st sandhi.

Same work as that described above.

(ವಿ.-ವಿ.)—

ಅಸಮಗ್ರ. ಸಂಧಿ ಭಾಗವು ೧ ರಿಂದ ೩೧ ರ ೩೬ ನೆಯ ಪದ್ಯದ ವರೆಗಿದೆ. ಓಲೆಗಳು ೨೮, ೪೩, ೬೬, ೧೩೫, ೧೩೭, ೧೪೫ ನೆಯವಿಲ್ಲ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಕೆಲವು ಸಂಧಿಗಳಾದಿಯಲ್ಲಿ ಬರೆಹಗಾರನು ಸುಗ್ಗನ ಹಳ್ಳಿ ನರಸಿಂಹನನ್ನು ಸ್ಮರಿಸಿದ್ದಾನೆ.

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿರುತ್ತದೆ.

No. 1079. ಸೊಬಗಿನ ಸೋನೆ by ದೇಪರಾಜ.
SOBAGINA SŌNE BY DĒPARĀJA.

Substance, śrītāla. Size, 14⅛ × 1⅞ inches. Pages, 140. Lines, 9–11 on a page. Extent, 3,000 granthas. Character, Kannada. Condition, very much injured. Appearance, old. Mode of writing, good.

Contains up to the 106th stanza of the 29th sandhi, wants five folios (i.e., 4th and 15–18) in the middle.

Same work as that described above.

(ವಿ.-ವಿ.)—

ಅಸಮಗ್ರ. ಮೊದಲಿಂದ (೪, ೧೫-೧೮ ಈ ಓಲೆಗಳಲ್ಲಿರುವ ಭಾಗಗಳು ಹೊರತು), ೨೯ ನೆಯ ಸಂಧಿಯ ೧೦೬ ನೆಯ ಪದ್ಯದ ವರೆಗಿದೆ. ೧೦೭ ನೆಯದು ಅಪೂರ್ಣವಾಗಿದೆ. ಓಲೆಗಳು ೪, ೧೫-೧೮ ಈ ಐದು ಹೋಗಿವೆ. ಕೊನೆಯ ಓಲೆಯ ಸಂಖ್ಯೆ ೭೫. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1080. ಸೊಬಗಿನ ಸೋನೆ by ದೇಪರಾಜ.
SOBAGINA SŌNE BY DĒPARĀJA.

Substance, palm-leaf. Size, 7⅞ × 1¼ inches. Pages, 20. Lines, 5 on a page. Extent, 100 granthas. Character, Kannada. Condition, very much injured. Appearance, old. Mode of writing, good.

Incomplete.

Same work as that described above.

(ವಿ-ವಿ.)—

ಅಸಮಗ್ರ. ಕಂಚರೆಯು ಕತೆ ಸ್ವಲ್ಪ ಭಾಗವಿದೆ. ಇದು ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಹಿಂದೆ ವರ್ಣಿತನಾಗಿರುವ ಗ್ರಂಥವೇ ಆಗಿದೆ.

No. 1081. ಸೊಬಗಿನ ಸೋನೆ by ದೇಪರಾಜ.
SOBAGINA SŌNE BY DĒPARĀJA.

Substance, śritāla. Size, 9-5/16 × 1¾ inches. Pages, 224. Lines, 9 on a page. Extent, 3,000 granthas. Character, Kannada. Condition, very much injured. Appearance, old. Mode of writing, good.

Contains from the 16th stanza of the first sandhi to the 29th stanza of the 29th sandhi.

Same work as that described above.

(ವಿ-ವಿ.)—

ಅಸಮಗ್ರ. ಸಂಧಿ ೧, ಪದ್ಯ ೧೬ ರಿಂದ ಸಂಧಿ ೨೯ ಪದ್ಯ ೨೯ ರ ವರೆಗೆ ಇದೆ. ಓಲೆಗಳು ೧, ೨೩ ಈ ಎರಡಿಲ್ಲ. ಕೊನೆಯ ಓಲೆಯ ಸಂಖ್ಯೆ ೧೧೪. ಅತ್ಯಂತ ಶಿಥಿಲವಾದ ಪ್ರತಿ. ಬರೆವಣಿಗೆ ಉತ್ತಮವಾದುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1082. ಸೊಬಗಿನ ಸೋನೆ by ದೇಪರಾಜ.
SOBAGINA SŌNE BY DĒPARĀJA.

Substance, palm-leaf. Size, 13½ × 1¼ inches. Pages, 256. Lines, 7–8 on a page. Extent, 3,000 granthas. Character, Kannada. Condition, much injured. Appearance, old. Mode of writing, good.

Contains up to the 7th stanza of the 28th sandhi. Wants some leaves in the middle.

Same work as that described above.

(ವಿ-ವಿ.)—

ಅಸಮಗ್ರ. ಸಂಧಿ ಭಾಗವು ೧-೨೭, ೨೮ ನೆಯದರಲ್ಲಿ ಏಳು ಪದ್ಯಗಳೂ ಇವೆ. ಓಲೆಗಳು ೯೭, ೧೦೦, ೧೦೭, ೧೦೮, ೧೨೭, ೧೨೯, ೧೩೦ ಈ ಏಳು ಹೋಗಿವೆ.

ಕೊನೆಯ ಓಲೆ ೧೩೫ ನೆಯದು. ಇದು ೩೩ ಸಂಧಿಗಳಿಂದ ಪೂರ್ಣವಾಗಿರುವ ಪ್ರತಿಯನ್ನು ಹೋಲುತ್ತದೆ. ಅತಿ ಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1083. ಸೊಬಗಿನ ಸೋನೆ by ದೇಪರಾಜ.
SOBAGINA SŌNE BY DĒPARĀJA.

Substance, palm-leaf. Size, 11 to 11⅝ × 1-1/16 to 1⅛ inches. Pages, 280. Lines, 5–8 on a page. Extent, 3,300 granthas. Character, Kannada. Condition, much injured. Appearance, old. Mode of writing, good.

Contains sandhis 1–26 complete.

Date of transcription :—Tenth day of the dark fortnight of the lunar month Jyēṣṭha in the year Bahudhānya.

Name of the scribe :—*Tirumalayya,* shanbhogue of Mēlūru copied for *Basavalinga*, a goldsmith of *Amcavādi.*

Same work as that described above.

(ವಿ.-ವಿ.)—

ಅಸಮಗ್ರ. ಸಂಧಿಗಳು ೧-೨೬ ಸಮಗ್ರ. ೨೬ ನೆಯ ಸಂಧಿಯಲ್ಲಿ ಎರಡು ಸಂಧಿಯ ಪದ್ಯ ಭಾಗಗಳನ್ನು ಸೇರಿಸಿ ಬರೆದಿದೆ. ಇದು ೩೩ ಸಂಧಿಗಳಿಂದ ಪೂರ್ಣವಾಗುವ ೧೦೭೪ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯನ್ನು ಹೋಲುತ್ತದೆ. ಅತಿ ಶಿಥಿಲವಾದ ಪ್ರತಿ. ಲಿಪಿ ಉತ್ತಮವೆನ್ನಬಹುದು. ಕೊನೆಯಲ್ಲಿ "ಬಹುಧಾನ್ಯ ಸಂವತ್ಸರದ ಜ್ಯೇಷ್ಠ ಬ. ೧೦ ಲ್ಲು ಮೇಲೂರ ಸೇನಬೋಗ ತಿರುಮಲಯ್ಯನು ಆ(ಅ)ಮಚವಾಡಿಯ ಅಕ್ಕಸಾಲೆ ಬಸವಲಿಂಗಗೆ ಬರೆದ ಸೊಬಗಿನ ಸೋನೆ ಸಮಾಪ್ತ" ಎಂದು ಹೇಳಿ ಮುಂದಕ್ಕೆ ಸಂಧಿಯನ್ನು ಆರಂಭಿಸಿ ಪ್ರಾರಂಭದ ವೃತ್ತವನ್ನು ಬರೆದು ಬಿಟ್ಟಿದೆ.

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1084. ಸೊಬಗಿನ ಸೋನೆ by ದೇಪರಾಜ.
SOBAGINA SŌNE BY DĒPARĀJA.

Substance, paper. Size, 12-11/16 × 8 inches. Pages, 184. Lines, 20 to 23 on a page. Extent, 2,300 granthas. Character, Kannada. Condition, slightly injured. Appearance, old. Mode of writing, good.

Contains sandhis 1–21 complete and 59 stanzas in the 22nd sandhi.

Same work as that described above.

(ವಿ.-ವಿ.)—

ಅಸಮಗ್ರ. ಸಂಧಿಗಳು ೧-೨೧ ಪೂರ್ಣವಾಗಿಯೂ ೨೨ ನೆಯದರಲ್ಲಿ ೧-೫೯ ಪದ್ಯಗಳೂ ಇವೆ. ಪತ್ರಗಳು ೧-೧೦, ೮೫-೯೨, ೭೩-೮೪, ೬೧-೭೨, ೪೯-೬೦, ೩೭-೪೮, ೩೫-೩೬, ೧೩-೨೪, ೧೧, ೧೨ ಈ ಕ್ರಮದ ಸಂಖ್ಯೆಗಳಿಂದ ಕೂಡಿವೆ. ೨೦, ೨೧ ಈ

ಎರಡು ಪತ್ರಗಳಲ್ಲಿ ಒಂದೊಂದೇ ಪಕ್ಕದಲ್ಲಿ ಬರೆದಿದೆ. ಪದ್ಯ ಭಾಗವನ್ನೇನೂ ಬಿಟ್ಟಿಲ್ಲ. ಪುಸ್ತಕದ ಮೊದಲಲ್ಲಿ ಪಂಪಾವಿರೂಪಾಕ್ಷಸ್ತುತಿ ರೂಪವಾದ ವೃತ್ತವಿಲ್ಲ. ಸ್ವಲ್ಪ ಶಿಥಿಲವಾಗಿದೆ. ಲಿಪಿ ಉತ್ತಮವಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1085. ಸೊಬಗಿನ ಸೋನೆ by ದೇಪರಾಜ.

SOBAGINA SŌNE BY DĒPARĀJA.

Substance, palm-leaf. Size, 15-5/16 × 1$\frac{3}{8}$ inches. Pages, 102. Lines, 7–8 on a page. Extent, 1,700 granthas. Character, Kannada. Condition, very much injured. Appearance, old. Mode of writing, good.

Contains from the 36th stanza of the 1st sandhi to 56th of 17th sandhi.

Same work as that described above.

(ವಿ.ವಿ.)—

ಅಸಮಗ್ರ. ೧ ನೆಯ ಸಂಧಿಯ ೩೬ ನೆಯ ಪದ್ಯದಿಂದ ೧೭ ನೆಯ ಸಂಧಿಯ ೫೬ ನೆಯ ಪದ್ಯದ ವರೆಗಿದೆ. ಮೊದಲಿನ ಎರಡು ಓಲೆಗಳಿಲ್ಲ. ಒಟ್ಟು ೫೧ ಓಲೆಗಳವೆ. ಕೊನೆಯ ಓಲೆಯ ಸಂಖ್ಯೆ ೫೩. ಹಲವು ಓಲೆಗಳು ಮುರಿದಿವೆ. ಅತ್ಯಂತ ಜೀರ್ಣವಾದ ಪ್ರತಿ. 'ತಾಳೆ' ಪ್ರತಿ. ಲಿಪಿ ಚೆನ್ನಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಅಗಿದೆ.

No. 1086. ಸೊಬಗಿನ ಸೋನೆ by ದೇಪರಾಜ.

SOBAGINA SŌNE BY DĒPARĀJA.

Substance, palm-leaf. Size, 11$\frac{3}{8}$ × 1-3/16 inches. Pages, 184. Lines, 5 on a page. Extent, 1,500 granthas. Character, Kannada. Condition, very injured. Appearance, old. Mode of writing, good.

Contains up to the 53rd stanza of the 13th sandhi. Wants some leaves in the middle.

Same work as that described above.

(ವಿ.ವಿ.)—

ಅಸಮಗ್ರ. ಮೊದಲಿಂದ (೩೫-೩೬, ೮೪ ಈ ಓಲೆಗಳಲ್ಲಿರುವ ಭಾಗಗಳು ಹೊರತು) ೧೩ ನೆಯ ಸಂಧಿಯ ೫೩ ನೆಯ ಪದ್ಯದ ವರೆಗಿದೆ. ೫೪ ನೆಯದು ಅಪೂರ್ಣವಾಗಿದೆ. ಓಲೆಗಳು ೩೫-೩೬, ೮೪ ಈ ನಾಲ್ಕು ಹೋಗಿವೆ. ಕೊನೆಯ ಓಲೆಯ ಸಂಖ್ಯೆ ೯೬. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1087. ಸೊಬಗಿನ ಸೋನೆ by ದೇಪರಾಜ-
SOBAGINA SŌNE BY DĒPARĀJA.

Substance, palm-leaf. Size, 11-7/16 × 1¼ inches. Pages, 130. Lines, 4 to 5 on a page. Extent, 750 granthas. Character, Kannada. Condition, injured. Appearance, old. Mode of writing, good.

Begins on fol. 10-*a*. The other work herein is :—(1) *Ārogyacintāmaṇi.*

Contains up to the 47th stanza of the 9th sandhi.

Same work as that described above.

(ವಿ.ವಿ.)—

ಅಸಮಗ್ರ. ಸಂಧಿಗಳು ೧-೮ ಪೂರ್ಣವಾಗಿಯೂ, ೯ ನೆಯದರಲ್ಲಿ ೧-೪೭ ಪದ್ಯಗಳೂ ಇರುವವು. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಆರೋಗ್ಯಚಿಂತಾಮಣಿ ಯೆಂಬ ಪುಸ್ತಕವೂ ಇದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1088. ಸೊಬಗಿನ ಸೋನೆ by ದೇಪರಾಜ-
SOBAGINA SŌNE BY DĒPARĀJA.

Substance, śrītāla. Size, 11¼ × 1½ inches. Pages, 54. Lines, 7–8 on a page. Extent, 750 granthas. Character, Kannada. Condition, very much injured. Appearance, old. Mode of writing, good.

Contains up to the 7th stanza of the 8th sandhi.

Same work as that described above.

(ವಿ.ವಿ.)—

ಅಸಮಗ್ರ. ಸಂಧಿಗಳು ೧-೭ ಪೂರ್ಣ ವಾಗಿವೆ. ಎಂಟನೆಯದರಲ್ಲಿ ೧-೭ ಪದ್ಯಗಳಿವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No.1089. ಸೊಬಗಿನ ಸೋನೆ by ದೇಪರಾಜ-
SOBAGINA SŌNE BY DĒPARĀJA.

Substance, palm-leaf. Size, 13⅜ × 1-5/16 inches. Pages, 93. Lines, 5 on a page. Extent, 700 granthas. Character, Kannada. Condition, much injured. Appearance, old. Mode of writing, good.

Begins on fol. 1-*a*. The other work herein is :—(1) Bhāratakathā-manjari 51-*a*.

Foll. 6*b*, 48, 49, 50 and 68*b* are left blank.

Contains sandhis 1–7 complete.

Same work as that described above.

(ವಿ-ವಿ.)—

ಅಸಮಗ್ರ. ೧-೭ ಸಂದಿಗಳು (ಸುರಭಾವತಿ, ಕಂಜರೆ ಕತೆಗಳು.) ಪೂರ್ಣವಾಗಿವೆ. ಅತಿ ಶಿಥಿಲವಾದ ಪ್ರತಿ. ಒಟ್ಟು ೪೭ ಓಲೆಗಳು. ಲಿಪಿ ಚೆನ್ನಾಗಿದೆ. ಇದರೊಡನೆ ರಾಜ ನೀತ್ರಿಯ ಸಂಧಿ (ಭಾರತಾಂತರ್ಗತ)ಯೂ ಭಾರತ ಆದಿಪರ್ವ (೧-೩ ಸಂಧಿಗಳು ಪೂರ್ಣ, ೪ ನೆಯದರಲ್ಲಿ ೩೫ ಪದ್ಯಗಳು)ವೂ ಇವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1090. ಸೊಬಗಿನ ಸೋನೆ by ದೇಪರಾಜ.

SOBAGINA SŌNE BY DĒPARĀJA.

Substance, palm-leaf. Size, $9\frac{1}{2} \times 1\frac{3}{8}$ inches. Pages, 72. Lines, 6 on a page. Extent, 700 granthas. Character, Kannada. Condition, very injured. Appearance, old. Mode of writing, not bad.

Incomplete.

Contains the sandhis 1–7 complete (i.e., the stories of Surabhāvati and Kanjare are complete.)

Begins on fol. 30*b*. The other work herein is :—*Nītiśāstrasamuccaya* 1*a*.

Same work as that described above.

(ವಿ-ವಿ.)—

ಅಸಮಗ್ರ. ಸಂಧಿಗಳು ೧-೭ ಇವೆ. (ಸುರಭಾವತಿಯ ಕಂಜರೆಯ ಕತೆಗಳವೆ). ಅತ್ಯಂತ ಶಿಥಿಲವಾದ ಪ್ರತಿ. ಬರೆವಣಿಗೆ ಸಾಮಾನ್ಯವಾದುದು. ಇದರೊಡನೆ ನೀತಿ ಶಾಸ್ತ್ರ ಸಮುಚ್ಚಯವೆಂಬ ಗ್ರಂಥದ ಪ್ರತಿಯೂ ಇದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1091. ಸೊಬಗಿನ ಸೋನೆ by ದೇಪರಾಜ.

SOBAGINA SŌNE BY DĒPARĀJA.

Substance, palm-leaf. Size, $8\frac{5}{8} \times 1\frac{1}{8}$ inches. Pages, 172. Lines, 5–6 on a page. Extent, 1,200 granthas. Character, Kannada. Condition, very much injured. Appearance, old. Mode of writing, good.

Incomplete.

Same work as that described above.

(ವಿ-ವಿ.)—

ಅಸಮಗ್ರ. ಕಂಜರೆ ಮತ್ತು ವಸಂತೆಯ ಕತೆಗಳು (ಸಂಧಿಗಳು ೫-೧೦) ಪೂರ್ಣವಾಗಿಯೂ ಪತ್ರಿಣಿಯ ಕತೆಯಲ್ಲಿ ೧-೪ ಸಂಧಿಗಳೂ ೫ ನೆಯದರಲ್ಲಿ ಮೊದಲಿಂದ ೧೯ ಪದ್ಯಗಳೂ ಇವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1092. ಸೊಬಗಿನ ಸೋನೆ by ದೇಪರಾಜ-SOBAGINA SŌNE BY DĒPARĀJA.

Substance, palm-leaf. Size, 9⅛ × 1¼ inches. Pages, 52. Lines, 5 on a page. Extent, 325 granthas. Character, Kannada. Condition, much injured. Appearance, old. Mode of writing, good.

Incomplete. Sandhis 1–4 complete.

Same work as that described above.

(ವಿ-ವಿ.)—

ಅಸಮಗ್ರ. ಸಂಧಿಗಳು ೧-೪ (ಸುರಭೂವತಿಯ ಕತೆ) ಪೂರ್ಣವಾಗಿವೆ. ಎರಡನೆಯ ಓಲೆಯು ಹೋಗಿದೆ. ಕೊನೆಯ ಓಲೆಯ ಸಂಖ್ಯೆ ೨೭ ಅತ್ಯಂತ ಶಿಥಿಲವಾದ ಪ್ರತಿ ಲಿಪಿ ಚೆನ್ನಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1093. ಸೊಬಗಿನ ಸೋನೆ by ದೇಪರಾಜ and ದೇವೇಂದ್ರ-SOBAGINA SŌNE BY DĒPARĀJA AND DĒVĒNDRA.

Substance, palm-leaf. Size, 14⅛ × 1⅜ inches. Pages, 289. Lines, 7 on a page. Extent, 3,276 granthas. Condition, very injured. Appearance, old. Mode of writing, good.

Begins on fol. 26*a* of the Ms. described under No. 659 *ante*.

Incomplete. Contains 29 sandhis numbered as 2–26 and 1–4. The last sandhi is incomplete and this Ms. wants some leaves in the middle here and there. It is believed that the last four sandhis written by a different author by name *Dēvēndra*, son of *Māyibhūvara*. See extract for detail.

Same work as that described above.

(ವಿ-ವಿ.)—

ಅಸಮಗ್ರ. ಮೊದಲ ಸಂಧಿಯಿಲ್ಲ. ೨-೨೬ ಮತ್ತು ನಾಲ್ಕು, ಒಟ್ಟು ೨೯ ಸಂಧಿಗಳವೆ. ಕೊನೆಯದು ಪೂರ್ಣವಿಲ್ಲ. ಇದರಲ್ಲಿ ಓಲೆಗಳು ೨೬, ೨೮-೩೦, ೩೪-೪೦, ೪೪-೫೮, ೬೦-೮೯, ೯೧-೯೬, ೯೯-೧೧೬, ೧೧೮-೧೨೫, ೧೨೭-೧೫೭, ೧೫೯-೧೭೯, ೧೮೪, ೧೮೫ ಈ ಕ್ರಮದಲ್ಲಿವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದರಲ್ಲಿ ಮೊದಲಿನ ೨೬ ಸಂಧಿಗಳ ಪೈಕಿ ಕೊನೆಯ ಐದು ಸಂಧಿಗಳು 'ಪತ್ರಿಣಿಯ ಶೃಂಗಾರ' ವೆಂಬ ಕಥಾಭಾಗಕ್ಕೆ ಸೇರಿದುವುಗಳಾಗಿವೆ. ಅವುಗಳಲ್ಲಿ ಐದನೆಯದು ಹಿಂದೆ ೧೦೭೪ ನೆಯ ನಂಬರಿನಲ್ಲಿ ವರ್ಣಿತವಾದ ಪುಸ್ತಕದಲ್ಲಿ ಆ ಕಥಾಭಾಗದ ಐದನೆಯ ಮತ್ತು ಆರನೆಯ ಸಂಧಿಗಳಾಗಿವೆ. "ವಿಕ್ರಮನು ನಾಗರವಕ್ಕಿಯೊಡನೆ ಬನದಲ್ಲಿ ಪತ್ರಿಣಿಯನ್ನು ಸಂಧಿಸಿ ಅವಳು ಮನೆಗೆ ಹೋದನಂತರ ಚಿಂತಾಕುಲನಾಗಿದ್ದನು" ಎಂಬಲ್ಲಿಗೆ ಆ ಸಂಧಿಯು ಮುಗಿಯುವುದು. ಅನಂತರ ಕ್ರಮದಿಂದ ೧ ರಿಂದ ೪ ರ ವರೆಗಿನ ಅಂಕೆಗಳಿಂದ ಗುರುತಿಸಲ್ಪಟ್ಟ ನಾಲ್ಕು ಸಂಧಿಗಳು ಮಾಯಿ ಭೂವರ ಸೂನು ದೇವೇಂದ್ರ ರಚಿತವಾದುವುಗಳೆಂದೂ,

ದೇವೆಂದ್ರನು ಓದುವ ತ್ರ್ಯಂಬಕ ದೇವನಿಂದ ಕನ್ನಡದಲ್ಲಿ ಚಿತ್ರಾಂಶು ಕವಿತ್ವವನ್ನು ಕಲಿತಿದ್ದನೆಂದೂ, ಅವನು ಕಂಪಸುತ ದೇವರಾಜನಿಂದ ಭಿನ್ನನಾಗಿರಬಹುದೆಂದೂ ಆ ನಾಲ್ಕು ಸಂಧಿಗಳ ಪೈಕಿ ಮೊದಲನೆಯುದರಲ್ಲಿರುವ ಈ ಕೆಳಗಿನ ಪದ್ಯಗಳಿಂದ ತಿಳಿಯುತ್ತದೆ.

ಕನ್ನಡದೊಳು ಚಿತ್ರಾಂಶು ಕವಿತ್ವವ ।
ಚೆನ್ನನೆ ಪೇಳ್ . . . . ॥
. . . ವೋದುವ ತ್ರ್ಯಂಬಕದೇವ ।
ರೆನ್ನನೊಸೆ ಕಲ್ತೆನವರಿಂದ ॥ ೮ ॥

*   *   *   *

[ಮಾ] (ಮದ) ನಸಮಾನ ದೇವೇಂದ್ರ। ಪೇಳದ ಕಾವ್ಯ ।
ಸುದತಿ ಬೇಡಿದೆ . . . ದಗೆಯ್ಯಳ್ ॥ ೧೩ ॥

ಅರಿವನದಾವಾನಲ ಮಹಾಕುಚಿ ಡಂ ।
ಗುರಬೊಯ್ಯಿ ಅನ್ನವನಿಕ್ಕುವ ॥
ಸುರಭೂಜವನಿಪುರ ಪ್ರಭು ಮಾಯಿಭೂ- ।
ವರಸೂನು ದೇವೇಂದ್ರ . . . ॥ ೧೪ ॥

. . . . . ಸೊಬಗಿನ ಸೋನೆ ಭೂ- ।
ಕಲ್ಪಲತಿಕೆಯಿದು ಪರಿವಂತೆ ॥
ಕಲ್ಪಿಸು ನೀನಭಿನವದೇಪ್ರಪೆನೆ ಸಂ ।
ಕಲ್ಪಿಸಿ ಪೇಳ್ದೆ ಬಲ್ಲವರೆಂದು ॥ ೧೮ ॥

ದೇಪರಾಜನಂತೆ ಇವನೂ ಈ ಕಥಾಭಾಗವನ್ನು ತನ್ನ ಹೆಂಡತಿಗೆ ಹೇಳದಂತೆ ತಿಳಿಯುತ್ತದೆ. ಆರಂಭದಲ್ಲಿ ಇವನು ಈಶ, ವಾಣಿ, ಗುರು, ಸಿದ್ಧಾರ್ಯರ್ ಇವರನ್ನು ಪರಿವಿಡಿಯಿಂದ ಸ್ತುತಿಸಿದ್ದಾನೆ. ಕಥೆಯ ಪೂರ್ವೋತ್ತರವನ್ನು ಕುರಿತು ಈ ರೀತಿ ಹೇಳಿದ್ದಾನೆ.

ಪಿಂದಣ ಕಥೆಯು ಸಂಗಡವೆತರಾಗದೆ ।
ಮುಂದಣ ಕಥೆಯಿನಿತೆರಡನು ॥
[ವಂ] (ಒಂ)ದಿಸಿದರೆ ಗಂಡಭೇರುಂಡನ ಪಕ್ಷಿಯು ।
ಅಂದವೀ ಕಾವ್ಯ . . . . . . ॥ ೧೧ ॥

*   *   *   *

ಆ ಕುವರಿಯು ನತ್ತ ಬೀಳ್ಕೊಟ್ಟು ವಿಕ್ರಮ ।
ಭೂಕಾಂತ ಖಗಗೂಡಿ ಬನದೊಳು ॥
ಲೋಕಕಚ್ಚರಿಯೆನೆ ಚೆಂತಿಸು ತಿರ್ದನೆಂ ।
ಬಾಕಥೆ ಪಿಂದಣದಸಿಯಳ್ ॥ ೨೩ ॥

ಇದರಿಂದ ಈ ಕವಿಯು ಈ ಅಂತರಾಳದ ಕಥಾಭಾಗವನ್ನವಲಂಬಿಸಿಯೇ ತನ್ನ ಕೃತಿಯನ್ನು ಪ್ರಾರಂಭಿಸಿರುವನೆಂದು ಹೇಳಬಹುದಾಗಿದೆ.

No. 1094. ಸೊಬಗಿನ ಸೋನೆ by ದೇಪರಾಜ-

SOBAGINA SŌNE BY DĒPARĀJA.

Substance, śritāla. Size, 16⅜ × 1⅝ inches. Pages, 139. Lines, 6 to 9 on a page. Extent, 2,000 granthas. Character, Kannada. Condition, extremely injured. Appearance, old. Mode of writing, good.

Incomplete.

Same work as that described above.

(ವಿ.ವಿ.)—

ಅಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಪ್ರಾರಂಭಿಕವಾಗಿ ಓಲೆಗಳು ಮುರಿದು ಹೋಗಿವೆ. ಅಲ್ಲಲ್ಲಿ ಕೆಲವು ಓಲೆಗಳು ಕಾಣುವುದಿಲ್ಲ. ಓಲೆಗಳಲ್ಲಿ ಪಂಕ್ತಿಗಳು ಒಂದೇ ರೀತಿಯಾಗಿಲ್ಲ. ಆರರಿಂದ ಒಂಭತ್ತರ ವರೆಗೂ ಇವೆ. ಲಿಪಿ ಉತ್ತಮವಾಗಿದೆ. ಕೊನೆಯ ಓಲೆಯಲ್ಲಿ " ಕೆಂಪಯ್ಯನ ಪುಸ್ತಕಕ್ಕೆ ಮಂಗಳ ಮಹಾ " ಎಂದಿದೆ.

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1095. ಸೊಬಗಿನ ಸೋನೆ by ದೇಪರಾಜ-

SOBAGINA SŌNE BY DĒPARĀJA.

Substnace, palm-leaf. Size, 8 × 1⅛ inches. Pages, 226. Lines, 4–5 on a page. Extent, 1,140 granthas. Character, Kannada. Condition, very injured. Appearance, old. Mode of writing, not bad.

Begins on fol. 1*a*. The other work herein is Auṣadhagaḷu 115*a*.

Incomplete.

Same work as that described above.

(ವಿ.ವಿ.)—

ಅಸಮಗ್ರ. ಓಲೆಗಳು ೧, ೨, ೧೫, ೨೨, ೪೩, ೪೪, ೪೭, ೬೦, ೬೧ ಹೋಗಿವೆ. ೬೪ ರ ವರೆಗೆ ಓಲೆಗಳಲ್ಲಿ ಸಂಖ್ಯೆಯಿದೆ. ಇವುಗಳಲ್ಲಿ ಮೊದಲನೆಯ ಸಂಧಿಯ ೧೧ ನೆಯ ಪದ್ಯದಿಂದ ೬ ನೆಯ ಸಂಧಿಯ ೬೪ ನೆಯ ಪದ್ಯದ ವರೆಗೆ ಇದೆ. ಬಳಿಕ ಇರುವ ಓಲೆಗಳಲ್ಲಿ ಸಂಖ್ಯೆಯಿಲ್ಲ. ಸಂಧಿಗಳು ಮತ್ತು ಪದ್ಯಗಳು ಸಹ ಕ್ರಮವಾಗಿಲ್ಲ. ಒಟ್ಟು ಓಲೆಗಳು ಇದರಲ್ಲಿ ೧೧೪ ಇರುವುವು. ೪೯ ನೆಯ ಮತ್ತು ೧೧೪ ನೆಯ ಓಲೆಗಳಲ್ಲಿ ಒಂದೇ ಕಡೆ ಬರೆದಿದೆ. ಅತ್ಯಂತ ಶಿಥಿಲವಾದ ಪ್ರತಿಯಾಗಿದೆ. ಲಿಪಿ ಸಾಮಾನ್ಯವಾಗಿದೆ.

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1096. ಸೊಬಗಿನ ಸೋನೆ by ದೇಪರಾಜ-

SOBAGINA SŌNE BY DĒPARĀJA.

Substance, palm-leaf. Size, 11 × 1¼ inches. Pages, 8. Lines, 6 on a page. Extent, 60 granthas. Character, Kannada. Condition, very much injured. Appearance, old. Mode of writing, good.

Incomplete. Contains 1–52 stanzas in the 5th sandhi.

Same work as that described above.

(ವಿ.ವಿ.)—

ಅಸಮಗ್ರ. ೫ ನೆಯ ಸಂಧಿಯಲ್ಲಿ ೧-೫೨ ಪದ್ಯಗಳಿವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1097. ಸೊಬಗಿನ ಸೋನೆ by ದೇಪರಾಜ-
SOBAGINA SŌNE BY DĒPARĀJA.

Substance, palm-leaf. Size, 9 5/16 × 1⅞ inches. Pages, 14. Lines, 7 on a page. Extent, 125 granthas. Character, Kannada. Condition, much injured. Appearance, old. Mode of writing, good.

Begins on fol. 83*a* of the Ms. described under No. 890 *ante*.

Incomplete. Contains the first sandhi of the story of "Patriṇiya Sṛngāra."

Same work as that described above.

(ವಿ.ವಿ.)—

ಅಸಮಗ್ರ. ಪತ್ರಿಣಿಯ ಶೃಂಗಾರವರ್ಣನೆಯನುಳ್ಳ ಸಂಧಿಯೊಂದು ಮಾತ್ರ ಇದೆ. ೩೩ ಸಂಧಿಗಳಿಂದ ಸಮಗ್ರವಾಗಿರುವ ಪ್ರತಿಯಲ್ಲಿ ಈ ಸಂಧಿಯು ೨೦ ನೆಯದಾಗಿರುತ್ತದೆ. ಇದು ಪತ್ರಿಣಿಯ ಕತೆಯಲ್ಲಿ ಮೊದಲ ಸಂಧಿ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಅವಾವುವೆಂಬುದನ್ನು ಹಿಂದಣ ೮೯೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು. ಇದು ಅತ್ಯಂತ ಶಿಥಿಲವಾದ ಪ್ರತಿ. ಇದರಲ್ಲಿ ಲಿಪಿ ಚೆನ್ನಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1098. ಸೊಬಗಿನ ಸೋನೆ by ದೇಪರಾಜ-
SOBAGINA SŌNE BY DĒPARĀJA.

Substance, paper. Size, 10-7/16 × 9-9/16 inches. Pages, 14. Lines, 20 on a page. Extent, 125 granthas. Character, Kannada. Condition, fair. Appearance, new. Mode of writing, good.

Restored in 1932–33 from the Ms. described above (No. 1097).

Begins on page 127 of the Ms. described under No. 891 *ante*.

Incomplete.

(ವಿ.ವಿ.)—

ಅಸಮಗ್ರ. ಪತ್ರಿಣಿಯ ಶೃಂಗಾರವರ್ಣನೆಯನ್ನುಳ್ಳ ಸಂಧಿಯೊಂದಿದೆ. ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯು ಇದಕ್ಕೆ ಮಾತೃಕೆಯಾಗಿದೆ. ಇದು ಕಾಗದದ ಪ್ರತಿ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಅವಾವುವೆಂಬುದನ್ನು ಹಿಂದಣ ೮೯೧ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 1099. ಸೊಬಗಿನ ಸೋನೆ by ದೇಪರಾಜ-
SOBAGINA SŌNE BY DĒPARĀJA.

Substance, palm-leaf. Size, $14\frac{1}{4} \times 1\frac{1}{8}$ inches. Pages, 54. Lines, 6 on a page. Extent, 720 granthas. Character, Kannada. Condition, extremely injured. Appearance, old. Mode of writing, good.

Incomplete.

Same work as that described above.

(ವಿ-ವಿ.)—

ಅಸಮಗ್ರ. ಓಲೆಗಳು ೧೨-೧೪, ೧೭-೩೨, ೩೫-೪೦ ಈ ಕ್ರಮದಲ್ಲಿವೆ. ಮುಂದಣ ಓಲೆಗಳ ಸಂಖ್ಯೆ ಗೊತ್ತಾಗುವುದಿಲ್ಲ. ಇದರಲ್ಲಿ ಪದ್ಯ ಭಾಗಗಳು ಈ ಕ್ರಮದಲ್ಲಿವೆ.— ಸಂಧಿ ೩, ಪದ್ಯ ೩೩ ರಿಂದ ಸಂಧಿ ೪, ಪದ್ಯ ೨ ರ ವರೆಗೆ; ಸಂಧಿ ೪ ಪದ್ಯ ೨೭ ರಿಂದ ಸಂಧಿ ೭ ಪದ್ಯ ೨೬ ರ ವರೆಗೆ; ಸಂಧಿ ೯, ಪದ್ಯ ೪ ರಿಂದ ಸಂಧಿ ೧೦ ಪದ್ಯ ೩೪ ರ ವರೆಗೆ; ಆ ಮೇಲೆ ಮುಂದಣ ಎರಡು ಓಲೆಗಳಲ್ಲಿ ಸಂಧಿ ೧೧, ಪದ್ಯ ೧೨-೩೪ ಇವೆ. ಓಲೆಗಳು ಕೆಲವು ಮುರಿದಿವೆ. ಅತ್ಯಂತ ಜೀರ್ಣವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1100. ಸೋಮನಾಥ ಚರಿತ್ರ by ರಾಘವಾಂಕ-
SŌMANĀTHA CARITRE BY RĀGHAVĀṄKA.

Substance, Sritāla. Size, $13\frac{7}{8} \times 1\frac{5}{8}$ inches. Pages, 114. Lines, 7 on a page. Extent, 1,650 granthas. Character, Kannada. Condition, very injured. Appearance, old. Mode of writing, good.

Complete in 5 sandhis.

A work in Vārdhakaṣaṭpadi metre including the greatness of Śiva and Vīraśaiva religion, as against others, presumably Jainas. The story described in this runs as follows :—At the request of Nārada, God Śiva commanded one of his attendants to take birth on earth and establish the greatness of Śiva. Accordingly he took birth in Saurāṣtra country and was known as Ādayya. He went to Huligere and there, being attacked by Jains (arhats) he invoked Sōmanatha, a form of God Śiva to the Basadi (Jain temple) and won the admiration of all.

For particulars regarding the author see the next No. 1110.

Date of transcription :—Tenth day of the bright fortnight of the lunar month " Caitra " in the year " Kṣaya."

Name of the scribe:—*Cikkapurātoḍeya*, son of *Purātavoḍeya* of *Bommayyana Haḷḷi*, who wrote this for the use of *Keḷasanāyaka* of Ballihaḷḷi.

Beginning :

ಸೂಚನೆ.—ಪಾ. ಪ.

ದೇವ ಸಭೆಯ . . . . ।

ಭೂವಲಯ . . . . ।

. . . . . . ಪುಲಿಗೆಱೆನಗತಂದನಾದಯ್ಯನಯ್ಯ ॥ ಪದ ॥

ಶ್ರೀಮದಗಜಾಹರ್ಷರತ್ನಾಕರೇಂದು ಗೌ. ।

ರೀಮನೋವನವಸಂತಂ ಭವಾನೀವದನ ।

ತಾಮರಸದಿ . . . . ಹಾ ॥

ಭೂಮಿಭೃತ್ಯನೆಯಾಕ್ಷಿ ಕುಮುದ . . . ಚಂದ್ರಿಕಾ । (?)

ನಾಮನೆಮ್ಮಂ ಸಲಹುಗನುದಿನಂ ಪುಲಿಗೆಱೆಯ ।

ಸೋಮನಾಥಂ ಸೋಮಶೇಖರಂ ಸೋಮಂ ದಯಾಳು ಮುಕ್ತಿ ವಿಲಾಸ
ನಯ್ಯ ॥ ೧ ॥

ಶ್ರೀಯುಮಾವರನಿಂದುಧರನಭಯಕರನುಗ್ರ ।

ಮಾಯಾರಿ ಭಕ್ತಭವಹಾರಿ ಗಂಗಾಧಾರಿ ।

ವಾಯುಭುಗ್ಭೂಷನುತ್ತಮವೇಷ ನಘತಿಮಿರ ಪೂಷನತಿ ವೀರ[ಕಾಷಾ] (?) ॥

ಸ್ವಾಯತಾಖಿಳ ಲೋಕದಾನತವ್ರಜ ಪುಣ್ಯ ।

ದಾಯಕಂ ಹರಿವಿರಿಂಚಾದಿ ಪ್ರಮುಖ ದೇವ ।

ರಾಯ ಭಕ್ತಿಜ್ಞಾನ ವೈರಾಗ್ಯಮಂ ಕುಡುಗೆ ಪುಲಿ [ಕರ] ಪುರಾಧೀಶನಯ್ಯ ॥ ೨ ॥

* * * * *

ಶ್ರೀವಿರೂಪಾಕ್ಷದೊ . . . ನಭಿನವಮಹಾ- ।

ದೇವಂ ಜಿತೇಂದ್ರಿಯಂ ನಿಷ್ಕಾಮಿ ದೇಹಗುಣ- ।

ಪಾವರಿಸದತುಳ ನಿರ್ಲೇಪನಾರೂಢ ಲೌಕಿಕವಂಟದ ಪ್ರತಿಮನು ॥

ಭೂವಂದಿತಂ ನಿತ್ಯತೃಪ್ತಂ ಸಮಸ್ತ ಮು(ಖ) ।

(ಜೀ)ವಾನು ಕಂಪಿಯೆಂದೆನಿಸಿ ರಾಜಿಪ ಸುಕೃತ- ।

ಭಾವಿ ಹಂಪೆಯ ಶಂಕರಪ್ರಭು ಮದೀಯ ಮತಿಗೀಗೆ ಪ್ರಸನ್ನತೆಯನು ॥ ೩ ॥

ಸಕಳಾಗಮಾಚಾರ್ಯನನಸೂಯನ ಪ್ರತಿಮ- ।

ನಕಳಂಕನುತ್ತಮನನಂತವೇದಾರ್ಥ ಸಾ- ।

ಧಕನು ವಿದ್ಯಾತೀತಸಾನಂದಮಯನು ಶಾಪಾನುಗ್ರಸಾಮರ್ಥ್ಯನು ॥

ಸಕ . . . ಮಯಂ ಗುಪ್ತಲಿಂಗ ಪ್ರೇಮಿ ।

ಸುಕವಿ ಹಂಪೆಯ ಮಾದಿರಾಜರ ಜ್ಞಾನದೀ- ।

ಪ್ತಿಕೆ ಕವಿದು ಮಾಯಾತಮಂಪವಳವಂತೆನ್ನ ಹೃದಯದೊಳು ಬೆಳಬೆಳ
ಗುಗೆ (?) ॥ ೪ ॥

* * * * *

ರಸಜೀವಭಾವ ಒಡಲರ್ಥವವಯವ ಶಬ್ದ- ।

ವಿಸರ[ದೊ](ವೊ)ಳ್ಪಾದಿ ಯಲಂಕಾರವೆ ತೊಡಿಗೆಲಕ್ಷ- ।

ಣಸಮೂಹ ಲಕ್ಷಣಂ ವಿಮಲಪದವಿನ್ಯಾಸ ನಡೆರೀತಿಸುಕುಮಾರತೆ ॥
ರಸಿಕರ ಮನಂ ಸುಳಿವ ಸುಖನಿಳಯವಾಗಿಪ್ಪ ।
ಹೊಸಕಾವ್ಯ ಕನ್ನಿಕೆಯನುರೆ ಪಡೆದು ಹುಲಿಗೆರೆಯ ।
ರಸಸೋಮನಾಥಂಗೆ ಕೊಟ್ಟ ಹಂಪೆಯ ರಾಘವಾಂಕನೇಂ ಕೃತಪುಣ್ಯನೋ ॥೧೦॥
ಕೃತಿವೆಸರ್ (ವರ) ಸೋಮನಾಥಚಾರಿತ್ರವೀ ।
ಕೃತಿಗೊಡೆಯ ಸೋಮನಾಥ [ನಿದಕ್ಕೆ ಸಹಾಯಿಗಳು](ಂಸಾಯಿಗಳ್)ಭಕ್ತ ।
ತತಿಯಿದಂ ಬೇಟ್ಟ ಕವಿ ಹಂಪೆಯ ಹರೀಶ್ವರನಸುತರಾಘವಾಂಕನೆನಲು ॥
ಕ್ಷಿತಿಯೊಳನ್ನೀಕಾವ್ಯಮಂ ಮಹಾಕವಿಗಳೊಳು ।
ಚತುರರೊಳು ರಸಿಕರೊಳು ಬುಧರೊಳತ್ಯಧಿಕ ಪಂ- ।
ಡಿತರೊಳಾರೋದರಾಕೇಳರಾವರ್ಣಿಚ್ಚರಾರಾದೊಡೇವ್ರೊಗಳ್ಳೀನಯ್ಯ ॥ ೧೩ ॥

*   *   *   *   *

ನಾರದನ ಕೆಯ್ಯಿಂದ ಕಲಿಕಾಲದನುವ ಮದ- ।
ನಾರಿ ಚಿತ್ತೈಸಿ ಗಣನಾಥನಂ ಕಳುಪಿದೊಡೆ ।
ಸೌರಾಷ್ಟ್ರದೊಳಗಾತನಾದಯ್ಯವೆಸರಿಂದ ಜನಿಸಿ ಹುಲಿಗೆಱೆಗೆ ಬಂದು ॥
ವೈರಿಗಳ ಮೂದಲೆಗೆ ಹಿರಿಯ ಬಸದಿಯೊಳು ಶಶಿ- ।
ಧಾರಿ ಸೋಮಯ್ಯನಂ ನಿಲಿಸಿತನ್ನಂ ಮುತ್ತಿ- ।
ದಾರುಹತರಂ ಗೆಲಿದನೆಂಬುದು ಕಥಾಗರ್ಭವಿದ ಬೆಳಸಿ ಕೃತಿಯೆನಿಪೆನು ॥ ೧೮ ॥

*   *   *   *   *

ಪುರಪುರಂಗಳೊಳವರ ಕೇರಿಕೇರಿಗಳಲ್ಲಿ ।
ನೆರೆದ ಮನೆಮನೆಯೊಳರಸಿದೆವು ಭ । (?)
ಕ್ತರ ಮನೆಗಳಲ್ಲಿಂದರೆನೆ ಶಿವಾಲಯವನದರೊಳು ಕಂಡುದುಂಟೆಯೆನಲು ॥
ಮೊರಡಿಗಳ ನಡುವೆ ಮಂದಿರಬಕಂಗಳ ನಡುವೆ ।
ವರಹಂಸೆಯಿರ್ಪಂತೆ ಬಸದಿ ಹಲವರ ನಡುವೆ ।
ಪರಮ [ಹಾಜೇ] (ಮಾಹೇ) ಶ್ವರನಿರಲ್ಕಂಡೆವೆನಲದಕೆ ಹೋಗಲುದ್ಯೋಗಿಸಿ
ದನು ॥ ೧೯ ॥

Colophon :

ಪ್ರಥಮಸ್ಥಲಂ ಸಂಪೂರ್ಣಂ ॥

ರಾಗ.—ವಸಂತ ॥

ಪಲ್ಲವಿ॥ ಈಸು ಮುನಿದವನೆಮ್ಮ ಬಸದಿಯೊಳು ತನ್ನಸೋ- ।
ಮೇಶನಂ ನಿಲಿಸದೇ ಕುಂಬನೆಂದಣಕಿಸುವ ।
ದೂಸಕರ ಮೂದಲೆಗೆ ತಂದ ಬಳಕೆಂಬೆನೆನುತಂ ಹೋದನಾದಯ್ಯನು ॥

End :

ವಸುಧಾತಳಾಗ್ರದೊಳು ಸೋಮನಾಥನ ಕೀರ್ತಿ ।
ಪಸರಿಸಲಿ ಸರ್ವ ಭೋಗಂಗಳಳವಡಲಿ ಭ- ।

ಕ್ತ ಸಮೂಹದ ಮನೋರಥಂ ಸಲಲಿ ಶ್ಯವ ಸಮಯಾಚಾರದಿಕ್ಕೃತಿವನು ॥
ಮುಸುಕಲಿ ಸಮಸ್ತ ಜೀವರು ಸುಖವನಾಂತು ಸಂ- ।
ತಸವನೆಯ್ದಲಿಯೆನುತ ತನ್ನರಸಿ ಪದುವಾವ ।
ತಿಸಹಿತ್ರೊಳಪೊಕ್ಕನಂ ದಾದಯ್ಯ ಸೋಮನಾಥನ ಬಲದ ಕಂಬದೊಳಗೆ ॥ ೪೦ ॥

ಸತತವೀ ಕೃತಿಯನೋದುವ ಕೇಳುವರ್ಗೆ ಸ-।
ನ್ನುತಸುಖಂ ಸಂಪದಂ ಹರ್ಷವರ್ಷಂ ನಿರೋ- ।
ಗತೆ ನಿತ್ಯವಿಭವನಖಿಳಾನೂನ ಫಲಭರಿತವಹ ಸಂತೋಷಂ ॥
ಕ್ಷಿತಿಯ ಜನಮಂ ಸುತ್ತಿ ಮುತ್ತಿ ಮಾವಳಸಿ ಸಂ- ।
ತತವಗಲದಿಪ್ಪಂತೆ ಕರುಣಿಸುಗೆ ಗಿರಿಜಾಧಿ- ।
ಪತಿ ಸಹಜ ಸುಲಭ ಮೂರ್ತಿ ವಿಲಾಸ ಪುಲಿಗೆಱೆಪುರಾಧೀಶಸೋಮೇಶನು ॥ ೪೧ ॥

Colophon :

ಅಂತು ಸಂಧಿ ೫ ಕ್ಕಂ ಪದನು ೫೦೦ (?) (೪೯೭) ಕ್ಕಂ ಶ್ರೀ. ಶ್ರೀ.

(ವಿ-ಪ.)—

ಸಮಗ್ರವಾಗಿದೆ. ಅತ್ಯಂತ ಶಿಥಿಲವಾದ ಪ್ರತಿ. ಬರೆವಣಿಗೆ ಚೆನ್ನಾಗಿದೆ. ೧೧ ನೆಯ ಓಲೆಯು ಹೋಗಿದೆ. ಕೊನೆಯ ಓಲೆಯ ಸಂಖ್ಯೆ ೫೪. ಪುಸ್ತಕಾಂತ್ಯದಲ್ಲಿ 'ಕ್ಷಯ ಸಂವತ್ಸರ ಚೈತ್ರ ಶುದ್ಧ ೧೦ ರಲ್ಲು ಬಲ್ಲಿಹಳ್ಳಿಯ ಹೊನ್ನಕಳಸ ನಾಯಕರಿಗೆ ಬೊಮ್ಮಯ್ಯನ ಹಳ್ಳಿಯ ಪುರಾತವೊಡೆಯರ ಮಕ್ಕಳು ಚಿಕ್ಕ ಪುರಾತವೊಡೆಯರು ಸೋಮನಾಥ ಚಾರಿತ್ರಮಂ ಶಿವಭಕ್ತರ ಕೃಪೆಯಿಂ ಬರೆದೆನು ' ಎಂದಿದೆ.

ಇದು ವಾರ್ಧಿಕ ಷಟ್ಪದಿಯಲ್ಲಿ ಬರೆದಿದೆ. ಸಂಧಿ ೫. ಇವುಗಳಲ್ಲಿ ಕ್ರಮವಾಗಿ ಪದ್ಯಗಳು ೧೦೯, ೧೦೭, ೯೯; ೧೦೧, ೪೧ ಇವೆ. ಒಟ್ಟು ಪದ್ಯಗಳು ೪೯೭.

ಗ್ರಂಥದಾದಿಯಲ್ಲಿ ಪುಲಿಗೆಱೆಯ ಸೋಮನಾಥಸ್ತುತಿಯಿದೆ. ಬಳಿಕ ಹಂಪೆಯ ಶಂಕರಪ್ರಭು, ಮಾಸಿರಾಜ, ಮಹಾದೇವ, ಹರೀಶ್ವರರನ್ನು ಕವಿ ಸ್ಮರಿಸಿದ್ದಾನೆ. ಆ ಮೇಲೆ ಪೂರ್ವಕವಿಗಳಾದ ಉದ್ಭಟ, ಮಯೂರ, ಕಾಳಿದಾಸ, ಹಲಾಯುಧ, ಕೇಶಿರಾಜ, ಮಲ್ಹಣ, ಬಾಣ, ಭಲ್ಲಟ, ಭಾರವಿಗಳನ್ನು ಬಲಗೊಂಡು ಕೃತಿಯನ್ನು ತೊಡಗಿದ್ದಾನೆ. ಕವಿಕಾವ್ಯ ಪ್ರಶಂಸೆಗಳನ್ನು 'ರಸಜೀವ ಭಾವ ಪ್ರೌಢಲ್, ಕೃತಿನೆಸರ್' ಈ ಪದ್ಯಗಳಲ್ಲಿ ಮಾಡಿದ್ದಾನೆ, 'ನಾರದನ ಕೈಯಿಂದ ' ಎಂಬ ಪದ್ಯದಲ್ಲಿ ಕಥಾಗರ್ಭವನ್ನು ಹೇಳಿದ್ದಾನೆ.

ಕವಿ ರಾಘವಾಂಕನೆಂಬವನು. ಇವನ ಸ್ಥಳ ಹಂಪೆ. ಕವಿಯ ಪರವಾಗಿ ಉಳಿದ ವಿಷಯ ಗಳನ್ನು ಮುಂದಣ ೧೧೧೦ ನೆಯ ನಂಬರಿನಲ್ಲಿಯೂ, ಕರ್ಣಾಟಕ ಕವಿ ಚರಿತೆ ಸಂಪುಟ ೧, ಪುಟ ೧೪೦ ರಲ್ಲಿಯೂ ನೋಡಿ ತಿಳಿಯುವುದು.

ಈ ಗ್ರಂಥದಲ್ಲಿ ಸಂಧಿಗಳು ೧೭, ಪದ್ಯಗಳು ೭೪೦ ಇವೆಯೆಂದು ಕವಿ ಚರಿತ್ರಕಾರರು ಬರೆದಿದ್ದಾರೆ. (ಕವಿ ಚರಿತ್ರೆ ಮೊದಲ ಆವೃತ್ತಿ, ಸಂಪುಟ ೧, ಪುಟ ೧೪೫). ಇಲ್ಲಿರುವ ಪುಸ್ತಕದಲ್ಲಿ ಅಷ್ಟಿಲ್ಲ ವೆಂಬುದು ಸ್ವಲ್ಪ ಹಿಂದಕ್ಕೆ ನೋಡಿದರೆ ಗೊತ್ತಾಗುತ್ತದೆ.

No. 1101. ಸೌಂದರಪುರಾಣ by ಚತುರ್ಮುಖ alias ಬೊಮ್ಮರಸ-

SOUNDARAPURĀṆA BY CATURMUKHA *alias* BOMMARASA.

Substance, palm-leaf. Size, 12½ × 1¼ inches. Pages, 287. Lines, 7 on a page. Extent, 4,500 granthas. Character, Kannada. Condition, much injured. Appearance, old. Mode of writing, good.

Complete in 19 sandhis.

The story is about *Saundarēśa* also known as *Nambiyaṇṇa* one of the sixty-three devotees of Śiva. It runs as follows :—*Puṣpadanta*, one of the attendants of Śiva was once cursed along with *Kanakalata* and *Kāntimati*, two maid servants of Pārvati. They took birth in the human world as *Nambiyaṇṇa Paṇṇe* and [*Sankile* respectively. Nambiyaṇṇa married Parave and Sankile, spread the greatness of Śiva and at the end went to Kailāsa with his two wives.

The name of the author in this is given as *Caturmukha* in one place and as Bommarasa in another. As far as the meaning is concerned, the two words convey the same sense. It has been found on investigation that the two names were the titles of one and the same author.

The author states that he wrote this at the instance of *Cikkavīraṇṇayya* and *Tippabhūpāla*. His date is about 1450 A.D. For details see extracts below and the next No. 1103.

Date of transcription :—Monday, the 3rd day of bright fortnight of the lunar month Mārgaśira in the year Citrabhānu.

Name of the father of the scribe :—*Basavaṇṇa* of *Kalakuṇḍa*.

Beginning :

ವಾ. ಷ. ಸೂಚನೆ.

ಶ್ರೀಮದನುಪಮ ಪುಣ್ಯನಿಧಿ ಪುಷ್ಪದಂತನೀ ।
ಭೂಮಿಯೊಳು ಜನಿಸುವೊಡೆ ಪಡೆದನು ಸದಾಶಿವನ ।
ನೇಮವನು ಕನಕಲತೆ ಕಾಂತಿಮತಿಯೆನಿಸುತಿಹರುದ್ರ ಕನ್ನೆಯರು ಸಹಿತ ॥
ಶ್ರೀವರಸರೋಜಭವ ದೇವೇಂದ್ರ ಮುಖ್ಯನಾ- ।
ನಾವಿಬುಧ ಮಕುಟ ರತ್ನಾವಳೀ ವಿಮಳಪ್ರ ।
ಭಾವಿರಾಜಿತ ಚರಣನಮೃತಕರ ಶೇಖರನು ಶಂಕರನು ಸೌಖ್ಯಕರನು ॥
ಪಾವನ ಚರಿತ್ರನುಜ್ವಳಭಾಳ ನೇತ್ರನಗ- ।
ಜಾವಲ್ಲಭನು ನಿಗಮದುರ್ಲಭನು ರಕ್ಷಿಸುಗೆ ।
ಭೂವಳೆಯವನು ನೀಲಕಂಠ ಲಿಂಗನು ಸುಜನ ಹೃದಯ ಸರಸಿಜ ಭೃಂಗನು ॥ ೧ ॥

* * * * *

ಕಾರುಣ್ಯ ನಿಧಿಯೇಕಲಿಂಗ ನಿಷ್ಠಾಪರನ ।
ಪಾರಮಹಿಮನು ದೇಶಿಕೇಂದ್ರ ಜಂಗಮದಾಸ- ।

ಮಾರಾಧಕನು ವಿದಿತ ಶಿವಧರ್ಮ ಪಾಲಕನು ವಿತತವಿಮಳಾಚಾರನು ॥
ಧಾರಿಣಿಗೆವಿನುತ ಚೊಕದೇವಪಾಂಗನ ಗರ್ಭ- ।
ವಾರಿಧಿಗೆ ಲಲಿತ ಚಿಂತಾರತ್ನವೆನಿಪ ಚಿಕ- ॥
ವೀರಣಯ್ಯನ ಬೆಸನೊಳೆಸಗುವೆನು ನಂಬಿಯ ಸುಚಾರಿತ್ರದೀ ಕಾವ್ಯವ ॥ ೧೭ ॥

ನೀಲಲೋಹಿತನ ಲೀಲೆಯನು ವಿಸ್ತರಿಸಿದ ಮ- ।
ಹಾಲಲಿತಕವಿಗೆ ಭಾರವಿಗಮೃತರುಚಿಯನಿರ- ।
ದೇಳದಂಗೆಯ್ವತುಳ ಸೌಮ್ಯ ಕೃತಿ ಕರ್ತೃವಿಗೆ ಬಾಣನುದ್ಭಟ ದೇವಗೆ ॥
ಕಾಳದಾಸಂಗೆ ಮೃದುವಾಗ್ವಲ್ಲಿ ಬಗೆಗುಣ ವಿ- ।
ಶಾಲಂಗೆ ಜಿತಕುಸುಮ ಕೇತುವಿಗೆ ಮಲುಹಣಗೆ ।
ಭೂಲೋಲ ಭೋಗಿ ಭೋಜಂಗೆ ವಂದಿಸುವೆನು ನವಗ್ರಹಾತ್ಮಕರಿಗಿಂತು ॥ ೧೮ ॥

*   *   *   *   *

ಇನಿತಲ್ಲದೀಜಗಕೆ ಬೆಱತಿಲ್ಲೆನಿಪ್ಪ ಪಾ- ।
ಲ್ಗೆನೆಯ ಮರುಪುಟವಿಟ್ಟ ಸಕ್ಕರೆಯೊಳದ್ದಿ ಮೋ- ।
ಹನವ ಬೀರುವ ಚಲ್ವಿನೆಳೆವೆಣ್ಗೆ ತುತ್ತುಗೆಯ್ವತವೆ ತವೆಸವಿದು ನೋಡ ॥
ಅನುರಾಗದಿಂದಾಕೆ ಮಗುಳ್ದೀಯೆ ನಾಲಗೆಯ ।
ಕೊನೆಯ ಮೇಲಿಡಲಿಂತು ರುಚಿ ದೋರ್ಪದಂತೆ ಘ- ।
ಮ್ಮನೆ ಸೊಗಸನೀವುದು ಚತುರ್ಮುಖ ಮಹಾಕವಿಯ ಲಲಿತ ಕೃತಿರಸದ
ರಚನೆ ॥ ೧೯ ॥

*   *   *   *   *

ದೊರೆವಡೆದ ಕೃತಿ ಸೌಂದರ ಪುರಾಣವೀ- ।
ಪರಮ ಕೃತಿ ಕರ್ತನೇ ಶ್ರೀನೀಲ ಕಂಠನೀ- ।
ಸರಸ ಕೃತಿಯಂ ಪೇಳಸಿದನು ಡಂಕಣಿ ಕೋಟೆ ಪುರವರಾಧೀಶ ನೆನಿಪ ॥
ಪರಮ ಮಾಹೇಶ್ವರನು ವೈಶ್ಯಕುಲತಿಲಕ ಚೋ- ।
ಳರಭೀಮ ಕಾಮನೃಪ ನಾತ್ಮಭವ ತಿಪ್ಪಭೂ-
ವರನು ಕವಿಕಮಲ ಭಾಸ್ಕರನು ಸನ್ನುತ ಕೃಪಾಕರನು ದಾಕ್ಷಿಣ್ಯಪರನು ॥ ೨೦ ॥
ಪೇಳಸಿದನೀ ಸಂಬ್ಯಣಾಂಕ ಚರಿತೆಯನು ಭಲ ।
ರೇಲೇಸು ಲೇಸು ಮಝುರೇ ಎಂದು ಕೊಂಡಾಡಿ ।
ಲಾಲಿಸಲು ಕವಿ ಗಮಕಿ ವಾದಿ ವಾಗ್ಮಿಗಳು ತಲೆದೂಗೆ ಪರಿತೋಷದಿಂದ ॥
ಚೋಳ ನಾರಾಯಣ ಶಿವಾರ್ಚಕಪರಾಯಣವಿ- ।
ಶಾಲಮತಿ ಕಾಮ ನೃಪನಂದನನು ಸಜ್ಜನ ಮ- ।
ದಾಳವನಚಂದನನು ತಿಪ್ಪ ಭೂಪಾಲನುನ್ನತ ಸುಗುಣ ಕಲ್ಲೋಲನು ॥ ೨೧ ॥

*   *   *   *   *

ಹರಿಹರೇಶ್ವರ ಸೋಮನಾಥ ಮೊದಲಾದ ಕವಿ-
ವರರು ವಿಸ್ತರಿಸಿರ್ದ ನಂಬ್ಯಣಾಂಕನ ಪುಣ್ಯ- ।
ಚರಿತವನು ವರ್ಣಕದೊಳಾನು ಪೇಳ್ವೆನೆಂದು ಬಗೆದಂದೆ ನಟಿಸ್ತಿಯಿಂದೆ ॥
ತರಣಿ ಚಂದ್ರಮರ ಮುಂಬಿನಲಿ ಖದ್ಯೋತ ಸಂ- ।
ಚರಿಸುವಂತೆನ್ನ ಜಡಮತಿಯೊಳೀ ಕೃತಿಯನಾ- ।
ದರಿಸಿ ಲಾಲಿಪುದು ಪಾಲಿಪುದು ಶಿವಕವಿಗಳಘಶೈಲವಿದಳನ ಪವಿಗಳು ॥ ೩೪ ॥

*　　　*　　　*　　　*　　　*

ಗಿರಿಜೇಶನಪರಾವತಾರವೆಂದೆನಿಸುವೀ- ।
ಪರಮ ಪಾವನ ಮೂರ್ತಿ ಸೌಂದರೇಂದ್ರನ ಪುಣ್ಯ-
ಚರಿತೆಯಿಂತೀ ಕಾವ್ಯವಿದರೊಳಾರೊಬ್ಬರಿಂದೀ ಸುಕಾವ್ಯವ ಕೇಳಲು ॥
ಪರೆದು ಪೋದುದು ದುರಿತಪಾಪವಗಂ ಸುಜ್ಞಾನ ।
ದೊರೆಕೊಂಬುದಾಯುಷ್ಯ ವಾರೋಗ್ಯ ವೈಶ್ವರ್ಯ- ।
ಪಿರಿದಪ್ಪುದೊಲವಿನಿಂ ಶ್ರೀನೀಲಕಂಠನಭಿಮತ ಫಲಂಗಳನೀವನು ॥ ೬೨ ॥

Colophon :

ಪ್ರಥಮ ಸಂಧಿ ಸಮಾಪ್ತಂ ॥

ಸೂಚನೆ.— ವಾಲ್ಮೀಕನಾತನ ನಿರೂಪದಿಂ ಸೌಂದರಂ ।
ಜನ್ಮಿಸಿದ ನಂಬಿಯೆಂದೆಂಬ ಪೆಸರಿಂದಾತ- ।
ನೊಲ್ಮೆ ಕಾಂತೆಯರುದಿಸಿದರು ಪರವೆ ಸಂಕಿಲೆಯರೆನಿಸುವಭಿಧಾನದಿಂದೆ ॥

End :

ವರಗುಂಡ ಬೊಮ್ಮ ಬಿರುದಾಂತ ತಿಪ್ಪೇಂದ್ರ ಬೊ- ।
ಮ್ಮರಸ ನೀಂ ವಿರಚಿಸಿದ ಸೌಂದರ ಪುರಾಣದಾ ।
ಉರುತರ ದ್ವಿಶತೋತ್ತರ ಸಹಸ್ರಪದಗ . . ದು ಸಂಕ್ಷೇಪಿಸಲು ವೀರಣ ॥
. . . . , ।
. . . . ವಿತ್ತು ಮುನ್ನಿನೊಲು ಮಾಳ್ಪುದೆನೆ- ।
ಲೆರಡು ಕೃತಿ ಸಮವಾಗಿ ವಿಶ್ವನಾತಂಕತಾಂ . . ರಂ ತಪ್ಪದಂತೆ ॥ ೩೬ ॥

*　　　*　　　*　　　*　　　*

ಜಯ ಜಯ ಗಿರೀಂದ್ರ ಕನ್ಯಾಮುಖಾಂಬುಜ ಭಾನು ।
ಜಯ ಜಯ ನಿಜಾರ್ಚಕ ಪ್ರಕರ ನಿರ್ಜರಧೇನು ।
ಜಯ ಜಯ ಭವಾರಣ್ಯ ನಿರ್ಧೂಮ . . . . ಯ ಕೃಪಾರತ್ನಸಾನು ॥
ಜಯ ದುರಿತ ವಿಧ್ವಂಸ ದಿವ್ಯಪ್ರಸನ್ನ ಜಯ ।
ಜಯ ಸುಧಾಂಶು ಕಲಾವತಂಸ ಶಿವಯೋಗಿ ಸಂ- ।
ಜಯ ಹೃದಂಭೋಜನೀ ಹಂಸ ಪಾಲಿಸು ಜಗವನನವ . . . .
. . ॥ ೫೫ ॥

Colophon :

ಅಂತು ಸಂಧಿ ೧೯ ಕ್ಕಂ ಪದನು ೧೨೦೫ ಕ್ಕಂ ಸೌಂದರ ಪುರಾಣಂ ಸಮಾಪ್ತಂ ॥

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಓಲೆಗಳು ೧೮, ೯೭ ಈ ಎರಡು ಹೋಗಿವೆ. ಅನೇಕ ಓಲೆಗಳು ಮುರಿದಿವೆ. ೩೬, ೧೪೪ ಮತ್ತು ೧೪೭ ನೆಯ ಓಲೆಗಳ ಒಂದೇ ಕಡೆ ಬರೆದಿದೆ. ಕೊನೆಯ ಓಲೆಯ ಸಂಖ್ಯೆ ೧೪೭, ೧೪೪ ನೆಯ ಓಲೆಯ ಒಂದು ಪುಟದಲ್ಲಿ ಕೊನೆಯ ಸಂಧಿಯ ೨೯ ನೆಯ ಪದ್ಯದ ಸ್ವಲ್ಪ ಭಾಗವಿದೆ. ನಂತರ ೩೬ ನೆಯ ಪದ್ಯದ ಆರಂಭದ ವರೆಗೆ ಸಂಪೂರ್ಣವಾಗಿ ಬರೆಯದೆ ಬಿಟ್ಟಿದೆ. ಪುಸ್ತಕದ ಅಂತ್ಯದಲ್ಲಿ 'ಚಿತ್ರಭಾನುಸಂವತ್ಸರದ ಮಾರ್ಗಶಿರ ಶುದ್ಧ ೩ ಯು ಚಂದ್ರವಾರದಲ್ಲು ಕಲುಕುಂದ ಬಸವಣ್ಣನ ಮಗ ಬರೆದ ಸೌಂದರ ಪುರಾಣದ ಪುಸ್ತಕಕ್ಕೆ . . . . ಎಂದಿದೆ.

ಇದು ವಾರ್ಧಕಷಟ್ಪದಿಯಲ್ಲಿ ಬರೆದಿದೆ. ಸಂಧಿ ೧೯, ಪದ್ಯಗಳು ೧೨೦೫. ಗ್ರಂಥದಾದಿಯಲ್ಲಿ ನೀಲಕಂಠಲಿಂಗಸ್ತುತಿಯಿದೆ. ಆ ಮೇಲೆ ಕವಿ ಸೋಮಶಂಭುವಿನಿಂದಾರಂಭಿಸಿ ವಂಶಪರಂಪರೆಯನ್ನು ವಿಶ್ವನಾಥಾಚಾರ್ಯನ ವರೆಗೆ ಹೇಳಿದ್ದಾನೆ. ಈ ವಿಶ್ವನಾಥಾಚಾರ್ಯನನ್ನು ಬಹಳವಾಗಿ ಹೊಗಳಿದ್ದಾನೆ. (ಸೋಮಶಂಭುವಿನ ವಂಶಪರಂಪರೆ.—ಸೋಮಶಂಭು, ಮಗ ಸಕಲಾಗಮಾಚಾರ್ಯ, ಮಗ ಶಿವ-ಲೆಂಕಮಂಚಣ್ಣ ಪಂಡಿತಾರಾಧ್ಯ, ಮಗ ಊರಿಲಿಂಗ ಪೆದ್ದಿ, ಮಗ ವಿಶ್ವೇಶ್ವರ ಪೆದ್ದಣಾರ್ಯ, ಮಗ ವಿಭೂತಿಸಿದ್ಧ, ಮಗ ಶಿವಗುರೂತ್ತಮ ಸೋಮನಾಥಾಚಾರ್ಯ, ಮಗ ಅನಂತಪೆದ್ದಣ ದೇಶಿಕೇಂದ್ರ, ಮಗ ವಾರಣಾಸಿಯ ಬಲ್ಲಣಾರ್ಯ, ಮಗ ನಾಗಿದೇವಾರ್ಯ, ಮಗ ನೀಲಕಂಠಾಚಾರ್ಯ, ಮಗ ವಿಶ್ವನಾಥಾಚಾರ್ಯ) ತರುವಾಯ ಪಂಡಿತಾರಾಧ್ಯದೇವರು, ನಂದಿಗೆ ಮಾದರಸ, ಬಸವ, ಭೃಂಗಿ, ವೀರಭದ್ರ, ಷಡಾನನರನ್ನು ನುತಿಸಿ ಕಲಿಕಾಮದೇವ, ಶಂಕರದಾಸಿಮಯ್ಯ, ಓಹಿಲದೇವ, ಕಣ್ಣಪ್ಪ, ಮಹದೇವಿ, ಮುಕ್ತಾಯಿ, ಭೋಗಣ್ಣ, ಅಜಗಣ್ಣ ಚೇರಮಾಂಕ, ದೀಪದ ಕಲಿಯಾರ, ಚೆನ್ನಬಸವ, ಸಿದ್ಧರಾಮ, ಮಡಿವಳಮಾಚಿದೇವ, ಮುಂತಾದ ಪುರಾತನರನ್ನು ನೆನೆದು ರೇವಣಸಿದ್ಧ, ಮರುಳಸಿದ್ಧ, ಏಕೋರಾಮ, ಪಂಡಿತಾರಾಧ್ಯರೆಂಬ ಮತಚತುಷ್ಟಯದ ಚರಲಿಂಗಮೂರ್ತಿಗಳನ್ನೂ, ಗುಮ್ಮಳಾಪುರನಿಲಯದ ಮಹಾಮಹತ್ತಿನ ಪದಾಂಭೋಜವನ್ನೂ ಸ್ಮರಿಸಿದ್ದಾನೆ.

ಅರುವತ್ತುಮೂವರು ಶಿವಭಕ್ತರಲ್ಲಿ ಒಬ್ಬನಾದ ಸೌಂದರೇಶ ಅಥವಾ ನಂಬಿಯಣ್ಣ ಎಂಬುವನ ಚರಿತವು ಈ ಗ್ರಂಥಕ್ಕೆ ವಿಷಯವು. ಶಿವಗಣಗಳಲ್ಲಿ ಒಬ್ಬನಾದ ಪುಷ್ಪದಂತನೆಂಬುವನು ಪಾರ್ವತಿಯ ದಾದಿಯರಾದ ಕನಕಲತೆ ಕಾಂತಿಮತಿ ಎಂಬುವರೊಡನೆ ಶಾಪವಶದಿಂದ ದ್ರವಿಡದೇಶದಲ್ಲಿ ತಾನು ನಂಬಿಯಣ್ಣನೆಂಬ ಹೆಸರಿನಿಂದ ಪ್ರಸಿದ್ಧನಾಗಿ, ಪರವೆ, ಸಂಗಿಲಿ ಎಂಬ ಹೆಸರಾಂತ ಅವರೊಡನೆ ವಿವಾಹಿತನಾಗಿ ಶಿವಮಹಿಮೆಯನ್ನು ಹಬ್ಬಿಸಿ ಕಾಲಕ್ರಮದಲ್ಲಿ ಪತ್ನಿಯರೊಂದಿಗೆ ಕೈಲಾಸವನ್ನು ಸೇರಿದ ವಿಷಯವು ವರ್ಣಿತವಾಗಿರುವುದು.

ಏಕಲಿಂಗ ನಿಷ್ಠಾಪರನಾದ ಚೋಕದೇವಪೊಂಗನ ತನುಜ ಚಿಕ್ಕವೀರಣಾಯ್ಯನ ಆಜ್ಞೆಯಿಂದಲೂ, ಗುಂಡಬೊಮ್ಮ, ಚೋಳನಾರಾಯಣ, ಚೋಳರಭೀಮ ಎಂಬ ಬಿರುದುಳ್ಳ ಡೆಂಕಣಿಕೋಟೆಗಧಿಪತಿಯಾದ ಪರಮಮಾಹೇಶ್ವರ ವೈಶ್ಯರಕುಲತಿಲಕನಾದ ಕಾಮನೃಪನಂದನನಾದ ಸಿರುಮಯಾಂಬಾಗರ್ಭದುಗ್ಧಾಬ್ಧಿಪಾರಿಜಾತನಾದ ಕವಿಕಮಲಭಾಸ್ಕರನಾದ ತಿಪ್ಪಭೂಪಾಲನ ಹೇಳಿಕೆಯಿಂದಲೂ ಈ ಕಾವ್ಯವನ್ನು ರಚಿಸಿದುದಾಗಿ ಕವಿ ಹೇಳಿ ಪೂರ್ವಕವಿಗಳಲ್ಲಿ ಭಾರವಿ, ಬಾಣ, ಉದ್ಭಟ, ಕಾಳಿದಾಸ, ಮಲುಹಣ, ಭೋಜ ಈ ಸಂಸ್ಕೃತಕವಿಗಳನ್ನೂ, ಹರಿಹರ, ಸೋಮನಾಥ ಈ ಕರ್ಣಾಟಕ ಕವಿಗಳನ್ನೂ ಸ್ಮರಿಸಿದ್ದಾನೆ.

ಕವಿ ಚತುರ್ಮುಖ ಅಥವಾ ಬೊಮ್ಮರಸನೆಂಬುವನು. ಇವನ ವಿಷಯವಾಗಿ ಈ ಪುಸ್ತಕದಿಂದ ಇನ್ನೇನೂ ಹೆಚ್ಚು ತಿಳಿದು ಬರುವುದಿಲ್ಲ. ಪುಸ್ತಕದ ಕೊನೆಯಲ್ಲಿ ಓಲೆಗಳು ತುಂಡಾಗಿರುವುದರಿಂದ ಕವಿವಿಷಯವೇನಾದರೂ ಅಂತ್ಯದಲ್ಲಿ ಇರಬಹುದೇ ಎಂದು ನೋಡಿ ತಿಳಿಯುವುದಕ್ಕೆ ಸಾಧ್ಯವಿಲ್ಲ. ಮುಂದಣ ೧೧೦೩ ನೆಯ ನಂಬರಿನ ಪ್ರತಿಯಲ್ಲಿ ಈ ಕವಿಯ ವಿಷಯಗಳನ್ನು ತಿಳಿಸುವಂತಿರುವ ಪದ್ಯವೊಂದಿದೆ. ಆದರೆ ಅದು ಪ್ರಕ್ಷಿಪ್ತವೆಂದು ಭಾವಿಸಲಾಗಿದೆ. ಇದರ ವಿವರಕ್ಕೂ ಮಿಕ್ಕ ವಿಷಯಗಳಿಗೂ ಆ ನಂಬರನ್ನು ನೋಡುವುದು.

No. 1102. ಸೌಂದರಪುರಾಣ by ಚತುರ್ಮುಖ alias ಬೊಮ್ಮರಸ.

SOUNDARAPURĀṆA BY CATURMUKHA *alias* BOMMARASA.

Substance, paper. Size, 10-7/16 × 9⅜ inches. Pages, 261. Lines, 20 on a page Extent, 4,500 granthas. Character, Kannada. Condition, good. Appearance, new. Mode of writing, not good.

Restored in 1920–21 from the Ms. described above (No. 1101).

Complete.

(ವಿ.ವಿ.)—

ಸಮಗ್ರ. ಕಾಗದದ ಪ್ರತಿ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯು. ಗ್ರಂಥಪಾತವಿದೆ.

No. 1103. ಸೌಂದರಪುರಾಣ by ಚತುರ್ಮುಖ alias ಬೊಮ್ಮರಸ.

SOUNDARAPURĀṆA BY CATURMUKHA *alias* BOMMARASA.

Substance, Śritāla. Size, 14⅛ × 2 inches. Pages, 73. Lines, 11 to 13 on a page. Extent, 2,500 granthas. Character, Kannada. Condition, very injured. Appearance, old. Mode of writing, good.

Begins on fol. 1*a* of the Ms. described under No. 872 *ante*.

Incomplete. Contains from the 43rd stanza of the 7th sandhi to the end. Some leaves are wanting in the middle here and there.

Same work as that described under the previous No. 1101 with some difference at the end. For this and other particulars regarding the author see extracts given below.

Date of transcription :—Monday, the first day of the bright fortnight of the lunar month Kārtika in the year Kīlaka Śaka year 1590 corresponding to 1668 A.D.

Name of the scribe :—*Vīrayya*, son of Ācāri *Mallaṇṇa* of *Kereyūru.*

(ವಿ.ವಿ.)—

ಅಸಮಗ್ರ. ಏಳನೆಯ ಸಂಧಿಯ ೪೩ ನೆಯ ಪದ್ಯದಿಂದ ಕೊನೆಯ ವರೆಗೂ (೧೯ ನೆಯ ಸಂಧಿಯ ಅಂತ್ಯದ ವರೆಗೂ) ಇದೆ. ಆದರೆ ಅಲ್ಲಲ್ಲಿ ಮಧ್ಯದಲ್ಲಿ ಕೆಲವು ಓಲೆಗಳು ಹೋಗಿವೆ. ಪತ್ರಗಳು ಬಹಳ ಜೀರ್ಣವಾಗಿರುವುದರಿಂದ ಪತ್ರಸಂಖ್ಯೆಯೂ ತಿಳಿಯುವಂತಿಲ್ಲ. ಅತ್ಯಂತ ಶಿಥಿಲ ವಾದ ಪ್ರತಿ. ಲಿಪಿ ಚೆನ್ನಾಗಿದೆ. ಪುಸ್ತಕದ ಕೊನೆಯಲ್ಲಿ "ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿ ವಾಹನ ಶಕ ೧೫೯೦ ಸಂದ ಕೀಲಕಸಂವತ್ಸರದ ಕಾರ್ತಿಕಶುದ್ಧ ೧ ವು ಚಂದ್ರವಾರದಲ್ಲಿ ಕೆರೆ ಯೂರ ಆಚಾರಿ ಮಲ್ಲಣ್ಣನ ಮಗ ವೀರಯ್ಯನು ಸೌಂದರಪುರಾಣದ ಮೂಲಪ್ರತಿ ಸಮಾನವಾಗಿ ಬರೆದನು. ತಪ್ಪೇನಾನುಮುಳ್ಳೊಡಂ ತಿದ್ದುವುದು ಶಾಬ್ದಿಕರೊಲ್ಮೆಯಿಂ ಶಿವನವಭಕ್ತರುತ್ಸವ ದೊಳು" ಎಂದಿದೆ.

ಹಿಂದಣ ೧೧೦೧ ನೆಯ ಪ್ರತಿಯೊಡನೆ ಇದನ್ನು ತಾಳೆ ನೋಡಿದರೆ ಕೆಲವು ಪಾಠಭೇದ ಗಳನ್ನು ಹೊರತು ಕೊನೆಯಸಂಧಿಯ ೨೯ ನೆಯ ಪದ್ಯದ ವರೆಗೆ ಎರಡು ಪ್ರತಿಗಳೂ ಒಂದೇ ತೆರನಾಗಿವೆ. ಅನಂತರ ಆ ಪ್ರತಿಯಲ್ಲಿ ೩೫ ನೆಯ ಪದ್ಯದ ವರೆಗೆ ಗ್ರಂಥಪಾತವಿದೆ. ಪ್ರಸ: ೩೬, ೫೫ ಪದ್ಯಗಳವೆ. ೫೫ ನೆಯದೇ ಕೊನೆಯ ಪದ್ಯ. ಆದರೆ ಈ ಪ್ರತಿಯಲ್ಲಿ ೨೯ ನೆಯ ಪದ್ಯದಿಂದ ನಂತರ ಕ್ರಮವಾಗಿ ಅದರಲ್ಲಿಲ್ಲದ ಐದು ಪದ್ಯಗಳನ್ನು ಬರೆದು, ಆ ೫೫ ನೆಯ ಪದ್ಯವನ್ನು ೩೪ ನೆಯದಾಗಿ ಪರಿಗಣಿಸಿ, ಮುಂದಕ್ಕೆ ಬೇರೆ ಐದು ಪದ್ಯಗಳಲ್ಲಿ ಗ್ರಂಥವು ಮುಗಿಸಲ್ಪಟ್ಟಿದೆ. ಕೊನೆಯ ಆ ಐದು ಪದ್ಯಗಳನ್ನು ಉದ್ಧರಿಸಿ ಕೆಳಗೆ ಬರೆಯಲಾಗಿದೆ.

ಸೌಂದರ ಪುರಾಣ ವಿಕೃತಿಯನವನಿಯೊಳದಂ ।
ಚಂದವಂ ಪಡೆವಂತೆ ಸಂಪೂರ್ಣವಾಗಿರಚಿ ।
ಸೆಂದು ಚೊಕದೇವಪಯ್ಯನ ಗರ್ಭಜಾತ ಚಿಕವೀರಣಾರ್ಯನು ಬೆಸಸಲು ।
ಪೊಂದೇಗುಲಕ್ಕನರ್ಘ್ಯ ರತ್ನಕಳಶವಂ । (?)
ತಂದು ಸೇರಿಸುವಂತೆ ನಿಱತೆವಡೆದೊಪ್ಪಿ ಪೇ ।
ಬ್ದಿಂ ದಿವ್ಯಶಿವಕವೀಂದ್ರರ ಭೃತ್ಯನೆನಿಪ ಕರ್ಣಾಟಕವಿ ಬೊಮ್ಮರಸನು ॥ ೩೫ ॥

ವ್ಯಾಕರಣ ಶಬ್ದೋಪಕರಣ ರಸವಮೃತಾಬ್ಧಿ ।
ಪೇಕ ವಿಮಳಾರ್ಥವಕ್ಷತೆ ಭಾವಗಂಧಗುಣ—।
ವೇ ಕುಸುಮ ಪೂಜೆ ಪದಬಂಧವೇ ಧೂಪ ಪೊಸದೇಸಾಳದೇಳ್ಗೆ ದೀಪ ॥

ಈ ಕಾವ್ಯ ದಿವ್ಯಾನ್ನ ನೈವೇದ್ಯರಸಿಕಚಿ-।
ತ್ತಾಕರ್ಷಣೋತ್ಸವವೆ ತಾಂಬೂಲವಾಗೆ ಜಗ-।
ದೇಕಪತಿ ನೀಲಕಂಠನ ಭಜಿಸಿದಂತಿರ್ಪ ನರನದೇಂಕೃತ ಪುಣ್ಯನೋ ॥ ೩೬ ॥

ಸುರಭಿ ಕೆಱೆತೆಯಲಿ ಸುಭಿಕ್ಷಂಗಳಾಗಲಿ ನಾಡೆ ।
ಪರಮಶಿವಧರ್ಮವೆಂದೆಂಬಂತೆ ಪರ್ಬಿಕುಡಿ ।
ವರಿದು ಪರಕಲಿಸಲಿ ಸಮಸ್ತ ಶಿವಶರಣರಿಷ್ಟಾರ್ಥ ಸಿದ್ಧಿಗಳಾಗಲಿ ॥
ಧರಣಿಯುಳ್ಳನ್ನೆಗಂ ಚಂದ್ರಸೂರ್ಯರು ಪರಿ-।
ಸ್ಫುರಿಸುತಿರ್ಪನ್ನೆವರ ಸೌಂದರಪುರಾಣವಿದು ।
ಪರಕೃತಿ ವಿರಾಜಿಸುತ್ತಿರಲು ಶಿವತತ್ವ ಶುಭಮಸ್ತು ಮಾಂಗಲ್ಯಮಸ್ತು ॥ ೩೭ ॥

ಪರಶಿವನ ಘನಗರ್ಭ ಕುಹರಪರಮೇಷ್ಠಿಪಂ ।
ಕೆರುಹನಯನರ್ಗೆ ರುದ್ರೇಶ್ವರ ಸದಾಶಿವಾ ।
ದ್ಯರಿಗಾಶ್ರಯಸ್ಥಾನ ವಾದುದೆಂತಂತೆ ನಾನಾಶಿವ ಪುರಾಣಕಥೆಗೆ ॥
ನಿರುತವಾಶ್ರಯವಾಯ್ತು <u>ಸೌಂದರಪುರಾಣವೀ</u> ।
ಪರಮ ಪ್ರಸನ್ನಕೃತಿಗೇಳ್ದರಿಗೆ ನೀಲಕಂ-।
ಧರನೊಲಿದು ಧರ್ಮಾರ್ಥ ಕಾಮ್ಯಮೋಕ್ಷಂಗಳಂ ಕರುಣಿಸುವನಿದು
ನಿಶ್ಚಯ ॥ ೩೮ ॥

ಗುರು <u>ಚೆನ್ನಮಲ್ಲಿಕಾರ್ಜುನ</u> ಪಾದಪದ್ಮಮಧು-।
ಕರನು <u>ಕಾಶ್ಯಪಗೋತ್ರ</u> ಜಾತನು ಯಜುರ್ವೇದ ।
ಮಾಯಣಾತ್ಮೋದ್ಭವನು ಶೈವಾಗಮಜ್ಞಾನ ಸುಕಲಾಭಿಜ್ಞನು ॥
ಪರಮ <u>ಬೋಧಾಯನ</u> ಮಹಾಸೂತ್ರಶೋಭಿತನು ।
ಸರಸಗೀರ್ವಾಣ ಭಾಷಾಯುಕ್ತ ಕರ್ಣಾಟ-।
ವರಚಕ್ರವರ್ತಿ . . . . . <u>ಬೊಮ್ಮರಸ</u> ಪೇಳದಕೃತಿ ॥ ೩೯ ॥

Colophon :

ಅಂತು ಸಂಧಿ ೧೯ ಕ್ಕೆ ಪದನು ೧೧೦೬ ಕ್ಕಂ ಮಂಗಳ ಮಹಾಶ್ರೀ.

ಮೇಲಿನ ಐದು ಪದ್ಯಗಳಲ್ಲಿ ಎರಡನೆಯ ಪದ್ಯವು ಹಿಂದಣ ಪ್ರತಿಯಲ್ಲಿ ಪ್ರಥಮಸಂಧಿಯ ೩೪ ನೆಯ ಪದ್ಯವಾಗಿ ಕಾಣುತ್ತದೆ. ೫ ನೆಯದು ಹಿಂದೆ ೧೦೪೫ ನೆಯ ನಂಬರಿನಲ್ಲಿ ವರ್ಣಿಸಲ್ಪಟ್ಟ <u>ರೇವಣಸಿದ್ಧೇಶ್ವರ ಪುರಾಣದಲ್ಲಿ</u> ಚೆನ್ನಮಲ್ಲಿಕಾರ್ಜುನ ಎಂಬುದರ ಬದಲಾಗಿ "ಶಾಂತಮಲ್ಲಿಕಾರ್ಜುನ" ಎಂಬ ಪಾಠಭೇದದೊಡನೆ ಮೊದಲನೆಯ ಸಂಧಿಯ ೩೪ ನೆಯ ಪದ್ಯವಾಗಿದೆ. ನೀಲಕಂಠನ ಅಂಕಿತವಿರುವ ಈ ಗ್ರಂಥದಲ್ಲಿ ಮಲ್ಲಿಕಾರ್ಜುನನ ಅಥವಾ ಮಲ್ಲೇಶನ ಅಂಕಿತವು ಇತರ ಕಡೆಗಳಲ್ಲಿ ಕಾಣದಿರುವುದರಿಂದಲೂ, ರೇವಣಸಿದ್ಧೇಶ್ವರಪುರಾಣವು ಆ ಅಂಕಿತವುಳ್ಳುದಾದುದರಿಂದಲೂ, ಈ ಪದ್ಯವು ರೇವಣಸಿದ್ಧೇಶ್ವರ ಪುರಾಣಕ್ಕೆ ಮಾತ್ರವೇ ಸಂಬಂಧಿಸಿದುದೆಂದು ಹೇಳುವುದು ಉಚಿತವಾಗಿ ಕಾಣುತ್ತದೆ. ಆದ್ದರಿಂದ ಈ ಪದ್ಯವು ಇಲ್ಲಿ ಪ್ರಕ್ಷಿಪ್ತವಾಗಿರಬಹುದು.

ಕವಿಚರಿತ್ರಕಾರರು ಈ ಗ್ರಂಥಕರ್ತನನ್ನು ಬೊಮ್ಮರಸ (1450 A.D.) ನೆಂದೂ, ರೇವಣ ಸಿದ್ಧೇಶ್ವರ ಪುರಾಣದ ಕರ್ತನನ್ನು ಚತುರ್ಮುಖ ಬೊಮ್ಮರಸ (1500 A.D.) ನೆಂದೂ ನಿರ್ದೇಶಿಸಿ ರೇವಣಸಿದ್ಧೇಶ್ವರ ಪುರಾಣದ ವಿಷಯವಾಗಿ ಬರೆಯುವ ಸಂದರ್ಭದಲ್ಲಿ " ಯದ್ಯಪಿ ಈ ಗ್ರಂಥಕ್ಕೂ ಸೌಂದರ ಪುರಾಣಕ್ಕೂ ಆದಿ ಭಾಗದಲ್ಲಿ ಬಹಳಮಟ್ಟಿಗೆ ಹೋಲಿಕೆಯಿದ್ದರೂ ಗುರು, ಅಂಕಿತ ಈ ಅಂಶಗಳಲ್ಲಿ ವ್ಯತ್ಯಾಸವಿರುವುದರಿಂದ ಈ ಬೊಮ್ಮರಸನು ಆ ಬೊಮ್ಮರಸನಿಗಿಂತ ಬೇರೆಯವನೆಂದು ತಿಳಿಯಬೇಕಾಗಿದೆ. ಈ ಹೋಲಿಕೆಯನ್ನು ನೋಡಿದರೆ ಇವರಿಬ್ಬರೂ ಸಮೀಪಸಂಬಂಧಿಗಳಾಗಿ ಇದ್ದಿರಬಹುದೆಂದು ತೋರುತ್ತದೆ. ಈ ಕವಿ ಆ ಕವಿಯ ಮೊಮ್ಮಗನಾಗಿದ್ದರೂ ಇರಬಹುದು " ಎಂದು ಬರೆದಿರುವರು. ಆದರೆ ಹಿಂದಣ ೧೧೦೩ ನೆಯ ನಂಬರಿನಲ್ಲಿ ಮತ್ತು ಈ ನಂಬರಿನಲ್ಲಿ ವರ್ಣಿತವಾದ ಸೌಂದರಪುರಾಣದ ಎರಡು ಪ್ರತಿಗಳಲ್ಲಿಯೂ ಕವಿಯ ಹೆಸರು ಒಂದೆಡೆಯಲ್ಲಿ ಚತುರ್ಮುಖನೆಂದೂ, ಇನ್ನೊಂದೆಡೆಯಲ್ಲಿ ಬೊಮ್ಮರಸನೆಂದೂ ನಿರ್ದೇಶಿಸಲ್ಪಟ್ಟಿದೆ.

No. 1104. ಸೌಂದರಪುರಾಣ by ಚತುರ್ಮುಖ alias ಬೊಮ್ಮರಸ.

SOUNDARAPURĀṆA BY CATURMUKHA *alias* BOMMARASA.

Substance, palm-leaf. Size, 14 5/16 × 1 7/16 inches. Pages, 116. Lines, 7–8 on a page. Extent, 1,870 granthas. Character, Kannada. Condition, very injured. Appearance, old. Mode of writing, good.

Begins on fol. 1*a* of the Ms. described under No. 456 *ante*.

Contains the sandhis 7–16 complete and 17th incomplete.

Same work as that described above.

(ವಿ-ವಿ)—

ಅಸಮಗ್ರ. ಸಂಧಿಗಳು ೭—೧೬ ಪೂರ್ಣವಾಗಿಯೂ * ಮತ್ತು ೧೭ ನೆಯದು ಅಪೂರ್ಣವಾಗಿಯೂ ಇವೆ. ಆರನೆಯದರಲ್ಲಿ ೩೩ ನೆಯ ಪದ್ಯದಿಂದಿದೆ. ಇದರಲ್ಲಿ ಈಗ ಇರುವ ಮೊದಲ ಓಲೆಯ ಸಂಖ್ಯೆ ೨೯. ಇಲ್ಲಿ ಇದಕ್ಕೆ ೧ ನೆಯ ಸಂಖ್ಯೆಯನ್ನು ಕೊಟ್ಟು ಓಲೆಗಳನ್ನು ಎಣಿಸಲಾಗಿದೆ. ಪುಸ್ತಕದಲ್ಲಿ ಬರಹಗಾರನೇ ಕೊಟ್ಟಿರುವ ಸಂಖ್ಯೆಯನ್ನನುಸರಿಸಿ ೩೪—೪೦. ೭೫,೮೪ ಈ ಓಲೆಗಳಿಲ್ಲ. ಕೊನೆಯ ಓಲೆಯ ಸಂಖ್ಯೆ ೯೫. ಇದಕ್ಕೆ ಇಲ್ಲಿ ಕೊಟ್ಟಿರುವ ಸಂಖ್ಯೆ ೫೮. ಮುಂದಕ್ಕೆ ಹಂಪೆಯರಗಳೆಯೆಂಬ ಪುಸ್ತಕವು ಆರಂಭವಾಗುತ್ತದೆ. ಇದು ಆರಂಭವಾಗುವ ಓಲೆಯ ಸಂಖ್ಯೆ ೭೯. ಇದಕ್ಕೆ ಇಲ್ಲಿ ಕೊಟ್ಟಿರುವ ಸಂಖ್ಯೆ ೫೯. ಹೀಗಿದೆ. ಇದನ್ನು ನೋಡಿದರೆ ಈ ಪುಸ್ತಕಗಳನ್ನು ಸಂಗ್ರಹಿಸಿದವನು ತನಗೆ ಸಿಕ್ಕಿದಹಾಗೆ ಪುಸ್ತಕ ಮತ್ತು ಪುಸ್ತಕ ಭಾಗಗಳನ್ನು ಒಂದೇಕಡೆ ಜೋಡಿಸಿರುವಂತೆ ತೋರುತ್ತದೆ. ಅಥವಾ ಪುಸ್ತಕರೂಪವು ಮೊಟ್ಟಮೊದಲು ಸರಿಯಾಗಿದ್ದು ಬರಬರುತ್ತ ಅನೇಕ ಕೈಗಳನ್ನುದಾಟಿ ಈ ರೀತಿಗೆ ಬಂದಿದ್ದರೂ ಇರಬಹುದು. ಹೇಗಾದರೂ ಇರಲಿ. ಸೌಕರ್ಯಕ್ಕಾಗಿ ಇದರಲ್ಲಿ ಓಲೆಗಳಿಗೆ ಬೇರೆ ಹೆಸರು ಕೊಡಲಾಗಿದೆ.

ಅತ್ಯಂತ ಶಿಥಿಲವಾದ ಪ್ರತಿ. ಓಲೆಗಳು ಕೆಲವು ಮುರಿದಿವೆ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಅವಾವುವೆಂಬುದನ್ನು ಹಿಂದಣ ೪೫೬ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

* ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1105. ಸೌಂದರಪುರಾಣ by ಚತುರ್ಮುಖ alias ಬೊಮ್ಮರಸ.

SOUNDARAPURĀṆA BY CATURMUKHA *alias* BOMMARASA.

Substance, paper. Size, 10 9/16 × 9½ inches. Pages, 101. Lines, 20 on a page. Extent, 1,780 granthas. Character, Kannada. Condition, fair. Appearance, new.

Restored in 1919–20 from the Ms. described under No. 1104 *ante*.

Begins on page 1 of the Ms. described under No. 457 *ante*.

Contains the sandhis 7 and 10–16 complete 17th incomplete.

(ವಿ.ವಿ.)—

ಅಸಮಗ್ರ. ಇದು ಹಿಂದಣ ೧೧೦೪ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಇದರಲ್ಲಿ ಪುಟಗಳು ೨೫—೪೩, ೨, ೧, ೩—೨೪, ೪೪—೧೦೧ ಈ ಕ್ರಮದಲ್ಲಿವೆ. ಸಂಧಿಗಳು ೭ ರಿಂದ ೧೬ ಪೂರ್ಣವಾಗಿವೆ ೧೭ ನೆಯದರಲ್ಲಿ ೪೬ ಪದ್ಯಗಳವೆ. ಇದರ ಮಾತೃಕೆಯಲ್ಲಿರುವ ೬ ನೆಯ ಸಂಧಿಯ ಭಾಗವನ್ನು ಬರೆಹಗಾರನು ಇದರಲ್ಲಿ ಬರೆಯದೆ ಬಿಟ್ಟಿದ್ದಾನೆ. ಅಲ್ಲದೆ ಗ್ರಂಥಭಾಗವನ್ನು ಅಸ್ತವ್ಯಸ್ತವಾಗಿ ಬರೆದು ಪುಟ ಸಂಖ್ಯೆಯನ್ನು ಮೊದಲಿಂದಾರಂಭಿಸಿ ಗುರುತಿಸಿರುವುದರಿಂದ ಸಂಶಯಕ್ಕೆ ತುಂಬಾ ಆಸ್ಪದವಿದೆ. ಅಸ್ತವ್ಯಸ್ತವಾಗಿ ಬರೆದಿರುವ ಗ್ರಂಥಭಾಗದ ವಿವರ :— ಸಂಧಿ ೧೦, ೧೧, ೭ ರಲ್ಲಿ ಪದ್ಯಗಳು ೧೦ ರಿಂದ ಪೂರ್ಣ. ೮ ರಲ್ಲಿ ೧—೧೦ ಪದ್ಯಗಳು, ೯ ರಲ್ಲಿ ೧೨ ನೆಯ ಪದ್ಯದಿಂದ ಪೂರ್ಣ, ಸಂಧಿ ೧೨—೧೬ ಪೂರ್ಣ, ೧೭ ರಲ್ಲಿ ಪದ್ಯಗಳು ೧-೪೬ ಈ ಕ್ರಮದಲ್ಲಿವೆ. ೮ ನೆಯ ಸಂಧಿಯ ೧೧ ನೆಯ ಪದ್ಯದಿಂದ ೯ ರ ೧೧ ನೆಯ ಪದ್ಯದವರೆಗಿರುವ ಭಾಗವಿಲ್ಲ. ಗ್ರಂಥ ಪಾತವು ಇನ್ನೂ ಅಲ್ಲಲ್ಲಿದೆ. ಪೂರ್ಣಪ್ರತಿಗೂ ಇದಕ್ಕೂ ಸಂಧಿಸಂಖ್ಯೆಯು ಸಮನಾಗಿಲ್ಲ. ಅಲ್ಲದೆ ಸಂಧಿಗಳಲ್ಲಿ ಪದ್ಯಸಂಖ್ಯೆಯೂ ವ್ಯತ್ಯಾಸವಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳವೆ. ಅವಾವುವೆಂಬುದನ್ನು ಹಿಂದಣ ೪೫೭ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

No. 1106. ಸೌಂದರಪುರಾಣ by ಚತುರ್ಮುಖ alias ಬೊಮ್ಮರಸ.

SOUNDARAPURĀṆA BY CATURMUKHA *alias* BOMMARASA.

Substance, Sritala. Size, 9 5/16 × 1⅞ inches. Pages, 12. Lines, 7 on a page. Extent, 90 granthas. Character, Kannada. Condition, very injured. Appearance, old. Mode of writing, good.

Begins on fol. 90*a* of the Ms. described under No. 890 *ante*.

Incomplete.

Contains 27 stanzas of the 7th sandhi.

Same work as that described above.

(ವಿ.ವಿ.)—

ಅಸಮಗ್ರ. ಪರವೆನಾಚ್ಚಿಯ ಶೃಂಗಾರ ವಿಷಯವನ್ನೊಳಗೊಂಡ ೭ ನೆಯ ಸಂಧಿಯಲ್ಲಿ ೨೭ ಪದ್ಯಗಳವೆ. ಇದು ಅತ್ಯಂತ ಶಿಥಿಲವಾದಪ್ರತಿ. ಇದರೊಡನೆ ಇನ್ನೂ ಕೆಲವು

ಪುಸ್ತಕಗಳವೆ. ಅವಾವುವೆಂಬುದನ್ನು ಹಿಂದಣ ೮೯೦ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1107. ಸೌಂದರಪುರಾಣ by ಚತುರ್ಮುಖ alias ಬೊಮ್ಮರಸ-
SOUNDARAPURĀṆA BY CATURMUKHA *alias* BOMMARASA.

Substance, paper. Size, 10 7/16 × 9 9/16 inches. Pages, 11. Lines, 20 on a page. Extent, 90 granthas. Character, Kannada. Condition, fair. Appearance, new.

Restored in 1932–33 from the Ms. described above (No. 1106).

Begins on page 140 of the Ms. described under No. 891 *ante*. The continuation of the work after page 146 is on page 124.

Incomplete.

(ವಿ-ವಿ·)—

ಅಸಮಗ್ರ. ಇದು ಇದರ ಹಿಂದಣ ೧೧೦೬ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೃತಿಯು. ಪರವೆನಾಚ್ಚಿಯಾರ ಶೃಂಗಾರ ವಿಷಯವನೊಳಗೊಂಡ ಸಂಧಿಯಲ್ಲಿ ಮೊದಲಿಂದ ೨೭ ಪದ್ಯಗಳವೆ. ೨೮ ನೆಯ ಪದ್ಯದ ಮೊದಲ ೧ ೧/೨ ಪಾದವಿದೆ. ಈಭಾಗವು ೧೪೦-೧೪೬, ೧೨೪-೧೨೭ ಈ ಪುಟಗಳಲ್ಲಿದೆ. ೧೪೦ ನೆಯ ಪುಟದಿಂದ ಆರಂಭವಾಗುತ್ತದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳವೆ. ಅವಾವುವೆಂಬುದನ್ನು ಹಿಂದಣ 891 ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1108. ಹರಿಲೀಲೆ by ವರದಪ್ಪ-
HARILĪLE BY VARADAPPA.

Substance, palm-leaf. Size, 12⅜ × 1¼ inches. Pages, 40. Lines, 4–5 on a page. Extent, 325 granthas. Character, Kannada. Condition, very injured. Appearance, old. Mode of writing, good.

Begins on fol. 29*a* of the Ms. described under No. 829 *ante*.

Incomplete.

Contains up to the 29th stanza of the 3rd sandhi.

This is a poem in caupadi metre and it describes the story of Srī Kṛṣṇa. The author, Varadappa lived in *Timmināyakana Haḷḷi* of *Nāgamangala*. He belonged to the Śrivaiṣṇava religion.

Beginning :

ಮಂಗಳಾತ್ಮಕ ಚೆನ್ನಕೇಶವರಾಯ ನರ್ಥಿಯಲಿ—ನಾಗ ।
ಮಂಗಲದ ರಾಜ್ಯದ ತಿಮ್ಮನಾಯಕಹಳ್ಳಿಯಲಿ ॥

ರಂಗನ ಸೇವಕ ರಚಿಸಿದ ಸ್ಥಿ . . . . ಲಿ ।
ಶೃಂಗಾರ . . ರಿಯು ಪ್ರಸನ್ನವೆಂಕಟೇಶ ನಂಘ್ರಿಗೆರಗುವೆ ಭಕ್ತಿಯಲಿ ॥ ೧ ॥

ವರಮುನಿಯತಿರಾಜ ನವ್ವಾಳ್ವರೊಡಗೂಡಿ ।
ಹರಿಸೇ . . . . . . ಯು ಮಾಡಿ ।
ಧರೆಯೊಳು ಕೀರ್ತಿಯು ಪಡೆಯಲು ಮುಕ್ತಿಯಬೇಡಿ ।
ವರದಪ್ಪಕವಿ ಯೆಂಬೋರು ನಿರ್ಮಿಸಿದರೀ ಕೃತಿಗಳ, ನೆಱೆಸುಗುಣರು ಸರಿ-
ನೋಡಿ ॥ ೨ ॥

. . . . ನಾ ಶಾಸ್ತ್ರ ಕಾವ್ಯವ ಪಠಿಸಿದವನಲ್ಲ ।
ಎನ್ನಜಾಣ್ಮೆಯುಗಣ ಲಕ್ಷಣಭೇದಂಗಳಲ್ಲ ।
ಚೆನ್ನಕೇಶವ ಜಿಹ್ವಾಗ್ರಕೆ ಕೊಟ್ಟ ನೀ ಸೊಲ್ಲ ಪ್ರ- ।
ಸನ್ನ ವೆಂಕಟೇ . . . . ದ ಹೇಳ್ವೆನು ಎಲ್ಲ ಲಾಲಿಸಿ ಜನರೆಲ್ಲ ॥ ೩ ॥

ನರರು ಮಾಡಿದ ಶೂರತ್ವಗಳನು ತಂದ ಕೃತಿಯು ।
ವಿರಚಿಸಿ ಹೇಳ್ದ ಕಾವ್ಯಗಳಲ್ಲ ಕೃಷ್ಣ ಚರಿತೆಯು ॥
ಹರಿ । . . . . ರಂಜಿಸುವ ಭಣಿತಿಯು ।
ಪರಮವೇದದ ಸಾರ ಪ್ರೇಮದಿ ಲಾಲಿಸುವರಿಗೀವ ಹರಿಸದ್ಗತಿಯು ॥ ೪ ॥

End :

ಕಡು ಚೆ . . . . . . ರಜಕನ ಬೇಡಿ ।
ಕೊಡದೆಕ್ಕ ಸಕ್ಕದಿ ನುಡಿಯಲವನ ಹತಮಾಡಿ ॥
ತುಡುಕಿದ ರಕ್ಕಸ ಪಡೆಯನು ಸದೆದೀಡಾಡಿ ।
ನಡೆ . . . . ದಿ ಹೊಕ್ಕರು ನಗರವ ಘುಡುಘುಡಿಸುತ ಕೃಷ್ಣರ
ಗೂಡಿ ॥ ೨೯ ॥

ದೇವ ಶಿಖಾಮಣಿ ಮಥುರೆಗೆ ಬರಲಾಗಿ ಹರಿಯು ।
ತಾವರೆಯಡಿ . . . . ॥

(ವಿ-ವಿ.)—

ಅಸಮಗ್ರ. ೧ ಮತ್ತು ೨ ನೆಯ ಸಂಧಿಗಳು ಪೂರ್ಣವಾಗಿಯೂ, ಮೂರನೆಯದರಲ್ಲಿ ೨೯ಪದ್ಯಗಳೂ ಇವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಓಲೆಗಳೆಲ್ಲ ಒಂದು ಬದಿಯಲ್ಲಿ ಮುರಿದುಹೋಗಿವೆ. ಇದರೊಡನೆ ಮೋಹನತರಂಗಿಣಿ, ಶ್ರೀವೈಷ್ಣವ ವಿಷಯ ಮತ್ತು ೬೦ ಸಂವತ್ಸರಗಳ ಹೆಸರುಗಳು ಇವೆ.

ಇದು ಚೌಪದಿಯಲ್ಲಿ ಬರೆದಿದೆ. ಇದರಲ್ಲಿ ಎಷ್ಟು ಸಂಧಿಗಳವೆಯೋ ತಿಳಿಯದು. ಕೃಷ್ಣ ಚರಿತೆಯು ಈ ಗ್ರಂಥಕ್ಕೆ ವಿಷಯವಾದುದು. ಇದನ್ನು ರಚಿಸಿದವನು ವರದಪ್ಪ ನೆಂಬವನು. ಶ್ರೀ ವೈಷ್ಣವಮತದವನು. ಈತನ ಊರು ನಾಗಮಂಗಲ ತಾಲೂಕಿಗೆ ಸೇರಿದ ತಿಮ್ಮನಾಯಕನ ಹಳ್ಳಿಯು. ಚೆನ್ನಕೇಶವ ಪ್ರಸನ್ನ ವೆಂಕಟೇಶನು ಈತನ ಸ್ವಾಮಿಯು. ಉಳಿದ ವಿಷಯ ಗಳನ್ನು ಉದ್ಧೃತಭಾಗಗಳಿಂದ ತಿಳಿಯುವುದು.

No. 1109. ಹರಿವಿಲಾಸ by ತಿಮ್ಮ.

HARIVILĀSA BY TIMMA.

Substance, palm-leaf. Size, 20 × $1\frac{3}{8}$ inches. Pages, 4. Lines, 5 on a page. Extent, 55 granthas. Character, Kannada. Condition, very much injured. Appearance, old. Mode of writing, fair.

Begins on fol. 147*a* of the Ms. described under No. 55 *ante*.

Incomplete. Contain stanzas 1–36 in the first sandhi only.

An elegent poem in Sāngatya metre. This work is based on the life of Balarāma and Śrīkṛṣṇa as described in the 10th skandha of Bhāgavata.

Beginning :

ಸಾಂಗತ್ಯ॥ ಶ್ರೀವನಿತಾನಯನೋತ್ಪಲಹಿಮಕರ ।
ದೇವನರೋರಗವಂದ್ಯ ॥
ಭಾವಜಪಿತಭವಮನುಮುನಿವಿನುತ ಕೃ- ।
ಷ್ಣಾ ವಾರ್ಧಿ ಹರಿಶರಣೆನಗೆ ॥ ೧ ॥

ಗಂಗೆಯನುತ್ತ ಮಾಂಗದೊ . . . । ।
ಗಂಗೆ . . . . . , ರ್ಥವನಿತ್ತು ॥
ಅಂಗಜಹರನೆಂದೆನಿಪ ಘನಮಹಿಮೆಯ ।
ಅಂಗಸರ್ವೇಶನೆ ಶರಣಾ ॥ ೨ ॥

* * *

ಇರುವ ಜಂಗಮಕಲ್ಪತರುವ ಕಾರುಣ್ಯದ ।
ತರುವ ಪರಬ್ರಹ್ಮದಿರವ ॥
ನರಸಿಂಹ ಭಾರತಿರಾಯನ ಪದಯುಗ ।
ಸರಸಿಜಕವನತನಪ್ಪೆ ॥ ೬ ॥

* * *

ವರರುಚಿ ಭವಭೂತಿ ಬಾಣ ಮಯೂರ ಶ್ರೀ- ।
ಹರುಷ ಭಾಗುರಿ ಕಾಳಿದಾಸ ॥
ವರರುದ್ರಭಟ್ಟ . . . . ಸಕ್ಕದದ ಕವೀ ।
ಶ್ವರರನಿರದೆ ಬಲಗೊಂಬೆ ॥ ೯ ॥

ಭೂಮಿಯೊಳತಿ ಪುಣ್ಯಕಥೆಯೆನಿಸುವ ಸಿರಿ- ।
ರಾಮಕೃಷ್ಣರ ಚರಿತವನು ॥
ರಾಮಣೀಯಕವೆನೆ ಪೇಳೆಂದೆನಗೆ ನಿ- ।
ಯಾಮಿಸೆ ಬುಧರು ಪೇಳ್ದೆನು ॥ ೧೦ ॥

ಶ್ರುತಿಫಣಿಪತಿ ಭಾರತಿಮನುಮುನಿಗಳ ।
ಮತಿಗಳವಡೆದ ಶ್ರೀಹರಿಯ ॥

ಕತೆಯ ಬಣ್ಣಿಸು . . ಲ್ಲವಬಲ್ಲಂತೆ . . ಘ- ।
ಕೃತಿಯಿಂದಾ ನೊರೆವೆ ಜಾನಿಪ್ಪುದು ॥ ೧೧ ॥

* * *

ಗೂಗೆಗೆ ದಿವ ತುಂಬಿಗೆ ಚಂಪಕಹಾಲು ॥
ರೋಗಿಗೆ ಸೊಗಸಾಗದಂತೆ ।
ನಾಗಕಯನನ ಸತ್ಕಥೆಯಿದು ವಿಷಯಾನು- ।
ರೋಗಿಗಳಿಗೆ . . . ಗಸಿರ [ಲು] (ದು)

* * *

ಹರಿವಿಲಾಸವೆನಿಪ್ಪುದು ಈ ಕಥೆಯಿದು ।
ಪರಿಹರಿಸುವುದಖಿಳಪಾತಕವ ॥
ಹರಿಭಕ್ತರಾದವರಿರದಾಲಿಸೆ ಮೋಕ್ಷ- ।
ಪುರವ ನೀವನು ಶ್ರೀನರಸಿಂಹ ॥ ೨೧ ॥

* *

ವಸ್ತುಕಲಕ್ಷಣದಿಂ ಕೃತಿಪೇಳೆ ಸ- ।
ಮಸ್ತರಿಗರ್ಥವ ತಿಳಿಯಲು ॥
ದುಸ್ತರವಾದಪ್ಪುದೆಂದು ವರ್ಣಕದಿಂದ ।
ವಿಸ್ತರಿಸಿದೆನೆಲ್ಲರರ್ತಿ ॥ ೨೩ ॥

. . . .

. . . .

ಒಪ್ಪುವ ಕವಿತಿಮ್ಮ ಪೇಳದಚ್ಯುತಕಥೆ ।
ಯುಪ್ಪದಿಹುದೆ ಜನಮನವ ॥ ೨೪ ॥
ಮೋಹನಪ್ರಿಯ ಸತ್ಕವಿ ಮುದ್ದು ತಿಮ್ಮನೆಂ- ।
ದೂಹಿಸೆ ಬುಧರೆನ್ನ । . . . ಯ ॥
ಮೋಹನವೆಸರಿತ್ತುದಿಳೆ . . . . ।
. . . . ॥ ೨೫ ॥
॥ . . . .) . . . । ನಾಗವರ್ಮ ।
ಜನ್ನಕೇಶವ ನೇಮಿಚಂದ್ರ ॥
ಕನ್ನಡ ಕವಿ ಪಂಪರಾಜಾದಿಗಳ ಜಾಣ್ಮೆ ।
ಯೆನ್ನಕಬ್ಬದೊಳೆಸೆದಿಹುದು ॥ ೨೬ ॥
ಕವಿತೆ ಮೆಲ್ವಾತು ಚದುರು ಮೋಹ ಯೋಗಾನು- ।
ಭವವೇದಾಂತಾಗಮಗಳ ॥
ಪವಣರಿದ ಪ . . . . . . ॥

. . . .

. . . .

. . . .

ಧರಣಿದೈತ್ಯರ ಭಾರಕೆ ಬಸವಳಿದು ಪಂ- ।
ಕರುಹನಾಭಗೆ ಬಿನ್ನೈಸಿದಳು ॥ ೨೮ ॥

End :

. . . . ।
. . . . ॥
ಹತ್ತನೆಯುವತಾರದ ಹರಿಕಥೆಯಿದು ।
ಬುತ್ತಿಮೋಕ್ಷದ ಬಟ್ಟೆಗತಿಗೆ ॥ ೩೫ ॥
ವಿಷಮದೈತ್ಯರ ಭಾರವ ಪೊತ್ತು ಸೈರಿದ ।
ವಶವಲ್ಲದತಿದುಃಖದಿಂದ ॥
ಪಶುರೂ . . . . . . : . . . ।
. . . . ॥ ೩೬ ॥

(ವಿ.ವಿ.)—

ಅಸಮಗ್ರ. ಪೀಠಿಕಾ ವಿಷಯವೂ ಕಥಾರಂಭವೂ ಇವೆ. ಪದ್ಯಗಳು ೩೬ ಮಾತ್ರವೇ ದೊರೆಯುತ್ತವೆ. ಎರಡೇ ಓಲೆಗಳು. ಎರಡೂ ಮುರಿದಿವೆ. ಒಂದರ ತುಂಡು ಕಾಣುವುದಿಲ್ಲ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗೆಗೆ ಹಿಂದಣ ೫೫ ನೆಯ ನಂಬರನ್ನು ನೋಡುವುದು.

ಇದು ಸಾಂಗತ್ಯದಲ್ಲಿ ಬರೆದಿದೆ. ಸಂಧಿ ಪದ್ಯ ಸಂಖ್ಯೆಗಳು ಎಷ್ಟೆಂಬುದು (ಇಲ್ಲಿಯ ಅಸಮಗ್ರ ಪ್ರತಿಯಿಂದ) ತಿಳಿಯಲಾಗುವುದಿಲ್ಲ. ಕವಿಚರಿತ್ರಕಾರರು ಈ ಪುಸ್ತಕದ ವಿಷಯವಾಗಿ ಪ್ರಸ್ತಾಪಿಸಿರುವಂತೆ ತೋರುವುದಿಲ್ಲ. ಗ್ರಂಥದಾದಿಯಲ್ಲಿ ವಿಷ್ಣುಸ್ತುತಿಯಿದೆ. ಬಳಿಕ ಶಿವ, ಬ್ರಹ್ಮ, ಶಾರದೆ ಮುಂತಾದ ದೇವತೆಗಳನ್ನು ಕವಿ ನುತಿಸಿದ್ದಾನೆ. ಆ ಮೇಲೆ ನರಸಿಂಹ ಭಾರತೀ ರಾಯನನ್ನು ವ್ಯಾಸ, ಶುಕ, ವರರುಚಿ ಮುಂತಾದ ಸಂಸ್ಕೃತ ಕವಿಗಳನ್ನೂ ಸ್ಮರಿಸಿದ್ದಾನೆ. ಇದು ಉತ್ತಮ ಕವಿತೆಯೆನ್ನಬಹುದಾಗಿದೆ. ಇದರಲ್ಲಿ ಭಾಗವತದ ದಶಮಸ್ಕಂಧದ ಕಥೆ ಉಕ್ತವಾಗಿರುವಂತೆ ತೋರುತ್ತದೆ.

ಕವಿ ತಿಮ್ಮನೆಂಬುವನು. ಉಳಿದ ವಿಷಯಗಳನ್ನು ಉದಾಹೃತ ಭಾಗಗಳನ್ನು ನೋಡಿ ತಿಳಿಯುವುದು.

No. 1110. ಹರಿಶ್ಚಂದ್ರಕಾವ್ಯ by ರಾಘವಾಂಕ-
HARIŚCANDRAKĀVYA BY RĀGHAVĀṄKA.

Substance, palm-leaf. Size, $11\frac{3}{4}$ to $12 \times 1\frac{1}{2}$ to $1\frac{1}{4}$ inches. Pages, 250. Lines, 6 to 7 on a page. Extent, 3,000 granthas. Character, Kannada. Condition, injured. Appearance, old. Mode of writing, good.

Incomplete. Contains sandhis 1–14 complete and the first stanza of the 15th sandhi only.

Describes the famous puranic story of king Hariścandra. The author is *Rāghāvaṅka*, son of *Mahādēva* and a pupil of Hariśvara. For details see extracts below.

Beginning :

ಇದು ಸಮಸ್ತ ಕಳಾಧರಕ್ರಮ ನಿಷ್ಠುರ ಸಂಕ್ರಂದನಾದಿ ಸುರನಿಕರಮಣಿಮಕುಟಮಯೂರ ಕಮಲಾಂಜಲಿ ರಂಜಿತ ಚರಣ ಕಿಂಜಲ್ಕ ಶುಂಜರಿ (ತ) ದಿಶಾವಲಯಂ ಸಕಲದೈವದೀಕ್ಷಾ ಕರ್ತ ನಿಖಿಳ ದೈವಶರಣಾಗತ ವಜ್ರಪಂಜರ ದರ್ಪಿತ ದೈವ ಸರ್ಪಮಯೂರ ಗರ್ವಿತ ದೈವಸರ್ವಾಪಹರಣ ಸಮಸ್ತ ದೈವ ಸಾರ್ವಭೌಮನೆನಿಪ ಪಂಪಾ ಪುರಾಧೀಶ್ವರಮೂರ್ತಿ ಶ್ರೀ ವಿರೂಪಾಕ್ಷ ನಾಮಾನಿ ಸರಸಕವಿ ಸಾರ್ವಭೌಮ ಚತುರಕವಿ ಖಂ ಭಾವಕವಿ ಭಾಳಲೋಚನಂ ವರ್ಣಕ ಕವಿಕರ್ಣಾವತಂಸಂ ವಸ್ತುಮಸ್ತಕಂ ನ್ಯಾ . . ಸ್ತ ಹಸ್ತಂ ಅರ್ಥಕವಿ ಗರ್ವಿತಕವಿಗಿರಿ ವಜ್ರದಂಡ ಉಭಯಕವಿಶರಭ ಭೇರುಂಡ ವರ್ತಮಾನಕವಿ ವೇಶ್ಯಾಭುಜಂಗ ಕರ್ಣಾಟಕಕವಿಚಾರ್ಯ ಶಿವಭಕ್ತಸ್ತುತಿ ಪರಾಯಣ ಶಿವಯೋಗ ಚಕ್ರೇಶ್ವರ ಲೋಕಾರಾಧ್ಯ ಸಾಕಾರ ಸುರದ್ರುಮಮರ್ತ್ಯ ಲೋಕದ ಮಹಾದೇವನೆನಿಪ ಹಂಪೆಯ ಹರಿದೇವರ ಕುಮಾರ ಉಭಯಕವಿ ಕಮಲಾದಿತ್ಯ ಹಂಪೆಯ ರಾಘವಾಂಕ ವರ್ಣಮಪ್ಪ ಹರಿಶ್ಚಂದ್ರ ಕಥಾ ವೃತ್ತಾಂತಮಂ ಪೇಳ್ವೆಂ (?)

ಶ್ರೀರಾಗ ॥ ವಾರ್ಧಿಕಷಟ್ಪದಿ ॥

ತರಣಿಶಶಿಮಲ್ಲಿಕಾಮಾಲೆ ಕೆಂಜೆಡೆದುಂಬು ।
ಉರಿಗಣ್ಣು ಕಸ್ತುರಿಯ ಬೊಟ್ಟು ಕಪಿಲಾಕ್ಷಿ ಸರ.. ।
ಸಿರುಹಸಯನಂ ನಾಗಕುಂಡಲಂ ಹೊನ್ನೋಲೆ ಯೆಸೆವ ಕಟಿತಿರನ್ನದಾಳ ॥
ಸುರುಚಿರಸ್ಫಟಿಕಹಾರಂ ಹಾರಮಲ್ಪಕುಚ ।
ವರಪಯೋಧರಪಜಿಸವಸನಂದುಕೂಲದಿಂ ।
ಕರಶೂಲನುಬುಜಕೊಡರುಂ ನೇವುರಂ ಮೆರೆವ ದೇವ ನಿಮ್ಮಂ ಸಲಹಲಿ ॥ ೧ ॥
ಶ್ರೀಪತಿಗೆ ಸೊಬಗನುಡುಪತಿಗೆ ಶಾಂತಿಯನು ವಾ- ।
ಣೀಪತಿಗೆ ಚಾತುರ್ಯಮಂ ದಿವಸ್ಪತಿಗೆ ಪ್ರ- ।
[ಕಾಶಮ] (ತಾಪಮಂ) ಸುರಪತಿಗೆ ಭೋಗಮಂ ರತಿಪತಿಗೆ ಮೂಲೋಕವಾ
ವರಿಸುವ ॥
ರೂಪಂ ಸರಿತ್ಪತಿಗೆ ಗಂಭೀರತೆಯನು ಸ್ವಾ- ।
ಹಾಪತಿಗೆ ತೇಜಮಂ ಕೊಟ್ಟ ಗುರುಮೂರ್ತಿ ಪಂ- ।
ಪಾ ವಿರೂಪಾಕ್ಷ ನಿಮಗಿಷ್ಟ ಸಿದ್ಧಿಯಂ ಮಾಳ್ಕ ಸಂತೋಷದಿಂದ ॥ ೨ ॥

* * *

ಕೃತಿಗೆನಾಮಂ ಹರಿಶ್ಚಂದ್ರ ಚಾರಿತ್ರ ವೀ- ।
ಕೃತಿಗೊಡೆಯನಮಳ ಪಂಪಾವಿರೂಪಾಕ್ಷ ನೀ- ।
ಕೃತಿಗೆ ಪಾಲಕರು ಲೋಕದ ಭಕ್ತಜನರಿದಂ ಪೇಬ್ದಾತನಾರೆಂದೊಡೆ ॥
ಚತುರ ಕವಿರಾಯ ಹಂಪೆಯ ಹರೀಶ್ವರನವರ ।
ಸುತನು ಭಯಕವಿಕಮಲರವಿ ರಾಘವಾಂಕಪಂ- ।
ಡಿತನೆಂದೊಡೀ ಕಥಾರಸದ ಲಹರಿಯನು ಬಣ್ಣಿಸುವರಾರೀ ಧರೆಯೊಳು ॥ ೧೪ ॥
ವಸುಧಾಧಿಪತಿ ಹರಿಶ್ಚಂದ್ರ ಘನಸತ್ಯನೆಂ- ।
ದೊಸೆದು ವಾಸಿಷ್ಠ ನಿಂದ್ರಂಗೆನಲು ಕೌಶಿಕಂ ।

ಪ್ರಸಿಮಾಳ್ಪೆನೆಂದು ಭಾಷೆಯನಿತ್ತು ಧರೆಗೆ ಬಂದವನಿವನ ಸತಿಪುತ್ರರ ॥
ಅಸುವಂಶ್ಯವೆನೆ ನಿಗ್ರಹಂ ಮಾಡಿ ತಪ್ಪದಿರೆ ।
ಶಶಿಮೌಳಿ ಶ್ರೀವಿಶ್ವನಾಥ ಭೂಪಂಗೆ ಕರು- ।
ಣಿಸಿ ಸಕಲ ಸಾಮ್ರಾಜ್ಯವಿತ್ತಾತನಂ ಮೆಱೆದ ಕೃತಿ ಪುಣ್ಯದಾಕೃತಿಯಿದು ॥೧೪॥

* * * *

ಬೇಸರದೆ ಕೇಳ್ವ ದೇವೇಂದ್ರನುಂಟೆಂದಿಂತು ।
ಹೇಸದಕಟಕಟ ಸೊರಹುವರೆ ವಾಸಿಷ್ಠಯನು- ।
ಲಾ ಸೊರಹಿದಾತನವನಧಿಕನಲ್ಲದನೆ ಹೇಳ್ಕುನಿದ ಮೋಱೆಯೊಳೊಪ್ಪಯು ॥
ರಾಶಿ ಹೊನ್ನುಂಟಧಿಕನಹನೆನಲು ಹೊನ್ನವಾ- ।
ತೀ ಸಭೆಯೊಳೇಕೆ ಸತ್ಯವನೆ ಹೇಳೆನೆ ಸತ್ಯ- ।
ಶೀಲವಂತವನಾಳ್ವ ದೇಶದೊಳು ಕೇಳ್ದರಿಯೆನೆಂದ ವಿಶ್ವಾಮಿತ್ರನು ॥ ೫೮ ॥

Colophon :

ಪ್ರಥಮಸಂಧಿ ಸಮಾಪ್ತಂ ॥

ರಾಗ - ಮಲಹರಿ ॥

ಭೂವರ ಹರಿಶ್ಚಂದ್ರನೃಪನ ಘನಸತ್ಯವಾ ।
ದೇವಸಭೆ ನಡುಗೆ ವಾಸಿಷ್ಠಮುನಿ ಕೌಶಿಕಂ ॥
ಗಾವಗಂ ಕದನಮಂ ಬಳಸಿ ಪ್ರತಿಜ್ಞೆಯಂ ಮಾಡಿದನದೇಂ [ಬಣ್ಣಿಸುವೆನು]
(ಬಣ್ಣಿಪೆಂ) ॥

End :

ಅರಸ ನೀನಿರಿಸಿಹೋದುದರೊಳೇನುಂ ಕುಂದ- ।
ದರೆ ಯಾಗದಲ್ತು ಳೆಕದನುಗೆಡದೆ ಕೇಳ್ ಖಳ ।
ಕರಿಗಳವೆ ತುರಗವಿವೆ ಭಂಡಾರವಿದೆ ಕೊಟಾರಂಗಳವೆ ಹಲವಂದದ ॥
ಅರಮನೆಗಳವೆ ಪ್ರತತಿಯಿವೆ ಸಿವುಡಿಯಿವೆ ।
ಕರಣವಿದೆ ಮುದ್ರೆಯಿದೆ ಕೀಲಾರವಿದೆ ಸರ್ವ- ॥
ಪರಿವಾರವಿದೆ ನೋಡಿಕೋ ಎಂದು ಮುನಿಪ ನೊಪ್ಪಿಸಿಕೊಟ್ಟ ಭೂಮಿಪತಿಗೆ ॥೧೪॥

Colophon :

ಅಂತು ಸಂಧಿ ೧೪ ಕ್ಕಂ ಪದಂಗಳು ೭೩೭ ಕ್ಕಂ ಮಂಗಳಮಹಾಶ್ರೀ.

ರಾಗ-ಲಲಿತ ॥ ಗುರುಕುಲಂ ಹರಸೆ ಸುರಕುಲವೆಯ್ದಿ ಕೊಂಡಾಡೆ ।
ಬರಕರಕುಲಂ ಬೆರ್ಚೆ ಮುನಿಕುಲಂ ಹಾರೈಸೆ ।
ವರಹರಿಶ್ಚಂದ್ರ ಭೂಭುಜನಯೋಧ್ಯೆಯೊಳಿರ್ದು ಧರೆಯ ಪಾಲಿಸುತಿರ್ದನು ॥
ಏನೇನನೊಪ್ಪು ಗೊಳಬೇಕಾದುದೆಲ್ಲವಂ ।
ತಾನೊಪ್ಪುಗೊಂಡು ನಡೆತಂದು ಶಿವಶಿವಮಹಾ ।
ಸ್ಥಾನರಂಗದ ಸಿಂಹವಿಷ್ಟರವನೇಱಿ ಮಣಿಯಚ್ಚ್ರಣಿವನಾಂಕೆಗೊಂಡು ॥
ದಾನಧರ್ಮಂಗಳಂ ಮಾಡಿ ಕಾಣಿಕೆಗೊಡುವ ।

ನಾನಾಜನಕ್ಕಭಯವಿತ್ತು ಮುರಹರಕಮಲ ।
ಸೂನು ವಾಸವಮುಖ್ಯದೇವರೆಲ್ಲರಿಗೆಱಗಿ ಕಳುಹಿದನು ನಿಜಲೋಕಗಳಿಗೆ ॥

(ವಿ-ವಿ.)—

ಅಸಮಗ್ರ. ಕೊನೆಯ ಸಂಧಿಯಲ್ಲಿ ಸ್ವಲ್ಪ ಭಾಗಹೋಗಿದೆ ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಈ ಪುಸ್ತಕದಾದಿ ಭಾಗದಲ್ಲಿರುವ ಗದ್ಯವು ತುಂಬಾ ತಪ್ಪಾಗಿವೆ. ಮುಂದಣ ೧೧೧೦ ನೆಯ ನಂಬರಿನ ಪ್ರತಿಯಲ್ಲಿ ಹೆಚ್ಚಿನ ಮಟ್ಟಿಗೆ ಅದು ಸರಿಯಾಗಿದ್ದುದರಿಂದ ಅದ ನ್ನಿಲ್ಲಿ ಬರೆದಿದೆ.

ಇದು ಸಮಸ್ತ ಕಳಾಧರ ಕ್ರಮನಿಷ್ಠ ಸಂಕ್ರಂದನಾದಿ ಸುರನಿಕರ . . . . ಚಿತ್ರಚರಣ ಕಿಂಜಲ್ಕಮಂಜರೀ ದಿಶಾವಲಯ ಸಕಲದೈವದೀಕ್ಷಾಕರ್ತೃ ನಿಖಿಳ ದೈವರಕ್ಷಾದಕ್ಷದೈನ್ಯ ದೈವಶರಣಾಗತವಜ್ರ ಪಂಜರದರ್ಪಿಷ್ಠ ದೈವಸರ್ಪಮಯೂರಗರ್ವಿತ . . . . ಸಮಸ್ತದೈವಸಾರ್ವಭೌಮನೆನಿಪ ಪಂಪಾಪುರಾಧೀಶ್ವರ ಶ್ರೀ ವಿರೂಪಾಕ್ಷವರ್ಣನವಾಗಿ ಸರಸಕವಿ ಸಾರ್ವಭೌಮಂ ಚತುರಕವಿ ಚತುರ್ಮುಖಂ ಭಾವಕವಿಭಾಳಲೋಚನಂ ವರ್ಣಕಕವಿಕರ್ಣಾವತಂಸಂ ವಸ್ತುಕಕವಿ ಮಸ್ತ ಕನ್ಯಸ್ತಹಸ್ತಂ ಅದಟ ಕವಿಮಾನಮರ್ದನಂ ಗರ್ವಿತಕವಿಗಿರಿ ವಜ್ರದಂಡಂ ಉಭಯಕವಿ ಶರಭ ಭೇರುಂಡಂ ವರ್ತಮಾನಕವಿವೇಶ್ಯಾ ಭುಜಂಗಂ ಕರ್ಣಾಟಕಕಾವ್ಯಲಕ್ಷಣ ದೀಕ್ಷಾಚಾರ್ಯಂ ಶಿವಭಕ್ತಿಸೂಕ್ತಿ ಪರಾಯಣಂ ಶಿವಯೋಗಚಕ್ರೇಶ್ವರಂ ಲೋಕಾರಾಧ್ಯಂ ಸಾಕಾರಸುರದ್ರುಮಂ ಮರ್ತ್ಯಲೋಕದ ಮಹಾದೇವನೆನಿಪ ಹಂಪೆಯ ಹರಿಹರದೇವರ ವರಕುಮಾರ (ಕನು) ಭಯ ಕವಿ ಕಮಲಾದಿತ್ಯ ಹಂಪೆಯ ರಾಘವಾಂಕ ವರ್ಣನಮಪ್ಪ ಹರಿಶ್ಚಂದ್ರಮಹಾಪ್ರಬಂಧಂ ?

ಇದರಲ್ಲಿ ಸಂಧಿಗಳು ೧-೧೪ ಪೂರ್ಣವಾಗಿವೆ. ೧೫ ನೆಯದರಲ್ಲಿ ಒಂದು ಪದ್ಯ ಮಾತ್ರ ವಿದೆ. ಐದಾರು ಓಲೆಗಳು ಮುರಿದಿವೆ. ಕೊನೆಯ ಓಲೆಯ ಸಂಖ್ಯೆ ೧೦೬. ಇದು ವಾರ್ಧಿಕ ಷಟ್ಪದಿಯಲ್ಲಿ ಬರೆದಿದೆ. ೧೦ ನೆಯ ಸಂಧಿಯಲ್ಲೊಂದು ಮಂದಾನಿಲರಗಳೆಯಿದೆ. ಇದರಲ್ಲಿ ೧೫ ಸಂಧಿಗಳಿಗೆ ಗ್ರಂಥವು ಪೂರ್ಣವಾಗುತ್ತದೆ. ಇನ್ನೊಂದರಲ್ಲಿ ೧೬ ಸಂಧಿಗಳಿರುವಂತಿದೆ. ಕವಿಚರಿತ್ರಕಾರರು ೧೬ ಸ್ಥಲಗಳಾಗಿ ಈ ಗ್ರಂಥವು ಭಾಗಿಸಲ್ಪಟ್ಟಿದೆಯೆಂದು ಬರೆದಿದ್ದಾರೆ. ಮುದ್ರಿತ ಪುಸ್ತಕದಲ್ಲಿ (ಕಾವ್ಯಕಲಾನಿಧಿ ಕೋಶಸಂಖ್ಯೆ ೭೯) ೧೪ ಸ್ಥಳಗಳಿಗೆ ಗ್ರಂಥವು ಮುಗಿದಿದೆ. ಗ್ರಂಥದ ಆದಿಯಲ್ಲಿ ಪಂಪಾವಿರೂಪಾಕ್ಷ ಸ್ತುತಿಯಿದೆ. ಆ ಮೇಲೆ ಪಂಪಾಂಬಿಕೆ ಯನ್ನು ಸ್ತುತಿಸಿ ಕವಿ ತನ್ನ ಗುರುಪರಂಪರೆಯನ್ನು (ಹಂಪೆಯ ಶಂಕರಪ್ರಭು, ಮಾದಿರಾಜ, ಮಹಾದೇವ, ಹರೀಶ್ವರ) ಹೇಳಿದ್ದಾನೆ. ತನ್ನ ತಂದೆಯ ಹೆಸರು 'ಮಹಾದೇವ' ಎಂದು ಹೇಳಿದ್ದಾನೆ. ಪೂರ್ವಕವಿಗಳಲ್ಲಿ ಉದ್ಭಟ, ಮಯೂರ, ಕಾಳಿದಾಸ, ಹಲಾಯುಧ, ಕೇಶಿರಾಜ, ಮಲುಹಣ, ಬಾಣ, ಭೋಜ, ಭಲ್ಲಟ, ಭಾರವಿ ಇವರನ್ನು ನುತಿಸಿದ್ದಾನೆ.

ಕಥಾಗರ್ಭವನ್ನು 'ವಸುಧಾಧಿಪತಿ ಹರಿಶ್ಚಂದ್ರ' ಎಂಬ ಪದ್ಯದಲ್ಲಿ ಹೇಳಿದ್ದಾನೆ. ಈ ಕಾವ್ಯದಲ್ಲಿ ತಾನು ಹೇಳಿರುವುದು 'ಪರರೊಡವೆಯಂ ಕೊಂಡು ಕೃತಿಯ ಮೇಟಿದ ಭಾಷೆ, ಪರರ ಕಾವ್ಯಾರ್ಥಂಗಳಂ ಛಿದ್ರಿಸದ ಭಾಷೆ (*) (*) ಪರರ ವಸ್ತುವ ತೃಣಕ್ಕೆ ಸರಿಯೆಂಬ ಭಾಷೆ' ಎಂದು ಮುಂತಾಗಿ ಹೇಳಿದ್ದಾನೆ. ಇದರಲ್ಲಿರುವ ಕೆಲವು ಪದ್ಯಗಳು ಈತನ ಸೋಮನಾಥಚರಿತ್ರೆಯಲ್ಲಿಯೂ ಇವೆ.

ಕವಿ ರಾಘವಾಂಕನು. ಈತನ ತಂದೆ ಮಹಾದೇವನೆಂಬುವನು. ಊರು ಹಂಪೆ. ಈತನ ಗುರು ಹರೀಶ್ವರ. ತನ್ನನ್ನು ಹರಿದೇವಕುಮಾರ ಮುಂತಾಗಿ ಹೇಳಿಕೊಂಡಿದ್ದಾನೆ ತಾನು ಹರೀಶ್ವರನ ಶಿಷ್ಯನಾದ ಕಾರಣ ಹೀಗೆ ಹೇಳಿಕೊಂಡಿರಬಹುದು. ಇವನಿಗೆ ಉಭಯಕವಿ ಶರಭ ಭೇರುಂಡ ಮುಂತಾಗಿ ಬಿರುದುಗಳಿದ್ದುದಾಗಿ ತಿಳಿಯುತ್ತದೆ. ಇವನ ವಿಷಯವಾಗಿ ಚಿಕ್ಕನಂಜೇಶನು (ಸು. ೧೭ ನೆಯ ಶತಮಾನ) ರಾಘವಾಂಕಚರಿತ್ರೆ ಎಂಬ ಒಂದು ಗ್ರಂಥವನ್ನು ಬರೆದಿದ್ದಾನೆ. ಈತನನ್ನು ಪ್ರಾಯಿಕವಾಗಿ ಶೈವಕವಿಗಳೆಲ್ಲಾ ಗೌರವಿಸಿದ್ದಾರೆ. ಷಟ್ಪದೀ ಗ್ರಂಥಗಳನ್ನು ಬರೆಯುವುದಕ್ಕೆ ಈತನೇ ಆದಿಕವಿಯೆಂದು ಪ್ರತೀತಿಯಿದೆ. ಇವನು ಶಬ್ದಮಣಿ ದರ್ಪಣಾದಿ ವ್ಯಾಕರಣಗ್ರಂಥಗಳನ್ನು ಅಷ್ಟಾಗಿ ಅನುಸರಿಸಿಲ್ಲವೆಂಬುದು ಗೊತ್ತಾಗುತ್ತದೆ. ಅಲ್ಲದೆ ತನ್ನ ಕಾಲಕ್ಕೆ ವ್ಯವಹಾರದಲ್ಲಿದ್ದ ಅನೇಕ ಪ್ರಯೋಗಗಳನ್ನು ತೆಗೆದುಕೊಂಡಿರುತ್ತಾನೆ. ಉಳಿದ ವಿಷಯಗಳಿಗಾಗಿ ಕವಿಚರಿತ್ರೆಯನ್ನು ನೋಡುವುದು. ಇವನ ಕಾಲವು ಸು. ೧೧೬೫ (ಕವಿಚರಿತ್ರೆ, ಪ್ರಥಮ ಸಂಪುಟ, ಮೊದಲನೆಯಾವೃತ್ತಿ, ಪುಟ ೧೮೦) ನಿಶ್ಚಿತವಾಗಿದೆ.

No. 1111. ಹರಿಶ್ಚಂದ್ರಕಾವ್ಯ by ರಾಘವಾಂಕ-
HARISCANDRAKĀVYA BY RĀGHAVĀṄKA.

Substance, Sritala. Size, 13 15/16 × 1⅝ inches. Pages, 173. Lines, 7 on a page. Extent, 2,850 granthas. Character, Kannada. Condition, much injured. Appearance, old. Mode of writing, fair.

Incomplete. Wants some stanzas in the first and last sandhis, otherwise complete.

Same work as that described above.

Date of transcription :—Thursday, the first day of the bright fortnight of the Lunar month Vaiśākha.

Name of scribe :—*Purāta*, son of *Purātavoḍeya* of Bommana Haḷḷi for the use of *Ponnakaḷasanāyaka* of *Bolli Haḷḷi.*

(ವಿ.ವಿ.)—

ಅಸಮಗ್ರ. ಸಂಧಿ ೧ ರ ೧೦ ನೆಯ ಪದ್ಯದಿಂದ ೧೭ ರ ೧೭ ನೆಯ ಪದ್ಯದ ವರೆಗಿದೆ. ಇದರಲ್ಲಿ ಮೊದಲ ಓಲೆಯ ಸಂಖ್ಯೆ ೬೦. ಕೊನೆಯ ಓಲೆ ೧೪೭ ನೆಯದು. ಓಲೆ ೫೯, ೧೪೬ ಈ ಎರಡು ಇರುತ್ತಿದ್ದರೆ ಸಮಗ್ರ ಪ್ರತಿಯೆನ್ನಬಹುದಿದ್ದಿತು ಓಲೆಗಳು ೬೦, ೯೨, ೯೫, ೧೦೩, ೧೧೪ ಇವು ಮುರಿದಿವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರ ಕೊನೆಯ ಭಾಗದಲ್ಲಿ ಸ್ವಲ್ಪವನ್ನು ಉದ್ಧರಿಸಿ ಬರೆಯುತ್ತೇವೆ.

ಅನುನಯದಿ ವನಜಜನವಂ ದಿನಪಪೊಗುವಂತೆ ।
ಪನವಂ ವಸಂತ ಪುಗುವಂತಯೋಧ್ಯಾಪುರವ ।
ನಿನಕುಲ ಹರಿಶ್ಚಂದ್ರಭೂವರಂ ಪುಗಲು ಜಯವೆಂಬ ಪಾಡುವ ಪರಸುವ ॥
ಜನಕಭಯವೀಯುತ್ತ ಪರಿಪರಿಯ ತೋರಣದ ।

ಘನದ ಬಿನ್ನಣಕೆ ತಲೆದೂಗುತ್ತ ಬಿಡದೆಮಣಿ. ।
ಮನೆಯ ಗುಡಿಗಳನೋಡಿ ನಗುತ ನಲಿಯುತ್ತ ತನ್ನರಮನೆಗೆ ನಡೆತಂದನು ॥೧೫॥
ಮಡದಿಯರ ಮಂಗಳಾರತಿಗೆ ಭೂಸುರರುಗಳು ।
ಕುಡುವಮಂತ್ರಾಕ್ಷತೆಗೆ ಕವಿಗಳಾಶೀರ್ವಾದ ।
ದಡಕಕ್ಕೆ ಪುಣ್ಯಪಾಠಕರ ಕೈವಾರಕ್ಕೆ ಗಾಯಕರ ಗೀತತತಿಗೆ ॥
ಕಡಗಿಲೆಂಕರು ನಿವಾಳಿಸುವ ರಚನಾವಳಿಗೆ ।
ಯೆಡೆಗೆಡೆಗೆ ದನಿಗುಡುವ ಶುಭದವಾದ್ಯಕ್ಕೆ '

(ಸೂಚನೆ.—ಇಲ್ಲಿ ಒಂದೋಲೆಯಿಲ್ಲ. ಬಳಿಕ—)

' . . . . . ವತ್ಸರದ ವೈಶಾಖ ಶು. ೧ ಲ್ಲು ಬೃಹಸ್ಪತಿವಾರದಲ್ಲು ಬೊಮ್ಮನಹಳ್ಳಿಯ ಪುರಾಥಪ್ರೊಡೆಯರ ತನೂದ್ಭವ ಪುರಾತರು ಬೊಲ್ಲಿಹಳ್ಳಿಯ ಪೊನ್ನಕಳಸನಾಯಕನಿಗೆ ಹರಿಶ್ಚಂದ್ರಕಾವ್ಯಮಂ ಬರೆದಸು. '

ಸಂಧಿಗಳಲ್ಲಿ ಪದ್ಯಸಂಖ್ಯೆಗಳನ್ನು ಹೆಚ್ಚು ಕಡಿಮೆಯಾಗಿ ವಿಭಾಗಿಸಿಕೊಂಡಿರುವುದೇ ಈ ಪುಸ್ತಕಗಳಲ್ಲಿ ಸಂಧಿಗಳ ಹೆಚ್ಚು ಕಡಿಮೆಗೆ ಕಾರಣವಾಗಿದೆಯೆಂದು ತೋರುತ್ತದೆ.

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1112. ಹರಿಶ್ಚಂದ್ರಕಾವ್ಯ by ರಾಘವಾಂಕ.

HARISCANDRAKĀVYA BY RĀGHAVĀṄKA.

Substance, palm-leaf. Size, $14\frac{1}{8} \times 1\frac{5}{8}$ inches. Pages, 148. Lines, 9 on a page. Extent, 2,600 granthas. Character, Kannada. Condition, very much injured. Appearance, old. Mode of writing, good.

Incomplete. Contains the sandhis 1 to 12 and stanzas 1 to 14 in the 13th sandhi.

Same work as that described above.

(ವಿ.ವಿ.)—

ಅಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಸಂಧಿಗಳು ೧-೧೨ ಪೂರ್ಣವಾಗಿವೆ. ೧೩ ನೆಯದರಲ್ಲಿ ೧-೧೪ ಪದ್ಯಗಳಿವೆ. ಮುಂದಕ್ಕೆ ಒಂದೆರಡು ಮುರಿದ ಓಲೆಗಳಿವೆ. ಪ್ರಾಯಿಕವಾಗಿ ಓಲೆಗಳ ಕೊನೆಯಲ್ಲ ಹುಳುತಿಂದು ಹೋಗಿದೆ. ಕೆಲವು ಓಲೆಗಳು ಮುರಿದಿವೆ. ಇದರಲ್ಲಿ ಲಿಪಿ ಉತ್ತಮವಾಗಿದೆ. ಈ ಪುಸ್ತಕದಲ್ಲಿ ಮೊದಲ ಓಲೆಯ ಸಂಖ್ಯೆ ೭೦. ಕಡೆಯದು ೧೪೪. ಇದರ ಆದಿಭಾಗವಲ್ಲಿ ಒಂದು ಗದ್ಯವಿದೆ. ಅದನ್ನು ಹಿಂದಣ ೧೧೧೦ ನೆಯ ನಂಬರಿನಲ್ಲಿ ಕೊಟ್ಟಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1113. ಹರಿಶ್ಚಂದ್ರಕಾವ್ಯ by ರಾಘವಾಂಕ-
HARISCANDRAKĀVYA BY RĀGHAVĀṄKA.

Substance, palm-leaf. Size, 18 3/16 × 1 7/16 inches. Pages, 26. Lines, 7–8 on a page. Extent, 520 granthas. Character, Kannada. Condition, much injured. Appearance, old. Mode of writing, good.

Begins on fol. 46*a* of the Ms. described under No. 133 *ante*.

Incomplete. Contains sandhis 1–2 and 27 stanzas in the 3rd sandhi.

Same work as that described above.

(ವಿ-ವಿ)—

ಅಸಮಗ್ರ. ೧ ಮತ್ತು ೨ ನೆಯ ಸಂಧಿಗಳೂ ೩ ನೆಯದರಲ್ಲಿ ೨೭ ಪದ್ಯಗಳೂ ಇವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಉತ್ತರರಾಮಾಯಣವಿದೆ. ಅದರ ಓಲೆಗಳು ೪೪. ಅದಕ್ಕೆ ಮೊದಲು ಬರೆಯದ ಒಂದೋಲೆಯಿದೆ. ಅದೂ ಸೇರಿ ೪೫ ಓಲೆಗಳು. ಬಳಿಕ ಮುಂದಣ ಓಲೆಯಲ್ಲಿ (೪೬ ನೆಯ ಓಲೆಯಲ್ಲಿ) ಇದು ಆರಂಭವಾಗುತ್ತದೆ. ಇದರಲ್ಲಿ ೧೩ ಓಲೆಗಳಿವೆ. ೩, ೧೩ ನೆಯ ಓಲೆಗಳು ಮುರಿದಿವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1114. ಹರಿಶ್ಚಂದ್ರ ಸಾಂಗತ್ಯ by ರಾಮರಸವಿರೂಪಾಕ್ಷ-
HARISCANDRA SĀṄGATYA BY RĀMARASAVIRŪPAKṢA.

Substance, paper. Size, $9\frac{1}{4} \times 7\frac{1}{4}$ inches. Pages, 79. Lines, 15 to 18 on a page. Extent, 1,080 granthas. Character, Kannada. Condition, very much injured. Appearance, old. Mode of writing, not bad.

Begins on page 107 of the Ms. described under No. 19 *ante*.

Complete in 13 sandhis.

Describes the story of Hariscandra in Sāngatya metre.

The author states in the last two stanzas that he completed this work on Monday of the Lunar month Caitra in the year "Vilambi" saka year 1460 corresponding to 1538 A.D.

Name of the scribe :—*Narasimha*, son of Rāmappa of *Nīrathaḍi*, *Citradurga* division of *Āṇibe* taluque.

Beginning :

ಅ॥ ಶ್ರೀ ವಿರುಪಾಕ್ಷಲಿಂಗಕರುಣಾಕರ ಶಂಕರ ಕೇಳ್ದೊಡೆನ್ನಯ ।
ಕೇವಲ ತಪ್ಪುಕೆಂದು ವಿಷವಾಣಿ ಯೆಂಬುದಕ್ಕೆ ನಿಮ್ಮಯ ॥
ಪಾವನಪುಣ್ಯನಾಮದ ರಸಾಮೃತಸೋಂಕಲು ಶುದ್ಧಮಪ್ಪುದುಂ ।
ದೇವರ ದೇವ ಹಂಪೆಯ ಸದಾಶಿವ ಕಾವುದು ನಿಮ್ಮ ಕಂದನ ಬಿನ್ನಪಮಂ ॥ (?)

ಸೂಚನೆ :—

ಸಾಂಗತ್ಯ ॥ ಧರಣಿಗೆ ಸತ್ಯನು ಹರಿಶ್ಚಂದ್ರನೆನು ತಲಿ ।
ಸುರಮುನಿಗಳು ವಾದಿಸಿದರು ॥
ಶ್ರೀ ಮಹಾದೇವನೆ ಕಾಮ ನಿರ್ಧೂಮ ।
ಧಾಮವ ಮಾಡಿದ ಶಿವನೆ ॥
ವ್ಯೋಮಕೇಶನೆ ನಿಮ್ಮ ನಾಮವ ನೆನೆದರೆ ।
ಕಾಮಿತಫಲ ವಿಹುದೆನಗೆ ॥ ೧ ॥

* * *

ವಸುಮತ್ರಿಯೊಳು ಪಂಚಾರ್ಷೇಯ ಪ್ರಥಮಶಾಖೆ ।
ಬೆಸರುಳ್ಳ ಶ್ರೀ ವತ್ಸಗೋತ್ರ ॥
ಹಸನಾಗಿ ದ್ವಿಜರಾಮಾರಸವಿರೂಪಾಕ್ಷ ।
ನೆಸಗಿದ ಕೃತಿಯು ಪಾಲಿಪ್ಪುದು ॥ ೮ ॥

* * *

ಹರದು ದೊಡ್ಡೋಲಗ ಸುರರಾಜ ತನ್ನಯ ।
ಅರಮನೆಯನು ಹೊಕ್ಕನಾಗ ॥
ಧರೆಗಿಳದರಿತ್ತ ವರಮುನಿಗಳು ತಮ್ಮ ।
ವರತಪೋವನದಾಶ್ರಮಕೆ ॥ ೩೫ ॥

Colophon :

ಅಂತು ಪ್ರಥಮಾಧ್ಯಾಯಂ ಸಮಾಪ್ತಂ.

ಸೂಚನೆ :—

ವನದೊಳು ಭೂಪತಿ ಜನಪೊರೆಯಿಡಲಿಕ್ಕೆ ।
ಮುನಿ ಮೃಗವ ದೂರಕೇಳು ॥ (?)

End :

ಬೇಳಲು ಲಾಲಿಸಿ ಕೇಳಲು ಕಷ್ಟಕ್ಕೆ ।
ಮೂಲವು ಹರಿಶ್ಚಂದ್ರಕೃತಿಯು ॥
ಬಾಳುವ ಬಡವರು ಕೇಳಯೆ ಸುಖದಿಂದ ।
ಬಾಳುವರತಿ ಹರುಷದಲಿ ॥ ೪೩ ॥

ಶ್ಲೋಕ ॥ ಹರಿಂ ಹರಂ ಹನೂಮಂತಂ
ಹರಿಶ್ಚಂದ್ರಂ ಹಲಾಯುಧಂ ॥
ಪಂಚೈತಾನ್ ಸ್ಮರತೋ ನಿತ್ಯಂ ॥
ಮಹಾಪಾತಕನಾಶನಂ ॥
ಶಾಲಿವಾಹನಬಂದು ಬಾಳ್ದಕಲಿಯೊಳ ।
ಗಾಳದ ಶಕವರ್ಷಗಳು ॥

ಏಬಿಳಿ ಇಮ್ಮಡಿ ಕಾಳದ ಶತಕದ ।
ಮೇಲಾದ ಅಱುವತ್ತು ವರುಷ ॥ ೪೪ ॥
ಶರಧಿಯು ಕಂದಗೆ ಶರಣೆಂಬ ದಿನದೊಳು ।
ಬೆರಸಿದ ಚೈತ್ರಮಾಸದಲಿ ॥
ನೆರೆ ವಿಳಂಬಿಯು ವರದ ಸಂವತ್ಸರ ।
ಪರಿಪೂರ್ಣವಾಯಿತೀ ಕೃತಿಯು ॥ ೪೫ ॥
ಹದಿಮೂರು ಸಂಧಿಗಳು ಪದನಾಱು ನೂಱಕ್ಕೆ ।
ಹದಿನೆಂಟರೊಳಗೊಂದೆಸೆಯೆ ॥
ಮದನಾರಿಯು ತನ್ನಹೃದಯು ದೊಳಗಿಂಬಿಟ್ಟು ।
ಪದದೊಳು ನಾ ಬಲಗೊಂಬೆ ॥

Colophon :

ಅಂತು ಸಂಧಿ ೧೩ ಕ್ಕಂ ಪದ ೬೯೯ ಕ್ಕಂ ಮಂಗಳ ಮಹಾಶ್ರೀ.
ಇತಿ ಹರಿಶ್ಚಂದ್ರೋಪಾಖ್ಯಾನಂ ಸಂಪೂರ್ಣಂ ॥

(ವಿ-ವಿ.)—

ಸಮಗ್ರ. ಕಾಗದದ ಪ್ರತಿ. ಹುಳು ಬಹಳನಾಗಿ ತಿಂದಿದೆ. ಕೊನೆಯಲ್ಲಿ ಈ ಕತ್ತೆ ಚಿತ್ರದುರ್ಗ ಡಿವಿಜನ್ ಅಣಿಬೆ ತಾಲೂಕು ಪೈಕಿ-ನೀರಥಫಿ ಶು (?) ರಾಮಪ್ಪನವರ ಮಗ ನರಸಿಂಹನ ಸ್ವಹಸ್ತ ಬರೆಹ ಎಂದಿದೆ. ಇದರೊಡನೆ ಇನ್ನೂ ಹಲವು ಪುಸ್ತಕಗಳು ಸೇರಿವೆ. ಅವನ್ನು ಹಿಂದಣ ೧೯ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು. ಮುಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯು ಇದರ ಪ್ರತಿಕೆಯಾಗಿರಬೇಕೆಂದು ತೋರುತ್ತದೆ.

ಇದು ಸಾಂಗತ್ಯದಲ್ಲಿ ಬರೆದಿದೆ. ಸಂಧಿಗಳು ೧೩ ಪದ್ಯಗಳು ೬೯೯. ಗ್ರಂಥದಾದಿಯಲ್ಲಿ ಶಿವಸ್ತುತಿಯಿದೆ. ಬಳಿಕ ಕೃಷ್ಣ, ಹಂಪೆಯ ವಿರೂಪಾಕ್ಷ, ದತ್ತಾತ್ರೇಯ, ಗಣಪತಿ, ಭಾರತಿ, ಗುರುರಾಯ ಇವರನ್ನು ಕವಿ ನುತಿಸಿದ್ದಾನೆ. ಈ ಗ್ರಂಥವು ಶಾಲಿವಾಹನ ಶಕ ೧೪೬೦ (ಕ್ರಿ.ಶ. ೧೫೩೮) ನೆಯ ವಿಳಂಬಿ ಸಂವತ್ಸರದ ಚೈತ್ರಮಾಸದ ಸೋಮವಾರಕ್ಕೆ ಬರೆದು ಮುಗಿಯಿತೆಂದು ಹೇಳಿದ್ದಾನೆ.

ಕವಿ ರಾಮರಸವಿರೂಪಾಕ್ಷನೆಂಬುವನು. ಬ್ರಾಹ್ಮಣ ಕವಿ. ಋಕ್ಶಾಖೆಗೆ ಸೇರಿದವನು. ಶ್ರೀವತ್ಸಗೋತ್ರದವನು. ಕವಿಯ ಕಾಲ ಕ್ರಿ.ಶ. ೧೫೩೮ ಎಂದು ಗೊತ್ತಾಗುತ್ತದೆ.

No. 1115. ಹರಿಶ್ಚಂದ್ರ ಸಾಂಗತ್ಯ by ರಾಮರಸವಿರೂಪಾಕ್ಷ- HARISCANDRA SĀṄGATYA BY RĀMARASAVIRŪPĀKṢA.

Substance, paper. Size, 12½ × 8 inches. Pages, 96. Lines, 15 to 17 on a page. Extent, 1,080 granthas. Character, Kannada. Condition, good. Appearance, old. Mode of writing, good.

Complete. Contains sandhis 1 to 13 complete.

This seems to be a transcript of the Ms. described above (No. 1114).

(ವಿ.ವಿ.)—

ಸಮಗ್ರ. ಕಾಗದದ ಪ್ರತಿ ಉತ್ತಮವಾಗಿದೆ. ಲಿಪಿ ಚೆನ್ನಾಗಿದೆ. ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯು ಇದಕ್ಕೆ ಮಾತೃಕೆಯೆಂದು ತೋರುತ್ತದೆ.

No. 1116. ಹರಿಶ್ಚಂದ್ರ ಸಾಂಗತ್ಯ by ರಾಮರಸವಿರೂಪಾಕ್ಷ- HARIŚCANDRA SĀṄGATYA BY RĀMARASAVIRŪPĀKṢA.

Substance, palm-leaf. Size, $7\frac{5}{8} \times 1\frac{1}{4}$ inches. Pages, 144. Lines, 6–7 on a page. Extent, 950 granthas. Character, Kannada. Condition, very much injured. Appearance, old. Mode of writing, not bad.

Incomplete. Contains first and second sandhis complete in 429 stanzas and 172 stanzas of the 3rd sandhi. It comes up to the 21st stanza of the 12th in the Ms. described under No. 1114.

Same work as that described above.

(ವಿ.ವಿ.)—

ಅಸಮಗ್ರ. ಓಲೆಗಳು ೧-೭೨ ಇವೆ. ೪೩ ನೆಯದು ಎರಡಿವೆ. ಒಟ್ಟು ೭೩ ಓಲೆಗಳು. ೩೫ ನೆಯ ಓಲೆ ಮುರಿದಿದೆ. ಇದರಲ್ಲಿ ೩ ಸಂಧಿಗಳಿವೆ. ೩ ನೆಯದು ಅಪೂರ್ಣವಾಗಿದೆ. ಅದರಲ್ಲಿ ೧೭೨ ಪದ್ಯಗಳಿವೆ. ಮೊದಲ ಎರಡರಲ್ಲಿ ೪೨೯ ಪದ್ಯಗಳಿವೆ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ೧ ರಿಂದ ೧೨ ನೆಯ ಸಂಧಿಯ ೨೧ ನೆಯ ಪದ್ಯದ ವರೆಗಣ ಭಾಗಕ್ಕೆ ಸರಿಹೋಗುತ್ತದೆ. ಲಿಪಿ ಸಾಮಾನ್ಯವಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1117. ಹರಿಶ್ಚಂದ್ರ ಸಾಂಗತ್ಯ by ಬೊಂಬೆಯಲಕ್ಕ- HARISCANDRA SĀṄGATYA BY BOMBEYA LAKKA.

Substance, palm-leaf. Size, $12\frac{1}{4} \times 1\frac{7}{16}$ inches. Pages, 74. Lines, 6–7 on a page. Extent, 780 granthas. Character, Kannada. Condition, very much injured. Appearance; old. Mode of writing, good.

Incomplete.

Contains up to the 264th stanza of the 3rd sandhi. It seems that a few stanzas only are wanting to complete the copy.

Similar to the work described under No. 1114 *ante*.

The name of the author is *Bombeya Lakka.* No other particulars regarding the author and the date of his work are known from this work.

The "Karnātaka kavicaritre" states that this work consists of 5 sandhis and the author Bombeya Lakka wrote this work in the year Viḷambi, Śaka year 1460 (1538 A.D.). It further states that another

poet by name Rāmarasavirūpākṣa has written a similar work on the same date. From the examination of the Mss. here, it is seen that the date referred to above applies only to the latter and not to the former. For details see extracts given under the next number.

Beginning :

. . . . ।
ಸೀಮೆಯನು ಬಿಟ್ಟು ಕಾಶಿಯೊಳ್ ॥
ಸಾಮಿಕಗಳಾಗಿ . . . ಂದ ಕತ್ರಿಯಂ ।
. . . . ॥
. . . . ।
. . . . ॥
. . . . ಕಂದರನಾಗಾಸುರ ಚರ್ಮಾಂಬರ ।
ಪ್ರೇಮದಿಂದೊಲಿದ . . . . ॥

* * * *

. . . . ಈ ಸತ್ಯಕಾವ್ಯವ । ಛಂದ . . . . ಮೀ
ದಿನಿ ಗೊರೆದ ಬೊಂಬೆಯಲಕ್ಕ ಧರ್ಮರ : ಪಾದ . .
. . . . . ಉತ್ತಮವಾದ ಕುಲದ ಹರಿಶ್ಚಂದ್ರನ ।
ಭಕ್ತಿಯ ಕಥೆ . . . .

* * * *

ಅಲಸದೆ ಸಮಸ್ತದೇಶವನಾಳುವ ಇನ- ।
ಕುಲದರಸು ಮಕ್ಕಳೊಳಗೆ ॥
ಬಲುಗೆಯ್ಯರಾಗಿ ಹುಸಿಗೆ ಮನವೆಳಸದ ।
ಕಲಿಗಳಾರೈ ಎಂದ ಸುರಪ ॥ ೧೩ ॥
ಕೇಳಾದರೆ ದೇವೇಂದ್ರ ಮೂಲೋಕವ ।
ನಾಳುವ ಅರಸು ಮಕ್ಕಳಲಿ ॥
ಪೇಳು ಪ್ರೌಢತಿಶಯವೀ ಹರಿಶ್ಚಂದ್ರನ ।
ನಾಲಗೆಯೊಳು ಪುಸಿಯಿಲ್ಲ ॥ ೧೪ ॥

* * * *

ಕೊಟ್ಟು ಹರಿಶ್ಚಂದ್ರ ವಿರುಪಾಕ್ಷಲಿಂಗಕೆ ।
ಪಟ್ಟೆಯ ಪದಕಮುತ್ತುಗಳ ॥
ಕೊಟ್ಟುವಂದನೆಮಾಡಿ . . . ಕೊಂಡು ।
ಮುಟ್ಟಿ ವಂದನೆಯ ಮಾಡಿದನು ॥ ೯೮ ॥
ಗುರುಕೃಪೆಯಿಂದ ಸುಜ್ಞಾನನಾದನು ರಾಯ ।
ಹರೆಯಿತು ಕರ್ಮಪಾಪಗಳು ॥
ಧರಣೀಶರಥವನೇರಲು ಪುಣ್ಯವೃಂದದ ।
ಕರುವಿನಂದದಿ ಸಂಧಿ ಮುಗಿಯೆ ॥ ೯೯ ॥

Colophon :

ಅಂತು ಪ್ರಥಮಸಂಧಿ ಸಮಾಪ್ತಂ.

ಕಂದ ॥ ಮೃಗಬಾಧೆಯು ಜನ ಬೇಟಿಲು ।
ಸಗರಾನ್ವಯ ರಾಯನಾಡಿ ಬೇಂಟೆಯ ತುದಿಯೊಳ್
ಅಘಕುಲದ ಸತಿಯರಿಂದಲಿ ।
ನಗರಮನೊಪ್ಪಿಸುತೆ ರಿಸಿಗೆ ಸತ್ಯವಕಾಯ್ದಂ ॥ ೧ ॥

End :

ಇಂದು ಧರೆಗೆ ಕೈಮುಗಿದೆಮುಧರ್ಮನು ।
ಅಂದ . . . . ಕೊಂಡಗ್ನಿ ।
ಬಂದಿತು ಋಣಶಿವಯೆಂದೆಱಗಲು ನಾ ।
ರಂದನು ನುಡಿದನಿಂತೆಂದು ॥ ೨೭೩ ॥
ದೇವಸಭೆಯಲಿ ನುಡಿದಿರಿ ಪ್ರತಿಜ್ಞೆಯ ;
ದೇವವಸಿ . . . . . . ನಿಗೆ ॥
ದೇವಕೌಶಿಕ ಅರ್ಧಫಲಗೊಡುಯೆನಲಾಗ ।
ದೇವಮುನೀಂದ್ರನಿಂತೆಂದ ॥ ೨೭೪ ॥
ಪಡೆಯಬಹುದು . . . .

(ವಿ-ವಿ.)—

ಅಸಮಗ್ರ ೩೭ ಓಲೆಗಳಿವೆ. ಕೊನೆಯ ಓಲೆಯ ಸಂಖ್ಯೆ ೩೯. ನಡುವೆ ೯, ೧೦ ಈ ಎರಡು ಪತ್ರಗಳಿಲ್ಲ. ನಡುವೆ ಏಳೆಂಟು ಓಲೆಗಳು ಮುರಿದಿವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಸಂಧಿಗಳು ೧-೨ ಪೂರ್ಣವಾಗಿಯೂ, ೩ ನೆಯದು ಅಪೂರ್ಣವಾಗಿಯೂ ಇವೆ. ಈ ಸಂಧಿಗಳಲ್ಲಿ ಕ್ರಮವಾಗಿ ೧೦೧, ೧೧೪, ೨೭೪ ಪದ್ಯಗಳಿವೆ. ಕಥಾಭಾಗವನ್ನು ನೋಡಿದರೆ ಕೊನೆಯಲ್ಲಿ ಸ್ವಲ್ಪಭಾಗ ಮಾತ್ರ ಹೋಗಿರುವಂತೆ ತೋರುತ್ತದೆ ಸಂಧಿಗಳ ಪ್ರಾರಂಭದಲ್ಲಿ ಒಂದೊಂದು ಕಂದಪದ್ಯವಿದೆ.

ಕವಿ ಬೊಂಬೆಯಲಕ್ಕನೆಂಬುವನು. ಈ ಪುಸ್ತಕದಿಂದ ಇವನ ವಿಷಯವಾಗಿ ಹೆಚ್ಚೇನೂ ತಿಳಿದು ಬರುವುದಿಲ್ಲ. ಕರ್ಣಾಟಕ ಕವಿ ಚರಿತ್ರೆಯಲ್ಲಿ ಇವನ ಗ್ರಂಥವನ್ನು ಕುರಿತು ಬರೆದ ವಿಚಾರಗಳಿಗೆ ಈ ಲೈಬ್ರರಿಯ ಹರಿಶ್ಚಂದ್ರಸಾಂಗತ್ಯದ ಪ್ರತಿಗಳಲ್ಲಿ ಆಧಾರ ಸಿಕ್ಕುವುದಿಲ್ಲ. ಈ ವಿಷಯಕ್ಕೆ ಮುಂದಣ ೧೧೧೮ ನೆಯ ನಂಬರನ್ನು ನೋಡುವುದು.

No. 1118. ಹರಿಶ್ಚಂದ್ರ ಸಾಂಗತ್ಯ by ಬೊಂಬೆಯಲಕ್ಕ and ರಾಮರಸವಿರೂಪಾಕ್ಷ-

HARIŚCANDRA SAṄGATYA BY BOMBEYALAKKA AND RĀMARASAVIRŪPĀKṢA.

Substance, palm-leaf. Size, 10⅞ × 1-3/16 inches. Pages, 129. Lines, 5 to 6 on a page. Extent, 900 granthas. Character, Kannada. Condition, much injured. Appearance, old. Mode of writing, not bad.

Begins on fol. 1*a* of the Ms. described under No. 1069 *ante.*

Complete in five sandhis.

The earlier portion (i.e., sandhis 1–4) is the same as that (i.e., up to the 226th stanza of the 3rd sandhi) of the work of *Bombeya Lakka*, described above (No. 1117) and the latter portion (i.e., 5th sandhi) is the same as the sandhis 12 and 13 of the work of Rāmarasavirūpākṣa described under No. 1114 with some different readings. In the earlier portion a stanza of the first sandhi in which the name of the author is mentioned is omitted here. For other particulars regarding the author of the earliest portion and his work—see extracts below.

Date of transacription :—Monday, the second day of the dark fortnight of the Lunar month Chaitra, in the year Vijaya.

Name of the scribe :—Cennārya, who copied for *Nanjayya*, the successor of revered *Hempanañjēśwara*, His Holiness of *Harinapura* Mutt.

Beginning :

ಶ್ರೀಶಶಿಭೂಷನೆ ಶೇಷಾಭರಣನೆ ।
ವಾಸವಾದಿಗಳಿಂ ವಂದಿತನೆ ॥
ಈಶ ಪಾರ್ವತಿಯರಸನೆ ವೃಷಭಾರೂಢ ।
ದೋಷರಹಿತಗೆಱಗುವೆನು ॥ ೧ ॥
ಮಗನ ಕೊಂದವನ ಹೆಮ್ಮಗನ ತಾಯಯ್ಯನ ।
ಜಗವರಿಯಲು ಕಡಿದವನ ॥
ಮಗನ ಮರಹಿಲಿ ಕೊಂದವನ ಮಗನ ಪಾದ ।
ಯುಗಳಕೆ ನಾನೆಱಗುವೆನು ॥ ೨ ॥

*   *   *   *

ಕೊಟ್ಟನು ಹರಿಶ್ಚಂದ್ರ ವಿರೂಪಾಕ್ಷಲಿಂಗಕೆ ।
ಪಟ್ಟೆಯ ಪದಕಮುತ್ತುಗಳ ॥
ಕೊಟ್ಟ ವಂದನೆಮಾಡಿ ಕಳುಹಿಸಿ ಕೊಂಡನು ।
ಇಷ್ಟಕೆ ಸಂಧಿ ಸಂಪೂರ್ಣ ॥ ೧೦೪ ॥
ಒಂದೊಂದು ಪದಕೊಂದು ಕೋಟಿಯಜ್ಞದ ಫಲ ।
ಹಿಂದಣ ಕರ್ಮವಿನಾಶ ॥
ಮುಂದೆ ಮುಕ್ತಿಯ ನೀವುದು ಸತ್ಯಕಥೆಯಾ ।
ನಂದದಿ ಕೇಳ್ವ ಜನರಿಗೆ ॥ ೧೦೫ ॥

Colophon :

ಪ್ರಥಮ ಸಂಧಿ ಸಂಪೂರ್ಣಂ.

ಮುಂದಣ ಸಂಧಿಯೆಂತೆಂದರೆ ಹರಿಶ್ಚಂದ್ರ ।
ಚಂದದಿ ವನದಿ ಮೃಗವನು ॥

• ಕೊಂದನು ಸೂಕರನಿಂದವನಕೆ ಬಂದಾ ।
ಅಂದು ಭೂಮಿಯು ಬಾಯಾತಿ । (?) ॥ ೧ ॥

End :

ಧರೆಯೊಳಗೇಳುತ ಹರಿಹರಹನುಮಂತ ।
ಹರಿಶ್ಚಂದ್ರ ಬಲರಾಮಯೆನುತ ॥
ಹರಣಾದಿ ನೆನೆದರೆ ದುರಿತವಿನಾಶನ ।
ಹರಕಥೆಯೊಳಗೊಂದು ವಾಕ್ತ ॥ ೮೧ ॥

ಬೇಳಲು ಲಾಲಿಸಿ ಕೇಳಲು ಕಷ್ಟಕೆ ।
ಮೂಲವು ಹರಿಶ್ಚಂದ್ರ ಕೃತಿಯು ॥
ಬಾಳುವ ಬಡವರು ಮೊದಲಾಗಿ ಸುಖದಿಂದ ।
ಬಾಳುವರಾ ಹರುಷದಲಿ ॥ ೮೨ ॥

ಶಾಲಿವಾಹನ ಬಂದು ಬಾಳದ ಕಲಿಯೊಳ ।
ಗಾಳದ ಶಕವರುಷಗಳು ॥
ಏಬಿಚಿ ಇಮ್ಮಡಿ ತಾಳದ ಶತಕದ ।
ಮೇಲಾದ ಅಱುವತ್ತು ವರುಷ ॥ ೮೩ ॥

ಶರಧಿಯು ಕಂದಗೆ ಶರಣೆಂಬ ದಿನದೊಳು ।
ಬೆರಸಿದ ಚೈತ್ರಮಾಸದಲಿ ॥
ನೆರೆದ ವಿಳಂಬಿಯು ವರಸಂವತ್ಸರದೊಳು ।
ಪರಿಪೂರ್ಣವಾಯಿತೀ ಕೃತಿಯು ॥ ೮೪ ॥

ಇದು ಐದು ಸಂಧಿಯು ಪದ (ನಱು) ನೂಱಕೆ ।
ಹದಿನೆಂಟರೊಳಗೊಂದೆಸೆಯು ॥
ಮದನಾರಿಯುನೆನ್ನಹೃದಯುದ ಮೇಲೊಂದು ।
ಪದದೊಳು ನಾ ಬಲಗೊಂಬೆ ॥ ೮೫ ॥

ಜನನಿಯು ಜನಕನ ಜನನವನಱಿಯುದ ।
ಚೆನುಮಯುಮೂರುತಿ ಶಿವನ ॥
ಮನದೊಳು ಮಱತಿಯುದೆ ನೆನೆವೆನು ವಿರೂಪಾಕ್ಷ ।
ಮನದೈವ ಪಾಲಿಸುಯೆಂದು ॥ ೮೬ ॥

ಚಂದ್ರಮತಿಯು ಲೋಹಿತಾಕ್ಷನು ನಲವಿಂದ ।
ಲಿಂದುಶೇಖರನ ಕರುಣದಿ ॥
ಚಂದದಿ ಮಂತ್ರಿರಾಯನು ರಾಜ್ಯವಾಳ್ದ ।
ನೆಂದೊಂದು ಸಂಧಿ ಸಮಾಪ್ತ ॥ ೮೭ ॥

ಒಂದೊಂದು ಪದಕೊಂದು ಕೋಟಿಯಜ್ಞದ ಫಲ ।
ಹಿಂದಣ ಕರ್ಮವಿನಾಶ ॥
ಮುಂದೆ ಮುಕ್ತಿಯುನೀವುದು ಸತ್ಯಕಥೆಯ
ನಂದದಿ ಕೇಳ್ವ ಜನರಿಗೆ ॥ ೮೮ ॥

Colophon :

ಅಂತು ಸಂಧಿ ೫ ಕ್ಕಂ ಪದ ೫೨೯ (?) (೫೩೧) ಕ್ಕಂ ಮಂಗಳಮಹಾಶ್ರೀ.

(ಎ-ಬಿ.)—

ಸಮಗ್ರ. ೫ ಸಂಧಿಗಳಿವೆ. ಓಲೆಗಳು ೧-೬೬ ಇದರಲ್ಲಿ ೫೯ ನೆಯ ಓಲೆ ಹೋಗಿದೆ. ೬೬ ನೆಯುದರಲ್ಲಿ ಒಂದೇ ಪಕ್ಕದಲ್ಲಿ ಬರೆದಿದೆ. ಕೆಲವು ಓಲೆಗಳು ಮುರಿದಿವೆ. ಇದರೊಡನೆ ಓದುವಗಿರಿಯುನ ಸಾನಂದಗಣೇಶಚರಿತ್ರೆಯುದೆ. ಪುಸ್ತಕದ ಆದಿಯಲ್ಲಿ "ಶ್ರೀ ಗುರು ಕೆಂಪ ನಂಜೇಶ್ವರಾಯ ನಮಃ" ಎಂದಿದೆ. ಕೊನೆಯಲ್ಲಿ "ಹರಿಣಪುರದ ಸಿಂಹಾಸನಾಧೀಶ್ವರ । ಗುರು ಕೆಂಪನಂಜೇಶ್ವರನ ಕರಜಾತ ನಂಜಯ್ಯ ಬರೆಸಿದ ಹರಿಶ್ಚಂದ್ರ । ಚರಿತೆಯು ಚೆನ್ನಾರ್ಯನಿಂದ" ವಿಜಯಸಂವತ್ಸರದ ಚೈತ್ರ ಬ ೨ ಚಂದ್ರವಾರದಲ್ಲು ಹರಿಶ್ಚಂದ್ರ ಸಾಂಗತ್ಯ ಸಂಪೂರ್ಣವಾಯಿತು ಎಂದಿದೆ.

ಇದು ಸಾಂಗತ್ಯದಲ್ಲಿ ಬರೆದಿದೆ. ಸಂಧಿಗಳು ೫, ೧, ೨, ೪, ೫ ಸಂಧಿಗಳ ಅಂತ್ಯದಲ್ಲಿ 'ಒಂದೊಂದು ಪದಕೊಂದು' ಎಂಬ ಪದ್ಯವಿದೆ. ಅದನ್ನು ಒಂದೇ ಪದ್ಯವನ್ನಾಗಿ ಎಣಿಸಿದರೆ ಒಟ್ಟು ೫೩೧ ಪದ್ಯಗಳು ಆಗುತ್ತವೆ.

ಈ ಗ್ರಂಥದ ಮೊದಲಿನ ಎರಡು ಸಂಧಿಗಳು ಹಿಂದಣ ೧೧೧೭ ನೆಯ ನಂಬರಿನಲ್ಲಿ ವರ್ಣಿತವಾದ ಬೊಂಬೆಯಲಕ್ಕನ ಹರಿಶ್ಚಂದ್ರ ಸಾಂಗತ್ಯದ ೧ ನೆಯ ಮತ್ತು ೨ ನೆಯ ಸಂಧಿಗಳಿಗೂ, ೩ ನೆಯ ಮತ್ತು ೪ ನೆಯ ಸಂಧಿಗಳು ಅದರ ಮೂರನೆಯ ಸಂಧಿಯ ೧-೧೪೭ ಮತ್ತು ೧೪೮-೨೦೬ ಪದ್ಯಗಳಿಗೂ ಸರಿಹೋಗುತ್ತವೆ. ಅಲ್ಲಲ್ಲಿ ಸ್ವಲ್ಪ ಪಾಠಭೇದವು ಮಾತ್ರ ಇದೆ. ಅದರಲ್ಲಿರುವ ಸಂಧಿಸೂಚನೆಯ ಕಂದಪದ್ಯಗಳು ಇದರಲ್ಲಿಲ್ಲ. ಅವುಗಳ ಸ್ಥಾನದಲ್ಲಿ ಸಾಂಗತ್ಯ ಪದ್ಯಗಳಿವೆ. ಗ್ರಂಥಕರ್ತನ ನಾಮ ನಿರ್ದೇಶವುಳ್ಳ ಮೊದಲ ಸಂಧಿಯ ಒಂದು ಪದ್ಯವು ಇದರಲ್ಲಿ ಕಾಣುವುದಿಲ್ಲ. ಅನಂತರ ೧೧೧೪ ನೆಯ ನಂಬರಿನಲ್ಲಿ ವರ್ಣಿಸಿದ ರಾಮರಸ ವಿರೂಪಾಕ್ಷನ ಗ್ರಂಥದ ೧೨ ನೆಯ ಮತ್ತು ೧೩ ನೆಯ ಸಂಧಿಗಳನ್ನು ಒಂದಾಗಿಸಿ ೫ ನೆಯ ಸಂಧಿಯನ್ನಾಗಿ ಗಣಿಸಿ ಕಥೆಯು ಪೂರ್ತಿಗೊಳಿಸಿದೆ. ಈ ಜೋಡಣೆಯು ಬರೆಹಗಾರನಿಂದ ಮಾಡಲ್ಪಟ್ಟಿದೆಂದು ತೋರುತ್ತದೆ. ಈ ಪ್ರತಿಯನ್ನು ಮೇಲಿಂದ ಮೇಲೆ ನೋಡಿದರೆ ಐದು ಸಂಧಿಗಳೂ ಏಕ ಕರ್ತೃಕಗಳೆಂದು ಭ್ರಾಂತಿಯುಂಟಾಗಬಹುದು. ಈ ಮೇಲಿನ ಕಾರಣದಿಂದ ೧೧೧೪ ನೆಯ ನಂಬರಿನ ಪ್ರತಿಯಲ್ಲಿರುವಂತೆ ಈ ಪ್ರತಿಯಲ್ಲಿಯೂ ಪುಸ್ತಕಾಂತ್ಯದಲ್ಲಿರುವ "ಶಾಲಿವಾಹನ ಬಂದು", "ಶರಧಿಯ ತಂಡೆಗೆ" ಎಂಬ ಪದ್ಯಗಳಿಂದ ಸೂಚಿತವಾಗುವ ಗ್ರಂಥ ನಿರ್ಮಾಣಕಾಲವು ರಾಮರಸಪಂಡಿತನ ಗ್ರಂಥವನ್ನು ಮಾತ್ರವೇ ಅವಲಂಬಿಸಿದುದೆಂದು ಹೇಳಬೇಕಾಗಿದೆ.

ಕವಿಚರಿತ್ರೆಯಲ್ಲಿ "ಬೊಂಬೆಯಲಕ್ಕನಿಂದ ರಚಿತವಾದ ಹರಿಶ್ಚಂದ್ರ ಸಾಂಗತ್ಯದಲ್ಲಿ ಸ್ಥಲ ೫, ಪದ್ಯ ೫೭೦" ಎಂದೂ "ಅದನ್ನು ಶಕ ೧೪೬೦ ನೆಯ ವಿಳಂಬಿಯಲ್ಲಿ ಅಂದರೆ ಕ್ರಿ. ಶ. ೧೫೩೮ ರಲ್ಲಿ ರಚಿಸಿದಂತೆ ಕವಿಯು ಹೇಳಿರುವನು" ಎಂದೂ ಬರೆದಿದೆ. ರಾಮರಸ ಪಂಡಿತನ ಗ್ರಂಥಕ್ಕೂ ಇದೇ ಕಾಲವನ್ನು ಕವಿಚರಿತ್ರಕಾರರು ಹೇಳಿರುವರು. ಇವುಗಳಲ್ಲಿ ರಾಮರಸಪಂಡಿತನ ವಿಷಯವಾಗಿ ಅವರು ಬರೆದ ಕಾಲ ನಿರ್ದೇಶಕ್ಕೆ ಈ ಲೈಬ್ರರಿಯ ಪ್ರತಿಗಳಲ್ಲಿಯೂ (No. 1114 & 1116) ಆಧಾರವು ದೊರೆಯುತ್ತದೆ.

No. 1119. ಹರಿಶ್ಚಂದ್ರ ಸಾಂಗತ್ಯ by ಓದುವಗಿರಿಯ-
HARIŚCANDRA SĀṄGATYA BY ŌDUVAGIRĪYA.

Substance, palm-leaf. Size, 13 × 1¼ inches. Pages, 202. Lines, 6 to 7 on a page. Character, Kannada. Extent, 2,000 granthas. Condition, very much injured. Appearance, old. Mode of writing, fair.

Complete in 12 sandhis.

Similar to the work described under No. 1114 *ante*.

The author is not known from this. In the "Lives of Kannada poets" the authorship is attributed to Ōduvagiriya, the author of *Sānadaganēśvarasāṅgatya*. For details see extracts given below and under the previous No. 1069 *ante*.

Date of transcription :—Monday, the thirteenth in the first half of the Lunar month, Śrāvaṇa in the Śaka year 1498 corresponding to 1576 A.D.

Name of the scribe :—Tirumala, son of *Basavēśvara* of *Baḷḷanahaḷḷi* in the country then known as Ḍenkaṇakōṭe.

Beginning :

ಸಾಂಗತ್ಯ ॥ ಶ್ರೀವರ ವಾಣೀಪತಿ ಶಚಿಯರಾಣ್ಮಸಂ ।
ಸೇವಿತ . . . .
ಪಾವನರೂಪ ಪಂಚಾಸ್ಯ ಶ್ರೀ ಗೌರಿಯ ।
ಜೀವೇಶ . . ಪ ಮಲ್ಲೇಶ ॥ ೧ ॥

ಬಾಲೇಂದುಚೂಡ ಭಸ್ಮಾಂಗ ವಿಲೇಪನೆ ।
ಕಾಲಕಂಧರ ಶೂಲಪಾಣಿ ॥
ಮೂಲೋಕಪಾಲಕ ಮುನಿಜನಹೃದ್ಯಕ ।
ಪಾಲಿ ಪಾಲಿಪ್ಪುದು ಮಲ್ಲೇಶ ॥ ೨ ॥

* * *

. . . .

. . . .

ಪೋಡಿಯಾಗದೆ ಕೊಟ್ಟ ಪ್ರಸ್ಥಪುರದೊಳಹ ।
. . ಡಿಯ ಬಸವಗೆಱಗುವೆನು ॥ ೨ ॥

ಬಾಣಮಯೂರರನುದ್ಭಟ ಕಾಳಿದಾಸನು ।
ಬಾಣ ಹಲಬೆಯ ಹರೀಶ್ವರನ ॥
ಪಾಣದೆ ಮಲುಹಣೇಶ್ವರ ರಾಘವಾಂಕನ ।
ಕೇಣವಿಲ್ಲದೆ ಬಲಗೊಂಬೆ ॥ ೧೧ ॥

ಅಱಿಯದಾತನು ಪೇೞ್ವಿಕೆ . . . ನುಡಿಯೆಂ
. . . . ॥

. . . . |
. . . . . . ಮಾಟ್ಟಿನ ಚದುರ ॥ ೧೨ ॥
ಧರೆಯೊಳಧಿಕಪ್ರಸ್ಥ ಪುರದೊಳೆಸೆವ ಚೆಲ್ವು ।
. . . . |
. . . .
. . . ಳೊರೆದನೀ ಕೃತಿಯು ॥ ೧೩ ॥

* * *

ತಾಪತ್ರಯನಾಶ . . . . ಹೃದಯವಾಸ ।
ಗೋಪ . . . ಮನವಿಲಾಸ ॥
ಶ್ರೀ ಪಾರ್ವತಿಯು ಪ್ರಾಣೇಶ ಸಲಹು ಉ ।
ಮಾಪತಿ ಜಯ ಮಾದೇವ ॥

End :

ಮಾಳವ ಮಲೆಯಾಳ ಗೌಳ ಕೊಂಕಣನೇ ।
ಪಾಳ ಗುಜ್ಜರ ಕೈರವದ ।
. . . . . . - ಮುಂತಾದ ಭೂ ।
ಪಾಲರುಗಳನು . . . ॥ ೧೫೩ ॥

. . . . ವರನೋಲಗದಿ ಸಚಿ ।
ವರನೋಲಗದಿ ಮುನಿವರರ ॥
ನೆರವಿಯೊಳೆಲ್ಲಿ ನೋಡಲು ಹರಿಶ್ಚಂದ್ರಭೂ ।
ವರನ ಕೀರ್ತಿಯ ಪೊಗಳುವರು ॥ ೧೫೪ ॥

. . . . ತರಜದೇವಾ ।
ಸುರರಷ್ಟವಸುಗಳ ಕೈಯ ॥
ವರವ ಪಡೆದು ಹರಿಶ್ಚಂದ್ರ ಭೂವರನಲ್ಲಿ ।
ಸ್ಥಿರಸಾಮ್ರಾಜ್ಯದೊಳರ್ದ ॥ ೧೫೫ ॥

ವರಹರಿಶ್ಚಂದ್ರಭೂವರನ ಚಾರಿತ್ರವ ।
ನೊರೆ . . . . ವ್ರೋದಿದವಗೆ ॥
ಪಿರಿದು ಸಂತಸದಿಂದ ಕೇಳ್ದಮನುಜರಿಗೆ ।
ಗಿರಿಜೇಶನೊಲಿದು ರಕ್ಷಿಪನು ॥ ೧೫೬ ॥

ಕಂ ॥ . . . . ರಿಶ್ಚಂದ್ರನ ನೆಱತೆ ।
ಕಾವ್ಯವನೊಲಿದೋದುತಿರ್ಪಶಾವಿನೊಳೆಲ್ಲಿಯು ॥
ಆವಗ ಬೆಳೆಯುಂ ಮಳೆಯುಂ ।
ಆವರಿಸಿಹುದಧಿಕ ಸುಖವನೀವುದು ನಿರುತಂ ॥ (?) ॥ ೧೫೭ ॥

Colophon :

ಅಂತು ಸಂಧಿ ೧೨ ಕ್ಕಂ ಪದನು ೧೪೦೦ ಕ್ಕಂ ಮಂಗಳಮಹಾಶ್ರೀ.

(ವಿ-ವಿ.)—

ಸಮಗ್ರ. ನಡುವೆ ಓಲೆಗಳು ಹೋಗಿವೆ. ಹೆಚ್ಚಿನ ಮಟ್ಟಿಗೆ ಓಲೆಗಳು ಮುರಿದೂ ಹುಳುತಿಂದೂ ಹೋಗಿವೆ. ಅತ್ಯಂತ ಶಿಥಿಲವಾದ ಪ್ರತಿ. ಓಲೆಗಳ ಸಂಖ್ಯೆಯನ್ನು ತಿಳಿಯುವುದಕ್ಕೆ ಸಾಧ್ಯವಿಲ್ಲ. ಪುಸ್ತಕದ ಕೊನೆಯಲ್ಲಿ 'ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೪೯೭ ನೆಯ . . ತ್ಸರ ಶ್ರಾವಣಶುದ್ಧ ೧೩ ದೆಸಿಯೂ (ತ್ರಯೋದಶಿಯೂ) ಸೋಮವಾರದಲ್ಲು ಡೆಂಕಣಿಕೋಟೆಯ ಸೀಮೆಯ ಬಳ್ಳನಹಳ್ಳಿಯ ಪೇಟೆಯಲ್ಲಿಯಿಹ ಬಸವೇಶ್ವರನ ಪ್ರಿಯದ ಪುತ್ರರಾದ ತಿರುಮ . . . . . ಹರಿಶ್ಚಂದ್ರ ಸಾಂಗತ್ಯ ಸಂಪೂರ್ಣಂ. ಮಂಗಳ ಮಹಾಶ್ರೀ' ಎಂದಿದೆ.

ಇದು ಸಾಂಗತ್ಯದಲ್ಲಿ ಬರೆದಿದೆ. ಸಂಧಿಗಳು ೧೨, ಪದ್ಯಗಳು ೧೪೦೦. ಸಂಧಿಗಳು ೧೨ ಎಂದಿರುವ ಭಾಗವು ಹೋಗಿದೆ. ೧೦ ನೆ ಸಂಧಿಯ ಅಂತ್ಯವಿದೆ. ಮುಂದಕ್ಕೆ ಒಂದು ಸಂಧಿ ಅಪೂರ್ಣವಾಗಿದೆ. ಆ ಮೇಲೆ ಈ ಸಂಧಿ ಮೊದಲಿಂದ ಕಡೆಯವರಿಗೂ ಇದೆ ಈ ಕಾರಣದಿಂದ ಈ ಸಂಧಿಗೆ '೧೨' ಎಂಬ ಸಂಖ್ಯೆಯನ್ನು ಕೊಡಲಾಗಿದೆ. ಇಲ್ಲಿಗೆ ಗ್ರಂಥವು ಮುಗಿಯುತ್ತದೆ. ಗ್ರಂಥದಾದಿಯಲ್ಲಿ ಮಲ್ಲೇಶ ಸ್ತುತಿಯಿದೆ. ಆ ಮೇಲೆ ಕವಿ ಪರಮೇಶ್ವರಿ, ವಿಘ್ನೇಶ. ವೀರಭದ್ರ, ಬಸವ (ನಂದಿ), ವಾಣಿ ಇವರನ್ನು ಕ್ರಮವಾಗಿ ಸ್ತುತಿಸಿ ಬಾಣಮುಂತಾದ ಕವಿಗಳನ್ನು ಸ್ಮರಿಸಿದ್ದಾನೆ. ತರುವಾಯ ಕವಿಕಾವ್ಯ ಪ್ರಶಂಸೆಯನ್ನು ಮಾಡಿದ್ದಾನೆ. ಆದರೆ ಆ ಓಲೆಯು ಮುರಿದು ಹೋಗಿರುವುದರಿಂದ ಕವಿಯ ಹೆಸರನ್ನು ತಿಳಿಯಲು ಸಾಧ್ಯವಾಗುವುದಿಲ್ಲ. ಮುರಿದಿರುವ ಓಲೆಯಲ್ಲಿ 'ಅಧಿಕಪ್ರಸ್ಥಪುರ' ಎಂಬುದು ಸಿಕ್ಕುತ್ತದೆ. ಇದು ಈಗ ಯಾವ ಊರಾಗಿರಬಹುದೋ ಗೊತ್ತಾಗುವುದಿಲ್ಲ.

ಇದರಲ್ಲಿ ಪೂರ್ವಕವಿಗಳನ್ನು ಸ್ಮರಿಸಿರುವ ಪದ್ಯವು ಕವಿಚರಿತ್ರೆಯಲ್ಲಿ ಉದ್ಧೃತವಾಗಿದೆ. ಕವಿಚರಿತ್ರಕಾರರು ತನಗೆ ಸಿಕ್ಕಿದ ಪ್ರತಿಯಲ್ಲಿ ಅದನ್ನು ಪ್ರತಿಮಾಡಿದ ಕಾಲವು ಶಕ ೧೪೯೭ ಎಂದಿದೆಯೆಂದು ಕವಿಚರಿತ್ರೆಯಲ್ಲಿ ಬರೆದಿರುವರು ಈ ಲೈಬ್ರೆರಿಯ ಪುಸ್ತಕದಲ್ಲಿಯೂ ಅದೇ ಕಾಲ ನಿರ್ದೇಶವಿದೆ. ಆದ್ದರಿಂದ ಕವಿಚರಿತ್ರಕಾರರಿಗೆ ಸಿಕ್ಕಿದ ಪ್ರತಿಯು ಇದೇ ಆಗಿರ ಬಹುದೆಂದು ತೋರುತ್ತದೆ. ಆದರೆ ಅವರು ಈ ಗ್ರಂಥದಲ್ಲಿ ೬ ಸಂಧಿಗಳು, ೪೪೧ ಪದ್ಯಗಳು ಇವೆಯೆಂದಿರುವರು. ಇದರಲ್ಲಾದರೆ ೧೨ ಸಂಧಿಗಳು- ೧೪೦೦ ಪದ್ಯಗಳು ಕಾಣುತ್ತವೆ. ಈ ವ್ಯತ್ಯಾಸಕ್ಕೆ ಕಾರಣವನ್ನು ಈ ಲೈಬ್ರೆರಿಯ ಪ್ರತಿಗಳ ಆಧಾರದ ಮೇಲೆ ಊಹಿಸಿದರೆ ಹಿಂದಣ ೧೦೬೯ ನೆಯ ನಂಬರಿನಲ್ಲಿ ವರ್ಣಿತವಾದ ಇದೇಕವಿಯ ಸಾನಂದಗಣೇಶ್ವರ ಸಾಂಗತ್ಯದ ಕೊನೆಯಲ್ಲಿ ಕಾಣಿಸಿದ ಸಂಧಿಪದ್ಯ ಸಂಖ್ಯೆಯು ಇದರಲ್ಲಿ ಭ್ರಮಾಗತವಾಗಿರಬಹುದೆಂದು ತೋರುತ್ತದೆ. ಇದನ್ನು ಕುರಿತು ಹೆಚ್ಚಿನ ವಿಷಯಗಳಿಗೆ ಹಿಂದಣ ೧೦೬೯ ನೆಯ ನಂಬರನ್ನು ನೋಡುವುದು.

ಬರವಣಿಗೆಯ ಕಾಲವು ಶಕ ೧೪೯೭ (ಕ್ರಿ.ಶ. ೧೫೭೫) ಎಂದು ಗೊತ್ತಾಗುವುದರಿಂದ ಕವಿಯ ಕಾಲವು ಇನ್ನೂ ಹಿಂದಕ್ಕಿರಬೇಕೆಂಬುದು ಸ್ಪಷ್ಟವಾಗುವುದು.

———

No. 1120. ಹರಿಶ್ಚಂದ್ರ ಸಾಂಗತ್ಯ by ಹಲಗ-
HARISCANDRA SĀṄGATYA BY HALAGA.

Substance, palm-leaf. Size, 11¼ × 1¼ inches. Pages, 186. Lines, 5 to 6 on a page. Extent, 1,600 granthas. Character, Kannada. Condition, slightly injured. Appearance, old. Mode of writing, fair.

Incomplete.

Similar to the work described under No. 1114 *ante*.

The author is Halagakavi, son of *Tōpina Gaṇācāri*. He was a resident of *Gummalapura*. He was a follower of Vīraśaiva religion and lived in about 1650 A.D.

Beginning :

ಸಾಂಗತ್ಯ ॥ ದೇವರ ದೇವನೆ ದೇವ ಪಂಚಾಕ್ಷರಿ ।
ದೇವ ತ್ರೈಲೋಕ್ಯ ವಂದಿತನೆ ॥
ದೇವತೆಗಳ ನಿಮ್ಮ ಕೃಪೆಯಿಂದ ರಕ್ಷಿಪ ।
ದೇವ ಸಲಹು ವಿರೂಪಾಕ್ಷ ॥ ೧ ॥

ಕೆಂಜೆಡೆಯೊಳು ಗಂಗೆ ರಂಜಿಪ ರವಿಶಶಿ ।
ಕುಂಜರ ಚರ್ಮಾಂಬರನೆ ॥
ನಂಜುಗೊರಳು ಅರಿದಲೆರುಂಡಮಾಲೆ ಧ- ।
ನಂಜಯಾಂಬಕಗೆರಗುವೆನು ॥ ೨ ॥

*　　　　*　　　　*

ಬಸವರಾಜನು ಮಡಿವಾಳಯ್ಯನು ಚೆನ್ನ ।
ಬಸವನು ದಸರಿಯು ದೇವ ॥
ಬಸವಣ ಬಾಗಿರರೊಬ್ಬರಱಿಯದ ।
ಅಸಮಶಂಕರಗೆಱಗುವೆನು ॥ ೧೬ ॥

ಬಾಣಮಯೂರನು ಕಾಳಿದಾಸನು ಕವಿ ।
ಜಾಣ ಹಂಪೆಯು ಹರಿದೇವ ॥
ಕಾಣೆಯು ನುಡಿಗೇಳ ಕೈಲಾಸಕೆ ಹೋದ ।
ಜಾಣನುದ್ಭಟಗೆಱಗುವೆನು ॥ ೧೭ ॥

ಶಂಕರದಾಸಯ್ಯ ಸುಂಕದ ಬಂಕಣ್ಣ ।
ತೆಂಕಮಂಚಣ್ಣ ಕಲಕೇತ ॥
ಶಂಕರನೊಳು ಕಾದಿ ದೇಶಾಧಿನಾಥಗೆ ।
ಭೋಂಕನೆ ನಾನೆಱಗುವೆನು ॥ ೧೮ ॥

ಕಕ್ಕಯ್ಯ ಚಿಕ್ಕಯ್ಯ ರಕ್ಕಸ ಬ್ರಹ್ಮಯ್ಯ
ಸೊಕ್ಕಿದ ಜೈನರೆಲ್ಲರನು ॥

ಉಕ್ಕು ಮುಱಿದ ಆದಯ್ಯನ ಪಾದಕೆ ।
ಗಕ್ಕನೆ ನಾನೆಱಗುವೆನು ॥ ೧೯ ॥

ಚೆನ್ನಯ್ಯ ಹೊನ್ನಯ್ಯ ಕಿನ್ನರಿ ಬ್ರಹ್ಮಯ್ಯ ।
ಹೊನ್ನಲಗೆಯ ಸಿದ್ಧರಾಮ ॥
ತನ್ನ ಶಿರವ ಶ್ರೀಗುರುವಿಗಱಿದಿತ್ತ ।
ನನ್ನಯ್ಯನಿಗೆಱಗುವೆನು ॥ ೨೦ ॥

ಸಿಂಧುಬಲ್ಲಾಳನ . . ಯನಿತ ಸಿರಿಯಾಳ ।
ಕಂದನ ಕೊಂದುಣಲಿತ್ತ ॥
ಅಂದು ಮಳಯರಾಜನ ಮಲದೇಶವ- ।
ನೊಂದುಳಿಯದೆ ಕೊಂಡೊಯ್ದ ॥ ೨೧ ॥

ಕಣ್ಣು ಮೂರುಳ್ಳವ ಹರಿಶ್ಚಂದ್ರಗೊಲಿದುದ ।
ಬಣ್ಣಿಸುವೆನು ಇಳೆಯೊಳಗೆ ॥
ಕಣ್ಣುಮೂರುಳ್ಳನ ಶರಣರಾಲಿಸಿ ನಿಮ್ಮ ।
ಸಣ್ಣವ ಪೇಳದ ಕೃತಿಯ ॥ ೨೨ ॥

ಚಪ್ಪನ್ನದೇಶಕೆ ಭೂಕೈಲಾಸವೆನಿ- ॥
ಸಿರ್ಪ ಗುಮ್ಮಳಾಪುರದೊಳಗೆ ॥
ಇಪ್ಪನು ತೋಪಿನ ವೀರಗಣಾಚಾರಿ- ।
ಗೊಪ್ಪುವ ಸುತ ಕವಿ ಹಲಗ ॥ ೨೩ ॥

ಈ ಶಿವಶರಣರ ಕೃಪೆಯಿಂದ ಪೇೞುವೆ ।
ಬೇಸದೆಲ್ಲರು ಕೇಳುವುದು ॥
ಬಾಸೆ ತಪ್ಪದ ಹರಿಶ್ಚಂದ್ರರಾಯಗೆ- ।
ಯೀಶ್ವರನೊಲಿದ ಕೃತಿಯನು ॥ ೨೪ ॥

* * *

ತಂದು ತಪ್ಪನು ಕಾಯ್ದು ಹರಿಶ್ಚಂದ್ರರಾಯನು ।
ತಂದ ಕಳ್ಳರ ಬಿಡಿಸಿದನು ॥
ತಂದೆ ಮಕ್ಕಳು ಸುಖದೊಳಿರುತಿರ್ದರು- ।
ಯೆಂಬ ಠಾವಿಗೆ ಸಂಧಿಯೊಂದು ॥ ೧೩೮ ॥

Colophon :

(ಪ್ರಥಮಸಂಧಿ ಸಂಪೂರ್ಣಂ) ಶ್ರೀ. ಶ್ರೀ.

ಕಂದ ॥ ಮರ್ತ್ಯ (ರ) ಲೋಕಕೆ ಕರ್ತನು ।
ಉತ್ತಮ ಹರಿಶ್ಚಂದ್ರನೃಪನು ಸತ್ಯ (ದೆ) ನಡೆಯಲು ॥
ಸತ್ಯವ ಕೆಡಿಸುವೆನೆನುತಂ ।
ಮರ್ತ್ಯಕೆ ಬರುತಿರ್ದ ಮುಂದೆ ವಿಶ್ವಾಮಿತ್ರಂ ॥

End :

ಇತ್ತ ಹರಿಶ್ಚಂದ್ರರಾಯನು ಮಂತ್ರಿಯು ।
ಉತ್ತಮ ಸತಿಸುತಸಹಿತ ॥
ಸತ್ಯವ ಬಿಡದೆ ರಾಜ್ಯವನಾಳುತಿರ್ದನು ।
ಅತ್ಯಂತ ಸಂತೋಷದಲಿ ॥ ೭೭ ॥

ಸತ್ಯವ ಬಿಡದ ಹರಿಶ್ಚಂದ್ರರಾಯನ ।
ಮತ್ತೆ ಕಾಶಿಯ ಪತಿಯೊಲಿದು ॥
ನಿತ್ಯಾಗಳ ಕೇಳದವರಿಗೆ ।
ಮುಕ್ತಿಫಲವನೀವ ಶಿವನು ॥ ೭೮ ॥

ಸತ್ಯವೆ ಜಯವು ಅಸತ್ಯವೆ ಲಯವೆಂದು ।
ನಿತ್ಯ [ಲು ತಾನೆಂದು] (ಪ್ರಮಾನಂದ) ಪಡೆದ ॥
ಉತ್ತಮ ಹರಿಶ್ಚಂದ್ರನ ಕತೆ ಸಂಪೂರ್ಣ ।
ಮತ್ತಲ್ಲಿ ಗೆಂಟನೆಯ ಸಂಧಿ ॥ ೭೯ ॥

Colophon :

ಅಂತು ಸಂಧಿ ೮ ಕ್ಕಂ ಪದನು ೧೦೧೩ ಕ್ಕಂ ಮಂಗಳಮಹಾಶ್ರೀ.

ವಿ.ಪಿ :—ಆದ್ಯಂತಗಳಿವೆ. ನಡುವೆ ಅಲ್ಲಲ್ಲಿ ಕೆಲವು ಭಾಗಗಳು ಹೋಗಿವೆ. ಸಂಧಿ ೧ ರಿಂದ ೪ ರ ೫೮ ನೆಯ ಪದ್ಯದ ವರೆಗೆ, ೪ ರ ೬೦ ನೆಯ ಪದ್ಯದಿಂದ ೬ ರ ೨೫ ರ ವರೆಗೆ ಬಳಿಕ ಕೊನೆಯದಾದ ಎಂದರೆ ೮ ನೆಯ ಸಂಧಿಯ ೭ ನೆಯ ಪದ್ಯದಿಂದ ಕಡೆಯವರೆಗೆ ಈ ಕ್ರಮದಲ್ಲಿದೆ. ಪ್ರತಿ ಸ್ವಲ್ಪ ಮಟ್ಟಿಗೆ ಶಿಥಿಲವಾಗಿದೆ. ಲಿಪಿ ಚೆನ್ನಾಗಿದೆ ಈ ಪುಸ್ತಕದಲ್ಲಿ ಆದಿಭಾಗದಲ್ಲಿರುವ ಒಂದೆರಡು ಪದ್ಯಗಳು ಹಿಂದಣ ಕೆಲವು ಪುಸ್ತಕಗಳಲ್ಲಿಯೂ, ಕಂಡು ಬರುವುವು.

ಇದು ಸಾಂಗತ್ಯರೂಪವಾದುದು. ಸಂಧಿಗಳು ೮. ಪದ್ಯಗಳು ೧೦೧೩. ಗ್ರಂಥದಾದಿಯಲ್ಲಿ ವಿರೂಪಾಕ್ಷಸ್ತುತಿಯಿದೆ. ಆ ಮೇಲೆ ವಿಘ್ನೇಶ, ಭಾರತಿ, ಶಂಕರ, ವಿರೂಪಾಕ್ಷ, ಮುಕ್ಕರ (ಮುಕ್ಕೂರ) ವಿನಾಯಕ, ಸರಸ್ವತಿ ಇವರ ಸ್ತುತಿಗಳಿವೆ. (ವಿರೂಪಾಕ್ಷ ಮುಂತಾದ ದೇವತೆಗಳ ಸ್ತುತಿಗಳು ಮತ್ತೆಯೂ ಇವೆ.) ಬಳಿಕ <u>ಬಸವಾದಿ</u> ಪುರಾತನರನ್ನೂ <u>ಬಾಣ,</u> ಮುಂತಾದ ಕವಿಗಳನ್ನೂ ಕವಿ ನುತಿಸಿದ್ದಾನೆ. ಹರಿಶ್ಚಂದ್ರರಾಯನ ಚರಿತವು ಇದರಲ್ಲಿ ಉಕ್ತವಿಷಯವು.

ಕವಿ <u>ಹಲಗ</u>ನೆಂಬುವನು. ತಂದೆ <u>ತೋಪಿನ</u> <u>ವೀರಗಣಾಚಾರಿ.</u> ಊರು ಗುಮ್ಮಳಾಪುರ. ಕವಿ ವೀರಶೈವ ಮತದವನು. ಇವನ ಕಾಲವು ಸು. ೧೬೫೦ ಇರಬಹುದೆಂದು ಕವಿಚರಿತ್ರೆ (ಸಂಪುಟ ೨, ಪುಟ ೪೩೦) ಯಲ್ಲಿ ಹೇಳಿದೆ.

No. 1121- ಹರಿಶ್ಚಂದ್ರ ಸಾಂಗತ್ಯ by ರಾಮರಸವಿರೂಪಾಕ್ಷ-
HARIŚCANDRASĀṄGATYA BY RĀMARASAVIRŪPAKṢA.

Substance, Palm-leaf. Size, $7\frac{1}{2} \times 1\frac{1}{4}$ inches. Pages, 14. Lines, 5–6 on a page. Extent, 85 granthas. Character, Kannada. Condition, extremely injured. Appearance, old. Mode of writing, fair.

Begins on fol. 1*a* of the Ms. described under No. 290 ante, wherein this work has been omitted to be mentioned as the other work.

Incomplete.

Contains stanzas from 173 to 222 of the 3rd sandhi, the last sandhi of this work. This portion coincides with the 22nd stanza of the 12th sandhi to end of the 13th sandhi, which is the last sandhi of the work described under No. 1114 *ante*.

Same work as that described under No. 1116 *ante*.

End :

ಇದು ಮೂಱು ಸಂಧಿಯು ಪದನರುಸೂಱನು ।
ಒದವಿದ ಭಕ್ತಿ . . . . ಗೆ॥
ಮದನಾರಿಯುನು ಯೆನ್ನ ಹೃದಯುದಿ ಮೇಲೊಂದು ।
ಪದನೊಳು ನಾ ಬಲಗೊಂಬೆ ॥ ೨೨೧ ॥

ಕರಣ ಚತ್ರುಷ್ಟಯು ವರ . . . ಷ್ಟ।
ಕ . ವಶವಾಯು ಪಂಚೇಂದ್ರಿ ।
ಉರವಣೆ . . . . ಂನ ಹೃದಂಬುಜ ।
ಕರನೆ ಶ್ರೀವಿರುಪಾಕ್ಷ ಶರಣು ॥ ೨೨೨ ॥

Colophon :

ಅಂತು ಸಂಧಿ ಮೂರಕ್ಕೆ ಪದನು ೬೫೦ ಕ್ಕೆ ಮಂಗಳಮಹಾಶ್ರೀ.

(ವಿ-ವಿ.)—

ಅಸಮಗ್ರ. ಕೊನೆಯ ಸಂಧಿಯಾದ ಮೂರನೆಯ ಸಂಧಿಯಲ್ಲಿ ೧೭೩ ನೆಯ ಪದ್ಯದಿಂದ ಅಂತ್ಯದವರೆಗೆ ಅಂದರೆ ೨೨೨ ನೆಯ ಪದ್ಯದವರೆಗೆ ಇದೆ. ಇದು ಹಿಂದಣ ೧೧೧೪ ನೆಯ ನಂಬರಿನಲ್ಲಿ ವರ್ಣಿತವಾದ ಪುಸ್ತಕದಲ್ಲಿ ೧೨ ನೆಯ ಸಂಧಿಯ ೨೨ ನೆಯ ಪದ್ಯದಿಂದ ಅದರ ಕೊನೆಯದಾದ ೧೩ ನೆಯ ಸಂಧಿಯ ಅಂತ್ಯದವರೆಗಣ ಭಾಗವಾಗುತ್ತದೆ. ಅತ್ಯಂತ ಜೀರ್ಣವಾದ ಪ್ರತಿ. ಲಿಪಿಚೆನ್ನಾಗಿದೆ.

ಇದರೊಡನೆ ಭಾರತಾಂತರ್ಗತ ರಾಜನೀತಿ ಇದೆ. ಅದು ಹಿಂದೆ ೨೯೦ ನೆಯ ನಂಬರಿನಲ್ಲಿ ವರ್ಣಿತವಾಗಿದೆ. ಅದರ ಪುಟಗಳು ೩೦. ಆದರೆ ಅದನ್ನು ವರ್ಣಿಸುವಾಗ ಈ ಹರಿಶ್ಚಂದ್ರಸಾಂಗತ್ಯದ ೧೪ ಪುಟಗಳನ್ನೂ ಸೇರಿಸಿ ಪುಟಗಳು ೪೪ ಎಂದು ತಪ್ಪಾಗಿ ಕಾಣಿಸಿದೆ.

ಇದು ಹಿಂದೆ ೧೧೧೬ ನೆಯ ನಂಬರಿನಲ್ಲಿ ವರ್ಣಿತವಾಗಿದೆ. ಅದರ ಪುಟಗಳು ೩೦. ಆದರೆ ಅದನ್ನು ವರ್ಣಿಸುವಾಗ ಈ ಹರಿಶ್ಚಂದ್ರ ಸಾಂಗತ್ಯದ ೧೪ ಪುಟಗಳನ್ನೂ ಸೇರಿಸಿ ಪುಟಗಳು ೪೪ ಎಂದು ತಪ್ಪಾಗಿ ಕಾಣಿಸಿದೆ.

ಇದು ಹಿಂದೆ ೧೧೧೬ ನೆಯ ನಂಬರಿನಲ್ಲಿ ವರ್ಣಿತವಾದ ಗ್ರಂಥವೇ ಆಗಿದೆ.

No. 1122. ಅಭಿನವದಶಕುಮಾರ ಚರಿತ್ರೆ by ಚೌಂಡರಸ alias ಚೌಂಡರಾಜ-

ABHINAVADAŚAKUMĀRA CARITRE BY CAUṆḌARASA *alias* CAUṆḌARĀJA.

Substance, Srītāla. Size, $13\frac{5}{8} \times 1\frac{3}{4}$ inches. Pages, 196. Lines, 8–11 on a page. Extent, 3,750 granthas. Character, Kannada. Condition, much injured. Appearance, old. Mode of writing, good.

Incomplete.

Contains up to the 70th stanza of the 14th Āśvāsa. The numbers have been given both to the verses and prose pieces herein.

A Kannaḍa version of the story of the Sanskrit Dasakumāracarita by Daṇḍi. The author Chauṇḍarasa alias Chauṇḍarāja was a Brahman and a son of Madhusūdana and Mallavve. It seems that he possessed the titles "*Sarasakavi*", '*Kavitāvilāsa*', '*Kavirājaśekhara*.' He lived in about 1300 A.D.

Beginning :

ಉ. ಮಾ. ॥ ಶ್ರೀಯನುದಾರದಿಂದುರದೊಳೊಪ್ಪಿರೆ ತಾಳ್ದ ದಶಾವತಾರ ಸಂ- ।
ಧಾಯಕದಿಂ ವಿರೋಧಿಬಲಮಂ ತವೆಗೆಲ್ದಮರುನ್ನಿಕಾಯಮಂ ॥
ನ್ಯಾಯಿತ ಸತ್ವದಿಂ ಪೊರೆದ ಲೋಕಜನಸ್ತುತಿವೆತ್ತ ಘಂಡರೀ ।
ರಾಯನಭಂಗ ವಿಠ್ಠಲಂಪಿನೊಳೀಗೆಮಗಿಷ್ಟಸಿದ್ಧಿಯಂ ॥ ೧॥

ತನಗುಚಿತಮಪ್ಪ ಕರ್ಮದೊ- ।
ಳನುನಯದಿಂ ನಡೆವ ಕಡೆಯೊಳಾತ್ಮಧ್ಯಾನ- ॥
ಕ್ಕನುವಾಗಿ ಮನಮನಿಕ್ಕುವ ।
ಮನುಜಂ ಸುಕೃತಾರ್ಥನಲ್ತೆ ಧರಣೀತಳದೊಳ್ ॥ ೬೬ ॥

ವ. ॥ ಎಂದಾ ವಸುರಕ್ಷಿತಂ ಬುದ್ಧಿವೇಳಲಿದೆಲ್ಲವನಾ ಕುಮಾರಂ ತನಗೆ ಮಿತ್ರನೆನಿಸಿರ್ಪ ವಿಹಾರಭದ್ರನೆಂಬ ಧೂರ್ತಂಗೆ ಪೇಳ್ದೊಡವನದಂ ಕೇಳ್ದುಪಹಾಸ್ಯಮಂ ಗೆಯ್ದಿಂತೆಂದಂ ॥ ೬೭ ॥

ವೃತ್ತ॥ ಎನಸುಂ ಮೆಲ್ನುಡಿ ಜಿಹ್ವೆಯೊಳ್ ಹೃದಯ ದೊಳ್ ಕೌಟಿಲ್ಯ ಮಾಕಾರದೊಳ್ ।
ವಿನಯಂ ಕರ್ಮದೊಳುಗ್ರಹಿಂಸೆ ಸಭೆಯೊಳ್ ಸ್ವಸ್ವಾಮಿಸದ್ಭಕ್ತಿ ಮಂ- ॥
ಚಿಪೆ ಸರ್ವಾಂಗ ದೊಳನ್ಯರೊಳ್ಕಳಿ ನಿಜಾಪ್ತ ಶ್ರೇಣಿಯೊಳ್ ವೈರಿಭಾ- ।
ವವೆ ನಿಚ್ಚಂ ಸಹಜಂ ನಿಯೋಗಿವೆಸರಂ ಪೆತ್ತರ್ಗೆ ಧಾತ್ರೀಪತೀ ॥ ೬೮ ॥
ಮತ್ತಮಂ ಧರ್ಮಕರ್ಮಮಂ ವಿಧಿಸಲೆಂದು ॥ ೬೯ ॥

ಶಾ. ವಿ. ॥ ಮೆಯ್ಯೊಳ್ಬಣ್ಣಿಯ ನೊಲ್ದು ಹೂಸಿ ತೊಪಲಂ ಪೊರ್ದಾವಗಂ ಕೋಡಸಂ ।
ಗಯ್ಯೊಳ್ಮೆಲ್ದಹ ಲೋಕದಿಂ ಸೋಱಗೆ ಬಹುಪ್ರಕಾರವಂ ತಾಳ್ದರೀ ॥
ಗೆಯ್ಯಕರ್ಗೆಳವರಿಂದ್ರನಾರಿಯರ ವಕ್ಷೋಜಾತ [ಸಂಹಂಗ] (ಸಂಬಂಧ) ದಿಂ
ಸಯ್ಯಾಕಾಂತಿಯ ನಾವುದೊಳ್ಗುಣವಲೇ ಭೂಪಾಲ ಭೂದೇವರೊಳ್ । ೭೦ ।?

(ವಿ-ವಿ.)—

ಅಸಮಗ್ರ. ಅತ್ಯಂತಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ೧-೧೩ ಆಶ್ವಾಸಗಳು ಸಂಪೂರ್ಣವಾಗಿವೆ. ೧೪ ನೆಯ ದರಲ್ಲಿ ೭೦ ನೆಯ ಪದ್ಯದ ವರೆಗಿದೆ. ಇದರಲ್ಲಿ ಪದ್ಯಗಳಿಗೂ ಗದ್ಯಗಳಿಗೂ ಸೇರಿದಂತೆ ಸಂಖ್ಯೆಯು ಕೊಟ್ಟಿದೆ.

ಇದು ಚಂಪೂರೂಪವಾಗಿದೆ. ದಂಡಿಕವಿಯು ಸಂಸ್ಕೃತದಲ್ಲಿ ರಚಿಸಿದ ದಶಕುಮಾರ ಚರಿತ್ರೆಯ ಭಾಷಾಂತರರೂಪವಾಗಿದೆ. ಮೈಸೂರು ಕಾವ್ಯಕಲಾನಿಧಿಯವರು ಇದನ್ನು ಮುದ್ರಿಸಿರುತ್ತಾರೆ. ಮುದ್ರಿತ ಪುಸ್ತಕದಲ್ಲಿರುವುದಕ್ಕಿಂತ ಕೊನೆಯಲ್ಲಿ ೫೫ ಪದ್ಯಗಳೂ ೨ ವಚನಗಳೂ ಅಧಿಕವಾಗಿ ಈ ಪ್ರತಿಯಲ್ಲಿ ಸಿಗುತ್ತವೆ. ಅವುಗಳು ಮೇಲೆ ಉದ್ಧೃತಗಳಾಗಿವೆ.

ಕವಿ ಚೌಂಡರಸ ಅಥವಾ ಚೌಂಡರಾಜ ನೆಂಬವನು. ಇವನು ಬ್ರಾಹ್ಮಣನು. ಇವನ ತಂದೆ ಮಧುಸೂದನ; ತಾಯಿ ಮಲ್ಲವ್ವೆ. ಇವನಿಗೆ ಸರಸಕವಿ, ಕವಿತಾ ವಿಲಾಸ, ಕವಿರಾಜಶೇಖರ ಎಂಬ ಬಿರುದುಗಳಿದ್ದಂತೆ ತೋರುತ್ತದೆ. ಉಳಿದ ವಿಷಯಗಳನ್ನು ಉದ್ಧೃತ ಭಾಗದಿಂದಲೂ, ಕವಿಚರಿತ್ರೆ (ಸಂಪುಟ-೧, ಪುಟ-೩೭೬) ಯಿಂದಲೂ ತಿಳಿಯುವುದು.

No. 1123. ಕೆಳದಿ ನೃಪವಿಜಯ by ಲಿಂಗ-
KEḶADĪ NṚPAVIJAYA BY LIṄGA.

Substance, Śrītāla. Size, 16¼ × 2-5/16 inches. Pages, 147. Lines, 11–14 on a page. Character, Kannada. Extent, 3,550 granthas. Slightly injured. Appearance, old. Mode of writing, good.

Contains the history of the kings of Keḷadi dynasty from Caudappa Naik (1500–1514) to Sōmaśekhara Naik (1758–1763). Wants the Pīṭhikāśvāsa, otherwise complete.

The name of the author is not found in this. But from a verse found in the end of the next work it is seen that the author is one Lingakavi, son of Venkappa who was in the Court of Keḷadi Basavarāja.

Beginning :

ಕೆಳದಿ ನೃಪವಿಜಯ ಕಾವ್ಯದಲ್ಲಿ ದ್ವಿತೀಯಾಶ್ವಾಸಮಂ ಬರೆವುದಕ್ಕೆ ಶುಭಮಸ್ತು.
ಚೌಡಪ್ಪ ನಾಯಕರು-

ವೃತ್ತ ॥

ಉ.ಮಾ. ॥ ಈಕೃತಿಗಾದಿಯಾವುದೆನಲುಜ್ವಲ ತುಂಗ ತರಂಗಸಂಚರ- ।
ದ್ಭೀಕರಮೀನ ಕರ್ಕಟಕ ಕೂರ್ಮಕನತ್ಸಲಿಲೇಭನಕ್ರದ- ॥
ವೀರ್ಕರ ಶಿಂಶುಮಾರ ಮುಖ ವಾರ್ಚರ ಸಂಚಯ ಚಾಲನೋಚ್ಚಲ- ।
ಚ್ಛೀಕರ ಫೇನ ಕಂಬು ಕುಲರತ್ನಗಳಿಂದೆಸೆದತ್ತು ಸಾಗರಂ ॥

End :

ಕಂ. ॥ ಅಡಸಿದ ದೊರೆಯರ ಫೌಜಂ ।
ಕಡೆದೆಗೆಸುತೆ ವೀರಭದ್ರಭೂಪೇಂದ್ರನ ಮುಖದಿಂ ॥

ಪಡುಗಡಲೆಡೆಯೊಳಗೊಪ್ಪುವ ।
ಪಿಡಿಜೆಯ ಕೋಂಟೆಯನೆ ಮಗುಳೆತಾಂ ವಶಗೆಯ್ದಂ ॥

ಶಕವರ್ಷ ೧೭೦೭ ನೆಯ ಕ್ರೋಧನ ಸಂ। ದ ಆಷಾಢ ಬ. ೧೨ ಲು ಈ ವಂಶಾವಳಿ ಪ್ರತಿಯನ್ನು ಫರಂಜಿ ಮೇಜರಮಕ್ಕಂಜಿ ಸಾಹೇಬರ ಕಡೆ ಮುತ್ಸದಿ ನಾರಾಯಣರಾಯರು ಕಡತದ ಮೇಲೆ ಬರೆಯಿಸಿಕೊಂಡು ಹೋದರು.

"ಶಕವರ್ಷ ೧೬೮೪ ನೆಯ ಚಿತ್ರಭಾನು ಸಂ॥ ಮಾಘ ಶು. ೯ ರ ವರೆಗೆ ವರ್ಷ-೪, ತಿಂಗಳು ೪, ದಿನ ೧೯ ಪರಿಯಂತ್ರ ಶಿವ ಭಕ್ತರ ಸಂಸ್ಥಾನ ಸಮಾಪ್ತಿ. ಆತರುವಾಯ ಮ್ಲೇಚ್ಛರು ಹೈದರ ನವಾಬ ಶುಭಕೃತ್ ಸಂ॥ ಫಾಲ್ಗುನ ಶು. ೧೪ ರ ವರೆಗೆ ವರ್ಷ ೨೦, ತಿಂಗಳು ೧, ದಿನ ೬ ಪರಿಯಂತ್ರ ಶ್ರೀರಂಗಪಟ್ಟಣದಲ್ಲು ರಾಜ್ಯ ಆಳಿದ. ಹೈದರ ನವಾಬ. ಆ ಮೇಲೆ ಶಕವರ್ಷ ೧೭೦೪ ನೆಯ ಶುಭಕೃತ್ ಸಂ॥ ಫಾಲ್ಗುಣ ಶು. ೧೪ ಆರಭ್ಯ ಸಿದ್ಧಾರ್ಥಿ ಸಂ ॥ ಚೈತ್ರ ಬ. ೩೦ ವರೆಗೆ ವರ್ಷ ೧೭, ತಿ. ೧, ದಿ. ೧೪ ಪರಿಯಂತ್ರ ಪಟ್ಟಣದಲ್ಲು—

(ವಿ-ವಿ.)—

ಪ್ರತಿ ಸ್ವಲ್ಪ ಶಿಥಿಲ. ಲಿಪಿ ಉತ್ತಮವಾದುದು.

ಇದು ಚಂಪೂರೂಪವಾದುದು. ಕೆಳದಿವಂಶದ ಅರಸುಗಳ ಚರಿತ್ರೆಯು ಇದರಲ್ಲಿ ಉಕ್ತವಾಗಿದೆ. ಇದನ್ನು ಮೈಸೂರು ಓರಿಯಂಟಲ್ ಲೈಬ್ರರಿಯವರು ಮುದ್ರಿಸಿದ್ದಾರೆ. ಇದರಲ್ಲಿ ಕವಿ ವಿಷಯವಾಗಿ ಎಲ್ಲಿಯೂ ಹೇಳುವುದಿಲ್ಲ. ಮುಂದಣ ನಂಬರಿನಲ್ಲಿ ವರ್ಣಿತವಾಗಿರುವ ಪುಸ್ತಕದ ಕೊನೆಯಲ್ಲಿ— "ವಂಶಾವಳೀವಿವರ" ಎಂಬ ಶೀರ್ಷಿಕೆಯೊಡನೆ

ಮೆಱೆವೀ ಸತ್ಕೃತಿಯಂ ತಾಂ।
ವಿರಚಿಸಿದಂ ಸಕಲ ನೃಪಶಿರೋಮಣಿ ಕೆಳದೀ ॥
ಪರಬಸವೇಂದ್ರಾಶ್ರಿತ ಭೂ-।
ಸುರಕುಲಮಣಿ ವೆಂಕಪಾತ್ಮಜಂ ಲಿಂಗಬುಧಂ ॥ ೧ ॥

ತೊದಳೊಂದಿದ ಬಾಲಕರೊಳ್ ।
ಪಿದುಪಾತಂ ಕೇಳ್ದು ಸಂತಸಂದಳೆಯರೆದಿ- ॥
ಪ್ಪುದರಂತಾಂ ನಿಮ್ಮಯ ಪಸು- ।
ಳೆ ದಲೆಂದಾಲಿಪ್ಪುದು ಸುಜನರೆಸೆವೀಕೃತಿಯಂ ॥ ೨ ॥

ಎಂಬ ಎರಡು ಪದ್ಯಗಳೂ, ಅನಂತರ ಕೆಳದಿಯರಸರ ವಂಶಾವಳಿಯನ್ನು ತಿಳಿಸುವ ಹದಿಮೂರು ಪದ್ಯಗಳೂ ಬರೆಯಲ್ಪಟ್ಟಿವೆ. ಇದರಿಂದ ಕವಿ ಕೆಳದಿಬಸವರಾಜನ ಆಶ್ರಿತನೂ ವೆಂಕಪ್ಪನೆಂಬ ಬ್ರಾಹ್ಮಣನ ಮಗನೂ ಆದ ಲಿಂಗನು ಎಂದು ಗೊತ್ತಾಗುತ್ತದೆ.

ಮುದ್ರಿತ ಪುಸ್ತಕದಲ್ಲಿ ಈ ಗ್ರಂಥವು ೧—೧೨ ಆಶ್ವಾಸಗಳಿಂದ ವಿಭಾಗಿಸಲ್ಪಟ್ಟಿದೆ. ಈ ಕೈಬರೆಹದ ಪುಸ್ತಕದಲ್ಲಿ ಅದರ ಮೊದಲಿನ ೯ ಆಶ್ವಾಸಗಳನ್ನು ೨—೧೦ ಎಂದು ಕ್ರಮವಾಗಿ ಎಣಿಸಿದೆ. ಅನಂತರ ಮುಂದಣ ಒಂದು ಆಶ್ವಾಸಕ್ಕೆ ಮಾತ್ರ ಹನ್ನೊಂದನೆಯ ಸಂಖ್ಯೆಯನ್ನು ಕೊಟ್ಟಿದೆ. ಮುಂದಕ್ಕೆ ಆಶ್ವಾಸ ಸಂಖ್ಯೆ ಕೊಟ್ಟಿಲ್ಲ. ಅಂತೂ ಈ ಪ್ರತಿಯ ಆಧಾರದ ಮೇಲೆ ಪೀಠಿಕಾಶ್ವಾಸವು ಲುಪ್ತವಾಗಿದೆಯೆಂದು ಹೇಳ ಬಹುದಾಗಿದೆ. ಗ್ರಂಥಾರಂಭದಲ್ಲಿ ಪೂರ್ವ

ಕವಿಗಳ ಸಂಪ್ರದಾಯದಿಂದ ಬಂದ ಮಂಗಳ, ಪೂರ್ವಕವಿ ಸ್ತುತಿ ಮುಂತಾದುವುಗಳಲ್ಲದೆ ಪುಸ್ತಕದ ಆದಿಯಲ್ಲಿ ಸಾಗರವರ್ಣನೆಯೂ ನಿಬದ್ಧವಾಗಿರುವುದನ್ನು ನೋಡಿದರೆ ಈ ಅಭಿಪ್ರಾಯವು ಯುಕ್ತವೆಂದು ವ್ಯಕ್ತವಾಗುತ್ತದೆ.

ಇದರಲ್ಲಿ ಓಲೆಗಳು ೩—೭೭ ಸಂಖ್ಯೆಗಳಿಂದ ಕ್ರಮವಾಗಿ ಗುರುತಿಸಲ್ಪಟ್ಟಿವೆ. ಮಧ್ಯೇ ೩೪ ನೆಯ ಓಲೆಯ ನಂತರ ಆರನೆಯ ಆಶ್ವಾಸದ ಕೊನೆಯಲ್ಲಿ ಅಂಕೆಯಿಂದ ಗುರುತಿಸದ ಒಂದೋಲೆಯಿದೆ. ಅದರ ಒಂದು ಪುಟದಲ್ಲಿ ಮುಂದಣ ನಂಬರಿನಲ್ಲಿ ವರ್ಣಿತವಾಗುವ ಕಡತದ ಪುಸ್ತಕದ ಕೊನೆಯಲ್ಲಿರುವ ಕೆಳದಿಯರಸರ ವಂಶಾವಳಿಯನ್ನು ತಿಳಿಸುವ ೧೩ ಪದ್ಯಗಳು ಬರೆಯಲ್ಪಟ್ಟಿವೆ. ೧೨, ೧೬, ೨೪, ೨೭ ಸಂಖ್ಯೆಗಳಿಂದ ಅಂಕಿತವಾದ ಓಲೆಗಳಲ್ಲಿ ಒಂದೇ ಪುಟದಲ್ಲಿ ಬರೆದಿದೆ. ಅಂತೂ ಈ ಗ್ರಂಥದ ಒಟ್ಟು ಪುಟಗಳು ೧೪೭. ಮುದ್ರಿತ ಪುಸ್ತಕದಲ್ಲಿ ಈ ಹದಿಮೂರು ಪದ್ಯಗಳು ಅದರ ಆರನೆಯ ಆಶ್ವಾಸದ ಪ್ರಾರಂಭದಲ್ಲಿ ಅಚ್ಚಾಗಿವೆ.

No. 1124. ಕೆಳದಿನೃಪವಿಜಯ by ಲಿಂಗ.

KEḶADINṚPAVIJAYA BY LIṄGA.

Substance, Kadjan. Size, 8-1/16 × 7⅜ inches. Pages, 172. Lines, 12 to 15 on a page. Character, Kannada. Extent, 1,800 granthas. Condition, good. Appearance, old. Mode of writing, good.

Contains the same portion of the history of the kings of the Keḷadi dynasty as that described above.

Same work as that described above with some omissions in the text here and there.

Date of transcription :—Thursday, the 15th day of bright fortnight of the lunar month Āṣāḍha of the Krōdhana year in the śaka year 1727 corresponding to 1805 A.D.

(ವಿ-ವಿ.)—

ಕಡತದ ಪ್ರತಿ. ಉತ್ತಮವಾಗಿದೆ. ಲಿಪಿ ಅಂದವಾಗಿದೆ. ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಗಿಂತ ಇದರಲ್ಲಿ ಅಲ್ಲಲ್ಲಿ ಅಲ್ಪಸ್ವಲ್ಪ ಪಾಠಭಾಗಗಳು ಕಡಿಮೆಯಿವೆ. ಇದರಲ್ಲಿ ಆಶ್ವಾಸಗಳಿಗೆ ಸಂಖ್ಯೆ ಕೊಟ್ಟಿಲ್ಲ. ಇದರಲ್ಲಿ ಕವಿ ವಿಷಯವನ್ನು ತಿಳಿಸುವ ಪದ್ಯವಿದೆ. ಅದನ್ನು ಹಿಂದಣ ನಂಬರಿನಲ್ಲಿ ಕೊಟ್ಟಿದೆ. ಅಲ್ಲಿ ನೋಡಿ ತಿಳಿಯುವುದು. ಈ ಪುಸ್ತಕದ ಆದಿಯಲ್ಲಿ "ಸ್ವಸ್ತಿ ಶ್ರೀವಿಜಯಾಭ್ಯುದಯ ಶಾಲಿವಾಹನ ಶಕವರ್ಷ ೧೭೨೭ ನೆಯ ಕ್ರೋಧನ ಸಂವತ್ಸರದ ಆಷಾಢ ಶುದ್ಧ ೧೫ ಗುರವಾರದಲ್ಲು 'ಕೆಳದಿ ನೃಪವಿಜಯಕಾವ್ಯ' ಎಂದಿದೆ.

No. 1125. ಗಿರಿಜಾ ಕಲ್ಯಾಣ, ಟೀಕಾ ಸಹಿತ by ಹರೀಶ್ವರ-

GIRIJĀKALYĀṆA WITH ṬĪKĀ BY HARĪŚVARA.

Substance, Śritāla. Size, 8½ × 1⅞ inches. Pages, 27. Lines, 8 on a page. Character, Kannada. Extent, 260 granthas. Condition, slightly injured. Appearance, old. Mode of writing, good.

Begins on fol. 51*a* of the Ms. described under D. No. 11080 (Sanskrit).

This is a selection of fifteen difficult stanzas from the Girijākalyāṇa a well known campū of Harīśvara with a word for word commentary. The name of the compiler as well as commentator is not known. Harīśvara is one of the prominent authors among the Vīraśaiva poets. Mostly all of them praise him in their works. His date is about 1165 A.D. For details regarding the author see Karnatakakavi caritre, Vol. I, page 170.

The text of Girijākalyāna contains 10 Āśvāsas and it has been printed in the Kāvya Kalānidhi series.

Beginning :

ವಿಲಸತ್ಕಲ್ಲೋಲ ಮಾಲಾ ಪ್ರತಿಹತವಿತತ ಪ್ರೋಚ್ಛಚ್ಛೈಲಕೋಲಾ ।
ಹಲಿತೋದ್ವೃತ್ತ್ಭೇನ ನಾನಾಕರಿಮಕರ ವಿಪುಚ್ಛಪ್ರಹಾರ ಪ್ರತಾಪೋ ॥
ದ್ಗಳಿತಾನಂತ ಪ್ರರತ್ನ ಪ್ರಬಲ ಜಲಚರಾನೀಕ ಗಂಭೀರ ಭೀಮೋ ।
ಜ್ವಲರಾವ ಪ್ರೋದ್ಭೂತ ಪ್ರೋನ್ಮಿಳಿತ ಘುಳು ಘುಳು ಧ್ವಾನ ಮಂಭೋ
ನಿಧಾನಂ ॥

ಟೀಕಂ ॥ ವಿ = ವಿಶೇಷವಾಗಿ, ಲಸತ್ = ಒಪ್ಪಲ್ಪಟ್ಟ, ಕಲ್ಲೋಲ = ಕಲ್ಲೋಲವೆಂಬ ತೆರೆಗಳ, ಮಾಲಾ = ಸಮೂಹದಿಂದ, ಪ್ರತಿಹತ = ಬಡಿಯಲ್ಪಟ್ಟ, ವಿತತ = ಪ್ರಸಿದ್ಧವಾಗಿರುವಂಥಾ.

* * * *

ಜಂಗಮ ಕೃಪಾವನ, ಜಂಗಮ = ಚರ ಪ್ರಾಣಿಗಳನ್ನು, ಕೃಪಾ = ಕರುಣದಿಂದೆ, ಅವನ = ರಕ್ಷಿಸುತಿರ್ದಂಥಾ, ಪಾವನ = ಪವಿತ್ರ ಸ್ವರೂಪವಾದ. ಹಂಪೆಯಾಳ್ದನೆ = ಪಂಪಾ ಕ್ಷೇತ್ರಕ್ಕೆ ಒಡೆಯನಾದಂಥಾ ಎಲೈ ದೇವನೆ, ಕರುಣಿಸು = ಕೃಪೆಮಾಡು.

(ವಿ-ವಿ.)—

ಸ್ವಲ್ಪ ಶಿಥಿಲ, ಲಿಪಿ ಚೆನ್ನಾಗಿದೆ.

ಹರೀಶ್ವರನ ಗಿರಿಜಾಕಲ್ಯಾಣದಿಂದ ಯಮಕಾನುಪ್ರಾಸಗಳಿಂದಲೂ ಸಂಸ್ಕೃತ ಸಮಾಸಗಳಿಂದಲೂ ಕೂಡಿ ಸುಲಭವಾಗಿ ಅರ್ಥವನ್ನು ಕೊಡದಿರುವ ೧೫ ಪದ್ಯಗಳನ್ನು ಆರಿಸಿ ಪ್ರತಿ ಪದಾರ್ಥ ಟೀಕೆಯೊಡನೆ ಬರೆದಿದೆ. ಗಿರಿಜಾಕಲ್ಯಾಣವು ಸರಸವಾಗಿಯೂ ಪ್ರೌಢವಾಗಿಯೂ ಇರುವ ಚಂಪೂ ಗ್ರಂಥ. ಹರೀಶ್ವರನು ಪುರಾತನ ವೀರಶೈವ ಕವಿಗಳಲ್ಲಿ ಅಗ್ರಗಣ್ಯನೆಂದು ಹೇಳಬಹುದು. ಪ್ರಾಯಶಃ ವೀರಶೈವ ಕವಿಗಳೆಲ್ಲಾ ಈತನನ್ನು ಸ್ತುತಿಸಿದ್ದಾರೆ. ಇವನ ಕಾಲವು ಸುಮಾರು ಕ್ರಿ.ಶ. 1165 ಎಂದು ಕವಿ ಚರಿತ್ರೆಯಲ್ಲಿ ಹೇಳಿದೆ. ಇವನ ವಿಷಯವಾಗಿ ಉಳಿದ ವಿಷಯಗಳನ್ನು ಕವಿಚರಿತ್ರೆಯ ಪ್ರಥಮ ಸಂಪುಟದಿಂದ ತಿಳಿಯುವುದು.

ಇದು ಕಾವ್ಯ ಕಲಾನಿಧಿಯವರಿಂದ ಮುದ್ರಿತವಾಗಿದೆ. ಈ ಪ್ರತಿಯಲ್ಲಿರುವ ೧೫ ಪದ್ಯಗಳು ಅದರಲ್ಲಿ ಈ ಕೆಳಗೆ ಕಾಣಿಸಿದ ಕ್ರಮದಲ್ಲಿ ಬರುತ್ತವೆ.

ಆಶ್ವಾಸ	೧	ಪದ್ಯ	೪೬, ೪೯, ೧೦೪, ೧೦೫
,,	೩	,,	೪
,,	೪	,,	೧೫, ೧೦೦
,,	೫	,,	೨, ೪೭
,,	೬	,,	೪, ೫೩
,,	೮	,,	೬
,,	೯	,,	೧೨
,,	೧೦	,,	೧೦೭, ೧೦೮

No. 1126- ಚಿಕ್ಕದೇವರಾಜ ವಂಶಾವಳಿ-
CHIKKADĒVARĀJA VAMŚĀVAḶI.

Substance, Palm-leaf. Size, $15\frac{3}{4} \times 1\frac{1}{2}$ inches. Pages, 50. Lines, 6 on a page. Extent, 550 granthas. Character, Kannada. Condition, much injured. Appearance, old. Mode of writing, good.

Complete in 137 stanzas.

Describes the genealogy of the kings of Mysore from "Beṭṭada Chāmarāja to Chikkadēvarāja.

Beginning :

ಶ್ರೀಮದ್ವೇಣು ಗೋಪಾಲಾಯ ನಮಃ. ಚಿಕದೇವ ರಾಜ ವಂಶಾವಳಿಯಂ ಬರೆಯುವುದಕ್ಕೆ ಶುಭಮಸ್ತು.

ಶಾ॥ ವಿ॥ ಶ್ರೀ ಲಕ್ಷ್ಮೀ ಕುಚಕುಂಭ ಕುಂಕುಮಲಸತ್ಪಂಕಾಂಕಿತೋರಸ್ಥಲಂ ।
ನೀಲಾಂಭೋರುಹ ಸುಂದರಾಂಗ ಮಮರಾಧೀಶಾರ್ಚಿತಾಂಘ್ರಿದ್ವಯಂ ।
ವ್ಯಾಲೇಶೋರಾಘಶಾಮಣಿ ದ್ಯುತಿಸಮೂಹಾಶ್ಲಿಷ್ಟ ವಕ್ತ್ರಾಂಬುಜಂ ।
ಲೀಲಾ ಸಂತತಿವೆತ್ತು ರಕ್ಷಿಸುಗೆ ಶ್ರೀರಂಗೇಶನೊಲ್ದೆನ್ನುಮಂ ॥ ೧ ॥

ಹೃದಯಾಂಭೋರುಹದಲ್ಲಿಯಾಂ ನೆನೆದು ಗೋಪಾಲಾಂಘ್ರಿ ಪಂಕೇಜಮಂ ।
ಮುದವೆತ್ತಾತನನುಜ್ಞೆಯಾಂತುಗಿರ್ಪೆ ನೀ ವಿದ್ವದ್ದಯಾ ಸಾರದಿಂ ॥
ಮದವದ್ವೈರಿ ನೃಪಾಲ ಖಂಡನರತ ಶ್ರೀ ಚಿಕ್ಕದೇವೇಂದ್ರ ಕೋ ।
ವಿದವಂಶಾವಳಿಯಂ ಬುಧಾಸ್ಪದಮನುದ್ಯಚ್ಛೋಭನಾಗಾರಮಂ ॥ ೧೦ ॥

*   *   *   *   *

End :

ಮ॥ ವಿ॥ ನಗಧೈರ್ಯಂಗೆ ನರಾಧಿಪಂಗೆ ನತ್ರಭೂಪವ್ರಾತ ಪಾಲಂಗೆ ಪ ।
ನ್ನಗ ಜಿದ್ವಿಕ್ರಮ ಸಂಯುತಂಗೆ ಜನಚಿತ್ತಾಹ್ಲಾದ ಕೃತ್ಯಂಗೆ ವಂ ॥
ದಿಗಶಾಶಾಫಲದಾಯಕಂಗೆ ಕುಸುಮಾಸ್ತ್ರಾತ್ಯಂತ ರೂಪಂಗೆ ಶ್ರೀ ।
ಚಿಗದೇವ ಕ್ಷಿತಿ [ಪಾಲಕಂಗೆ] (ಪಂಗೆ) ಸದ್ಗುಣ ವಿಭೂಷಂಗಂ ಜಯಂ
ಮಂಗಳಂ ॥ ೧೩೭ ॥

ಇಂತೆಂಮ ನುತಿಸಿದ ವಂದಿಜನಕ್ಕೆ ಪಸಾಯುತವಿತ್ತು ಸಭಾಸ್ಥಾನದಿಂದೆದ್ದು ಬಂದು ಸಮಸ್ತರಂ ತಂತಮ್ಮ ನಿವಾಸಂಗಳ್ಗೆ ಕಳುಪಿಯರಮನೆಯುಂ ಪೊಕ್ಕು ರಂಗನಾಥನ ಕೃಪೆ ಪೆತ್ತು ಪೂರ್ವದ ಷೋಡಶ ಮಹಾರಾಯರಂ ಮಿಗಿಸಿ ಸುಖದಿಂದ ಭೂಮಂಡಲಮಂ ವರ್ಣಾಶ್ರಮಧರ್ಮಂದಪ್ಪದಂತೆ ಸಾಮ್ರಾಜ್ಯಮನಾಳುತ್ತಮಿರ್ದಪಂ.

Colophon :

ಶ್ರೀಮದ್ವೇಣು ಗೋಪಾಲ ವರಪ್ರಸಾದೇನ ಕೃತ ಚಿಗದೇವಮಹಾರಾಯರ ವಂಶಾವಳಿಗೆ ಶುಭಮಸ್ತು.

(ವಿ.ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಚಂಪೂರೂಪವಾಗಿದೆ. ಇದರಲ್ಲಿ ೧೩೭ ಪದ್ಯಗಳವೆ. ಚಿಕ್ಕದೇವರಾಜರ ಅಥವಾ ಮೈಸೂರು ಅರಸರ ವಂಶಾವಳಿ ಇದಕ್ಕೆ ಪ್ರಧಾನ ಪ್ರತಿಪಾದ್ಯವು.

ಕವಿಯು ಪ್ರಥಮದಲ್ಲಿ ಇಷ್ಟದೇವತಾ ಸ್ತುತಿಯನ್ನು ಮಾಡಿ, ಸಮುದ್ರ, ಮೇರು, ಅದರ ಬಳಿಯಲ್ಲಿರುವ ಕಾನನ, ಅದರ ದಕ್ಷಿಣ ದಿಗ್ಭಾಗದಲ್ಲಿರುವ ಕರ್ಣಾಟ ದೇಶ, ಪಶ್ಚಿಮ ರಂಗ ಕ್ಷೇತ್ರದ ಕಾವೇರಿ, ಮೈಸೂರು, ಇವುಗಳನ್ನು ಕ್ರಮವಾಗಿ ಬಣ್ಣಿಸಿ ಚಂದ್ರನಿಂದ ಯದುವಿನ ಪರ್ಯಂತ ವಂಶವನ್ನು ವರ್ಣಿಸುವನು. ಅನಂತರ ಶ್ರೀ ಕೃಷ್ಣನ ಆಜ್ಞಾನುಸಾರವಾಗಿ ಅವನ ಯೋಗಮಾಯೆಯು ಯಾದವ ವಂಶದ ರಾಜರನ್ನು ಮೈಸೂರಿನ ಅರಸರನ್ನಾಗಿ ಮಾಡಿ ಚಾಮುಂಡಿಯೆಂಬಭಿಧಾನದಿಂದ ಅಲ್ಲಿ ನೆಲಸಿದುದಾಗಿ ವರ್ಣಿಸಿ ಬೆಟ್ಟದ ಚಾಮರಾಜನಿಂದ ಚಿಕದೇವರಾಜನ ವರೆಗೆ ಮೈಸೂರರಸರ ವಂಶಾವಳಿಯನ್ನು ಪ್ರತಿಪಾದಿಸುತ್ತಾನೆ. ಈ ಗ್ರಂಥದಲ್ಲಿ ಕಥಾಭಾಗವು ಸ್ವಲ್ಪವಿದ್ದು ವರ್ಣನಾ ಭಾಗವು ಅಧಿಕವಾಗಿದೆ. ಕವಿತೆಯು ಅಂದವಾಗಿದೆ.

ಗ್ರಂಥಾಂತ್ಯದಲ್ಲಿರುವ ಗದ್ಯದಿಂದ ಈ ಕವಿಯು ಚಿಕದೇವರಾಜನ (1672—1704) ಸಮಕಾಲಿಕನೆಂದು ತಿಳಿಯುತ್ತದೆ. ಈ ಪ್ರತಿಯಿಂದ ಗ್ರಂಥಕರ್ತನ ಹೆಸರು ವ್ಯಕ್ತವಾಗುವದಿಲ್ಲ. ಈ ಪ್ರತಿಯ ಕೊನೆಯಲ್ಲಿರುವ "ಶ್ರೀ ಮದ್ವೇಣುಗೋಪಾಲನ ವರಪ್ರಸಾದೇನ ಕೃತಂ" ಎಂಬ ವಾಕ್ಯದ ಆಧಾರದ ಮೇಲೆ ಕವಿಯ ಹೆಸರು. "ವೇಣುಗೋಪಾಲ ವರಪ್ರಸಾದ" ಎಂದೂ "ಹೃದಯಾಂಭೋರುಹದಲ್ಲಿರ್ಯಾಂ" ಎಂಬ ಮೇಲೆ ಉದ್ಧೃತವಾಗಿರುವ ಪದ್ಯದಿಂದ ಕವಿಯು ತನ್ನ ಗುರುವಾದ ಗೋಪಾಲನ ಆಜ್ಞೆಯಿಂದ ಗ್ರಂಥವನ್ನು ರಚಿಸಿದನೆಂದೂ ಕವಿ ಚರಿತ್ರೆಯಲ್ಲಿ ಬರೆದಿದೆ. ಆದರೆ ಆ ವಾಕ್ಯವನ್ನೂ ಪದ್ಯವನ್ನೂ ಪರಿಶೀಲಿಸಿದರೆ ವೇಣುಗೋಪಾಲನು ಕವಿಯ ಇಷ್ಟದೇವತೆಯೆಂದೂ, ಅವನ ಅನುಗ್ರಹದಿಂದ ತಾನು ಗ್ರಂಥವನ್ನು ರಚಿಸಿರುವುದಾಗಿ ಕವಿಯು ಹೇಳಿರಬಹುದೆಂದೂ ತೋರುತ್ತದೆ.

No. 1127. ಚಿಕ್ಕದೇವರಾಜವಿಜಯ by ತಿರುಮಲೆಯಾರ್ಯ. CIKADĒVARĀJAVIJAYA BY TIRUMALEYĀRYA.

Substance, Palm-leaf. Size, 15 × 1-5/16 inches. Pages, 100. Lines, 4 to 5 on a page. Extent, 800 granthas. Character, Kannada. Condition, injured. Appearance, old. Mode of writing, good.

Incomplete.

Similar to the work described above (No. 1126).

The author Tirumaleyārya, son of Aḷahiya Singarārya and Singamma was a great poet. He became a friend and a court-pandit and finally chief minister of Cikkadēvarāja (1672–1704). For other particulars regarding the author and his works see Karnatakakavi caritre, Vol. II.

Beginning :

. . . . ದಕಂದನಾನದೀ ।
ಬಲಮುರಿ ಸಂಕು ಮೆಯ್ಯುಮರೆ ಮೈಮೆಯನಾಂತ ನವೀನ ಚಂದ್ರಮಂ ॥ ೭ ॥

ವ ॥ ಮತ್ತಂ :—

ಮ॥ ವಿ॥ ಕೊರಲೊಳ್ಗದ್ಗದ ಮುಣ್ಮೆ ಪೊಣ್ಮೆ ನವಿರಂಗೋಪಾಂಗದೊಳ್ ಕಣ್ಗಳಿಂ ।
ಪರಿಕಾಲ್ವಾಯೆ ಸುಖಾಶ್ರು ಬಾಹ್ಯಕರಣ ವ್ಯಾಪಾರಮಂ ಮಾಣ್ದು ಶಾಂ ॥
ತಿ ರಸಂ ಮೆಯ್ವಡೆದಂತಿರಚ್ಯುತ ಪದಧ್ಯಾನಾಮೃತಾಸ್ವಾದ ತ ।
ತ್ಪರರೆಮ್ಮಂ ಪೊರೆವರ್ ತೃಣೀಕೃತ ಭವ ಬ್ರಹ್ಮಾದಿಗಳ್ ಸೂರಿಗಳ್ ॥ ೮ ॥

ಚಂ ॥ ಸುಟಿಲ್ವ ಮರಲ್ವ ನೇಹ ರಸದಿಂ ನನೆವೈದೆ [ಮು] (ಮ) ಗುಳ್ವ ನಾಣ್ಚಿ ಚಂ ।
ಚಳಸುವ ತೇಲ್ವ ಪೊಂಚುವ ತೆಱಂಬೊಳೆವೊಳ್ಪೆರ್ದೆಗೊಂ [ಡ] (ಬ)
ಭಾವಮಂ ॥
ಘಳಿಲನು [ಮು] (ಗು) ಳ್ವಪೊಲ್ಕಿವಿವ ನಾಂಟುವ ಬೇರಿದೊಳ್ಪುಗೊಂಬ ಸು ।
ಣ್ಬುಳತಿಗೆ ನೋಟದಿಂ ಬೊನಲೊಳ್ನೆರ್ದೆಯಟ್ಟಿ ತೊಟಿಲ್ದತೇಂಕುಗುಂ
॥ ೨೬೯ ॥

ವ॥ ಎಂದು ಭಾವಿಸುತ್ತೆ ನಡೆತಂದೋರೊರ್ವರಂ ಮೊಗನೋಡಿ ನಸುನಾಣ್ಚಿ ತುಕ್ಕುವಮಂ ನೋಟ್ಪಮೊಂದುವಂ . . . .

(ವಿ-ವಿ.)—

ಅಸಮಗ್ರ. ಆದ್ಯಂತ ರಹಿತವಾಗಿದೆ. ಗ್ರಂಥಪಾತವು ಬಹಳ ಇದೆ. ಇದರಲ್ಲಿ ಓಲೆಗಳು ೨, ೫-೧೦, ೨೨-೨೮, ೩೧, ೩೪-೩೬, ೪೫-೫೧. ೫೪-೫೮. ೬೪-೭೭, ೭೯, ೮೦, ೯೪, ೧೦೧, ೧೦೩, ೧೪೬, ಈ ಕ್ರಮದಲ್ಲಿವೆ. ಒಟ್ಟು ಓಲೆಗಳು ೫೦. ಕೊನೆಯ ಪದ್ಯವು ೩೬೯ ಎಂದು ಗುರುತಿಸಿದೆ. ಇದು ಮುದ್ರಿತ ಪುಸ್ತಕದಲ್ಲಿ ೬ ನೆಯ ಆಶ್ವಾಸದ ೨೭೦ ನೆಯ ಪದ್ಯವಾಗಿದೆ. ಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ. ಈ ೫೦ ಓಲೆಗಳಲ್ಲದೆ ಕೊನೆಯಲ್ಲಿ ೧೧ ಓಲೆಗಳಿವೆ. ಅವುಗಳ ಪೈಕಿ ಎರಡು ಓಲೆಗಳಲ್ಲಿ ಕೆಲವು ಸಮಾಸಗಳೂ (ಸಂಸ್ಕೃತದಲ್ಲಿ) ಮೂರು ಓಲೆಗಳಲ್ಲಿ ಧಾತುಪಾಠವೂ, (ಸಂಸ್ಕೃತದಲ್ಲಿ) ಮೂರು ಓಲೆಗಳಲ್ಲಿ ವ್ಯಾಖ್ಯಾನ ಸಹಿತ ಕುವಲಯಾನಂದವೂ (ಸಂಸ್ಕೃತ), ಮೂರು ಓಲೆಗಳಲ್ಲಿ ಭಾಗವತ ವಚನವೂ ಕ್ರಮವಾಗಿ ಬರೆದಿದೆ.

ಇದು ಚಂಪೂ ರೂಪವಾಗಿದೆ. ಕಾವ್ಯ ಕಲಾನಿಧಿಯವರು ಕ್ರಿ. ಶ. ೧೮೯೬ ರಲ್ಲಿ ಇದನ್ನು ಮುದ್ರಿಸಿದ್ದಾರೆ. ಕವಿ ಅಳಹಿಯ ಸಿಂಗರಾರ್ಯ (ಸೌಮ್ಯನೃಸಿಂಹ) ನ ಮತ್ತು ಸಿಂಗಮ್ಮನ ಮಗನಾದ ತಿರುಮಲೆಯಾರ್ಯನು. ಉಳಿದ ವಿಷಯಗಳನ್ನು ಮುದ್ರಿತ ಪುಸ್ತಕದಲ್ಲಿಯೂ, ಕವಿಚರಿತೆಯಲ್ಲಿಯೂ ನೋಡಿ ತಿಳಿಯುವುದು.

No. 1128. ಚಿಕ್ಕದೇವರಾಜವಿಜಯ by ತಿರುಮಲೆಯಾರ್ಯ-
CIKKADĒVARĀJAVIJAYA BY TIRUMALEYĀRYA.

Substance, Śrītāla. Size, 19 × 1-13/16 inches. Pages, 90. Lines, 6 on a page. Extent, 1,200 granthas. Character, Kannada. Condition, injured. Appearance, old. Mode of writing, good.

Begins on fol. 68*a*. The other works herein are :—Kanṭhīrava arasara mēlaṇa Nāṭkaagaḷu:—Koravanji Kaṭle (Telugu) 1*a*, (2) Koravanji Kaṭle (Kannada) 4*b*, (3) Koravanji Kaṭle (Tamil) 5*b*, (4) Koravanji Kaṭle (Prākṛta) 6*b*, (5) Pancāyudha Kaṭle 8*a*, (6) Lakṣmīvilāsa 9*a*, (7) Kalavāṇīvilāsa 10*b*, (8) Nātya Vidyāvilāsa 11*b*, (9) Vasantōtsava Vilāsa 12*a*. (from 5 to 9 in Telugu). (10) Vibhaktikāntāvilāsa 14*a*. (Sanskrit and Telugu). (11) Aṣṭadikpālaka Vilāsa 17*a*, (12) Pāvaki Nāṭaka 20*a*, (15) Vāruṇī nāṭaka 20*b*. (16) Vāyaviyanāṭaka 21*b*, (17) Kaubērīnāṭaka 22*b* (from 11 to 17 in Telugu), (18) Hāḍugaḷu (Kannada and Telugu) 24*a*. (19) Gītagōpāla 27*a*.

Incomplete. Contains sixth Āśvāsa only.

Same work as that described above (No. 1127).

(ಕ.ವಿ.)—

ಅಸಮಗ್ರ. ೬ ನೆಯ ಆಶ್ವಾಸ ಮಾತ್ರ ಇದೆ ತ್ರಿಪದಿ ಸಾಂಗತ್ಯ ಪದ್ಯಗಳನ್ನೂ ಸೇರಿಸಿ ಒಟ್ಟು ೨೮೪ ಪದ್ಯಗಳಿವೆ. ಶಿಥಿಲವಾದ ಪ್ರತಿ. ಇದರೊಡನೆ ಕಂಠೀರವ ಅರಸರ ಮೇಳಣ ನಾಟಕಗಳು (ಇದರಲ್ಲಿ ಹದಿನೇಳು ವಿಷಯಗಳಿವೆ. ಆ ಬಗೆಗೆ ಮೇಲಣ ಇಂಗ್ಲಿಷ್ ಭಾಗವನ್ನು ನೋಡುವುದು. ಹಾಡುಗಳು (ಕನ್ನಡ-ತೆಲುಗು) ಮತ್ತು ಗೀತಗೋಪಾಲ ಇವೂ ಇವೆ. ಲಿಪಿ ಚೆನ್ನಾಗಿದೆ. ಇದು ಹಿಂದಣ ೧೧೨೭ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1129. ಚೂಡನಾಸ್ಥಾನ by ಪ್ರಭುಗ-
CŪḌANĀSTHĀNA BY PRABHUGA.

Substance, Palm-leaf. Size, 14¾ × 1-5/16 inches. Pages, 75. Lines, 6, 7 on a page. Extent, 700 granthas. Character, Kannada. Condition, much injured. Appearance, old. Mode of writing, fair.

Begins on fol. 1*a* of the manuscript described under No. 663 ante.

Complete.

Describes the court of śiva worshipped as śaundēśvara or Cūdeyalinga. The author is Prabhuga who lived in 1520 A.D.

Beginning :

ಶಾ ॥ ಶ್ರೀ ರಾಮಾವರ ಶಾರದಾಪತಿ ಕಟೇಶಾಂತಾದಿ ದೇವೌಘ ಕೋ ।
ಟೀ ರಾರಾಜಿತ ನೂತ್ನರತ್ನ ಸುಭಗ ಸ್ವಚ್ಛಂದ ಗಚ್ಛತ್ಪ್ರಭಾ ॥

ಧಾರಾವಾಹ ತರಂಗಿಣೀ ಕಟಿಲಸತ್ಪ್ರದಾರವಿಂದ ದ್ವಯಂ ।
ಸಾರತ್ವಂ ಕುಡುಗೆನ್ನ ಕಾವ್ಯದೊಲವಿಂದಾ ಚೆನ್ನ ಕೌಂಡೇಶ್ವರಂ ॥ ೧ ॥

End :

ಉ.ಮ. ॥ ಈ ಕೃತಿಯಂ ಸಮಂತೊಸೆದು ಕೇಳ್ವಜನಾಳಿಗೆ ಬೊಮ್ಮನಾಯುಮಂ ।
ಶ್ರೀ ಕಮಲಾಕ್ಷ ನೈಶ್ವರ್ಯದೇಳ್ಗೆಯ ನೋದಿದ ಮಾನವರ್ಗೆ ತಾಂ ।
ಲೋಕ ಪತಿತ್ವಮಂ ನೆಱೆಯಲರ್ಥ ಸಮರ್ಥಕ ಕೋವಿದರ್ಗೆ ಯಾ ।
ಸ್ತೋಕದಿ ನೀವು ತಿರ್ಪನುಱೆ ಚೂಡೆಯಲಿಂಗನನಂತಮುಟ್ಕಿಜೆಂ ॥ ೧೦೧ ॥

Colophon :

ಚೂಡನಾಸ್ಥಾನ ಸಂಪೂರ್ಣಂ.

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ವೈಭೋಗ ರಾಜಾಸ್ಥಾನ, ವಿರೂಪಾಕ್ಷಾಸ್ಥಾನ, ಅಮರುಕ, ಶಾರದಾಗದ್ಯ, ಇವೂ ಇವೆ. ಆ ಬಗೆಗೆ ಹಿಂದಣ ೬೬೩ ನೆಯ ನಂಬರನ್ನು ನೋಡುವುದು.

ಇದು ಚಂಪೂರೂಪವಾಗಿದೆ. ೧೦೧ ಪದ್ಯಗಳವೆ. ಇದರಲ್ಲಿ ಕೌಂಡೇಶ್ವರ, " ಚೂಡೆಯ ಲಿಂಗ " ಎಂಬ ಹೆಸರುಳ್ಳ ಈಶ್ವರನ ಆಸ್ಥಾನ ವರ್ಣನೆಯು ಉಕ್ತವಾಗಿದೆ. ಕವಿ ಪ್ರಭುಗನೆಂಬವನು. ಇವನ ಕಾಲವು ಸು. ೧೫೨೦. ಎಂದು ಕವಿಚರಿತ್ರಕಾರರು ಬರೆಯುತ್ತಾರೆ.

No. 1130. ಚೂಡನಾಸ್ಥಾನ by ಪ್ರಭುಗ.
CŪḌANĀSTHĀNA BY PRABHUGA.

Substance, paper. Size, 10½ × 9½ inches. Pages, 45. Lines, 20 on a page. Extent, 700 granthas. Character, Kannada. Condition, good. Appearance, new.

Restored in 1918–19 from the Ms. described above.

Begins on page 1 of the manuscript described under No. 664 ante.

Complete.

(ವಿ.ವಿ.)—

ಸಮಗ್ರ. ಕಾಗದದ ಪ್ರತಿ. ಇದು ಇದರ ಹಿಂದಣ ನಂಬರಿನಲ್ಲಿ ವರ್ಣಿತವಾದ ಪ್ರತಿಯ ಪ್ರತಿಕೆಯಾಗಿದೆ. ಇದರೊಡನೆ ವೈಭೋಗ ರಾಜಾಸ್ಥಾನ ಮುಂತಾದುವೂ ಇವೆ.
ಆ ಬಗೆಗೆ ಹಿಂದೆ ವರ್ಣಿತವಾದ ೬೬೪ ನೆಯ ನಂಬರನ್ನು ನೋಡುವುದು.

No. 1131. ಚೂಡನಾಸ್ಥಾನ by ಪ್ರಭುಗ.
CŪḌANĀSTHĀNA BY PRABHUGA.

Substance, palm-leaf. Size, 11 1/16 × 1-1/16 inches. Pages, 100. Lines, 5 to 6 on a page. Extent; 700 granthas. Character, Kannada. Condition, very much injured. Appearance, old. Mode of writing, good.

Begins on fol. 50*a*. The other work herein is :— Vaibhōgarājāsthāna 1*a*.

Complete.

Same work as that described above.

(ವಿ.ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಇದರೊಡನೆ ವೈಭೋಗರಾಜಾಸ್ಥಾನವೂ ಇದೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1132. ಜಗನ್ನಾಥ ವಿಜಯ by ರುದ್ರಭಟ್ಟ.

JAGANNĀṬHA VIJAYA BY RUDRABHAṬṬA.

Substance, Srītāla. Size, 14 × 1-13/16 inches. Pages, 370. Lines, 9 on a page. Extent, 6,500 granthas. Character, Kannada. Condition, slightly injured. Appearance, old. Mode of writing, fair.

Complete in 18 Āśvāsas.

This is an eminent and popular classical composition in campu style, and it describes the story of Srīkṛṣṇa up to his going to Dvāraka as told briefly in the Amśas 5 and 6 of the Viṣṇupurāṇa. The author is Rudrabhaṭṭa who lived in about 1185 A.D. There is a commentary in Sanskrit for the benedictory five verses of the work by name " Pañcapāṣāṇavyākhyā " of which author is not known. This work was published in Madras in 1896 at first and later on with the above said commentary by the Government Oriental Library, Mysore in 1904.

Date of transcription :—Sunday, the seventh day of the bright fortnight of the lunar month Caitra in the year Śukla, Śaka year 1611 corresponding to 1689 A.D.

Name of the scribe :—Rāmabhūsura who copied for minister Kṛṣṇayya, son of Gōpīnātha.

Beginning :

ಶಾ॥ ಶ್ರೀರಮಾನಟಿ ಕೌಸ್ತುಭ ದ್ಯುತಿಕಿರತ್ಪುಷ್ಪಾಂಜಲಿ ಕ್ಷೇಪ ವ ।
ಕ್ಷೋರಂಗ ಸ್ಥಿತೆಯಾದ ಪಾದನಖರೋಚಿರ್ಗಂಗೆ ಪೃಥ್ವೀಶ ಕೋ ।
ಟೀರ ವ್ಯಾಪ್ತಿಗೆ ಸಂದ ಚಕ್ರರವಿ ದೈತ್ಯಧ್ವಾಂತಮಂ ಗೆಲ್ದ ಭೂ ।
ಭಾರ ಚ್ಛೇದವಿನೋದಿ ಕೃಷ್ಣನೆಮಗೀಗಾನಂದ ಸಂದೋಹಮಂ ॥

* * * *

ಕಂ॥ ಕತೆ ವಿಷ್ಣುಪುರಾಣಂ ಸ ।
ತ್ಕೃತಿ ವೇಳ್ದಂ ಸುಕವಿ ರುದ್ರನೀಕೃತಿಗೆ ಕಥಾ ।

ಪತಿ ಕೃಷ್ಣಂ ಕೃತಿಯುಂ ಭೂ ।
ಸುತಮೆ ಜಗನ್ನಾಥವಿಜಯಮೆನೆ ಮೆಚ್ಚದರಾರ್ ॥ ೨೧ ॥

End :

ಉ॥ ಮಾ॥ ಬಾಡದ ಕೆಯ್ಗೆ ಕೊಳ್ಗೆ ಮಳೆ ಸಸ್ಯಕುಲಂ ಸತತಂ ಸುಭಿಕ್ಷೆಯುಂ ।
ಮೂಡುಗೆ ಗೋಧನಾಳಿ ಕೊಡವಾಲ್ಗರೆಗೋಪರನಂಗರಾಗದೊಳ್ ।
ಕೂಡುಗೆ ರುದ್ರಭಟ್ಟಕೃತಿ ವೈಷ್ಣವ ಕಾವ್ಯರಸಾರ್ಣವಂ ತುಳುಂ ।
ಕಾಡುಗೆ ಭೂಮಿ ನಿಶ್ವಿನಮಹಃಪತಿ ನಿಶ್ವಿನಮಿಂದು ನಿಶ್ವಿನಂ ॥ ೧೦೩ ॥

Colophon :

ಇದು ಸಮಸ್ತ ಕಮಳ ಭವಾಂಡ ಮಾಲಾ ಘಟಿ ಘಟಿಕಾರಘಟ್ಟ ಘಟನಾ ಸ್ವತಂತ್ರ ನಿಜ ಸ್ವರೂಪ ನಿರೂಪಣ ಚಕಿತ ಸಕಳಾಮ್ನಾಯ ತಂತ್ರ ಲಕ್ಷ್ಮೀಕಾಂತ ಶ್ರೀಪಾದ ಭಕ್ತಿಯುಕ್ತ ಸುಕವೀಂದ್ರ ರುದ್ರಪ್ರಣೀತ ಶ್ರೀ ಜಗನ್ನಾಥವಿಜಯ ಮಹಾಪ್ರಬಂಧದೊಳ್ ಅಂಧಕ-ರಿಪು ಸ್ಕಂಧಯುದ್ಧ ಬಾಣಾಸುರ ಸಹಸ್ರ ಭುಜ ಚ್ಛೇದ (ನ) ರಿಪು ಭ್ರಮಣ ಪುರಸ್ತಂಭನ ಸಾಲ್ವ ವಧ ದ್ವಾರಾವತೀ ಪ್ರ [ದೇ] [ವೇ] ಶವರ್ಣನ ಮಷ್ಟಾದಶಾಶ್ವಾಸಂ ॥

ಸೇವ್ಯ ಕಾವ್ಯ ನಾಟಕ ತರ್ಕ ವ್ಯಾಕರಣ ಛಂದೋಲಂಕಾರಾದ್ಯನೇಕ ಶಾಸ್ತ್ರ ಪಾರಾವಾರ ಪಾರಗ ಶ್ರೀ ಮತ್ಸುಕವೀಂದ್ರ ರುದ್ರಭಟ್ಟ ಪ್ರಣೀತ ಶ್ರೀ ಜಗನ್ನಾಥ ವಿಜಯ ಮಹಾ ಪ್ರಬಂಧೇ ಪ್ರಥಮಂ ತಾವತ್ಸರ ಜ್ಯೇಷ್ಠ ವಿಜ್ಞಾಪನಾ ವರ್ಣನ ಸುಧಾರ್ಣವಾವತರಣೋ ದ್ಯೋಗ ವರ್ಣನ (*) (*) ಬಾಣಾಸುರ ಭುಜ ಸಹಸ್ರ ಚ್ಛೇದನ ರಿಪು ಭ್ರಮಣ ಪುರಸ್ತಂಭ ಸಾಲ್ವವಧ ದ್ವಾರಾವತೀ ಪ್ರದೇಶ ವರ್ಣನ ಮಿತ್ಯೇಕೋತ್ತರ ಶತಕೃತ್ವಾನಿ ಸಮಾಪ್ತಾನಿ—ಇಂತು ಜಗನ್ನಾಥ ವಿಜಯ ಮಹಾ ಪ್ರಬಂಧದೊಳು ಆಶ್ವಾಸ ೧೮ ಕ್ಕಂ ವೃತ್ತಂ ಗಳು ೧೦೩೬ ಕ್ಕಂ ಕಂದಂಗಳು ೯೮೫ ವಚನಂಗಳು ೬೨೨ ಕ್ಕಂ ಗ್ರಂಥಪ್ರಮಾಣ ೬೫೦೦ ಕ್ಕಂ ಮಂಗಳ ಮಹಾ ಶ್ರೀ॥

ಪುಸ್ತಕ ನಿರ್ಮಾಣ ಕಾಲ ಮುಂತಾದವು :—

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕುವರ್ಷಂಗಳು ೧೬೧೧ ಸಂದ ವರ್ತ ಮಾನದ ಶುಕ್ಲನಾಮ ಸಂವತ್ಸರದ ಚೈತ್ರ ಶುದ್ಧ ಸಪ್ತಮಿ ಭಾನುವಾರದಲ್ಲು ;—

ಉ॥ ಮಾ॥ ವಿಪ್ರಕುಲಾವತಂಸ ಪರಿಶುದ್ಧತರೋನ್ನತವಂಶಕಲ್ಪ ಭೂ ।
ಜ ಪ್ರತಿಮಾನ ಭಾವ ಗೋಪೀನಾಥ ತನೂಭವ ಶ್ರೀ ಕೃಷ್ಣಯ್ಯ ಬು ॥
ಧ್ಧಿ ಪ್ರದ ಮಂತ್ರಿ ಶೇಖರಗೆ ತ್ರೈಭುವಿನಾಥವಿಜಯ ಕಾವ್ಯಮಂ ।
ಸುಪ್ರಮುದೋದಯಂ ಬರೆದನುನ್ನತ ಸತ್ಕುಲ ರಾಮಭೂಸುರಂ ॥

(ವಿ.ವಿ.)—

ಸಮಗ್ರ. ಸ್ವಲ್ಪ ಮಟ್ಟಿಗೆ ಶಿಥಿಲವಾಗಿದೆ. ಲಿಪಿ ಚೆನ್ನಾಗಿದೆ. ಪುಸ್ತಕ ನಿರ್ಮಾಣ ಕಾಲ ಮುಂತಾದವನ್ನು ಹಿಂದೆಯೇ ಬರೆದಿದೆ.

ಇದು ಚಂಪೂರೂಪವಾಗಿದೆ. ಆಶ್ವಾಸಗಳು ೧೮. ಶ್ರೀ ಕೃಷ್ಣಾವತಾರದ ಕತೆ.—ಬ್ರಹ್ಮನು ಕ್ಷೀರಸಾಗರಕ್ಕೆ ಹೋಗಿ ಮಹಾ ವಿಷ್ಣುವಿನಲ್ಲಿ ಭೂಭಾರವನ್ನು ತಗ್ಗಿಸುವ ಸಲುವಾಗಿ ವಿಜ್ಞಾ ಪಿಸುವುದು ಮೊದಲುಗೊಂಡು ಶ್ರೀ ಕೃಷ್ಣನು ದ್ವಾರಕಾಪುರ ಪ್ರವೇಶಮಾಡುವವರೆಗೆ ಇರುವ

ಶ್ರೀ ಕೃಷ್ಣನ ೧೦೧ ಕೃತ್ಯಗಳನ್ನು ಇದರಲ್ಲಿ ಹೇಳಿದೆ. ಇದು ಮೈಸೂರು ಓರಿಯಂಟಲ್ ಲೈಬ್ರೆರಿಯಲ್ಲಿ ಮುದ್ರಿತವಾಗಿದೆ. (ಈ ಗ್ರಂಥದ ಮಂಗಳ ಪದ್ಯಗಳಿಗೆ, ಪಂಚಪಾಷಾಣ ವ್ಯಾಖ್ಯಾ ಎಂಬ ಹೆಸರಿನಿಂದ ಯಾರೋ ಸಂಸ್ಕೃತದಲ್ಲಿ ವ್ಯಾಖ್ಯಾನವನ್ನು ಬರೆದಿದ್ದಾರೆ.

ಕವಿ ರುದ್ರಭಟ್ಟನೆಂಬವನು. ಇವನು ಈ ಗ್ರಂಥವನ್ನು ಜೈನಸರಣಿಯಂತೆಯೇ ಬರೆದಿದ್ದಾನೆ. ಈ ಗ್ರಂಥವು ಪ್ರೌಢವಾಗಿಯೂ ಸರ್ವ ಜನಾದರಣೀಯವಾಗಿಯೂ ಇದೆ. ಕವಿಯ ಕಾಲವು ಸು. ೧೧೮೦ ಎಂದು ಕವಿಚರಿತ್ರಕಾರರ ಮತವು. ಹೆಚ್ಚು ವಿಷಯಗಳಿಗೆ ಕವಿಚರಿತ್ರೆ (ಪ್ರಥಮ ಸಂಪುಟ) ಯನ್ನೂ ಮುದ್ರಿತ ಪುಸ್ತಕವನ್ನೂ ನೋಡುವುದು.

No. 1133. ಜಗನ್ನಾಥ ವಿಜಯ by ರುದ್ರಭಟ್ಟ.
JAGANNĀTHA VIJAYA BY RUDRABHAṬṬA.

Substance, Palm-leaf. Size, 16½ × 1-5/16 inches. Pages, 364. Lines, 7 to 8 on a page. Extent, 6,500 granthas. Character, Kannada. Condition, extremely injured Appearance, old. Mode of writing, fair.

Wants 60 stanzas in the beginning ; otherwise complete.

Same work as that described above.

(ವಿ-ವಿ.)—

ಮೊದಲು ೬೦ ಪದ್ಯಗಳಿಲ್ಲ. ಇಲ್ಲದಿದ್ದರೆ ಪೂರ್ಣವೆನ್ನಬಹುದಿತ್ತು. ಪ್ರಾಯಿಕವಾಗಿ ಓಲೆಗಳೆಲ್ಲವೂ ಮುರಿದುಹೋಗಿವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1134. ಜಗನ್ನಾಥ ವಿಜಯ by ರುದ್ರಭಟ್ಟ.
JAGANNĀTHA VIJAYA BY RUDRABHAṬṬA.

Substance, Palm-leaf. Size, 15¾ × 1⅛ inches. Pages, 424. Lines, 5 to 7 on a page. Extent, 5,400 granthas. Character, Kannada. Condition, very injured. Appearance, old. Mode of writing, fair.

Incomplete.

Contains Āśvāsas 1–15 complete and 16 incomplete. Some foll. are wanting in the middle.

Same work as that described above.

(ವಿ-ವಿ.)—

ಅಸಮಗ್ರ. ೧-೧೫ ಆಶ್ವಾಸಗಳಿವೆ. ೧೬ ನೆಯ ಆಶ್ವಾಸದ ಕೊನೆಯಲ್ಲಿ ಕೆಲವು ಪದ್ಯಗಳಿಲ್ಲ. ಕೆಲವು ಓಲೆಗಳು ಹೋಗಿವೆ. ಕೆಲವು ಮುರಿದಿವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಪುಸ್ತಕದಾದಿಯಲ್ಲಿ ಬರಹಗಾರನು ಮೂಗುಡ ತಿರುವೆಂಕಟನಾಥಸ್ವಾಮಿಯನ್ನು ಸ್ಮರಿಸಿದ್ದಾನೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1135. ಜಗನ್ನಾಥ ವಿಜಯ by ರುದ್ರಭಟ್ಟ-

JAGANNĀTHA VIJAYA BY RUDRABHAṬṬA.

Substance, Śrītala. Size, 12¾ × 2-1/16 inches. Pages, 179. Lines, 8 to 10 on a page. Extent, 3,500 granthas. Character, Kannada. Condition, injured. Appearance, old.

Breaks off in the 20th stanza of the 11th Āśvāsa.

Some leaves are wanting in the middle. The numbering of the foll. is not perfect. Fol. 1 contains "suvvi" in Kannada and the last fol. (i.e., fol. 92) contains some stanzas of the Rādhāmādhavakāvya (Telugu) Fol. 79*b*. is left blank.

Same work as that described above.

(ವಿ-ವಿ.)—

ಅಸಮಗ್ರ. ೧ ನೆಯ ಆಶ್ವಾಸದಿಂದ ೯ ನೆಯ ಆಶ್ವಾಸದ ೩೫ ನೆಯ ಪದ್ಯದವರೆಗೂ ಅನಂತರ ೧೦ ನೆಯ ಆಶ್ವಾಸದಿಂದ ೧೧ ನೆ ಯಾಶ್ವಾಸದ ೨೦ ನೆಯ ಪದ್ಯದವರೆಗೂ ಇದೆ. ನಡುವೆ ಎರಡು ಮೂರು ಓಲೆಗಳು ಹೋಗಿವೆ. ಓಲೆಗಳಲ್ಲಿ ಸಂಖ್ಯೆಯು ತಾರುಮಾರಾಗಿ ಕಾಣಿಸಿದೆ. ಪದ್ಯಗಳಿಗೆ ಸಂಖ್ಯೆ ಕೊಟ್ಟಿಲ್ಲ. ಈ ಪುಸ್ತಕದಾದಿಯಲ್ಲಿ "ಸುವ್ವಿ" ಹಾಡುಗಳುಳ್ಳ ಒಂದೋಲೆಯೂ ಅಂತ್ಯದಲ್ಲಿ ತೆಲುಗಿನ, "ರಾಧಾಮಾಧವ" ಕಾವ್ಯದ ಪದ್ಯಗಳನ್ನುಳ್ಳ ಒಂದೋಲೆಯೂ ಇದೆ. ಇದನ್ನು ಶಿಥಿಲವಾದ ಪ್ರತಿಯೆನ್ನಬಹುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1136. ದಿವ್ಯಸೂರಿ ಚರಿತ್ರ by ಲಕ್ಷ್ಮೀಪತಿ alias ಚಿಕ್ಕುಪಾಧ್ಯಾಯ-

DIVYASŪRI CARITRE BY LAKṢMĪPATI *alias* CIKKUPĀDHYĀYA.

Substance, Palm-leaf. Size, 13⅛ × 1-5/16 inches. Pages, 519. Lines, 3 on a page. Character, Kannada. Condition, injured. Appearance, old. Mode of writing. good.

Complete in 14 Āśvāsas.

A campu kāvya describing an account of the lives of the 12 Drāviḍa saints proselytizers of the Sri-Vaiṣṇava religion. The author is Lakṣmīpaṭi alias Cikupādhyāya, son of Raṅgācārya. He was one of the ministers of the Mysore king Cikadēvarāja—who was an author himself and also patron of a large number of poets and poetesses.

The scribe Tirmaiyangār transcribed this work in the month of 'Rādhāmāsa' in the year "Virōdhikara" by order of Gaurammaṇṇi, Mahārāṇi of Cikadēvarāja, Rādhāmāsa may be Makaramāsa when Rādhākalyānam is celebrated. The author says in this work that he wrote this at the instance of Cikkadēvarāja. According to the Introduction of Karnātaka Kavicarite, Vol. II. Cikadēvarāja ruled from A.D.

1672 to 1704 (Śāli Śāka 1593–1625). The year 1672 corresponds to Virōdhikṛtu year. It is clear from the fact mentioned above that this work was completed in A.D. 1672.

Beginning :

ಶಾ॥ ಶ್ರೀ ಸತ್ಯಾ[ರ್ಥಿ] (ಂಚಿ) ಸದಾನವಾರಿ ವಿಭವಂ ಕಲ್ಯಾಣದೀವ್ಯನ್ಮಹಾ ।
ವಾಸಂ ಗೋಪರಿಪಾಲನೈಷಿ ಸುಮನೋ ಗೋತ್ರಾವನೋದ್ಯತ್ಸ್ವಮು ॥
ಲ್ಲಾಸಂ ಸವ್ಯಗನಂತ ಭೋಗ ಲಸದಂಗಂ ರಾಜಹಂಸಾಶ್ರಯೋ ।
ದ್ಭಾಸಂ ಸತ್ಯಪರಾಕ್ರಮಾ ಪ್ರತಿಯು ನೆಮ್ಮಂ ಪಾಲಿಕಾ ಚಂದ್ರಮಂ ।

ಕಂ॥ ಶ್ರೀಮದ್ದುಗ್ಧಾಂಬುಧಿ ಕ ।
ನ್ಯಾ ಮಾನಸಮಾಸ್ಯೈಕ ಖೇಲನ ಹಂಸಂ ॥
ಸಾಮಜ ವರದಂ ಜಲದ ।
ಶ್ಯಾಮಂ ಶ್ರೀರಂಗಧಾಮ ನೀಗೆಮಗೊಳ್ಪಂ ॥

ಮ॥ ವಿ॥ ನಿಜನೇತ್ರಂ ಭುವನಾಳಿ ಚಕ್ಷು ನಿಜನಾಭೀ ಪದ್ಮ ಭೂತಂಜನ ।
ದ್ವ್ರಜ ಸೃಷ್ಟೈಕ ವಿಶಾರದಂ ನಿಜಸುತಂ ಕಾಮಪ್ರಭಾವಾಸ್ಪದಂ ॥
ನಿಜತಳ್ಪಂಬಹುವಿಷ್ವಪ್ರೋದ್ವಹನಧುರ್ಯಂ ನೋಡಲೀ ಪೆಂಪುವೆ ।
ತ್ತ ಜನಾನಂದಕರಂ ಮದಿಪ್ಸಿತಮನೊಲ್ದೀ ಗಾವಗಂ ಮಾಧವಂ ॥

ಉ॥ ಆವಳಪಾಂಗಕಾಂತಿ ಮುನಿಚಿತ್ತಮರಾಳಕೆ ದುಗ್ಧಮಾಯ್ತುಮ ।
ತ್ತಾವಳ ದಂತಶೋಭೆ ಹರಿನೇತ್ರ ಚಕೋರಕೆ ಜೊನ್ನಮಾದುದಂ ॥
ತಾವಳೊಡಲ್ಪೊಗರ್ಜಲಜಚಕ್ರಕೆ ಪೊಂಬಿಸಿಲಂತೆ ತೋರ್ಕುಮಾ ।
ಪಾವನಮೂರ್ತಿ ರಂಗವಿಭುವಲ್ಲಭೆ ಯೀಗೆಮಗಿಷ್ಟ ಸಿದ್ಧಿಯಂ ॥

ಮ॥ ವಿ॥ ಹರಿಯಾಜ್ಞಾಬಲದಿಂ ಸಮಸ್ತ ಜಡಲೋಕೋಜ್ಜೀವನಾರ್ಥಂ ವಸುಂ ॥
ಧರೆಗೆಯ್ತಂದವತಾರಮಂ ಗರುಡವಿಷ್ವಕ್ಸೇನ ಶೇಷಾರಿ ಬಂ ।
ಧುರ ಶಂಖಾಸಿ ಧನುರ್ಗದಾದಿಗಳ ಸಾರಾಂಶಂಗಳಂ ಮಾಡಿದಾ ।
ಪರತತ್ವಜ್ಞರಭೀಷ್ಟಮಂ ಕುಡುಗೆ ಪನ್ನಿರ್ವರ್ಮಹಾ ಯೋಗಿಗಳ್ ॥

ವಚನ॥ ಅವರಾರೆಂದೊಡೆ :—

* * * *

ಉ॥ ವಿಷ್ಣುವೆ ರುದ್ರಮುಖ್ಯ ವಿಬುಧೋತ್ತಮ ನೆನ್ನದ ವೈರಿಮಂಡಲೀ ।
ಜಿಷ್ಣುವಿನನ್ಯ ದರ್ಶನ ಪರತ್ವವಿದಾರಣ ನಿಷ್ಠನಾವಗಂ ॥
ಕೃಷ್ಣ ಪದಾಂಬುಜಾತ ಪಟುಭಕ್ತಿ ರಸಾಮೃತಪೂರ ನಿತ್ಯವ ।
ರ್ಧಿಷ್ಣುವ ಲಕ್ಷ್ಮಣಾರ್ಯರಣದಾವರೆಯಂ ನುತಿಗೆಯ್ವೆನೊಲ್ಪಿನಿಂ ॥

ಕಂ॥ ನಿಜನಾದ ಶೀರ್ವದಸುರ ।
ವ್ರಜವನಿತಾಗರ್ಭ ಮಿಂದಿರೇಶಾನನ ಪಂ ॥
ಕಜ ಮರುದತಿ ಪೂತಂ [illegible] ।
ಚಜನ್ಯ ಮಾಗೆಮಗೆ ನಿರ್ಮಲತ್ವಮನನಿಶಂ ॥

* * * *

ಕಂ॥ ಈ ಯಾಳ್ವಾರ ಚರಿತ್ರೆಗೆ ।
ಶ್ರೀಯುರಸಂ ಕರ್ತೃ ಸಕಲ ವಿದ್ವದ್ವಿನುತಂ ॥
ಕಾಯಜರೂಪಂ ಚಿಕುಪಾ ।
ಧ್ಯಾಯಂ ಕೃತಿ ಕುಶಲ ನೆಂದೊಡಾರಾಲಿಸದರ್ ॥

*   *   *   *

ಮ॥ ಸ್ರ॥ ಮಿಗೆ ಶ್ರೀರಂಗಾದಿ ದಿವ್ಯಸ್ಥಳದ ಕಥೆಗಳಂ ಕೇಳುತಿರ್ಪಲ್ಲಿ ಮೋದಂ ।
ಪುಗೆ ಹೃತ್ಪಂಕೇಜದೊಳ್ ವೈಷ್ಣವ ಸಮುಚಿತ ದಿವ್ಯಪ್ರಬಂಧಂಗಳಂ ಸ್ಮೆ ॥
ನೆಗಳ್ದಾ ಪನ್ನಿ[ರ್ಡ](ರ್ವ) ರಾಳ್ವಾರ್ಗಳ ಚರಿತೆಯನಾ ಕರ್ಣಪೊಳ್ವಾಗೆಯಾ
ಗಳ್ ।
ಸುಗುಣಂ ಶ್ರೀ ಚಿಕ್ಕದೇವ ಕ್ಷಿತಿಪತಿ ಬುಧರಂ ನೋಡಿದಂ ಪ್ರೇಮದಿಂದಂ ॥

ಕಂ॥ ಮುನ್ನಂ ದ್ರಾವಿಡ ಭಾಷೋ ।
ತ್ಪನ್ನಮ ನಾಳ್ವಾರ ವಿಮಳ ಚರಿತೆಯನೀಗಳ್ ॥
ಕನ್ನಡದೊ ಳ್ವಾತಿಂ ನೆಗ ।
ಳ್ದನ್ನತಿಯಿಂದೆನಗೆ ಕೇಳಸಿಂ ವಿಬುಧರಿರಾ ॥

ಮ॥ ಸ್ರ॥ ಎನೆ ಕೇಳ್ದಾವಾಕ್ಯಮಂ ಯಾಜುಷ ನಮಳಯಶಂ ಪೌರುಕುತ್ಸಾನ್ವಯೋತ್ಥಂ ।
ವಿನುತ ಶ್ರೀ ವೈಷ್ಣವಾಂಭೋನಿಧಿ ವಿಮಳ ಸುಧಾ ಧಾಮನಾನಂದ ಧಾಮಂ ।
ಘನರಂಗಾಚಾರ್ಯ ಪುತ್ರಂ . . . . . ಲಸಚ್ಚಿಕ್ಕುಪಾಧ್ಯಾ ।
ಯನುದಾರಂ [ಚಿಕ್ಕ] ವಿಷ್ಣು ಪಾದಾಂಬುಜ ನಖರುಚಿ ಚಂದ್ರಾತಪೋದ್ಯಚ್ಚ
ಕೋರಂ ॥

ಕಂ॥ ಮನವೊಲ್ದು ದಿವ್ಯಸೂರಿಗ ।
ಳನಘಾ ಚ್ಯಾರ್ಗಳ ಚರಿತ್ರಯಂ ಬಲ್ಲಂತಾ ।
ನನುಪಿಂ ಪೇಳ್ವಿಂ ವೈಷ್ಣವ ।
ಜನ[ಕಾ](ತಾ) ನಂದಾಬ್ಧಿ ಪೊಣ್ಮೆ ಶ್ರೀಹರಿ ಕೃಪೆಯಿಂ ॥

*   *   *   *   *

ಕಂ॥ ಯೋನಿಜರಾಗಿ ಕೆಲಂಬರ ।
ಯೋನಿಜರೆನಿಸುತ್ತೆ ನಾಲ್ಕು ವರ್ಣಂಗಳೊಳಂ ॥
ನ್ಯೂನಮದಿಲ್ಲದೆ ವಿಷ್ವ ।
ಕ್ಸೇನ ಗರುತ್ಮದ್ಭುಜಂಗಪತಿ ಮೊದಲಾದರ್ ॥

ವ॥ ಆಳ್ವಾರ ರೂಪಮಾಗಿಯು ಮಾಚಾರ್ಯ ರೂಪಮಾಗಿಯು ಮವತರಿಸಿ ಯವನಿಯೊಳ್ ಸಕಲ ಲೋಕೋಜ್ಜೀವನಮಂ ನೆಗ[ಳ್ಚ್ದ](ಳ್ಚ್ದ) ರದೆಂತೆನೆ :—

ಗದ್ಯ.—

Colophon :

ಇದು ನಮಿತ ಹಿಮಕರಚೂಡ ಕಮಲಭವ ಮುಖಸುರ ಸಮುದಯ ಮೌಳಿ ಮಣಿಗಣ ಘೃಣಿ ಸಂಧ್ಯಾ ರಾಗಾನುಗುಣ-ಪ್ರಚುರ ರುಚಿತಾರಕಾಯಮಾನ—ರಂಗ ವಿಭು ಚರಣಯುಗಳ

ನಖಮಯೂಖ ಸುಧಾ ಪೂರ ವಿಹಾರ ಮದ [ವ](ಮ)ರಾಳೀಕೃತ ಮಹಿಷಪುರವರ ಸಾಮ್ರಾಜ್ಯ ಸಂಪನ್ನ ರಾಜಾಧಿರಾಜ ರಾಜಪರಮೇಶ್ವರಾ ಪ್ರತಿಮ ಪ್ರೌಢ ಪ್ರತಾಪ ಬಿರುದೆಂತೆಂಬರ ಗಂಡ ಯದುಕುಲನಳಿನ ಧಿನಕರನಾದ ಚಿಕದೇವರಾಯ ಮಹಾರಾಜ ಪ್ರಸಾದ ಪರಿಪೂರ್ಣ ಸಚಿವ ನಿಚಯತಿಲಕ-ಶ್ರೀ ಚಿಕುಪಾಧ್ಯಾಯ ವಿರಚಿತಮಪ್ಪ ದಿವ್ಯಸೂರಿ ಚರಿತ ಮಹಾ ಪ್ರಬಂಧ ದೊಳ್ ಕಥಾವತಾರಿಕಾ ಪೀಠಿಕಾಶ್ವಾಸಂ ಸಮಾಪ್ತಂ.

ಕಂ॥ ಶ್ರೀತನು ಕನಕಲತಾಶ್ಲೇ।
ಷಾತನು ಕಾಮಂ ಮದರ್ಥಮಂ ಕುಡುಗೆ ಸರೋ॥
ಭೂತ ಮಹದಾಹ್ವಯರ್ಕಳ।
ನೋತೋವಿದ ವಿಷ್ಣುಲೋಕನಾಥಂ ಸತತಂ॥

End :

ಮ। ವಿ॥ ವಿಳಸದ್ಯೋಮ ನಭೋರಸಾಮೃತ ಗುಶಾಕಾಬ್ದಂಗಳುಂ ಸಂದ ಪಿಂ।
ಗಳ ಸಂವತ್ಸರ ಫಾಲ್ಗುಣಾಮಳ ಮಹಾ ಪಕ್ಷಾಷ್ಟಮೀ ವಾಸರಂ॥
ಜಳಜಾತಾಂಡದೊಳೆಲ್ಲಿಯುಂ ಸ್ಫುರಿಪವೋಲ್ ಪನ್ನಿರ್ವ ರಾಟ್ಟ್ವಾರ ಮಂ।
ಗಳ ದಿವ್ಯಕೃತಿ ಪೂರ್ಣಮಾಯ್ತು ಚಿಕುಪಾಧ್ಯಾಯಾಖ್ಯ ಮಂತ್ರೀಶನಿಂ॥

ಚಂ॥ ಅವನಿ ಪಯೋಧಿ ಮೇರು ನಿಗಮಾವಳಿ ವಿಷ್ಣು ಕಥಾಪುರಾಣಕಾ।
ಸ್ತ್ರ ವಿತತಿ ಸೂರ್ಯ ಚಂದ್ರ ಗಗನಾನಿಲ ಪಾವಕ ಪುಷ್ಕರಂಗಳೀ।
ನ್ನೆವರಮವಿರ್ಕು ಮನ್ನೆವರ ಮಿಕ್ಕೃತಿ ರಂಗ ನಿವಾಸನಾಜ್ಞೆಯಿಂ।
ದೆ ವಿಬುಧರಾಳಿಪಂತೆ ಪರೆದೆಲ್ಲಿಯುಮೊಪ್ಪನಿನಿರ್ಕನಾಕಳಂ॥

ಕಂ॥ ರಂಗಪತಿ ರಂಗಶಾಯಿ।
ರಂಗಾಧಿಪ ರಂಗಧಾಮ ರಂ(ಗ)ನಿವಾಸಾ॥
ಮಂಗಳ ಜಯ ಶುಭ ಶಿವ ಭ।
ದ್ರಂಗಳ್ ಬೇಳ್ವಾಳಿಪರ್ಗೆ ವರ್ಧಿಕಜಸ್ರಂ॥

ಗದ್ಯ.—

Colophon :

ಇದು ನಮಿತ * * ಚಿಕುಪಾಧ್ಯಾಯ ವಿರಚಿತಮಪ್ಪ ಪನ್ನಿರ್ವರಾಟ್ವಾರೆಂಬ ದಿವ್ಯಸೂರಿ ಚಾರಿತ್ರ ಮಹಾ ಪ್ರಬಂಧದೊಳ್ ಶೇಷಾಂಶ ಭವರಾದ ಶ್ರೀ ಭಾಷ್ಯಕಾರ ಬೌದ್ಧ ವಿಜಯ ಯಾದವಗಿರಿ ನಾರಾಯಣ ದೇವಾಗಾರ ಜೀರ್ಣೋದ್ಧರಣ ವೈಕುಂ(ಠ) ಯಾತ್ರಾದಿ ವರ್ಣನಂ ಚತು[ರ್ಥಾಶ್ವಾ](ರ್ದಶಾಶ್ವಾ)ಸಂ ಸಂಪೂರ್ಣಂ. ಅಂತು ಆಶ್ವಾಸ ೧೪ ಕ್ಕಂ ಪದ್ಯ ವೃತ್ತ ವಚನ ಕಂದ ಸಹ ೪೦೪ ಕ್ಕಂ ಮಂಗಳ ಮಹಾ ಶ್ರೀ.—

(ಪುಸ್ತಕ-ಲೇಖನ-ಕಾಲ ಮುಂತಾದುವು) :—

ಮಾಲಿನೀ ವೃತ್ತ॥

ಸರಸಿ ಚೆಲುವ ಗೌರಮ್ಮಣ್ಣಿಯಿಂದಾಜ್ಞೆವೆತ್ತೀ।
ವರ ದಿವಿಯ ಮಹಾಸೂರಿ ಪ್ರಬಂಧಂ ವಿರೋಧಿ।

ಕರಬರಿಸದ ರಾಧಾವಮಾಸದೊಳ್ (?) ಗ್ರಂಥಮೆಲ್ಲಂ ।
ಬರೆದುದು ಶ್ರೀತತಿರ್ಮೈಂಗಾರರಿಂ ಸಂಪದ್ವಭೈವ ॥

ಕಂ॥ [ಥರಥರ] (ತೆರತರ) ದಳ್ಕರಿನೋವಿದ ।
ಪರ-ದೊರೆ-ಚಿಕದೇವ ರಾಜನರಸೀ ಸರಸೀ ॥
ಸಿರಿ ಗೌರಮ್ಮಣ್ಣಿಯೆ ನೀ ।
ನುರು ದಯೆಯಿಂದೆಮ್ಮ ನೋವು ನೆಱೆ ನಂಬಿದೆವಾಂ ॥

(ಎಂದಿದೆ)

(ವಿ.ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಮುಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿ ಇದರ ಪ್ರತಿಕೆಯಾಗಿದೆ.

ಇದು ಚಂಪೂರೂಪವಾಗಿದೆ. ೧೪ ಆಶ್ವಾಸಗಳವೆ. ವಿಷ್ಣು ಭಕ್ತರಾದ ಹನ್ನೆರಡು ಜನ ಆಳ್ವಾರರ ಚರಿತ್ರೆಯು ಉಕ್ತವಾಗಿದೆ. ಕವಿ ಚಿಕದೇವರಾಜನ ಇಷ್ಟದಂತೆ ದ್ರಾವಿಡ ಭಾಷೆಯಲ್ಲಿದ್ದ ಈ ಚರಿತ್ರೆಯನ್ನು ಶಕ ೧೬೦೦ (ಕ್ರಿ. ಶ. ೧೬೭೮) ರಲ್ಲಿ ಕನ್ನಡದಲ್ಲಿ ರಚಿಸಿದುದಾಗಿ ಹೇಳಿದ್ದಾನೆ. ಈ ದಿವ್ಯಸೂರಿ (ಜೀವನ್ಮುಕ್ತರು) ಚರಿತ್ರೆಗೆ ಪನ್ನಿರ್ವ ರಾಳ್ವಾರ ಚರಿತ್ರೆಯೆಂದೂ ಹೆಸರು. (ಪನ್ನಿರ್ವರಾಳ್ವಾರುಗಳು :—ಸರೋಯೋಗಿ - ೧ ಪೊಯ್ಗಾಳ್ವಾರ್, ೨ ಭೂತಯೋಗಿ - ಪೊದತ್ತಾಳ್ವಾರ್, ೩ ಮಹದಾಹ್ವಯರು - ಪೇಯಾಳ್ವಾರ್, ೪ ಭಕ್ತಿಸಾಗರರು - ತಿರುಮಟಿಶಿಯಾಳ್ವಾರ್, ೫ ಶಠಕೋಪರು - ನಮ್ಮಾಳ್ವಾರ್, ೬ ಮಧುರಕವಿಗಳು - ಮಧುರಕವಿಯಾಳ್ವಾರ್, ೭ ಕುಲಶೇಖರರು - ಕುಲಶೇಖರಾಳ್ವಾರ್, ೮ ಗೋದಾ ದೇವಿ - ಶೂಡಿಕುಡಿತ್ತ ನಾಚ್ಚಿಯಾರ್, ೯ ಭಟ್ಟನಾಥರು - ಪೆರಿಯಾಳ್ವಾರ್, ೧೦ ಭಕ್ತಾಂಘ್ರಿರೇಣು-ತೊಂಡರಡಿಪ್ಪೊಡಿಯಾಳ್ವಾರ್, ೧೧ ಮುನಿವಾಹನರು- ತಿರುಪ್ಪಾಣಾಳ್ವಾರ್, ೧೨ ಪರಕಾಲರು - ತಿರುಮಂಗೈಯಾಳ್ವಾರ್.

ಇದರ ಪೀಠಿಕಾಶ್ವಾಸದಲ್ಲಿ ಚಿಕದೇವರಾಜ ವಂಶಾವಳಿಯು ಸಂಗ್ರಹವಾಗಿ ವರ್ಣಿತವಾಗಿದೆ, ಕವಿ ಚಿಕ್ಕುಪಾಧ್ಯಾಯನು. ಈ ಗ್ರಂಥವು ಮೈಸೂರು ಕಾವ್ಯಕಲಾನಿಧಿಯವರಿಂದ ಮುದ್ರಿತ ವಾಗಿದೆ. ಉಳಿದ ವಿಷಯಗಳನ್ನು ಉದಾಹೃತ ಭಾಗಗಳಿಂದಲೂ ಮುದ್ರಿತ ಪುಸ್ತಕದಿಂದಲೂ ಕವಿ ಚರಿತ್ರೆಯಿಂದಲೂ ತಿಳಿಯುವುದು.

ಈ ಪುಸ್ತಕದ ಕೊನೆಯಲ್ಲಿ ಲೇಖಕನು ತನ್ನ ಹೆಸರನ್ನು ತಿರುಮೈಂಗಾರೆಂದೂ, ಚಿಕದೇವರಾಜದೊರೆಯ ಆರಸಿ ಗೌರಮ್ಮಣ್ಣಿಯ ಆಜ್ಞಾನುಸಾರವಾಗಿ ವಿರೋಧಿಕರ ಸಂವತ್ಸರದ ರಾಧಾ ಮಾಸದಲ್ಲಿ ತಾನು ಈ ಗ್ರಂಥವನ್ನು ಪ್ರತಿ ಮಾಡಿರುವದಾಗಿಯೂ ಬರೆದಿರುತ್ತಾನೆ. ಮಕರ ಮಾಸದಲ್ಲಿ ರಾಧಾ ಕಲ್ಯಾಣವೆಂಬ ಉತ್ಸವವನ್ನು ಮಾಡುವ ವಾಡಿಕೆಯಿರುವದರಿಂದ ರಾಧಾ ಮಾಸವೆಂಬ ಶಬ್ದವು ಮಕರ ಮಾಸವೆಂಬ ಅರ್ಥದಲ್ಲಿ ಪ್ರಯೋಗಿಸಲ್ಪಟ್ಟಿದೆಯೆಂದು ಹೇಳಬಹುದು. ವಿರೋಧಿಕರ ವರ್ಷವೆಂದರೆ ವಿರೋಧಿಕೃತು ವರ್ಷ, ಚಿಕದೇವರಾಜನು ಪಟ್ಟಕ್ಕೆ ಬಂದ ಕ್ರಿ. ಶ. ೧೬೭೨ ನೇ ವರ್ಷದಲ್ಲಿ (ಶಾಲಿ ಶಕ ೧೫೯೩) ಇದೇ ಸಂವತ್ಸರವು ಬರುತ್ತದೆ. ನಂತರ ೩೨ ವರ್ಷಗಳ ವರೆಗೆ ಮಾತ್ರ ಅವನು ರಾಜ್ಯವಾಳಿದನು. ಅವನ ಸಚಿವನಾದ ಚಿಕ್ಕುಪಾಧ್ಯಾಯನು ದೊರೆಯ ಅಪ್ಪಣೆಯ ಪ್ರಕಾರ ಈ ಗ್ರಂಥವನ್ನು ರಚಿಸಿರುವದಾಗಿ ಹೇಳಿಕೊಂಡಿದ್ದಾನೆ. ಈ ಮೇಲಿನ ವಿ ಯಗಳನ್ನು

ಪರಿಶೀಲಿಸಿದರೆ ಚಿಕದೇವರಾಜನು ಪಟ್ಟಕ್ಕೆ ಬಂದ ವರ್ಷದಲ್ಲಿಯೋ ಈ ಗ್ರಂಥವು ರಚಿತವಾಯಿತೆಂದೂ ಅದೇ ವರ್ಷದ ಮಕರ ಮಾಸದಲ್ಲಿ ಈ ಪುಸ್ತಕವು ಪ್ರತಿ ಮಾಡಲ್ಪಟ್ಟಿತೆಂದೂ ಊಹಿಸಬಹುದಾಗಿದೆ.

No. 1137. ದಿವ್ಯಸೂರಿ ಚರಿತ್ರೆ by ಲಕ್ಷ್ಮೀಪತಿ alias ಚಿಕ್ಕುಪಾಧ್ಯಾಯ.
DIVYASŪRI CARITRE BY LAKṢMĪPATI *alias* CIKUPĀDHYĀYA.

Substance, Paper. Size, $10\frac{7}{16} \times 9\frac{7}{16}$ inches. Pages, 144. Lines, 20 on a page. Character, Kannada. Extent, 2,000 granthas. Condition, good. Appearance, new.

Restored in 1919–20 from the above Ms.

Complete.

The 11th Āśvāsa is written here after the 14th Āśvāsa.

Same work as the above.

(ವಿ-ವಿ.)—

ಸಮಗ್ರ. ಹನ್ನೊಂದನೆಯ ಆಶ್ವಾಸವು ೧೪ ನೆಯ ಆಶ್ವಾಸದ ಅನಂತರದಲ್ಲಿ ಬರೆದಿದೆ.

ಇದು ಹಿಂದೆ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಮೂಲ ಪ್ರತಿಯು ಅತ್ಯಂತ ಶಿಥಿಲವಾಗಿರುವದರಿಂದ ಗ್ರಂಥಪಾತವು ಬಹಳವಾಗಿದೆ.

No. 1138. ಬಿಳಿಗಿಯರಸರ ವಂಶಾವಳಿ.
BIḶIGIYARASARA VAMŚĀVAḶI.

Substance, Srītāla. Size, $9\frac{1}{4} \times 2\frac{3}{8}$ inches. Pages, 101. Lines, 8-13 on a page. Character, Kannada. Condition, fair. Appearance, old. Mode of writing, good.

Fol. 51*b* is left blank.

Contains two chapters.

A campu work giving an account of the kings beginning from Aṇḍaṇṇanṛpa to Basavabhūpāla who ruled at Aisūru. The name of the author is not known.

Beginning :

ವಾ॥ ಷ॥ ಐಸೂರ ಪಟ್ಟಣವನಾಳ್ವ ಭೂಪಾಲಕಂ ।
ವೈಸಿರಿಯೊಳಾ ಮದನ ಭೋಗದೊಳ್ ದೇವೇಂದ್ರ ॥
ನೈಸಿರಿಯೊಳಂ ಕುಬೇರನ ಗೆಲ್ದು ಸತ್ಯಭಾಷಾ ಹರಿಶ್ಚಂದ್ರ ನೆನಿಸಿ ।
ಆ ಸಂಪದಂಗಳಂ ಜಯಿಸಿ ರಣ ವಿಜಯಕರ ।
ಭಾಸುರ ಗುಣಾಭರಣ ಭೂಷಿತಾಂಡಣ್ಣ ನೃಪ ।
ಲೇಸಾಗಿ ಧರೆಯ ಪಾಲಿಸು ತಿರಲು ತತ್ಪುತ್ರ ಪಾರಿಶ್ವಭೂಪನಾದಂ ॥

• ಈ ನೃಪಾಲನ ಪುತ್ರ ಮುಂಡಣ್ಣ ವೊಡೆಯರೆಂ ।
ಬೀನಾಮವೆಸೆದಿರುವ ಕಲ್ಲಪ್ಪ ಭೂಮಿಪಂ ।
ಮಾನನಿಧಿ ಬೋಳಭೂಪಾಲ ನಮ್ಮಣ್ಣ ನೃಪ ನೆನುತ ಬೆಸರ್ವಡೆದ ನೊರ್ವಂ ॥
ಸೂನುಗಳ್ ಮೂವರಾಗಿರಲು ಕಲ್ಲಪ್ಪ ನೃಪ ।
ಗಾನಿಜ ತನೂಜ ಮುಂಡಣ್ಣ ನರಸಪ್ಪರೆಂ ।
ಬೀ ನವೀನದ ಪುತ್ರರುದಿಸಿ ಸುಖಿಮಿರುತಿರಲು ಮುಂಡಣ್ಣ ಭೂಪಾಲಗೆ ॥

ಭೈರವ ನೃಪಾಲನುಂ ಕಲ್ಲಪ್ಪ ವೊಡೆಯರುಂ ।
ವೀರ ನಿಧಿ ನರಸಿಂಹ ಭೂಪನತಿ - ವಿಕ್ರಮನು- ।
ದಾರಗುಣಮಣಿಗಣಾಭರಣ ಭೂಷಿತನು ರಣ ವಿಜಯ ಕವಿ ಕಂಠೀರವಂ ॥
ಧೀರನೆನೆ ಬೆಸರ್ವೆತ್ತು ಜನಿಸಿ ಮೆರೆವುತ್ತಿರಲು ।
ವೈರಿವರ್ಗವನೊತ್ತಿ ಧರೆಯಪಾಲಿಸುತಿರ್ದ ।
ಭೂರಿ ವೈಭವದಿ ಧನದನನು ಜರೆಯುತಿರಲತಿ ಕಾರುಣ್ಯ ಕಲಿತ ಹೃದಯಂ ॥

* * * * *

ಕಂ॥ ನರಸಿಂಹ ಭೂಮಿಪಾಲಂ ।
ನೆರೆಗೆಲ್ದಂ ಶಸ್ತ್ರವಿಜಯನಂ ಧರೆಪೊಗಳಲ್ ॥
ಪಿರಿದೆನಿಸಿ ದಶ್ವಪರೆಯಂ ।
ಭರದಿಂದಂ ಗೆಲ್ದ ವಿಕ್ರಮೈಕ ಸಹಾಯಂ ॥

ಕಂ॥ ಗಡಿಯೊಳ್ ಜಯ ಸಂಸ್ತಂಭವ ।
ನೆಡಿಸಿದ ರಣರಂಗ ಧೀರನೈತರ ಲಾಗಳ್ ।
ಕಡುಮೆಚ್ಚಿ ಕೃಷ್ಣರಾಯಂ ।
ಬಿಡದತಿ ಸಂಪ್ರೀತಿಯಿಂದ ಮನ್ನಿಸಿ ಬಳಿಕಂ ॥

ತನುಭವೆ ಹರಿಯಮ್ಮನುವಂ ।
ಬೆನುಗುಂದಿಯ ಮೂರು ಲಕ್ಷ ರಾಜ್ಯವ ಸಹಿತಂ ॥
ಧನ ಧಾರಾ ಪೂರ್ವಕದಿಂ ।
ಜನಪತಿ ನರಸಿಂಹ ಭೂಮಿಪಂಗಂದಿತ್ತಂ ॥

* * * * *

ಕಂ॥ ನರಸಿಂಹ ಭೂಮಿಪಾಲನ ।
ವರ ಪುತ್ರರ್ ಘಂಟೆ ನೃಪತಿ ಮುಂಡಣ ಭೂಪರ್ ।
ಸ್ಥಿರವಾಗಿ ಶ್ವೇತಪುರದೊಳ್ ।
ವಿರಚಿಸಿದರ್ ಕೋಂಟೆ ಕೊತ್ತಲಂಗಳ ಮುದದಿಂ ॥

* * * * *

ಮ॥ ವಿ॥ ದಿವಿಜೇಂದ್ರಂಗೆ ಜಯಂತನೆಂತು ವಸುದೇವಂಗೆಂತು ಲಕ್ಷ್ಮೀಧವಂ ।
ಪವನಂಗಂ ಕಲಿಭೀಮನೆಂತು ಯಮಸೂನಂಗಂ ಧರ್ಮಜಂ ಮತ್ತಮಾ ॥

ರವಿಗಂ ಕರ್ಣನುಪೇಂದ್ರಗಂ ಮದನನಂತೀ ಪುತ್ರನುಂ ಪುಟ್ಟಿದಂ ।
ಭುವನಸ್ತುತ್ಯನೆನಿಪ್ಪ ರಂಗ ನೃಪಗಂ ಘಂಟೇಂದ್ರ ಭೂಪಾಲಕಂ ॥

* * * * *

ವಚನ ॥ ಇಂತು ಸಮಸ್ತ ಚತುರಂಗ ಸೇನಾಸಮನ್ವಿತಂ ರಣರಂಗಧೀರನೆನಿಸಿದ ಘಂಟೇಂದ್ರ ಭೂಭುಜಂ ಪೋಗಿ ಶ್ರೀಮದ್ವೆಂಕಟರಾಯರ ಸನ್ನಿಧಿಯೊಳ್ ಕುಳಿತಿರ್ಪಿನಂ ತತ್ಸಮಯದೊಳಾರ್ಗೆಯುಮಸಾಧ್ಯಮಾದ ಮಂಗಳ ಬೊಲ್ಲನೆಂಬ ತುರಂಗ ರತ್ನಮಂ ನೀವು ವಶಗೆಯ್ವುದೆಂದು ಕರಸಿಕೊಡಲು ಪೋಗಿ ನೋಳ್ಪವಸರದೊಳಾ ತುರಂಗಮಮಂ ದಕ್ಷಿಣಾಂಗವನೀಕ್ಷಿಸಿ ದಕ್ಷಿಣ ಖುರದಿಂ ಧಾತ್ರಿಯಂ ಕೆರೆದು ಭೋರೆಂದುಲಿಯೆ ಸಂತುಷ್ಟರಾಗಿ ಸುವರ್ಣ ಪುಷ್ಪಾಂಜಲಿಯಂಮಾಡಿ ಪ್ರದಕ್ಷಿಣಂಗೆಯ್ದು ತೊಡರುಕಾಡಣಿಯಂ ತೆಗೆಸಿ ಯಿಮ್ಮಡಿ ಘಂಟೇಂದ್ರ ನರೇಂದ್ರಂ ಹನುಮಗತಿಯಿಂದೇರಿಪನದೆಂತೆನೆ :—

* * * * *

ಮ॥ ವಿ॥ ಪರಮೋತ್ಸಾಹದಿ ಮಂಗಳಪ್ರದ ಲಸದ್ವಾದ್ಯಾದಿ ವಿಸ್ತಾರದಿಂ ।
ವರಸದ್ರತ್ನ ವಿರಾಜಿತಂ ಕನಕ ಭೃಸ್ಮಾಂಗಲ್ಯ ಸನ್ಮಂಟಪಂ ॥
ನೆರೆ ತೂರ್ಯತ್ರಯ ದುಂದುಭಿ ಪ್ರಕರ ಭೇರೀರಾವ ಮತ್ತೆತ್ತಲಂ ।
ಬರಮಂ ಚುಂಬಿಸೆ ವಿಪ್ರಮಂತ್ರ ನಿನದಂ ತತ್ಸಾರ ಸಂರಾಜಿತಂ ॥

ವಾಕ್ಯ॥ ಇಂತನಂತ ವೈಭವದಿಂ ಪರಮಾನಂತಪುರಮಂ ರಚನೆಗೆಯ್ದು ನಿಜ ಕುಮಾರತಿಯಪ್ಪ ರಾಮಾ ದೇವಿಯಂ ಸುಮುಹೂರ್ತದೊಳ್ ವಿಧಿಪೂರ್ವಕದಿಂ ಧಾರೆಯನೆರೆದು ಕೊಟ್ಟ ನಂತರಂ—

ಮ॥ ವಿ॥ ಚತುರಂಭೋ ನಿಧಿವೇಷ್ಟಿತ ಕ್ಷಿತಿಪರೆಲ್ಲರ್ ನೋಡಿ ಕೊಂಡಾಡಿ ಸ ।
ಮ್ಮತವೀ ಘಂಟಿ ನರೇಂದ್ರಗಂ ತರುಣಿ ರಾಮಾದೇವಿಗಂ ರೂಪಿಸು ।
ನ್ನತಿಯಂ ಬಣ್ಣಿಸ ಬಲ್ಲನಾವನೆನುತಂ ಸಂತೋಷದಿಂದೊಂದಿ ಸ ।
ಲ್ವಿತತಂ ವೆಂಕಟರಾಯ ಮನ್ನಿಸಿದನಾ ಭೂಪಾಲ ಸಂದೋಹಮಂ ॥

End :

ಕಂ॥ ನಿಜಗುಣ ಭೂಷಣ ಮರಿವ ।
ಗರ್ಜಿತಂ ಧೃತಕುವಲಯಾಪ್ತ ನೇತ್ರಶಕ್ತಿ ಧರಂ ।
ವಿಜಯ ಫಲಪ್ರದನೆನೆ ಭೂ ।
ಭುಜ ಬಸವೇಂದ್ರಂ ಪುರಾರಿಯಂತೆಸೆದಿರ್ಕುಂ ॥

ಪರಮ ಬಲವಂತ ಧರಣೀ ।
ಶ್ವರ ಚೂಡಾರತ್ನ ಬಸವ ಭೂಪನ ಕೊರಳೊಳ್ ॥
ಮಿರುಗಲ್ ಮುಕ್ತಾಹಾರಂ ।
ಪರ ನೃಪರಿಂಗಾಯ್ತು ನಿತ್ಯ ಮುಕ್ತಾಹಾರಂ ॥

(ವಿ-ವಿ.)—

ಇದರಲ್ಲಿ ಆಶ್ವಾಸ ಮುಂತಾದ ಯಾವ ಭಾಗಗಳೂ ಇಲ್ಲ. **ಸಂಪೂರ್ಣ ಅಥವಾ ಅಸಂಪೂರ್ಣ** ಎಂದು ಹೇಳಲು ಸಾಧ್ಯವಿಲ್ಲ. ಸ್ವಲ್ಪಮಟ್ಟಿಗೆ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಚಂಪೂ ರೂಪವಾದುದು. ಇದರಲ್ಲಿ ಆಶ್ವಾಸ ಸರ್ಗ ಮುಂತಾದ ಯಾವ ಭಾಗಗಳನ್ನೂ ವಿಂಗಡಿಸಿಲ್ಲ. ಆದರೆ ಪದ್ಯ ಸಂಖ್ಯೆಯನ್ನು ೧—೧೬೧ ರ ವರೆಗೆ ಗುರುತಿಸಿ ಮುಂದಕ್ಕೆ ಮರಳಿ ೧—೨೮೮ ರ ವರೆಗೆ ಗುರುತಿಸಿದೆ. ಒಟ್ಟು ಪದ್ಯ ಸಂಖ್ಯೆ ೪೪೯. ಮೈಸೂರು ಪಟ್ಟಣವನಾಳಿದ ಅಂಡಣ್ಣ ನೃಪನಿಂದ ಬಸವ ಭೂಪಾಲನ ವರೆಗಿರುವ ಚರಿತ್ರೆಯು ಇದರಲ್ಲಿ ಉಕ್ತವಾಗಿದೆ. ಪದ್ಯಗಳು ಷಟ್ಪದಿ, ಕಂದ ಮುಂತಾದ ಛಂದಸ್ಸುಗಳಲ್ಲಿವೆ. ವ್ಯಾಕರಣ ನಿಯಮಗಳನ್ನು ಕವಿ ಅಷ್ಟಾಗಿ ಗಮನಿಸಿರುವಂತೆ ತೋರುವದಿಲ್ಲ. ಸರಣಿಯು ಸರಳವಾಗಿಯೇ ಇದೆಯೆನ್ನಬಹುದು. ಇದನ್ನು ಚಾರಿತ್ರಿಕ ಸಂಬಂಧವಾದ ಒಂದು ಖಂಡ ಕಾವ್ಯವೆನ್ನಬಹುದು. ಕವಿ ಯಾರೆಂಬುದು ಈ ಗ್ರಂಥದಿಂದ ಗೊತ್ತಾಗುವದಿಲ್ಲ. ಇದು ಸುಮಾರು ೧೭ ನೆಯ ಶತಮಾನದಲ್ಲಿ ವಿರಚಿತವಾಗಿರಬಹುದು.

No. 1139. ರಾಜಶೇಖರ ವಿಳಾಸ by ಷಡಕ್ಷರಿದೇವ.
RĀJAŚĒKHARA VILĀSA BY ṢAḌAKṢARIDĒVA.

Substance, Paper. Size, 8⅝ × 6⅜ inches. Pages, 151. Lines, 20 on a page. Character, Kannada. Extent, 1,900 granthas. Condition, much injured. Appearance, old. Mode of writing, not bad.

Incomplete, breaks off in the 5th āśvāsa.

The story of Rājaśēkhara, son of Satyēndracōḷa described by Mallaṇārya in his work Bhāvacintāratna is described in this campū work. The author is Ṣaḍakṣradēva ; his date is about 1655 A.D. The work is published by P. R. Karibasava Śāstri of Mysore.

Beginning :

ಸ್ರ॥ ಶ್ರೀ ಶೈಲಾದಿ ಪ್ರಸಿದ್ಧಂ ಸುರುಚಿರ ವಿಜಯೋತ್ತುಂಗ ಸುದ್ರಿಕ್ತ ಸತ್ವಾ ।
ವೇಶಂ ಕಲ್ಯಾಣ ಭೂಭೃತ್ಸದನ ಧನದಮಿತ್ರಂ ಧರಾಧಾರಧರ್ಮಂ ॥
ವೈಶದ್ಯ ದ್ಯೋತಿ ಚಂದ್ರೋಪಲಸಿತ ಭಸಿತಾನಂತ ಕಾಂತೋತ್ತಮಾಂಗಂ ।
ಶ್ರೀ ಶೈವ ಶ್ರೀಯುಮಂ ಮಾಡಿಕ್ಕೆಮಗನವರತಂ ನಂದಿಕೇಶಂ ಮಹೇಶಂ ॥
* * * * *

ವಸಂತ ತಿಲಕ ॥

ಶ್ರೀಮತ್ಕಳಾಧರ ಕಳಾಧರೆ ದಿವ್ಯದೇವ ।
ರಾಮಾರಮಾರಮ ಸಮರ್ಚಿತ ಪಾದಪದ್ಮೆ ॥
ಕಾಮಪ್ರಿಯಾ ಪ್ರಣತೆ ಪಾರ್ವತಿ ಪಾಲಿಸೆನ್ನಂ ।
ಭೀಮಾಘಮರ್ದಿನಿ ಭವಾರ್ದಿನಿ ನೀಂ ಭವಾನೀ ॥

Colophon :

ಇದು ವಿನಮದಮರ ವರಮಕುಟ ತಟ ಘಟಿತ ಮಣಿಗಣ ಮಹಾ ಪ್ರಭಾವ ಪರಿವೃತ ಪರಶಿವ ಶ್ರೀಪಾದ ನಖಚಂದ್ರ ಸಾಂದ್ರ ರುಚಿ ರುಂದ್ರ ಚಂದ್ರಿಕಾ ಚಂಚಚ್ಚಕೋರಾಯಮಾನ ಸರಸ ಜನ ಮಾನಿತೋಭಯ ಕವಿತಾ ವಿಶಾರದ ಶ್ರೀ ಷಡಕ್ಷರದೇವ ವಿರಚಿತಮಪ್ಪ

ರಾಜಶೇಖ ಭಾಸ ವಿಪುಳ ಪ್ರಬಂಧದೊಳ್ ರಾಜಶೇಖರಾ ಭ್ಯುದಯ ವ್ಯಾವರ್ಣನಂ ಚತುರ್ಥಾ ಶ್ವಾಸಂ.

End :

ಚಂ॥ ಹಿಮಕರ ಕಾಂತಿಕಾಂತ ಹಿಮಮಿಶ್ರಿತ ಚಂದನ ಲೇಪಲಿಪ್ತ ಕುಂ ।
ಕುಮ ನವಕರ್ದ ಮಾರ್ದ್ರ ರಮಣೀ ಕಮನೀಯ ಘನಸ್ತನಂಗಳಂ ॥
ಸಮುದಿತ ಮಾನ ಮಾನಸ ರೊರಲ್ದು ಮರ್ದಪ್ಪಿ ತಮಂಗಯುಷ್ಮಸಂ ।
ಕ್ರಮಿತ ನಿಜಾಂಗರಲ್ಲಿ ಕಳೆವರ್ಕಾಸ ಬೇಸಗೆಯೊಂಮ ಬೇಗೆಯಂ ॥

(ವಿ-ವಿ.)—

ಅಸಮಗ್ರ. ಇದರಲ್ಲಿ ೧-೪ ಆಶ್ವಾಸಗಳೂ ೫ ನೆಯದರಲ್ಲಿ ೧-೪೯ ಪದ್ಯಗಳೂ ಇವೆ. ಅತ್ಯಂತ ಶಿಥಿಲವಾದ ಪ್ರತಿ.

ಇದು ಚಂಪೂ ರೂಪವಾಗಿದೆ. ಮಲ್ಲಣಾರ್ಯನ ಭಾವ ಚಿಂತಾರತ್ನದಲ್ಲಿ ಪ್ರತಿಪಾದ್ಯನಾದ ಸತ್ಯೇಂದ್ರ ಚೋಳನ ಮಗ ರಾಜಶೇಖರನ ಕಥೆಯೇ ಇದರಲ್ಲಿಯೂ ವಸ್ತುವು. ಈ ಗ್ರಂಥವು ಮೈಸೂರು ಪಿ. ಆರ್. ಕರಿಬಸವ ಶಾಸ್ತ್ರಿಗಳಿಂದ ಪರಿಶೋಧಿತವಾಗಿ ಮುದ್ರಿತವಾಗಿದೆ. ಕವಿ ಷಡಕ್ಷರದೇವನು. ಇವನ ಕಾಲವು ಸು ೧೬೫೫. ಎಂದು ಕವಿ ಚರಿತ್ರಕಾರರು ಬರೆಯುತ್ತಾರೆ. ಮಿಕ್ಕ ವಿಷಯಗಳನ್ನು ಮುದ್ರಿತ ಪುಸ್ತಕದಲ್ಲಿಯೂ ಕವಿಚರಿತ್ರೆಯಲ್ಲಿಯೂ (ಸಂಪುಟ ೨ ಪುಟ ೪೪೨) ನೋಡಿ ತಿಳಿಯುವುದು.

No. 1140. ರಾಜಶೇಖರ ವಿಲಾಸ by ಷಡಕ್ಷರಿದೇವ.
RĀJAŚĒKHARA VILĀSA BY ṢAḌAKṢARIDĒVA.

Substance, Palm-leaf. Size, 16½ × 1⅜ inches. Pages, 170. Lines, 7 and 8 on a page. Character, Kannada. Extent, 3,050 granthas. Condition, very much injured. Appearance, old. Mode of writing, good.

Contains from the 8th stanza of the 9th Aśvāsa to the end.

Same work as the above by Ṣaḍakṣaradēva.

Beginning :

ಮ॥ವಿ॥ . . . . . . ಂ ಪನ್ನಗನ ಪಟುಗತಿಸ್ತಂಭಮಂ ಮಾಡಿ ಮತ್ತ ।
ರ್ಕಕರಸ್ತಂ ಭಾಗ್ನಿ ಸಂಸ್ತಂ ಭಮನೆ ನೆಗಳ್ದು ಪೋಘಾಗಮೋಚ್ಚಾಟನಂಗೆ ॥
ಯುದ್ಧಕರಂ ಕಾಂತಾಘ ಸಮ್ಮೋಹವು . . . . ।
. . . . . . ಹಿಮ ಸಮಯ ಮಹಾಸಿದ್ಧ ನೊಪ್ಪಿರ್ದನಾಗಲ್ ॥

* * * * *

ಉತ್ಸಾಹ ವೃತ್ತ ॥

ಕುಂದಮಂದಹಾಸ ಮಂಜುಳಾಂಬುಜ ಪ್ರಭಾನನೇ ।
ಚಂದನೇಂದು ಗೌರಶಂಕರಾಂಕ ಪೀಠಿಕಾ ಶ್ರಿತೇ ॥
ನಂದಿತೇ . . . . . ವಂದಿತಾಂಘ್ರಿ ಪಂಕಜೇ ।
ಚಂದವೊಂದೆ ರಕ್ಷಿಸೆನ್ನ ನಿಂದು ಸರ್ವಮಂಗಳೇ ॥

Colophon :

ಇದು ವಿನಮದಮರ ವರಮಕುಟ ತಟಘಟಿತ ಮಣಿಗಣಮಹಾ ಪ್ರಭಾಪಟಲಪರಿವೃತಪರಶಿವ ಶ್ರೀಪಾದ ನಖಚಂದ್ರಸಾಂದ್ರರುಚಿರುಂದ್ರ ಚಂದ್ರಿಕಾ ಚಂಚಚ್ಚಕೋರಾಯಮಾನ ಸರಸಜನ ಮಾನಿತೋಭಯಕವಿತಾವಿಶಾರದ ಶ್ರೀ ಷಡಕ್ಷರದೇವ ವಿರಚಿತಮಪ್ಪ ರಾಜಶೇಖರ ವಿಲಾಸ ವಿಪುಳ ಪ್ರಬಂಧದೊಳ್, ಹೇಮಂತ ವಸಂತರ್ತು ವರ್ಣನಂ ನವಮಾಶ್ವಾಸಂ ॥

End :

ಮ॥ವಿ॥ . . . .

. . . . . ಸ್ಥಿತಿ ಸಾರ ಲಕ್ಷಣ ಯುತಂ ।

. . . .

. . . . ಚಕ್ರದೊಳ್ ॥

Colophon :

ಇದು ವಿನಮ . . . . . . ಚಂದ್ರಿಕಾ ಚಂಚಚ್ಚಕೋರಾಯಮಾನ ಸರಸಜನ . . . ರ್ಣನಂ ನಾಮ ಚತುರ್ದಶಾಶ್ವಸಂ :—

(ವಿ-ವಿ.)—

ಅಸಮಗ್ರ. ೯ ನೆಯಾಶ್ವಾಸದ ೮ ನೆಯ ಪದ್ಯದಿಂದ ೧೪ ನೆಯಾಶ್ವಾಸ ಪೂರ್ಣವಾಗಿ ಇದೆ. ಅತ್ಯಂತ ಶಿಥಿಲವಾದ ಪ್ರತಿ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಕವಿ ಷಡಕ್ಷರದೇವನು.

No. 1141. ರಾಜಶೇಖರ ವಿಲಾಸ by ಷಡಕ್ಷರಿದೇವ-

RĀJAŚĒKHARA VILĀSA BY ṢAḌAKṢARIDĒVA.

Substance, Paper. Size, 8-13/16 × 6½ inches. Pages, 40. Lines, 17–21 on a page. Character, Kannada. Extent, 500 granthas. Condition, much injured. Appearance, old.

Begins on fol. 1*a*. The other works herein are :—Kathegaḷu.—(1) Naḷacaritre 21*a*. (2) Purupucchana Kathe 21*b*. (3) Purūrava Kathe 23*b*. (4) Bhagīratha Kathe 24*a*. (5) Kārtavīrya Kathe 26*b*. (6) Dāṇakarṇana Kathe 29*b*. (7) Balicakravarti Kathe 31*b*. (8) Bhōjarāja Kathe 33*a*. (9) Śibicakravarti Kathe 35*a*. (10) Munjakavirājana Kathe 36*a*. (11) Māndhātana Kathe 37*a*. (12) Jīmūtavāhana Kathe 37*b*.

Incomplete.

Contains stanzas from 96 to 193 in the 11th Āśvāsa.

Same work as the above.

(ವಿ-ವಿ.)—

ಅಸಮಗ್ರ. ೧೧ ನೆಯಾಶ್ವಾಸದ ೯೬ ನೆಯ ಪದ್ಯದಿಂದ ೧೯೩ ನೆಯ ಪದ್ಯದ ವರೆಗೆ ಇದೆ. ಅತ್ಯಂತ ಶಿಥಿಲವಾದ ಪ್ರತಿ. ಇದರಲ್ಲಿ ಪತ್ರಗಳು ಅಸ್ತವ್ಯಸ್ತಗಳಾಗಿವೆ. ಇದರೊಡನೆ ನಳ ಚರಿತ್ರ ಮುಂತಾದ ಚಿಕ್ಕ ಚಿಕ್ಕ ಕಥೆಗಳಿವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಕವಿ ಷಡಕ್ಷರಿ ದೇವನು.

No. 1142. ರಾಜೇಂದ್ರ ವಿಜಯ by ಮುರಿಗೆ ದೇಶಿಕೇಂದ್ರ-
RĀJĒNDRAVIJAYA BY MURIGE DĒŚIKĒNDRA.

Substance, Paper. Size, 9¼ × 6½ inches. Pages, 159. Lines, 18–24 on a page. Character, Kannada. Extent, 2,400 granthas. Condition, much injured. Appearance, old. Mode of writing, not good.

A campū work in nine Prakaraṇas describes the story of king Hammīra Vikrama, son of "Trailōkya Cūḍāmaṇi" the king of "Paṭṭaśilāpura." He had also "Manurāja" and Animiṣēndra" as his other names and the work is also known as Manurājanakāvya and Hammīrakāvya. The teachings of Cennabasava made to Śaraṇas and the teachings of Prabhurāja made to Goggayya, Siddharāma, Basava, etc., are described in this campū work. The author is Murige Dēśikēndra, who lived in about 1560 A.D.

Beginning :

ಶಾ॥ ಶ್ರೀಮತ್ಕಾಂಡಜಜಾಂಡಮಂಡಲಜ ಚಂಡಾ[ಮ](ಮ್ನಾ)ಯಾಮಾಜಿ ಸ್ಥಿರಂ ।
ಭೂಮಿದೋರ್ಮಿಣಿ ಸಾಮಯಾಳ ಹರಶ . . . ಷ್ಟಲ್ಗ ದುಷ್ಟಾರ್ದ
ನಂ । (?)
ಸೋಮ ಪ್ರಾಂಜುಳ ನೂರ್ಜಿತಂ ಜಯತು ನಿತ್ಯಾನಂದ ಮೌನೀಂದ್ರ ಹೃ ।
ದ್ಧಾಮಂ ನಿರ್ಜರ ಚಕ್ರವರ್ತಿ ಮಹಿಮಂ[ಡಿ]ದೇವೇಶ ಲಿಂಗೇಶ್ವರಂ ॥

*   *   *   *   *

ಶಾ॥ ಮಾರಾ ಜಾಯತ ಗೋಜಿರಾಜಿತ ಪದಾಂಭೋಜಂ ನಿಜಂ ಶಂಕರಂ ।
ತಾರಾರಾಜಿಕಲಾಲ ಚೂಡ ಕರುಣಾ ಹೃಂಗಂ ನಿರಂಗಂ ಮೃಡಂ ॥
ಗೋರಾಜೇಂದ್ರ ಜನಾರ್ದನಾಸುರ ನಭೋ[ಟೀರ](ಕೋಟೀರ) ಮಾಣಿಕ್ಯ ತೇ ।
ಜೋರಮ್ಯೋನ್ನತ ಹಾರ . . ಜಿ ಶಿವಂ ಕೂರ್ತೀಗೆ ನಿರ್ವಿಘ್ನಮಂ ॥

Colophon :

ಇದು ಮಧು ಭಂಜನಾರ್ಜುನೋದರ ಪುರಂದರ ಪುರೋಗವ ನಾನಾ ಸುರೋರಗ ನಿಕರ ನವೀನ ಸುರುಚಿರ ಪ್ರಚರಾ [ನಾರ್ಘ್ಯ] (ನರ್ಘ) ಮಣಿಗಣ ಖಚಿತ ರಚನೋತ್ತುಂಗ ಶೃಂಗಾರ ಸಾರ ಕೋಟಿ ಕೋಟೀರ[ಸ್ಫ](ಸ್ಫಾ)ರ ರುಚಿ ಕದಂಬ ಪ್ರತಿಬಿಂಬಿತ ವಿಮಳ ವಿಳಸಿತ ನಖ ಮುಕುರರಾಜಿರಾಜಿತ ಸ್ಫುರಣಚರಣಾರವಿಂದ ಚಂದ್ರಶೇಖರ ಪರಮ ಶಿವ ಶರಣ ರಾಜೇಂದ್ರ ಹಮ್ಮೀರ ವಿಕ್ರಮಾತುಳ ಪ್ರಬಂಧದೊ - ತ್ರ ಗಿರೀಶ [ರೀಥಿರಾಟ್ಟ] (ಘರಟ್ಟ) ಪುರ ವರ್ಣನಂ ಪ್ರಥಮ ಪ್ರಕರಣಂ॥ ಶಿವಮಸ್ತು.—

End :

ಶಾ॥ ವೀರಾಚಾರರ ಸಾರಜನ ಮಂದಾರಾಘದೂರಾ . . ।
ತಾರಾ ಜಾಲಕ ಜಾತರೂಪ ಮಹಿಮಾಧಾರಾಭ್ರ ಚಾ . . . ದಾ ॥
ಸ್ಥೀರಾಪೃಷಂತಿ ರಾಜಿತ ಜಹಿ ಕೋಟೀ . . . . ಮೋ ।
. . ದ್ಧಾರ ಸುಮೇರು ಚಾಪ ಸಲಹೈ ಶ್ರೀ ಶಾಂತ ವೀರೇಶ್ವರಾ ॥ (?)

Colophon :

ಇದು ಮಧು ಭಂಜನಾರ್ಜುನೋದರ * * * * * *
ಹಮ್ಮೀರ ವಿಕ್ರಮಾತುಳ ಪ್ರಬಂಧದೊಳ್ ಭದ್ರಾಯುಷ್ಯ ರಾಜ ಚರಿತ ಬಸವಲಿಂಗನುತಿ ಪ್ರಕಥನಂ ನವಮ ಪ್ರಕರಣಂ ಸಮಾಪ್ತಂ ॥

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ತಪ್ಪು ವಿಶೇಷವಾಗಿವೆ. ಗ್ರಂಥಪಾತವುಂಟು. ಪತ್ರಗಳು ಅಸ್ತವ್ಯಸ್ತವಾಗಿವೆ. ಲೇಖಕನು ಪ್ರಕರಣಗಳಾದಿಯಲ್ಲಿ ಮುರಿಗೆಯ ಚೆನ್ನಬಸವೇಶ್ವರನನ್ನು ಸ್ಮರಿಸುತ್ತಾನೆ.

ಇದು ಚಂಪೂ ರೂಪವಾಗಿದೆ. ೯ ಪ್ರಕರಣಗಳಿವೆ. ಇದರಲ್ಲಿ ಶಿವಶರಣ ರಾಜೇಂದ್ರ ಹಮ್ಮೀರ ವಿಕ್ರಮನ ಚರಿತ್ರೆಯು ಉಕ್ತವಾಗಿದೆ. ಇದಕ್ಕೆ ಹಮ್ಮೀರ ಕಾವ್ಯ. ಮನುರಾಜನ ಕಾವ್ಯ. ಎಂಬ ಹೆಸರುಗಳೂ ಉಂಟು. ಹಮ್ಮೀರನಿಗೆ ಮನುರಾಜ, ಅನಿಮಿಷೇಂದ್ರ, ಎಂದು ಅಪರ ನಾಮಧೇಯಗಳು. ಪ್ರಭು ರಾಜನು ಡೊಗ್ಗಯ್ಯ ಸಿದ್ಧರಾಮ ಬಸವ ಮುಂತಾದವರಿಗೂ ಚೆನ್ನ ಬಸವನು ಶರಣರಿಗೂ ಹೇಳಿದ ಕಥೆಯನ್ನೆ ಕವಿ ಕಾವ್ಯವಾಗಿ ಬರೆದಂತೆ ಹೇಳಿದೆ. ಈ ಪುಸ್ತಕದಿಂದ ಕವಿಯ ಹೆಸರು ಗೊತ್ತಾಗುವದಿಲ್ಲ.

ಕವಿ ಮುರಿಗೆ ದೇಶಿಕೇಂದ್ರನೆಂದೂ ಯಾವುದೋ ಒಂದು ಪ್ರತಿಯ ಆಧಾರದಿಂದ ಅವನ ಕಾಲವು ಸುಮಾರು ೧೬೭೦ ಇರಬಹುದೆಂದೂ ಕವಿ ಚರಿತ್ರಕಾರರು ಬರೆಯುತ್ತಾರೆ. ಮಿಕ್ಕ ವಿಷಯಗಳನ್ನು ಕವಿಚರಿತ್ರೆಯನ್ನು ನೋಡಿ ತಿಳಿಯುವುದು.

No. 1143. ರಾಜೇಂದ್ರವಿಜಯ by ಮುರಿಗೆ ದೇಶಿಕೇಂದ್ರ-

RĀJĒNDRAVIJAYA BY MURIGE DĒSIKĒNDRA.

Substance, Paper. Size, $10\frac{1}{2} \times 9\frac{3}{8}$ inches. Pages, 35. Lines, 20 on a page. Character, Kannada. Extent, 520 granthas. Condition, good. Appearance, new.

Restored in 1916–17 from the above Ms.

Incomplete.

Contains 3rd and 4th prakaraṇas. Complete and 5th prakarṇa incomplete.

Same work as that described above.

(ವಿ-ವಿ.)—

ಅಸಮಗ್ರ. ೩-೪ ನೆಯ ಪ್ರಕರಣಗಳೂ ೫ ನೆಯದರಲ್ಲಿ ೯ ಪದ್ಯಗಳೂ ಇವೆ. ಇದು ಹಿಂದೆ ವರ್ಣಿತವಾದ ಪ್ರತಿಯ ಪ್ರತಿಕೆಯು.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಕವಿ ಮುರಿಗೆ ದೇಶಿಕೇಂದ್ರನು.

No. 1144. ರಾಮನಾಥವಿಲಾಸ by ಸದಾಶಿವಯೋಗಿ.

RĀMANĀTHAVILĀSA BY SADAŚIVAYŌGI.

Substance, Śritāla. Size, 9½ × 1⅝ inches. Pages, 230. Lines, 7 and 8 on a page. Character, Kannada. Extent, 2,600 granthas. Condition, much injured. Appearance, old. Mode of writing, fair.

Incomplete :—Breaks off in the beginning of the 4 ullāsa.

Describes the story of Rāmanātha alias Rāmaṇārya a well known Vīraśaiva. The work is also known as Gururāmanāthacaritre. The author is Sadāśivayōgi, son of Sāmavēdi guru, grandson of Gaṅgādhara, great grandson of Sōmaṇārya. He had the titles of Navabāṇa Kavi and Vicitra Vidvatkavi Kulasārvabhauma. He lived in 1554 A.D. For details see extracts and note below in the next number.

Beginning :

ಸ್ವಸ್ತಿ ಸಮಸ್ತ ವಿಷಯ ವಿಶ್ರುತ ವಿನೂತನಾಗಣ್ಯ ಪುಣ್ಯ ಪ್ರದೇಶವಾದ ಹೊಯ್ಸಳ ರಾಜ್ಯದೊಳ್ಳೊಪ್ಪುತಿರ್ಪ ಮದ್ರಾಪುರದೊಳ್ ತತ್ಪುರವಾಸಿಯಾದ ಸಕಲ ಬ್ರಹ್ಮಾಂಡ ಪರಿ ಪೂರ್ಣ ಚತುರ್ದಶ ಭುವನಾಧೀಶ್ವರ ಶ್ರೀರಾಮೇಶ್ವರ ಲಿಂಗಮೂರ್ತಿಯಿಂ ವೀರಶೈವ ದೀಕ್ಷೆಯಂ ಪಡೆದದಂ ಪುಸಿಯೆಂದು ತಿಳಿದು ಶಂಕೆಯಂ ಮಾಡಿದ ಶೈವರ್ಗೆ ಯಾ ರಾಮೇಶ್ವರ ಲಿಂಗಮಂ ಸಾಕ್ಷಿ ಯಂ ನುಡಿಯಿಸಿ ಮೆಱೆದು ಭೂಲೋಕದೊಳ್ ವೀರಶೈವ ಮತ್ತಮೆ ವೇದಾಗಮ ಶಾಸ್ತ್ರ ಪುರಾಣಂಗಳೊಳುತ್ತರ ಮೆಂಬುದಂ ಪ್ರಾಚಾರ್ಯರ್ಗೆಯ್ದ ರಾಮನಾಥಾಚಾರ್ಯರ ಚಾರಿತ್ರಮುಂ ಪೇಳ್ವೀ ರಾಮನಾಥ ವಿಲಾಸಮೆಂಬ ಪೆಸರನುಳ್ಳ ಮಹಾ ವಸ್ತುಕ ಪ್ರಬಂಧದೊಳೀಕೃತಿ- ಪೀಠಿಕಾ ರೂಪಮಾದ ಪ್ರಥಮೋಲ್ಲಾಸಮಂ ಪೇಳ್ವೆನದೆಂತೆಂದೊಡೆ.—

ಮೇಘವಿಸ್ಫೂರ್ಜಿತ ವೃತ್ತ

ಶಿರಸ್ಥಾವರ್ತಾಬ್ಜಂ ಪರರ ಮತದೊಳ್ ವಕ್ರನಾದ್ಯಾಖ್ಯದೀರ್ಘಂ ।
ವರ ಶ್ರೀರಾಮಾಧೀಶ್ವರ ಸಮಭಿಧಂ ಯುಕ್ತವರ್ಣಕ್ಕೆ ಪೂರ್ವಂ ।
ಸ್ಫುರತ್ಸಂ ವೈಸರ್ಗಂ ಪದದ ಕಡೆಯೊಳ್ ತೋರ್ಪ ಸುವ್ಯಂಜನಾಢ್ಯಂ ।
ಗುರು ಶ್ರೇಷ್ಠಂ (ದೋ) ಗುರುವಿನಿರವಿಂ ರಾಮಣಾಚಾರ್ಯ ನಿರ್ದಂ ॥

*   *   *   *

ಮ॥ ವಿ॥ ವರಶೃಂಗಾರದ ಸೋಮಣಾರ್ಯ ತನುಜಂ ಗಂಗಾಧರಂ ತತ್ಸುತಂ।
ಶರಣಾಗ್ರೇಸರ ಸಾಮವೇದಿ ಗುರುವಾ [ಧೀಮ] (ದಂತ) ತ್ತನೂಜೋತ್ತಮಂ ॥
ಹರಪೂಜಾ ನಿರತಂ ಸದಾಶಿವ ಲಸನ್ನಾಮಂ ಮಹಾಕಾವ್ಯ ವಿ ॥
ಸ್ತರಣ ಪ್ರೌಢನಶೇಷ ಸದ್ಗುಣಧಿ ಯೆಂದೆಲ್ಲರ್ಗಳ್ವರ್ ಬುಧರ್॥

ಶಾ॥ ಶ್ರೀಮತ್ಸಂಸ್ಕೃತ ವಾಕ್ಪ್ರಯೋಗ ಚತುರಂ ಕರ್ಣಾಟಕಾಗ್ರೇಸರಂ।
ಧೀಮತ್ - ಶಾಂತನೃಪಾಖ್ಯ ಶೈವಕವಿ ರಾಜಾನೀಕ ಸಖ್ಯೋನ್ನತಂ ॥
ಸೋಮಾಂ ಕೋಪಮ - ಸಾಮವೇದಿ - ಗುರು - ಹಸ್ತಾಂಭೋಜಸಂಭೂತನು।
ದ್ದಾಮಾಕಾತ್ಯಚ್ಛಗುಣ ಸದಾಶಿವ ಕವೀಶಂ ವಿಸ್ಫುರತ್ಸದ್ಯಶಂ ॥

ವ॥ ಎಂದಿಂತು ಪೊಗಳ್ವನಂತ ವಿದ್ವಾಂಸರ ಸ್ತೋತ್ರಕ್ಕೆ ಪಾತ್ರನಾದೆನ್ನಯ ಕವಿತಾ ನಿರ್ವಹಣ ಪ್ರಕಾರಮಂ ಪೇಳ್ವೆನದೆಂತೆಂದೊಡೆ —

ಚಂಪಕಮಾಲೆ

ತೊಡಗಿದ ನೀತನೀಕೃತಿ ಮಹಾಕೃತಿ ತಾಂಗಡ ಪೂರಿಪನೆಂದು ಬಲ್ಲವರ್ ।
ನುಡಿಯಲದೇಕೆ ಕಾಶಿಕಡುಗೆಂಚೆಡೆಯಾದೊಡವೊರ್ವ ದರಿದ್ರನೆಯ್ದೆ ಕಾ ॥
ಲ್ನಡೆಗೊಳೆ ಪೋಪನತ್ತಲಿರದೊರ್ವ ಸಮರ್ಥ ಸವಾಹನನುಂತೆಳರ್ವ ನಾ ।
ಯೆಡೆಗದು ಕಾರಣಂ ಪಿಡಿದ ಕಾರ್ಯದ ಪಾರವನೆಯ್ದುವುದಂ ವಿಚಾರಿಕುಂ ॥

ವ॥ ಮತ್ತಮನಂತರದೊಳ್ ಕವಿತಾ ಸಾಧನಮಾದ ರಾಮೇಶ್ವರನಿರೂಪವೆನಗಾದ ಪ್ರಕಾರಮಂ ಪೇಳ್ವೆನದೆಂತೆಂದೊಡೆ:—

ಶಾ॥ ರಾಮೇಶಂ ನಿಜರೂಪದಿಂ ಕನಸಿನೊಳ್ಬಂದೊರ್ಮೆಯೆನ್ನೊಳ್ಘನ ।
ಪ್ರೇಮಂ ಕೈಮಿಗೆ ರಾಮನಾಥ ಸುವಿಲಾಸಾಖ್ಯಾನದಿಂ ವಾಸ್ತುಕ ॥
ಶ್ರೀಮದ್ದಿವ್ಯ ಚರಿತ್ರಮಂ ಬಿಡದೆ ಪೇಳಲ್ನಾಡೆ ವಿಜ್ಞಾಪಿಸ ।
ಲ್ಕಾಮೋದಂ ಮಿಗೆ ಮಂಡೆಯೊಳ್ತಳೆದೆ ನೆನ್ನೈಶ್ವರ್ಯವೆಂದೊಲ್ದದಂ ॥

ಕಂ॥ “ನಿರ್ವಿಘ್ನಮಸ್ತು ಕವಿತಾ ।
ನಿರ್ವಹಣಂ ಸುಲಭಮಸ್ತು” ವೆಂಬ ಸುಜನರಾ ॥
ಶೀರ್ವಚನವಾಂತು ತೊಡಗಿದೆ ।
ನುರ್ವಿಯೊಳೀ ಕೃತಿಯನಿದಕೆ ಮೊದಲಾವುದೆನಲ್ ॥

Colophon :

ಶ್ರೀಮದಖಿಲ ಭುವನ ಭವನಾಂತರ್ಗತಾನಂತ ವಿಮಲತರ ವಿಚಿತ್ರ ವಿದ್ವತ್ಕವಿ ಕುಲ ಸಾರ್ವಭೌಮ ಸರ್ವಜ್ಞ ಸದಾಶಿವಯೋಗೀಶ್ವರ ವಿರಚಿತಮಾದ ರಾಮನಾಥವಿಲಾಸ ವೆಂಬ ಮಹಾ ಪ್ರಬಂಧದೊಳ್ ಕೃತಿ ಪೀಠಿಕೆಯೆಂಬ ಪ್ರಥಮೋಲ್ಲಾಸಂ ಸಂಪೂರ್ಣಂ .—

ವ॥ ಮತ್ತ ಮನಂತರದೊಳ್ ಮಹಾ ಮೇರುವಂ ಕಾಶಿ ಕ್ಷೇತ್ರಮಂ ಹೊಯ್ಸಳ ರಾಜ್ಯಮ ನಾಮಧ್ಯದೊಳಿರ್ಪ ಈ ಕೃತಿಯ ನಾಯಕರಾದ ರಾಮನಾಥಾಚಾರ್ಯರ ಜನ್ಮಭೂಮಿ ಯೆನಿಸಿರ್ದ ಮುದ್ರಾಪುರಮಂ ವರ್ಣಿಸುವೆನದೆಂತೆಂದೊಡೆ :—

End :

ಮ॥ ವಿ॥ ಗಿರಿಜೇಶಂ ಹರಿ ಪದ್ಮ ಸಂಭವ ಸುರೇಂದ್ರಾದ್ಯರ್ಚಿತ ಶ್ರೀಪದಂ ।
ನರನಾಗಾಮರ ಮುಖ್ಯ ಸರ್ವವಿನುತಂ ಭಕ್ತಪ್ರಿಯಂ ಶಂಕರಂ ॥
ಗುರು ರಾಮಾರ್ಯರ ನೊಲ್ದು ವೀರವರ ಶೈವಾಚಾರ್ಯರಂ ಮಾಡಿ ಸ ।
ದ್ಗುರು ರಾಮೇಶ್ವರನೆಂದು ತನ್ನ ನಿಜ ಲಿಂಗತ್ವಕ್ಕೆ ಸಂದೊಪ್ಪಿದಂ ॥

Colophon :

ಇದು ಶ್ರೀಮದಖಿಲ ಭುವನ ಭವನಾಂತರ್ಗತಾನಂತ * * ಸದಾಶಿವ ಯೋಗೀಶ್ವರ ವಿರಚಿತಮಾದ ರಾಮನಾಥ ವಿಲಾಸಮೆಂಬ ಮಹಾ ಪ್ರಬಂಧದೊಳ್ ದೀಕ್ಷಾ ವಿಧಿಯೆಂಬ ಹದಿಮೂರನೆ ಯುಲ್ಲಾಸಂ ಸಂಪೂರ್ಣಂ.

ವ. ಮತ್ತಮನಂತರದೊಳ್ ರಾಮನಾಥಾಚಾರ್ಯರ್ ತಾವೀಶ್ವರನಿಂ ವೀರಶೈವ (ದೀಕ್ಷೆಯಂ ಪಡೆ) ದುದಂ ಸಂದೇಹಿಸಿದವರ್ಗೆ ಶಿವನಂ ಸಾಕ್ಷಿಯಂ ನುಡಿಯಿಸಿದ ವೃತ್ತಾಂತಮಂ . . . . —

ಸ್ತೋತ್ರ.

ಮ॥ ವಿ॥ ವರಭಕ್ತರ್ನೆನೆಯಲ್ಕೆ ಮುಂಗಡೆಯೊಳಾಗ್ಬಂದು ನಿಂದಿರ್ಪನಂ ।
ಭರದಿಂ ಪಾ . . . . . ರೆನೆ ಮಗುಳ್ದಿಯ್ತಿರ್ಪನಂ ಬೇಗದಿಂ ॥
ಕರೆಯಲ್ಕೋ ಯೆನುತಿರ್ಪ ಬೇಡಿದುದ ನಿಲ್ಲೆಂದೆನ್ನದೊಲ್ದೀ . . . . ।
. . . . . . ಮೇಶ್ವರ ಲಿಂಗಮಂ ಪೊಗಳ್ವೆನೀಯಲ್ಕೆನ್ನಭೀಷ್ಟಂಗಳಂ॥

ಕಂ॥ ಇತ್ತ [ಲಿ] (ಲ್) ರಾಮ [ಣಾ] (ಣ್ಣಾ) ರ್ಯನ ।
ಚಿತ್ತದೊಳು . . . . ರುತಿಯ ।
ಚ್ಯೊತ್ತಿದ ಪ್ರೋಲಿರೆ ಬೆರಗಾ ।
ಗುತ್ತಿರ್ಪಂ ಕನಸುಕಂಡು ಕಣ್ದೆಱೆ (ವಿನೆಗಂ) ॥

(ವಿ-ವಿ.)—

ಅಸಮಗ್ರ. ಮೊದಲಿಂದ ೧೩ ಉಲ್ಲಾಸಗಳಿವೆ. ೧೪ ನೆಯದರಲ್ಲಿ ಮೊದಲನೆಯ ಪದ್ಯವಿದೆ. ಎರಡನೆಯದು ಅಪೂರ್ಣವಾಗಿದೆ, ಇದು ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ.

ಇದು ಚಂಪೂರೂಪವಾಗಿದೆ. ಒಟ್ಟು ೧೬ ಉಲ್ಲಾಸಗಳು. ಅಲ್ಲಲ್ಲಿ ಷಟ್ಪದಿಗಳೂ ಇವೆ. ಅನೇಕ ಜಾತಿಯ ವೃತ್ತಗಳನ್ನು ಈ ಗ್ರಂಥದಲ್ಲಿ ನಾವು ನೋಡಬಹುದು. ವೀರಶೈವ ಮತದಲ್ಲಿ ಪ್ರಸಿದ್ಧನಾದ ರಾಮನಾಥನ ಚರಿತ್ರೆಯು ಇದರಲ್ಲಿ ಉಕ್ತವಾಗಿದೆ. ಈ ಗ್ರಂಥಕ್ಕೆ ರಾಮನಾಥ ಚರಿತ್ರೆ ಎಂಬ ಹೆಸರೂ ಉಂಟು ಕವಿ ಈ ರಾಮನಾಥನ ವಂಶವನ್ನು ಇದರಲ್ಲಿ ವಿವರಿಸಿದ್ದಾನೆ. 'ಶಾಂತ ನೃಪಾಖ್ಯ ಶೈವ ಕವಿರಾಜಾನೀಕಸಮ್ಯೋನ್ನತಂ' ಎಂದು ತನ್ನನ್ನುಹೇಳಿಕೊಂಡಿದ್ದಾನೆ. ಗ್ರಂಥದಾದಿಯಲ್ಲಿ ರಾಮಣ್ಣಾಚಾರ್ಯ ಸ್ತುತಿಯಿದೆ. ಪಂಡಿತಾರಾಧ್ಯಗನ್ನೂ ಸೋಮೇಶ್ವರಾದಿ ಪೂರ್ವ ಕವಿಗಳನ್ನೂ ಕೃತಿಕರ್ತನು ಸ್ಮರಿಸಿದ್ದಾನೆ.

ಕವಿ ಸದಾಶಿವನೆಂಬವನು ಇವನ ವಂಶವನ್ನು ಉದ್ಧೃತ ಭಾಗದಿಂದ ತಿಳಿಯುವುದು. ಇವನಿಗೆ ನವ ಬಾಣ ಕವಿ, ವಿಚಿತ್ರ ವಿದ್ವತ್ಕವಿಕುಲ ಸಾರ್ವಭೌಮ, ಎಂಬ ಬಿರುದುಗಳಿದ್ದಂತೆ ಗೊತ್ತಾಗುತ್ತದೆ. ಇವನ ಕಾಲವು ಕ್ರಿ. ಶ. ೧೯೪೪ ಎಂದು ಗೊತ್ತಾಗುತ್ತದೆ. ಇದನ್ನು ಮುಂದಣ ನಂಬರಿನಲ್ಲಿ ನೋಡಿ ತಿಳಿಯುವುದು. ಉಳಿದ ವಿಷಯಗಳನ್ನು ಉದಾಹೃತ ಭಾಗದಿಂದಲೂ ಕವಿಚರಿತ್ರೆಯಿಂದಲೂ ತಿಳಿಯುವುದು.

No. 1145. ರಾಮನಾಥವಿಲಾಸ by ಸದಾಶಿವಯೋಗಿ-
RĀMANĀTHAVILĀSA BY SADĀŚIVAYŌGI.

Substance, Śritāḷa. Size, $9\frac{1}{4} \times 1\frac{5}{8}$ inches. Pages, 52. Lines, 8 on a page. Character, Kannada. Extent, 550 granthas. Condition, very much injured. Appearance, old. Mode of writing fair.

Begins on fol. 1*a* of the Ms. described under D. No. 841.

Incomplete. Contains from the middle of the 14th ullāsa to the end.

Same work as the above.

One leaf is lost and another is broken in the middle. Otherwise the previous work and this put together will make a complete work. The work was written in the Śaka year 1476 corresponding to 1554 A.D.

Date of transcription: Fifth day in the second half of the lunar month Śrāvaṇa in the year Rākṣasa Śaka 1477 corresponding to 1555 A.D.

Name of the Scribe—Brahma of whom details are not known.

Beginning :

. . . . ಮಱಿತೆವರ್ಬಿಕರ್ಣವರ್ಕರಂ ।
. . ಬಿ . . . . . ಅಱಿಗುವರ್ ॥ ೭ ॥

ವ॥ ಇಂ . . . . ಸಕಂದ ।
ತನ್ನೊಳ್ತನ್ನಿಂ ತಾನೆ . . . . ತೆನ್ನ . . . ।
ಪುದನರಿಯದೆ ಸುಮ್ಮನೆ ಚಿಂತಿ . . . . ।
ರದಲ್ಲಿ —

ವೃತ್ತ॥ ಗುರು ರಾಮೇಶನನು ಗೃಹಂಗುಡೆ ಮೊದಲ್ಕೊಳ್ಳುದರ್ . . . ।
. . . . . ಱತಿಗೆಯ್ದಾ ಪೀಠಿಕಾ ಪಕ್ಷದೊಳ್ ॥
ಪಿರಿದುಂ ಸಂತಸದಿಂ ಯಥೋಕ್ತ ವಿಧಿಯಿಂ . . . . . ।
. . . ಪೂಜಿಸಿ ಲಿಂಗಮಂ ಪೊಗಳುತುಂ ಮೈವೆರ್ಚಿ ತಿರ್ಪನ್ನೆಗಂ ॥ ೫ ॥

ಕಂದ॥ ಕೂ . . . . . . ।
. . . . ರಾಮಣಾರ್ಯರ ಪದ...ಂ ॥
ರಾಗದೊಳೀಕ್ಷಿಸಿ ಭವಮಂ ।
[ನೀಂ] (ನಿ) ಗಿಂ ಜನರೆಲ್ಲರೆಂ . . . . . ॥

* * * *

ಕನಕ ವಿಲಸದುಪಕರಣಂಗಳ್ । ದೇವರ ಸಮರ್ಚನಂ . . . . ।
ಲಕನಲ್ಲಿಂ ಮಗುಳ್ದು ಬಂದುತ್ಸವ ದೇವರ ಗುಡಿಯುಂ . ೯ . ।
ಪೊಱಮಟ್ಟು ರೋಮಾಂಚ ಕಂಚುಕಿತನಾಗಂತುಂ . . ಕ್ಷಿಪ್ರಸೂನಂಗಳಂ
ಚೆಲ್ಲಿದಂತೆಲ್ಲೆಡೆಯೊಳ್ ಸೂಸಿರಲ್ . . , , ॥

ಮ॥ ವಿ॥ ಮನೆಗೆಯ್ತಂದು ಮಹೇಶ ಭಕ್ತ ತತಿಯಿಂ ಸದ್ಭಕ್ತಿಯಿಂ ನವ್ಯಭೋ ।
ಜನದಿಂ ಮೆಲ್ನುಡಿಯಿಂ ಸಿತಾಭ್ರ ವಿಲಸತ್ತಾಂಬೂಲದಿಂ ವಸ್ತ್ರದಿಂ ।
ಧನದಿಂ ಸಂ . . ಯುಂ . ದಂ ತಣಿಪುತುಂ ಶಾಸ್ತ್ರಂಗಳಂಕೇಳ್ವಸ ॥
ಜ್ಜನರಂ ಮಾಡಿ ಶಿವಾಗಮಾನುಭವ ಸಮ್ಯಗ್ಗೋಷ್ಠಿಯೊಳ್ ಪೊಂದಿದರ್ ॥

Colophon :

ಇದು ಶ್ರೀಮದಖಿಳ ಭುವನ ಭವನಾಂತರ್ಗತ ವಿಮಲತರವಿಚಿತ್ರವಿದ್ವತ್ಕವಿ ಕುಲಸಾರ್ವಭೌಮ ಸರ್ವಜ್ಞ, ಸದಾಶಿವ ಯೋಗೀಶ್ವರ ವಿರಚಿತಮಾದ ರಾಮನಾಥ ವಿಲಾಸವೆಂಬ ಮಹಾಪ್ರಬಂಧದೊಳ್ ಶಿವಸಾಕ್ಷಿವಾದ ಕಥನ ವೆಂಬ ಹದಿನಾಲ್ಕನೆಯುಲ್ಲಾಸಂ ಸಂಪೂರ್ಣಂ॥

ವ॥ ಮತ್ತ ಮನಂತರದೊಳಾ ರಾಮನಾಥಾಚಾರ್ಯರ್ ಶಿಷ್ಯರ್ಗೆ ವೀರಶೈವ ಮುಖ್ಯೋಪದೇಶ ಸ್ವರೂಪಪೂದ ಶಿವಮಂತ್ರೋದಿತ ಷಟ್ಸ್ಥ ಲ ಮಾರ್ಗಮಂ ಬೋಧಿಸುತಿರ್ದರದೆಂತೆಂದೊಡೆ.—

End :

"ವಾರ್ಧಿಕ ಷಟ್ಪದಿ"

ಸಲೆರಸಾದ್ರ್ಯಬ್ಧೀಂದು ಸಂಖ್ಯ ಶಕ ಸಮುಚಯಂ।
ಸಲುತಿರಲ್ಕಾನಂದ ವತ್ಸರಂ ಶ್ರಾವಣದ।
ವಿಲಸಿತಾರ್ಜುನ ಪಕ್ಷದುಶನೋ ದಿನದ ಪಂಚಮಿಯ ಕನ್ಯಕಾಲಗ್ನದೊಳ್।
ನೆಲಸಿದುಲ್ಲಾಸ ಷೋಡಶಕದಿಂ ನವರಸಾ।
ಕಲಿತಮೆನೆ ರಾಮನಾಥವಿಲಾಸ ಕಾವ್ಯಖೀ।
ನೆಲದಖಿಲ ವಿದ್ವತ್ಸಭಾ ನೇವ್ಯ ಮಿಶ್ವರಾಜ್ಞೆಯಿನಾಯ್ತು ಪರಿಸಮಾಪ್ತಂ॥

* * * *

ಕಂ॥ ಇದನೋದಿ ಬರೆಯೆ ಬರೆಯಿಸ।
ಲಿದನೊಲವಿಂ ಕೇಳೆ ವೇಳೆಯೊರ್ಮೆ ಬೆಸಗೊಳ್ಳಲ್।
ಒದಗುಗು ಮಿಷ್ಟಾರ್ಥಂ ತ।
ಪ್ಪದು ಸತ್ಯಂ ಸತ್ಯಮಿದು ಮಗುಳ್ದಂ ಸತ್ಯಂ॥

Colophon :

ಇದು ಶ್ರೀಮದಖಿಲ ಭುವನ ಭವನಾಂತರ್ಗತಾನಂತ * * * * ಸದಾಶಿವ ಯೋಗೀಶ್ವರ ವಿರಚಿತಮಾದ ರಾಮನಾಥ ವಿಲಾಸಮೆಂಬ ಮಹಾ ಪ್ರಬಂಧದೊಳ್ ರಾಮನಾಥಾಚಾರ್ಯರ ಐಕ್ಯಕಥನವೆಂಬ ಹದಿನಾರನೆ ಯುಲ್ಲಾಸಂ ಸಂಪೂರ್ಣಂ.

The scribe adds :

ಕಂ॥ ಗಿರಿ ನಗ ವಾರಿಧಿ ಚಂದ್ರಂ।
ನಿರುತಂ ಶಕವರ್ಷ ರಾಕ್ಷಸಾಬ್ದಂ ಶ್ರಾವಣ। ?,
ವರ ಕೃಷ್ಣ ಪಂಚಮಿ ಯೊಳಂ।
ಬರೆದಂ ಬ್ರಹ್ಮಂ ಸದಾಶಿವಾಖ್ಯನ ಕೃತಿಯಂ॥

(ವಿ.ವಿ.)—

ಅಸಮಗ್ರ. ೧೪ ನೆಯ ಉಲ್ಲಾಸದ ೧೫೪ ದನೇ ಪದ್ಯದ ಮೊದಲಿನ ಗದ್ಯದ ಮಧ್ಯದಿಂದ ಆರಂಭಿಸಿ ೧೬ ನೆಯ ಉಲ್ಲಾಸಪೂರ್ಣವಾಗಿದೆ. ಆದಿಯಲ್ಲಿ ಒಂದು ಓಲೆಯು ನಷ್ಟವಾಗಿದೆ. ಇನ್ನೊಂದು ಓಲೆಯು ಅರ್ಧಕ್ಕಿಂತ ಹೆಚ್ಚು ಮುರಿದು ಹೋಗಿದೆ. ಈ ಎರಡು ಓಲೆಗಳು ಇರುತ್ತಿದ್ದರೆ ಹಿಂದಣ ನಂಬರಿನ ಪುಸ್ತಕವೂ ಇದೂ ಸೇರಿ ಒಂದು ಸಂಪೂರ್ಣ ಪ್ರತಿಯಾಗುತ್ತಿದ್ದಿತು. ಈ ಪ್ರತಿ ಶಕ ೧೭೩೭ ನೆಯ) ಈ ಗ್ರಂಥವು ವಿರಚಿತವಾದ ಮೇಲೆ ಒಂದು ವರ್ಷದಲ್ಲಿ) ರಾಕ್ಷಸನಾಮ ಸಂವತ್ಸರದ ಶ್ರಾವಣಮಾಸದ ಕೃಷ್ಣಪಕ್ಷ ಪಂಚಮಿಯಲ್ಲಿ ಬ್ರಹ್ಮನೆಂಬವನಿಂದ ಬರೆದುದಾಗಿ ಮೇಲ್ಕಂಡ ಪದ್ಯದಿಂದ ಗೊತ್ತಾಗುತ್ತದೆ. ಈ ಪ್ರತಿಯ ಕೊನೆಯಲ್ಲಿ ಪ್ರಭುಗುರು ಸ್ತುತಿ ರೂಪವಾದ ೧೧ ಪದ್ಯಗಳುಳ್ಳ ಒಂದು ಓಲೆಯಿದೆ. ಈ ಕೃತಿಯು ಪ್ರಭುದೇವಸ್ತುತಿ ಯೆಂಬ ಹೆಸರಿನಿಂದ ೮೪೧ ನೇ ನಂಬರಿನಲ್ಲಿ ವರ್ಣಿತವಾಗಿದೆ. ಇದು ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ. ಇದನ್ನು ಶುದ್ಧವಾದ ಪ್ರತಿಯೆನ್ನಬಹುದು.

ಈ ಗ್ರಂಥವು ಪ್ರೌಢವಾಗಿದೆ. ಇದು ಶಕ ೧೪೭೭ (ಕ್ರಿ. ಶ. ೧೫೫೫) ರಲ್ಲಿ ವಿರಚಿತವಾಯಿತೆಂದು " ಸಲೆ ರಸಾದ್ರ್ಯಬ್ಧೀಂದು " ಇತ್ಯಾದಿಯಾದ ಉದಾಹೃತ ಪದ್ಯದಿಂದ ಗೊತ್ತಾಗುತ್ತದೆ. ಆದಕಾರಣ ಕವಿ (ಸದಾಶಿವ) ಯ ಕಾಲವು ಕ್ರಿ. ಶ. ೧೫೫೫ ಎಂಬುದು ನಿಶ್ಚಯವಾಗುತ್ತದೆ. ಉಳಿದ ವಿಷಯಗಳನ್ನು ಹಿಂದಣ ನಂಬರಿನಲ್ಲಿ ನೋಡಿ ತಿಳಿಯುವುದು .

No. 1146. ಲೀಲಾವತೀ ಪ್ರಬಂಧ by ನೇಮಿಚಂದ್ರ-
LĪLĀVATĪPRABANDHA BY NĒMICANDRA.

Substance, Palm-leaf. Size, $11\frac{5}{8} \times 1\frac{5}{8}$ inches. Pages, 388. Lines, 7 and 8 on a page. Character, Kannada. Extent, 6,300 granthas. Condition, much injured. Appearance, old. Mode of writing, very good.

Begins on fol. 1*a*. The other work herein is Śṛṅgāraratnākara, 195*a* Complete.

A campu work in 14 āśvāsās. The story runs thus : Cūdāmaṇi was a king ruling at Jayantipura or Banavasi, the capital of the Kadamba kings. He had Padmāvati as his queen. Kandarpadēva was his son. Guṇagandha the minister had a son by name Makaranda who was a friend of Kandarpadēva. After coming to the throne Kandarpadēva once saw in his dream a lovely young woman and the next day went with his friend Makaranda in search of her. It was found out that she was no other than Līlāvati, daughter of Śṛṅgāraśēkhara, king of Kusumapura. She too had a similar dream in which she saw Kandarpadēva and sent messengers to find him out. Kandarpadēva and Līlāvati were at last married and they lived happily at Jayantīpura.

The author is Nēmicandra who had the titles " Kavirājakuñjara, Sukara Kaviśēkhara, Kavirājamalla, Kavidhavaḷa, etc. He is also the author of Nēmināthapurāna. His date is about 1170 A.D.

Name of the scribe :—Venkappa, son of Tirumalārya " Śānabhāga ' of Moodaṇa Śivasamudra.

Beginning :

ಸ್ರ|| ಶ್ರೀಪಾದಾಕ್ರಾಂತ ಲೋಕಂ ಪರಮ ಹಿಮಕರಂ ನೂತನಕ್ಷತ್ರಕಾಂತಂ||
ತಾಪಧ್ವಾಂ ತಾಪನೋದ ಕ್ಷಮನ ಮೃತಕಲಾವಲ್ಲಭಂ ವಿಶ್ವವಿದ್ಯೋ |
ಕೂಪಾರೋಜ್ಜೀವಜೈವಾತೃಕನತನುಕೃತ [ಶ್ರಾಂ](ಸ್ವಾಂ)ತಸಾಖ್ಯಂತ್ರಿಲೋಕೀ||
ದೀಪಂ ತಳ್ಕೈಸುಗಸ್ಮನ್ಮತಿ ಕುಮುದಿನಿಯಂ ನೇಮಿಚಂದ್ರಂ ಜಿನೇಂದ್ರಂ ||

*　　　*　　　*　　　*

ಚಂ|| ಬೞಿದೆ ಮಱಲ್ದುಱಲ್ದು ಕುಕವಿವ್ರಜಶಾಲ್ಮಲಿಯಂ ಮಲಂಗದೆ |
ಚ್ಚಱಿಸದೆ ದುರ್ವಿವೇಕಮುಖಕುಟ್ಮಳದಿಂದವಗಂಧಮುಂಮಱ ||
ಲ್ದಱಗದೆ ಮುಗ್ಧಚಂಪಕದೊಳೊಲ್ದು ಸರಸ್ವತಿಯೆಂಬ ತುಂಬಿ ಬಂ |
ದೆಱಗುಗೆ ನೇಮಿಚಂದ್ರನ ನವಸ್ಮಿತ ಜಾತ ಮುಖಾಂಬುಜಾತದೊಳ್ |

ಎನಗೆ ಸಮಂತಭದ್ರ [ದೆ] (ನೆ) ಕವೀಶ್ವರೊಳ್ ಸಕಳಾಕಳಂಕದೇ ॥
ವನೆ ವರನಾದ ವಿದ್ಯರೊಳಶೇಷವಿಶೇಷಣ ಪೂಜ್ಯ ಪೂಜ್ಯಪಾ ।
ದನೆ ಪದವಾಕ್ಯ ಕೋವಿದರೊಳ ತ್ಯಭಿನೂತನರನ್ನರಪ್ಪಮ ।
ತ್ರಿನ ಕವಿವಾದಿ ಶಾಬ್ದಿಕರೊಳಾಗೆ (F) ನಿತಾಳ್ಕೊಡವಮ್ಮಿಱಳ್ಕೊಡಂ ॥

*   *   *   *

ಸರಸ ಮಹಾಕವೀಶ್ವರ ಮಹೀತಳದೊಳ್ ಪುಳಕಾಂಕುರಂಗಳು ।
ಬ್ಬರಿಸಿ ಮೃದೂಕ್ತಿ ಬಿಂದು ಚಯಮಂ ಸವಿ [ದೋರಿ](ದಾಱಿತೆ) ವಿದಗ್ಧ ಚಾತಕಂ ॥
ನರಪಸಭಾನಭಸ್ಥಳದೊಳುನ್ನತಿವೆತ್ತು ರಸಪ್ರವಾಹಮಂ ।
ಸರಿವುದನಾರತಂ ಸುಕರಕಾವ್ಯಘನಂ ಕವಿರಾಜಮಲ್ಲನಾ ॥
ಪಿರಿದನುರಾಗ [ವೋ] (ದೋ) ದುವರ ನಾಲಗೆಗಳ್ಗಮರ್ದಾದುದೊಲ್ಕುಕೇ ।
ಳ್ವರಕೆವಿಗಳ್ಗೆ ಮಾಣಿಕದ ಮಂಜರಿಯಾದುದು ಭಾವಿಸುತ್ತಮಿ ।
ರ್ವರ ಬಗೆಗಳ್ಗೆ ಪೊಚ್ಚ ಪೊಸವೇಟದ ಪೆಣ್ಣ ವೊಲಾದುದಿಂಪಿನಿಂ ॥
ಸುರುಚಿರೆ ಕಾಂತಿಯಿಂ ಸೊಬಗಿನಿಂದೆಸವೀಕೃತಿ ನೇಮಿಚಂದ್ರನಾ ॥

ಕಂ॥ ಸಾತಿಶಯಾರ್ಥಮುಮಂ ಮೆ ।
ಲ್ಪಾತುಮನೊಸೆದಿತ್ತರೊಲ್ದು ತಮಗಿಲ್ಲದುದಂ ।
ಖ್ಯಾತಂಗೆ ಸುಕವಿ ನೇಮಿಗೆ ।
ಭೂತ ಭವದ್ಭಾವಿ ಕವಿಗಳೇನೊಳ್ಳಿದರೋ ॥
ಯುವತಿ ಸರಸತಿ ಪುರಾತನ ।
ಕವಿ ವಿರಹಮನೆಱಿದಲ್ಲಲ್ಲ ನಿರ್ಮಳದಕನ ॥
ಚ್ಛವಿ ಕುಸುಮಿತ ರಸನಾ ಪ ।
ಲ್ಲವ ತಲ್ಪದೊಳಿರ್ದ ಸುಕರ ಕವಿಶೇಖರನಾ ॥
ಚತುರರೆರ್ದೆಯಿಂದ ಮಿಳ್ಳಯಲ್ ।
ಸ್ತುತಿಯಿಂ ನಾಲಗೆಯನಗಲಳೆಂದುಂ ತನ್ನೀ ॥
ಕೃತಿಕಾಂತೆ ನಿಜಕಲಾಕುಶ ।
ಲತೆಯಿಂ ಮತ್ತೆಂತು ಮೆಱೆವನೋ ಕವಿಧವಳಂ ॥

ಮ. ವಿ. ಅನುಭಾವವ್ಯವಸಾಯ ಸುಪ್ರಕಟಿತಂ ನಾನಾವಿಭಾವ ಪ್ರಭಾ।
ವನಿಮಿತ್ತಂ ವ್ಯಭಿಚಾರಿಭಾವ ಪರಿಪುಷ್ಟಂ ಸ್ಥಾಯಿಭಾವಾತ್ಮಕಂ ।
ತನು ಶೃಂಗಾರರಸಕ್ಕೆ ಸಂದಣಿಸಿದಾ ಶೃಂಗಾರಮಂ ಕಾವ್ಯಬಂ ।
ಧನದೊಳ್ತಾಂ ಸೆಱೆಗೆಯ್ದು ಮಯ್ಯೊಳವಂ ಶೃಂಗಾರಕಾರಾಗೃಹಂ ॥

ಉ. ಮಾ। ಓತರಗೆಯ್ತದಂತೆ ರಸಭಾವಮೊಡಂಬಡೆ ನಲ್ಲರಿಟ್ಟದೊ ।
ಳ್ಮಾತುಗಳಂತೆ ಮಾತುಗಳನಿಂಪೊಸರುತ್ತಿರೆ ಕಾವ್ಯಭೂಷಣಾ ॥
ರ್ಥಾತಿಶಯಾ ಪ್ರಿಯರ್ ತುಡಿಸಿದರ್ಥ ವಿಭೂಷಣದಂತಿರೊಪ್ಪುವೇ ।
ಳ್ದಾತನದಾರೊ ಬೇಳರಿಯೆನೆನ್ನಿನಿಯಂ ಕವಿರಾಜದೋಹಳಂ ॥
ಇನ್ನು ಕವಿವ್ರಜಂ ಪಡೆಯದೀ ಪೊಸದೇಸೆಯನೀ ಸದರ್ಥಮಂ ।
ಮುನ್ನಿನ ಸತ್ಕವೀಶ್ವರರ್ಗಮೇಂ ದೊರೆಕೊಂಡುದೊ ಕೂಡೆಬಿನ್ನಣಂ ।

• ಸನ್ನಿದವಮಾದುದಕ್ಕರದ ಮಾಟಿಕ್ಕೆಯಿ ನೀಕೃತಿಯಂ ಕೃತಾರ್ಥನೊ ।
ಲ್ದಿನ್ನನೊ ಪೇಳ್ದನೇನನಱಿಯನೆಮ್ಮರಸ ೦ ಕವಿರಾಜ ಕುಂಜರಂ ।

ಕಂ॥ ಈ ಯಂದದಿ ನತಿಚತುರ ।
ಸ್ತ್ರೀಯರು ಮತಿ ಚತುರ ಕವಿಗಳುಂ ಕೇಳ್ದೊಲವಿಂ ।
ಬಾಯಂ ಬಿಡುತಿರೆ ಕರ್ಣರ ।
ನಾಯಕನವೊನೆ ಪೇಳ್ವೆನೆಸೆಯೆ ಲೀಲಾವತಿಯಂ ॥

* * * *

ಮ॥ಸ್ರ॥ ಮಳಯೋತ್ಸಂಗಾಗ್ರದಿಂ ತಂಬೆಲರಲೆವಲರಿಂ ಸೌರಭಂ ಸೌರಭ ಶ್ರೀ ।
ಕಳತಂ ಪುಷ್ಪಾಳಿ ಪುಷ್ಪಾವಳಿಯ ಪುದಿದ ಚೆಲ್ವಿಂ ವಸಂತಂ ವಸಂತೋ ॥
ಜ್ಜ್ವಳತಂ ಕಂದರ್ಪನೊಪ್ಪಂ ಬಡೆವ ತೆಱದಿನಾ ಮಂತ್ರಿ ಮಾಣಿಕ್ಯನಿಂಭೂ ।
ತಳದೊಳ್ ಸಂಸೇವ್ಯನಾದಂ ಸರಸಕೃತಿ ಕಳಾನರ್ತಕೀ ನೃತ್ಯರಂಗಂ ॥

Colophon :

ಇದು ವಿದಿತ ವಿವಿಧ ಪ್ರಬಂಧವನ ವಿಹಾರ ಪರಿಣಾತ ಪರಮಜಿನಚರಣಾರಮ್ಯ (ಹರ್ಮ್ಯ ಹೈಮಾ) ಚಳೋಜ್ಜ್ವಳತ ನಖ ಮಯೂಖ ಮಂದಾಕಿನೀ ಮಜ್ಜನಾಸಕ್ತ ಸಂತತೋ [ಚ್ಛಿ] (ತ್ರಿ)ಕ್ತ ದಾನಾಮೋದ ಮುದಿತ ಬುಧ ಮಧುಕರ ಪ್ರಕರ ಕವಿರಾಜ ಕುಂಜರ ವಿರಚಿತಮಪ್ಪ ಲೀಲಾವತೀ ಪ್ರಬಂಧದೊಳ್ ನಾಯಕಾಭ್ಯುದಯ ವರ್ಣನಂ ಪ್ರಥಮಾಶ್ವಾಸಂ ಪ್ರಥಮಾಶ್ವಾಸ ೧ ಕ್ಕಂ ಕಂದಪದ್ಯ ೫೮, ವೃತ್ತ ೫೦, ವಚನ ೨. ಗದ್ಯ ೧ ಕ್ಕಂ ಮಂಗಳಮಹಾಶ್ರೀ :—

End :

ಮ॥ವಿ॥ ಧರೆಯಂ ರಕ್ಷಿಸುತಿರ್ಕೆ ಲಕ್ಕಬರಿಸಂ ಲಕ್ಷ್ಮೀಧರೋರ್ವೀಶ್ವರಂ।
ಸಿರಿಯಂತಾತನ ತೋಳೊಳಿರ್ಕೆ ಸತತಂ ಶ್ರೀ ಚಂದ್ರಿಕಾದೇವಿನಾ ॥
ಯಿರಮಂ ಕಾವ್ಯವನೊಲ್ದು ಪೇಳ್ಗೆ ಸುಖದಿಂ ಚಂದ್ರೋದಯಾಂ ಸಪ್ತಸಾ ।
ಗರ ಪರ್ಯಂತ ಧರಿತ್ರಿಯೊಳ್ನೆಲಸುಗೀ ಕಾವ್ಯಂ ಶುಭಂ ಮಂಗಳಂ ॥

ಗದ್ಯ.—

Colophon :

ಇದು ವಿದಿತ * * * ಲೀಲಾವತೀ ಪ್ರಬಂಧದೊಳ್ ನಾಯಿಕಾ ಪುರ ಪ್ರವೇಶ ವರ್ಣನಂ ಚತುರ್ದಶಾಶ್ವಾಸಂ :—

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಅಂದವಾಗಿದೆ. ೧೧೫ ನೆಯ ಓಲೆಯಲ್ಲಿ ಒಂದೇ ಕಡೆ ಬರೆದಿದೆ. ಪುಸ್ತಕದಂತ್ಯದಲ್ಲಿ (ಮೂಡಣ ಶಿವನ ಸಮುದ್ರದ ಸ್ಥಳದ ಸೇನಭಾಗ ಯಲಹಕ್ಕದ ತಿರುಮಲಯ್ಯಗಳ ಮಗ ಹೆಂಕಪ್ಪ ಬರೆದ ಲೀಲಾವತಿ ಎಂದಿದೆ. ಈ ಪುಸ್ತಕ ದೊಡನೆ ಶೃಂಗಾರ ರತ್ನಾಕರವಿದೆ.

ಇದು ಚಂಪೂ ರೂಪವಾಗಿದೆ. ೧೪ ಆಶ್ವಾಸಗಳಿವೆ. ಇದರಲ್ಲಿರುವ ಕತೆಯನು ಸಂಗ್ರಹಿಸಿ ಕವಿ ಚರಿತ್ರೆಯಲ್ಲಿ ಹೀಗೆ ಬರೆದಿದೆ —— ಕದಂಬರ ರಾಜಧಾನಿಯಾದ ಜಯಂತೀ

ಪುರ ಅಥವಾ ಬನವಾಸಿ ಎಂಬ ಪಟ್ಟಣದಲ್ಲಿ 'ಚೂಡಾಮಣಿ' ಎಂಬ ರಾಜನಿದ್ದನು. ಈತನ ಮಹಿಷಿ ಪದ್ಮಾವತಿ. ಇವರ ಮಗ ಕಂದರ್ಪ ದೇವ. ಗುಣಗಂಧನೆಂಬ ಮಂತ್ರಿಯ ಮಗನಾದ ಮಕರಂದನು ಇವನು ಪ್ರಿಯ ಮಿತ್ರನು. ಕಂದರ್ಪನು ಯುವರಾಜ ಪಟ್ಟವನ್ನು ಹೊಂದಿ ಒಂದು ದಿನ ರಾತ್ರಿ ಕನಸಿನಲ್ಲಿ ಒಬ್ಬ ಸ್ತ್ರೀಯನ್ನು ಕಂಡು ಮರು ದಿವಸ ಆ ಸ್ತ್ರೀ ಯಿರುವ ದಿಕ್ಕಿಗೆ ಮಕರಂದನೊಡನೆ ಪ್ರಯಾಣಮಾಡುತ್ತಾನೆ. ಕುಸುಮಪುರವೆಂಬ ಪಟ್ಟಣದ ದೊರೆಯಾದ ಶೃಂಗಾರಶೇಖರನ ಮಗಳಾದ ಲೀಲಾವತಿಯನ್ನೇ ಈತನು ಸ್ವಪ್ನದಲ್ಲಿ ಕಂಡುದು. ಆಕೆಯೂ ಇವನನ್ನು ಸ್ವಪ್ನದಲ್ಲಿ ಕಂಡು ಇವನನ್ನು ಹುಡುಕಲು ಜನರನ್ನು ಕಳುಹಿಸುತ್ತಾಳೆ. ಬಳಿಕ ಇವರಿಬ್ಬರಿಗೂ ವಿವಾಹವಾಗಿ ಕಂದರ್ಪನು ಲೀಲಾವತಿಯನ್ನು ಕರೆದುಕೊಂಡು ಜಯಂತೀ ಪುರಕ್ಕೆ ಬಂದು ಸುಖವಾಗಿ ರಾಜ್ಯಭಾರ ಮಾಡುತ್ತಾನೆ. ಈ ಕಥೆಯನ್ನು ನೋಡಿದರೆ ಈ ಗ್ರಂಥವು ಸುಬಂಧುವಿನ ವಾಸವದತ್ತೆಯನ್ನು ಅನುಸರಿಸಿರುವಂತೆ ತೋರುತ್ತದೆ."

ಕವಿ ನೇಮಿಚಂದ್ರನು. ಜೈನಮತದವನು. ಇವನಿಗೆ ಕವಿರಾಜಮಲ್ಲ, ಕವಿಧವಳ ಮುಂತಾಗಿ ಅನೇಕ ಬಿರುದುಗಳಿವೆ. ಇವನ ಬಂಧವು ಗಂಭೀರವಾಗಿಯೂ ಹೃದಯಂಗಮ ವಾಗಿಯೂ ಇದೆ. ಇವನ ಕವಿತೆಯನ್ನು ಅತ್ಯುತ್ತಮವೆನ್ನಬಹುದು. ಈತನು ನೇಮಿನಾಥ ಪುರಾಣವೆಂಬ ಇನ್ನೊಂದು ಗ್ರಂಥವನ್ನು ಬರೆದಿದ್ದಾನೆ. ಅದಕ್ಕೆ 'ಅರ್ಧನೇಮಿ' ಯೆಂಬ ಹೆಸರೂ ರೂಢಿಯಲ್ಲಿರುವುದು. ಇವನ ಕಾಲವು ಸು ೧೧೭೦ ಎಂದು ಕವಿ ಚರಿತ್ರಕಾರರಮತವು. ಮಿಕ್ಕ ವಿಷಯಗಳನ್ನು ಉದಾಹೃತ ಭಾಗಗಳಿಂದಲೂ ಕವಿಚರಿತ್ರೆಯಿಂದಲೂ ತಿಳಿಯುವುದು.

No. 1147. ಲೀಲಾವತಿ ಪ್ರಬಂಧ by ನೇಮಿಚಂದ್ರ-
LĪLĀVATĪ PRABANDHA BY NĒMICANDRA.

Substance, Paper. Size, 10 5/16 × 9 9/16 inches. Pages, 468. Lines, 20 on a page. Character, Kannada. Extent, 6,300 granthas. Condition, good. Appearance, new.

Restored in 1933–34 from the above Ms.

Complete.

Same work as that described above.

(ವಿ.ವಿ.)—

ಸಮಗ್ರ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಕವಿ ನೇಮಿಚಂದ್ರನು.

No. 1148. ಲೀಲಾವತೀ ಪ್ರಬಂಧ by ನೇಮಿಚಂದ್ರ.
LĪLĀVATĪ PRABANDHA BY NĒMICANDRA.

Substance, Śritāla. Size, 16⅛ × 2 inches. Pages, 58. Lines, 10—12 on a page. Character, Kannada. Extent, 1,900 granthas. Condition, much injured. Appearance, old. Mode of writing, good.

Incomplete.

Contains 1–3 and 5th Āśvāsas complete and 1–146 stanzas in the 4th Āśvāsa and 1–9 stanzas in the 6th Āśvāsa.

Same work as the above.

(ವಿ-ವಿ.)—

ಅಸಮಗ್ರ. ಮೊದಲಿನ ಮೂರು ಮತ್ತು ಐದನೆಯ ಆಶ್ವಾಸಗಳು ಸಂಪೂರ್ಣವಾಗಿವೆ. ೪ ನೆಯ ಆಶ್ವಾಸದಲ್ಲಿ ೧೪೬ ಪದ್ಯಗಳೂ ೬ ರಲ್ಲಿ ೯ ಪದ್ಯಗಳೂ ಇವೆ. ಅತ್ಯಂತ ಶಿಥಿಲವಾಗಿದೆ. ಮೊದಲಿನ ೪ ಓಲೆಗಳು ಬದಿಗಳಲ್ಲಿ ವಿಶೇಷವಾಗಿ ಜೀರ್ಣವಾಗಿವೆ. ೧೧ ನೆಯ ಓಲೆಯು ಮಧ್ಯದಲ್ಲಿ ಮುರಿದು ಹೋಗಿದೆ. ಲಿಪಿ ಅಂದವಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಕವಿ ನೇಮಿಚಂದ್ರನು.

No. 1149. ಲೀಲಾವತೀ ಪ್ರಬಂಧ by ನೇಮಿಚಂದ್ರ-

LĪLĀVATĪ PRABANDHA BY NĒMICANDRA.

Substance, Palm-leaf. Size, $15\frac{7}{8} \times 1\frac{1}{8} \times 1\frac{1}{4}$ inches. Pages, 72. Lines, 7 and 8 on a page. Character, Kannada. Extent, 1,300 granthas. Condition, very much injured. Appearance, old. Mode of writing, good.

Begins on fol. 1 a of the manuscript described under No. 924 ante.

Incomplete.

Contains from the 53rd stanza in the first Āśvāsa to the end of the 136 stanza in the 4th Āśvāsa.

Same work as that described above.

(ವಿ-ವಿ.)—

ಅಸಮಗ್ರ. ಆಶ್ವಾಸಗಳು ೧-೪ ಇವೆ. ಮೊದಲನೆಯಾಶ್ವಾಸದಲ್ಲಿ ಮೊದಲ ೫೨ ಪದ್ಯಗಳೂ ನಾಲ್ಕನೆಯದರಲ್ಲಿ ೧೩೬ ನೇ ಪದ್ಯದ ಉತ್ತರ ಭಾಗವೂ ಇಲ್ಲ. ಅತ್ಯಂತ ಶಿಥಿಲವಾದ ಪ್ರತಿ. ಕೆಲವು ಓಲೆಗಳು ಮುರಿದು ಹೋಗಿವೆ. ಲಿಪಿ ಚೆನ್ನಾಗಿದೆ. ಇದರೊಡನೆ ಕೃಷ್ಣ ಕಥೆಯಿದೆ. ಆ ಬಗೆಗೆ ಹಿಂದಣ ೬೦೫ ನೆಯ ನಂಬರನ್ನು ನೋಡುವುದು. ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1150. ಲೀಲಾವತೀ ಪ್ರಬಂಧ by ನೇಮಿಚಂದ್ರ-

LĪLĀVATĪ PRABANDHA BY NĒMICANDRA.

Substance, Palm-leaf. Size, $14\frac{3}{8} \times 1\frac{1}{8}$ inches. Pages, 298. Lines, 5 and 6 on a page. Character, Kannada. Extent, 3,000 granthas. Condition, much injured. Appearance, old. Mode of writing, good up to the 24th leaf. Afterwards not good.

Incomplete.

Contains Āśvāsas 1 and 6–9 are complete. Second 5th and 10th are incomplete.

Same work as that described above.

(ವಿ-ವಿ.)—

ಅಸಮಗ್ರ. ಓಲೆಗಳು ೧-೨೪. ೨೪-೧೯೮ ಇವೆ. ೧ ಮತ್ತು ೬-೯ ಆಶ್ವಾಸಗಳು ಸಂಪೂರ್ಣವಾಗಿವೆ. ೨ ನೆಯ ಆಶ್ವಾಸದಲ್ಲಿ ೭೦ ಪದ್ಯಗಳೂ ೫ ದನೆಯದರಲ್ಲಿ ೪ ನೆಯ ಪದ್ಯದಿಂದ ನಂತರದ ಭಾಗವೂ ೧೦ ನೆಯದರಲ್ಲಿ ಮೊದಲನೆಯ ೮೨ ಪದ್ಯಗಳೂ ಮುಂದಣ ಗದ್ಯದ ಸ್ವಲ್ಪ ಭಾಗವೂ ಇವೆ. ೨ ನೆಯ ಆಶ್ವಾಸದಲ್ಲಿ ೭೦ ಎಂಬ ಸಂಖ್ಯೆಯಿಂದ ಗುರುತಿಸಿದ ಪದ್ಯವು ಮುದ್ರಿತ ಪುಸ್ತಕದಲ್ಲಿ ೬೪ ನೆಯ ದಾಗಿದೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಮೊದಲಿನ ೨೪ ಓಲೆಗಳಲ್ಲಿ ಚೆನ್ನಾಗಿದೆ. ಉಳಿದವುಗಳಲ್ಲಿ ಅಷ್ಟು ಚೆನ್ನಾಗಿಲ್ಲ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1151. ಲೀಲಾವತೀ ಪ್ರಬಂಧ by ನೇಮಿಚಂದ್ರ-
LĪLĀVATĪ PRABANDHA BY NĒMICANDRA.

Substance, Palm-leaf. Size, 15⅞ × 1¼ inches. Pages, 182. Lines, 7 and 8 on a page. Character, Kannada. Extent, 3,300 granthas. Condition, injured. Appearance, old. Mode of writing good.

Incomplete.

Contains from the end of the 4th Āśvāsa to the 34th stanza of the 10th Āśvāsa and from the end of the 11th Āśvāsa to the prose passage after the 128th stanza of the 14th Āśvāsa.

Same work as that described above.

(ವಿ-ವಿ.)—

ಅಸಮಗ್ರ. ಓಲೆಗಳು ೪೧-೬೯. ೧೧೫-೧೪೯ ಇವೆ. ಚತುರ್ಥಾಶ್ವಾಸದ ಕೊನೆಯ ಭಾಗದಿಂದ ೧೦ ನೆ ಯಾಶ್ವಾಸದ ೩೪ ನೆಯ ಪದ್ಯದವಗೆಗೂ ನಂತರ ೧೧ ನೆಯ ಆಶ್ವಾಸದ ೧೦೦ ನೆಯ ಪದ್ಯದಿಂದ ಚತುರ್ದಶಾಶ್ವಸದ ೧೨೮ ನೆಯ ಪದ್ಯದ ಮುಂದಣ ಗದ್ಯದವರೆಗೂ ಇದೆ. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಪುಸ್ತಕದಾದಿಯಲ್ಲಿ ಈ ಲೀಲಾವತಿಯ ಪುಸ್ತಕವ ಬರೆದ ತಿಥಿ:—

'ಶ್ರಾವಣ ಶುದ್ಧ ೧ ಆದಿವಾರ ಉತ್ತರಾ ನಕ್ಷತ್ರದಲ್ಲಿ ಸುಮುಹೂರ್ತದಲ್ಲಿ ಪ್ರಾರಂಭಕ್ಕೆ ಬಂದು' ಎಂದಿದೆ. ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ. ಕವಿ ನೇಮಿಚಂದ್ರನೆಂಬುವನು.

No. 1152. ವಿರೂಪಾಕ್ಷಾಸ್ಥಾನ by ಚಂದ್ರ ಅಥವಾ ಚಂದ್ರಶೇಖರ-
VIRŪPĀKṢĀSTHANA BY CANDRA OR CANDRAŚĒKHARA.

Substance, Palm-leaf. Size, 14¾ × 1¼ inches. Pages, 2 to 8. Lines, 6 to 10 on a page. Character, Kannada. Extent, 540 granthas. Condition, very much injured. Appearance, old. Mode of writing, fair.

Begins on fol. 72a of the manuscript described under No. 663 ante.

Complete.

Gives a description of the Court of Pampāvirūpākṣa. The author is Candra or Candraśekhara. He states that he wrote this on the suggestion made by Gururāya, son of Arasāmātya of Ātrēya gōtra, who was the chief minister of Praudhadēvarāya, king of Vijayanagara. Praudha dēvarāyas date is stated as 1419–1446 and therefore the present author must have lived in about 1430.

Beginning :

ಶಾ॥ ಶ್ರೀ ಮತ್ತ್ಯವರ್ತ ಸಾರ್ವಭೌಮ ತನಯಾ ಕಾರುಣ್ಯಾ ಕಲ್ಪದ್ರುಮಾಪ್ರ ।
ಷ್ಪಾವೋದ ಪ್ರಿಯಕಾಲು ಭೃಂಗ . . . ವ ಕಲಾ ಕೋಟೀರ
ಹೀರೋ [ಘಲಂ] (ಪಲಂ) ॥ (?)
ಸಾಮಾಮ್ನಾಯ ಸುಗೀತ ಲೋಲುಪ ತುರಂಗಾ ತುಂಗಭದ್ರಾ ತಟೀ ।
ಧಾಮಂ ಪಾಲಿಸುತಿರ್ಕೆ ಪಂಪೆಯ ವಿರೂಪಾಕ್ಷಂ ಜಗಜ್ಜಾಲಮಂ ॥

* * * *

ಕಂ॥ ಅ[ರಲ್ಗ] (ಲರ್ಗ) ಣೆ ಯಿಂಬಿರ್ಮಡಿ ತಂ ।
ಬೆಲರಿಂ ಮೂವಡಿ ವಸಂತನಿಂ ನಾಲ್ವಡಿಕಾ ॥
ದಲರಿಂ ದೈವಡಿ ಮೋಹಿಪು ।
ದೆಲೆ ಚಂದ್ರಕವೀಂದ್ರ ನಿನ್ನ ಕನ್ನಡಗಬ್ಬಂ ॥

End :

ಕಂ॥ ದೊರೆವಡೆದೀ ಕೃತಿರತ್ನಮು ।
ನೆರಡಿಲ್ಲದೆ ಭಕ್ತಿಯಿಂದ ಪಂಪಾ [ರಮಣನ] (ಪತಿಯಾ) ॥
ಚರಣಾಂಬುಜಕರ್ಪಿಸಿದಂ ।
ಧರೆಯೊಡೆಯಂ ಪ್ರೌಢದೇವರಾಯ ನರೇಂದ್ರಂ ॥

Colophon :

ವಿರೂಪಾಕ್ಷಸ್ಥಾನಂ ಸಂಪೂರ್ಣಂ ;—

(ವಿ.ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಅವಾವುವೆಂಬುದನ್ನು ಹಿಂದಣ ೬೬೩ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು :—

ಇದು ಚಂಪೂರೂಪವಾಗಿದೆ. ಪದ್ಯಗಳು ೯೮. ಪಂಪಾ ವಿರೂಪಾಕ್ಷಸ್ಥಾನ ವರ್ಣನೆಯು ಇದರಲ್ಲಿ ಉಕ್ತವಾಗಿದೆ. ಕವಿ ಚಂದ್ರ ಅಥವಾ ಚಂದ್ರಶೇಖರನು ಇವನಿಗೆ ಎಂಟು ಭಾಷೆಗಳು ತಿಳಿದಿದ್ದಂತೆ ಹೇಳಿದೆ. ಇವನು ಈ ಗ್ರಂಥವನ್ನು ಕುಂತಳ ದೇಶದ ವಿಜಯನಗರಕ್ಕೆ ಅರಸಾದ ವಿಜಯ ನೃಪನ ಮಗನಾದ ದೇವನೃಪ ಅಥವಾ ಗಜವೇಂಟೆಕಾರ ಪ್ರೌಢದೇವರಾಯನ ಮಹಾಪ್ರಧಾನನೂ ಆತ್ರೇಯಗೋತ್ರ ಸಂಭವನೂ, ರಾಯಭಂಡಾರಿ ನಾರಾಯಣ ಬಿರುದಾಂಕಿತನೂ ಅರಸಾಮಾತ್ಯ ತನೂಜನೂ ಆದ ಗುರುರಾಯನ ಅಪ್ಪಣೆಯಿಂದ ಬರೆದುದಾಗಿ,

ಹೇಳಿದ್ದಾನೆ. ವಿಜಯ ನಗರದ ಪ್ರೌಢ ದೇವರಾಯನ ಕಾಲವು ಕ್ರಿ.ಶ. ೧೪೧೯—೧೪೪೬ ಆದಕಾರಣ ಕವಿಯು ಸು. ಕ್ರಿ.ಶ. ೧೪೩೦ ರಲ್ಲಿದ್ದಿರಬಹುದೆಂದು ಕವಿ ಚರಿತ್ರಕಾರರು ಹೇಳುತ್ತಾರೆ.

No. 1153. ವಿರೂಪಾಕ್ಷಾಸ್ಥಾನ by ಚಂದ್ರ ಅಥವಾ ಚಂದ್ರಶೇಖರ-

VIRŪPĀKṢĀSTHĀNA BY CANDRA OR CANDRAŚEKHARA.

Substance, paper. Size, 10½ × 9½ inches. Pages, 29. Lines, 20 on a page. Character, Kannada. Extent, 540 granthas. Condition, good. Appearance, new.

Restored in 1918–19 from the ms. described under No. 664 ante.

Complete.

Same work as that described above.

(ವಿ.-ವಿ.)—

ಸಮಗ್ರ. ಕಾಗದದ ಪ್ರತಿ. ಇದು ಹಿಂದಣ ೧೧೫೨ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೃತಿಯಾಗಿದೆ. ಇದರೊಡನೆ ಚೂಡಿನಾಸ್ಥಾನ, ವೈಭೋಗ ರಾಜಾಸ್ಥಾನ, ಅಮರುಕ, ಶಾರದಾಗದ್ಯ, ಇವೂ ಇವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1154. ವಿರೂಪಾಕ್ಷಾಸ್ಥಾನ by ಚಂದ್ರ ಅಥವಾ ಚಂದ್ರಶೇಖರ-

VIRŪPĀKṢĀSTHĀNA BY CANDRA OR CANDRAŚEKHARA.

Substance, Palm-leaf. Size, 12⅜ × 1¼ inches. Pages, 40. Lines, 6 on a page. Character, Kannada. Extent, 400 granthas. Condition, extremely injured. Appearance, old. Mode of writing, good.

Complete.

Same work as that described above.

(ವಿ.-ವಿ.)—

ಸಮಗ್ರವೆನ್ನಬಹುದು. ಪುಸ್ತಕವು ಅತ್ಯಂತ ಜೀರ್ಣವಾಗಿದೆ. ಲಿಪಿ ಚೆನ್ನಾಗಿದೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1155. ವೃಷಭೇಂದ್ರ ವಿಜಯ by ಷಡಕ್ಷರಿ-

VRṢABHĒNDRAVIJAYA BY ṢADAKṢARI.

Substance, Śrītaḷa. Size, 18¾ × 2 inches. Pages, 16. Lines, 7 on a page. Character, Kannada. Extent, 1,000 granthas. Condition, injured. Appearance, old. Mode of writing, good.

Begins on fol. 7a of the Ms. described under No. 271 ante. Begins with 127th stanza of the 34th Āśvāsa and breaks off in the 56th stanza of the 42nd Āśvāsa. In the middle 40 leaves are wanting.

This is only a fragment of the work describing in 42 Āśvāsàs the story of Basava, the founder of the Vīraśaiva religion. This was first written by Pālkurike Sōmanātha in Telugu language. Later on it was written by Bhīmakavi in Kannada and by Śankarakavi in Sanskrit. Ṣaḍakṣara kavi the author of Rājaśēkhara vilāsa, etc., is also the author of the campu work under notice. He lived in 1655 A.D.

Beginning :

. . . . ದಿವಿಷ್ಣು ವಧೂವಾದುದೆ
ಸಾಕ್ಷಿ ಸಮಸ್ತ ಲೋಕದೊಳ್ ||

ಮ॥ಸ್ರ॥ ಹರ ನಿನ್ನಾದ್ಯಂತ ಶೂನ್ಯತ್ವಕೆ ನುಡಿದಘದಿಂ ಬಂದಿ ಪದಾರ್ಥದ ಪದ್ಮೋ |
ದರ ಬೊಮ್ಮ (ರ್) ಸಾಕ್ಷಿ ನಿನ್ನುದ್ವೆಳ ಮಹಿಮೆಗೆ ವೇದಂಗಳೇ
ಸಾಕ್ಷಿ ಲೋಕೇಶಾ ||
ತ್ಕರ ರಕ್ಷಾಶಾಲಿ ನೀನೆಂಬುದಕೆ , ... ಸಾಕ್ಷಿ
ಕೇಳ್ದೀವ . . . . . . ||
. . . . . ರಾಶಿ ನೀನಾದುದಕೆ ಸುಗುಣ ವೊಲ್ದಂದವೋ
ಸಾಕ್ಷಿಯಲ್ತೇ ||

* * * *

ಮ॥ಸ್ರ॥ ಖಿಳಸತ್ಕಲ್ಯಾಣ ಕಲ್ಪದ್ರುಮ ನಖಿಳ ಕಲಾಶಾಲಿ ಶೈವಪ್ರಭಾವೋ |
ಜ್ವಳಧಾಮಂ ಭಕ್ತಿಧಾಮಾ ರಮಣನಮಳ ಕೀರ್ತಿ ಪ್ರಭಾಪೂರಿತಾಶಾ |
ವಳಯಂ ದುರ್ದಾಂತ ವಾಗ್ಭಂಜನನಧಿಗತ ಸರ್ವಾರ್ಥ ನಿಂತಿಂತವ ಮಂ |
ಜ್ವಳವೃತ್ತಂ ಪೇಳ್ವುದುಂ ತಾಂತ್ರಿಳದು ಮುದಮನಾಳ್ದೊಪ್ಪುತ್ತಿರ್ದಂ
ವೃಷೇಂದ್ರಂ ||

ಪ್ರಮಾಣಿಕ ವೃತ್ತ || ಮುರಾರಿ ಶಂಬರಾರಿ ವಾ |
ಗ್ವರಾದಿ ನಿರ್ಜರಾರ್ಚಿತೇ ||
ಧರಾ ಧರೇಶ್ವರಾತ್ಮಜೇ |
ಹರಪ್ರಿಯೇ ಜಯಾಂಬಿಕೇ ||

Colophon :

ಇದು ವಿನಮದಖಿಳ ಸುರೇಂದ್ರ ಮಕುಟ ತಟ ಘಟಿತ ಮಣಿಗಣಾಗಣಿತ ರುಚಿ ನಿಚಯ ಕರುಣಾತಪ ಪರಿಲಸಿತ ಪರಮಶಿವಲಿಂಗ ಪಾದಾರವಿಂದ ಪರಾಗ ಭಸಿತ ಭಾಸುರ ಷಡಕ್ಷರ ದೇವ ಭಕ್ತಿ ವಿರಚಿತ ಶ್ರೀಮದ್ಬಸವರಾಜ (ವಿಜಯ) ಮಹಾ ಪುರಾಣದೊಳ್ ವೀರಭ [ಕ್ತಿ] (ಕ್ತ) ವಿಳಾಸಂ ಚತುಸ್ತ್ರಿಂಶದಾಶ್ವಾಸಂ ಪರಿಸಮಾಪ್ತಂ. ಮಂಗಳಂ. ಆಶ್ವಾಸ ೩೪ ಕ್ಕಂ ಪದನು ಗಣನೆ ೨೬೪೧ (ಕ್ಕಂ) ಮಂಗಳ ಮಹಾಶ್ರೀ—

ಕಂ| ಶ್ರೀ ಹಿಮಗಿರೀಂದ್ರ ಕನ್ಯಾ |
ಭಾಹಾ ಚಂಪಕ ಸುಮಮಾಲಿಕಾ ಕಲಿತಗಳಂ ||

ಮೋಹವಿದೂರಂ ಸುಗುಣ ಸ ।
ಮೂಹಾನ್ವಿತನೀಗೆ ಸೌಖ್ಯಮಂ ಶಿವಲಿಂಗಂ ॥

End :

ಅಚಲ ಜೆಹ್ವಾವೃತ್ತಂ (ಚಂಪಕಮಾಲೆ) ಶಿವಮಯ ಕಾಯಭವ್ಯ
ಮಹಿಮಾಂಗ ವಿಮಾಯ ಯಮಿಶಗಮ್ಯಕಾಂ ।
ಭವ ಸುಗಮಾ ಸಮಾಗಮ ಕೋಶೇಶಯ ಹಂಸ ಖಗೇಶ ವಾಹವಾ ॥
ಸವಮುಖ ಭಾವ್ಯ ವಿಶ್ವವಿಭು ಭಾವ ಭವಾಪಹ ಸಾಹಸಾಂಕರಂ ।
ಭುವಶಗ ಭಾವಪಾಹಿ ಬಸವೇಶ ಶುಭಾ . . . . . "

(ವಿ.ವಿ.)—

ಅಸಮಗ್ರ. ೧೯೭, ೨೧೦, ೨೧೧, ೨೩೩, ೨೩೪, ೨೩೬, ೨೩೭, ೨೪೪ ಸಂಖ್ಯಾಂಕಿತಂಗಳಾದ ಎಂಟು ಓಲೆಗಳು ಮಾತ್ರ ಇವೆ. ಆರಂಭದಲ್ಲಿ ೩೪ ನೆಯ ಆಶ್ವಾಸದ ಕಡೆಯ ಭಾಗವಿದೆ. ಅಂತ್ಯದಲ್ಲಿ ೪೨ ನೆಯ ಆಶ್ವಾಸದ ಮಧ್ಯ ಭಾಗವಿದೆ. ಈ ನಡುವೆ ಗ್ರಂಥ ಭಾಗವು ವಿಶೇಷವಾಗಿ ಹೋಗಿದೆ. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಚಂದ್ರಶೇಖರಾಷ್ಟಕ ಮುಂತಾಗಿ ಇನ್ನೂ ಕೆಲವು ಪುಸ್ತಕಗಳಿವೆ. ಆ ಬಗೆಗೆ ೨೭೧ ನೆಯ ನಂಬರನ್ನು ನೋಡುವದು.

ಇದು ಚಂಪೂರೂಪವಾದ ಗ್ರಂಥವು. ೪೨ ಆಶ್ವಾಸಗಳಿವೆ. ವೀರಶೈವ ಮತಾಚಾರ್ಯನಾದ ಬಸವರಾಜನ ಚರಿತ್ರವು ಇದರಲ್ಲಿ ಉಕ್ತವಾಗಿದೆ. ಈ ಚರಿತ್ರವನ್ನು ಮೊದಲು ಪಾಲ್ಕುರಿಕೆ ಸೋಮನಾಥನು ತೆಲುಗಿನಲ್ಲಿಯೂ ಬಳಿಕ ಭೀಮ ಕವಿ ಕನ್ನಡದಲ್ಲಿಯೂ ವರ್ಧಕ ಕಾವ್ಯವಾಗಿ ಬರೆದರು. ತರುವಾಯ ಶಂಕರಕವಿ ಸಂಸ್ಕೃತಕ್ಕೆ ಪರಿವರ್ತಿಸಿದನು. ಅದನ್ನೇ ಕವಿ ಚಂಪೂ ರೂಪವಾಗಿ ಬರೆದಿದ್ದಾನೆ. ಕವಿ ಷಡಕ್ಷರಿ ಯೆಂಬವನು. ಇವನು ರಾಜಶೇಖರ ವಿಳಾಸ ಮುಂತಾದ ಕೆಲವು ಗ್ರಂಥಗಳನ್ನು ಬರೆದಿದ್ದಾನೆ. ಆ ವಿಷಯವಾಗಿ ಹಿಂದಣ ೧೧೩೯ ನೆಯ ನಂಬರನ್ನು ಕರ್ಣಾಟಕ ಕವಿಚರಿತ್ರೆಯನ್ನೂ ನೋಡುವುದು. ಈ ಗ್ರಂಥವು ಬೆಂಗಳೂರು ವೆಂಕಟಾದ್ರಿ ಮುದ್ರಾಕ್ಷರ ಶಾಲೆಯಲ್ಲಿ ಅಚ್ಚಾಗಿದೆ. ಕವಿಯ ಕಾಲವು ೧೬೫೦ ಎಂದು ಕವಿ ಚರಿತ್ರಕಾರರ ಮತವು—

No. 1156. ವೆಂಕಟೇಶ್ವರ ಪ್ರಬಂಧ by ವೆಂಕ-

VEṄKAṬĒŚVARA PRABANDHA BY VEṄKA.

Substance, Palm-leaf. Size, $14\frac{5}{8} \times \frac{5}{8}$ inches. Extent, 325 granthas. Condition, much injured. Appearance, old. Mode of writing, good.

Incomplete.

Written about God Venkaṭēśvara known as kōṭesāya worshipped at kōṭeya beṭṭadapura in Gunḍalapēṭe Taluk in Mysore. The author is Veṅkakavi son of Siṅgaribhatta. He lived in about 1650 A,D,

Beginning :

ಶಾ॥ ಶ್ರೀ ಲಕ್ಷ್ಮೀ ಕುಚಕುಂಭಯುಗ್ಮ ಪರಿರಂಭೋಜ್ಜ್ವಲಂ (ಭ)

ತಾನಂದ . . । ।

. . . . ಕ್ಷಮನೆಯೆನ್ನೊಳ್ಳೂಸಿ

ಮಚ್ಚಿತ್ತದೊ

ಭೂಲೋಕಂ ಪೊಗಳ್ವಂತೆ ನಿಂದು ಮುದಮಂ ಸೌಭಾಗ್ಯ ಸಂಪತ್ತಿಯುಂ ।

. . . . . . ಳಿಗಿತ್ತು ರಕ್ಷಿಪುದು ಕೋಟೀರಾಯ ಭಕ್ತಪ್ರಿಯಂ ॥

ಉ॥ಮಾ॥ ಶ್ರೀಕರ ಕೋಟಿ ಬೆಟ್ಟದ ನಿವಾಸ ರಮಾಧವ ವೆಂಕಟೇಶ್ವರಂ ।
ಲೋಕಮನೆಲ್ಲಮಂ ಸಲಹಿತಾಂ ಬಳಲ್ದಂ ಮನಮೊಲ್ದು ಬಂದುಶೋ
ಭಾಕರ ಮನ್ಮನಃ ಕಮಲದೊಳ್ನೆಲೆಗೊಂಡು ಮನೋರಥಂಗೊಡು ।
ತ್ರೀಕೃತಿವೇಳನುತ್ತೆ ಕೃಪಗೆಯ್ದೊಡೆ ಪೇಳ್ದನಮರ್ಕೆಗೊಳ್ವನಂ ।

* * * *

ಮಿ॥ಮಾ॥ ಭೂನುತ ಕಾಳಿದಾಸಕ . . . . ಪದ್ಯಕಾವ್ಯ

[ಸಂ] (ಪಂ)

ಥಾನ ಕವೀಂದ್ರರಂ ಸ್ಮರಿಸಿ ಧರ್ಮಪುರಾಣ ಸುವೇದ ಶಾಸ್ತ್ರ . . . ॥
(ಧ್ಯೀ) (ದಾ) ನಿಧಿಗಳ್ಗೆ ಮೇಣ್ನಮಿಸಿ ಸದ್ಗುರುಪಾದ . . . . ।
ಧ್ಯಾನಿಸಿ ಕೋಟಿರಾಯ ನಿರುತಿರ್ಪ ಗಿರೀಂದ್ರಮನೆಯ್ದೆ ಬಣ್ಣಿಪೆಂ ॥

ಶಾ॥ ಶ್ರೀ ಮತ್ಸಿಂಗರಿ ಭಟ್ಟ ಭಾರ್ಯ . . . . . ಶೋದ್ಭವಂ ।
ಧೀಮಂತಂ ಕವಿ ವೆಂಕನಾತನ ವಚಃ ಪ್ರೌಢಿ ಪ್ರಭಾವಂ ಮಹಾ ।
ಭೂಮಿಭೃತ್ಸಭೆಯಲ್ಲಿ ನೂತ್ನ ಕವಿತಾ ವಿಖ್ಯಾತಿ ವಿದ್ವಾಂಸರಿಂ ।
ಮಾಮಾಸ್ತೋತ್ರತೆವೆತ್ತು ಲೋಕದೆ ನೆಗಳ್ದತ್ತು ಸುಧಾಧಾರೆವೋಲ್ ॥

ಮ॥ವಿ॥ ಸುರಪಾಲಂ ದಮುನಂ ಯಮಂ ನಿರುತಿ ವಾರ್ಧೀಶಂ ಜಗತ್ಪ್ರಾಣನೀ ।
ಶ್ವರಮಿತ್ರಂ ರಜಕಾದ್ರಿವಾಸನೆಜನಾದಿತ್ಯರ್ ಮಹಾನಂದದಿಂ ॥
ಪರಿತಂದೊಪ್ಪುವ ಕೋಟಿ ಬೆಟ್ಟದೊಳ್ ಲಕ್ಷ್ಮೀಯುಕ್ತನಾಗಿಲ್ಲ ನೀ ।
ವಿರುತಿರ್ಪಂದಮೆ ಚೆಂದಮೆಂದು ಪೊಗಳ್ದರ್ ಶ್ರೀ ಕೋಟಿಯಾರಾಯನಂ ॥

ವರಮಂ ಬೇಡಿದವರ್ಗೆ ಭಾಗ್ಯವನೆ ಭಕ್ತರ್ಗೀಪ್ಸಿತಾರ್ಥಂಗಳಂ ।
ಚರಣಾಬ್ಜದ್ವಯ ಸೇವಕರ್ಗೆ ಶುಭಮಂ ಕೊಂಡಾಡುವರ್ಗೈಕ್ಯಮಂ ॥
ಪರಮಜ್ಞಾನ ಋಷೀಶ್ವರರ್ಗೆ ಘನಸಂಪತ್ತಂ ಜನರ್ಗಿಟ್ಟಿರಿಂ ।
ಹರಿ ತಾಂ ಕೋಟಿಯ ಬೆಟ್ಟದಲ್ಲಿ ಕೊಡುತಿರ್ದಂ ಕೋಂಟಿರಾಯಾಖ್ಯದಿಂ ॥

ಶ್ರೀ ಲಕ್ಷ್ಮೀಪತಿ ವಕ್ಷದಲ್ಲಿರೆ ಗದಾಖಡ್ಗಾಬ್ಜ ಚಕ್ರಂಗಳಂ ।
ಮೇಲಾದಾ ಸುಕರಂಗಳೊಳ್ಕೊಳಗೆ ಕಂಠಸ್ಥಾನದೊಳ್ಕಾಸ್ತುಭಂ ॥
ಬಾಲಾರ್ಕ ದ್ಯುತಿಯಂತೆ ದೀಪ್ತಿಸುತಿರಲ್ ಪೀತಾಂಬರಂ ಪೊದ್ದುನ ।
ಶ್ರೀಲಾರ್ಥಂ ಹರಿ ಕೋಟಿ ಬೆಟ್ಟದೊಳ್ ನಿಂದಂ ಕೋಟಿ ರಾಯಾಖ್ಯದಿಂ ॥

Colophon :

ಇದು ಸಕಲ ಸುರ ನಿಕರ ಮಕುಟ ಘಟಿತ ಮಣಿಗಣ ಕಿರಣ ಪಟಲ ದೀಪಿತ ಚರಣ ಕಮಲ ಲಕ್ಷ್ಮೀ ವಲ್ಲಭ ಪಾದ ಭಕ್ತಿ ಯುಕ್ತ ಸುಕವಿ ವೆಂಕ ರಚಿತ ವೆಂಕಟೇಶ ಪ್ರಬಂಧದೊಳ್ ಶೈಲ ವರ್ಣನಂ ಸರ್ವದೇವತಾಗಮನ ಋಷಿ ವರ್ಣನಂ ಸಮಾಪ್ತಂ ॥

*　　*　　*　　*

ಕಂ॥　ಶ್ರೀಕರ ಕರಾಕರೋದ್ಯ ॥
ತ್ಪ್ರಾಕಾರ ಪವಿತ್ರವಾಗಿ ರಂಜಿಸುತಿರ್ದೀ ।
ಶ್ರೀ ಕೋಟೆಯ ಬೆಟ್ಟದ ಪುರ ।
ದಾಕೃತಿ ಚೆಲ್ವಿಂದೆ ಕಣ್ಗೆ ಶೋಭಿಸುತಿರ್ಕುಂ ॥

End :

ಮ॥ವಿ॥　ಸ್ಫುರಿಸುತ್ತೊಪ್ಪುವ ಚಂದ್ರಕಾಂತಮಣಿ ಸೋಪಾನಂಗಳಾ ಕಾಂತಿಯಂ ।
ಬರಮಂ ಮುಟ್ಟಿರೆ ರಂಜಿಕುಂ ಸಕಲ ಲೋಕಕ್ಕಾನೆ ಮಾವೀರನೆಂ ।
ದಿರದಾರ್ದಂಗಜನೊಲ್ದು ನೆಟ್ಟ ಘನಕೀರ್ತಿ ಸ್ತಂಭವೆಂಬಂತೆವೋಲ್ ।

(ವಿ-ವಿ.)—

ಅಸಮಗ್ರ. ಒಂದೆಡೆ ಮಾತ್ರ ಆಶ್ವಾಸಾಂತ್ಯಗದ್ಯವಿದೆ. ಅತ್ಯಂತ ಶಿಥಿಲವಾಗಿದೆ. ಶುದ್ಧವಾದ ಪ್ರತಿ. ಲಿಪಿ ಚೆನ್ನಾಗಿದೆ. ನಡುವೆ ಕೆಲವು ಓಲೆಗಳು ಮುರಿದು ಹೋಗಿವೆ. ಮುಂದೆ ವರ್ಣಿತವಾಗಿರುವ ಪ್ರತಿಯು ಇದರ ಪ್ರತಿಕೆಯಾಗಿದೆ.

ಇದು ಚಂಪೂರೂಪವಾಗಿದೆ. ಗದ್ಯಭಾಗವು ಬಹಳ ಕಡಿಮೆ. ಕೋಟೆಯ ಬೆಟ್ಟದ ಪುರದಲ್ಲಿ ಕೋಟಿರಾಯನಾಖ್ಯದಿಂದ ನೆಲಸಿರುವ ವೆಂಕಟೇಶ್ವರ ಸ್ವಾಮಿಯ ವಿಷಯವಾದ ಗ್ರಂಥವು. ಮೈಸೂರು ದೇಶದ ಗುಂಡ್ಲುಪೇಟೆ ತಾಲೂಕಿನಲ್ಲಿರುವ ಹಿಮವದ್ಗೋಪಾಲಸ್ವಾಮಿ ಬೆಟ್ಟದ ಪ್ರಾಂತಕ್ಕೆ ಬೆಟ್ಟದ ಕೋಟೆಯೆಂದು ಪೂರ್ವದ ಹೆಸರು ಎಂದು ಕವಿಚರಿತೆಯಲ್ಲಿ ಬರೆದಿದೆ.

ಕವಿ ವೆಂಕನೆಂಬವನು. ಬ್ರಾಹ್ಮಣನು. ತಂದೆ ಸಿಂಗರಿ ಭಟ್ಟನೆಂಬವನಾಗಿರಬಹುದು. ಕವಿಯ ಕಾಲವು ಸು. ೧೬೫೦ ಎಂದು ಕವಿ ಚರಿತ್ರಕಾರರ ಮತವು. ಉಳಿದ ವಿಷಯಗಳನ್ನು ಉದಾಹೃತ ಭಾಗಗಳಿಂದ ತಿಳಿಯುವುದು.

No. 1157. ವೆಂಕಟೇಶ್ವರ ಪ್ರಬಂಧ by ವೆಂಕ-
VENKATĪŚVARA PRABANDHA BY VEṄKA.

Substance, Paper. Size, 10 9/16 × 9⅛ inches. Pages, 23. Lines, 20 on a page. Character, Kannada. Extent, 325 granthas. Condition, good. Appearance, new.

Restored in 1915–16 from the Ms. above described.

Incomplete.

Same work as that described above.

(ವಿ-ವಿ.)—

ಅಸಮಗ್ರ. ಇದು ಹಿಂದೆ ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ. ಕಾಗದದ ಪ್ರತಿ.

No. 1158. ವೈಭೋಗ ರಾಜಾಸ್ಥಾನ by ಪ್ರಭುಗ-
VAIBHŌGA RĀJĀSTHĀNA BY PRABHUGA.

Substance, Palm-leaf. Size, 14¾ × 1 7/16 inches. Pages, 66. Lines, 6 or 7 on a page. Character, Kannada. Extent, 700 granthas. Condition, very much injured. Appearance, old. Mode of writing, fair.

Begins on fol. 38b of the manuscript described under No. 663 ante.

Complete.

Describes the Court of Śiva worshipped as Vaibhōgarāja. The author is Prabhuga. His date is about 1520 A.D.

Beginning :

ಶಾ॥ ಶ್ರೀರಾಮಾಪರ ಶಾರದಾಪತಿ ಶಚೀಕಾಂತಾದಿ ದೇವೌಘ ಕೋ
ಟೀರಾರಾಜಿತ ನೂತ್ನರತ್ನ ಸುಭಗ ಸ್ವಚ್ಛಂದ ಗಚ್ಛಪ್ರಭಾ ॥
ಧಾರಾವಾಹಿ ತರಂಗಿಣೀ ತಟಿಲಸತ್ಪಾದಾರವಿಂದ ದ್ವಯಂ ।
ಸಾರತ್ವಂ ಗುಡುಗೆನ್ನ ಕಾವ್ಯದೊಳವಿಂ ವೈಭೋಗ ರಾಯಂ ಶಿವಂ ॥

End :

ಚಂ॥ ರಸದ ಪೊಡರ್ಪುಗ ವೈಸಿರಿಯು ಸೇರ್ಪುಗಳತೆ ವೈಮೆಯುತೋರ್ಪು ಶಾಸ್ತ್ರದೊಂ ।
ದೆಸಕದ ಸೊಂಪು ಭಾವತತಿಯಿಂಪು ವಿರಾಜಿಪ ಪೆಂಪುಕೀರ್ತಿಯು ।
ಪ್ರಸರದ ಗಾಡಿ ಜಾಣ್ಣುಡಿಯು ಮೋಡಿ ಕವಿತ್ವದ ರೂಢಿಯಾಗಳೊಂ ।
ದೆಸೆವುವು ಸತ್ಕವಿ ಪ್ರಭುಗ ನಲ್ಲನೆ ತಜ್ಞರೆ ಪೇಳಿದ್ದನಿಂತಿದಂ ॥
ಈ ಕೃತಿಯಂ ಸಮಂತೊಸೆದು ಕೇಳ್ವ ಜನಾಳಿಗೆ ಬೊಮ್ಮನಾಯುವಂ ।
ಶ್ರೀಕಮಲಾಕ್ಷ ನೈಶ್ವರ್ಯ (ಶ್ವರಿಯ) ದೇಳ್ಗೆಯನೋದಿದ ಮಾನವರ್ಗೆ ತಾಂ ।
ಲೋಕಪತಿತ್ವಮಂ ನೆಱೆಯಲರ್ಥ ಸಮರ್ಥನ ಕೋವಿದರ್ಗೆಯು ।
ಸ್ತೋಕದಿ ನೀವುತಿರ್ಪ ನರುಣಾದ್ರಿಯನನಂತನಟ್ಟಿರಿಂ ॥

Colophon :

ವೈಭೋಗ ರಾಜಾಸ್ಥಾನಂ ಸಂಪೂರ್ಣಂ.

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳಿವೆ. ಅವನ್ನು ಹಿಂದಣ ೬೬೩ ನೆಯ ನಂಬರಿನಲ್ಲಿ ನೋಡಿ ತಿಳಿಯುವುದು.

ಇದು ಚಂಪೂ ರೂಪವಾಗಿದೆ. ೧೦೧ ಪದ್ಯಗಳಿವೆ. ವೈಭೋಗರಾಜ ಎಂಬ ಹೆಸರುಳ್ಳ ಈಶ್ವರನ ಆಸ್ಥಾನ ವರ್ಣನೆಯು ಇದರಲ್ಲಿ ಉಕ್ತವಾಗಿದೆ. ಕವಿ ಪ್ರಭುಗನೆಂಬವನು. ಹಿಂದೆ ವರ್ಣಿತವಾಗಿರುವ ಚೂಡನಾಸ್ಥಾನವೆಂಬ ಗ್ರಂಥವು ಏತತ್ಕೃತವಾಗಿರುವದು. ಕವಿಯ ಕಾಲ ೧೫೨೦ ಎಂದು ಕವಿಚರಿತ್ರಕಾರರು ಬರೆದಿರುತ್ತಾರೆ.

No. 1159. ವೈಭೋಗ ರಾಜಾಸ್ಥಾನ by ಪ್ರಭುಗ-
VAIBHŌGARĀJĀSTHĀNA BY PRABHUGA.

Substance, Paper. Size, 10½ × 9½ inches. Pages, 43. Lines, 20 on a page. Character, Kannada. Extent, 700 granthas. Condition, good. Appearance, new.

Restored in 1918–19 from the Ms. described above.

Begins on page 45 of the Ms. described under No. 664 ante.

Complete.

Same work as that described above.

(ವಿ-ವಿ.)—

ಸಮಗ್ರ. ಕಾಗದದ ಪ್ರತಿ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಕೃತಿಯಾಗಿದೆ. ಇದರೊಡನೆ ಚೂಡನಾ ಸ್ಥಾನ, ವಿರೂಪಾಕ್ಷಾಸ್ಥಾನ, ಅಮರುಕ, ಶಾರದಾ ಗದ್ಯ ಇವೂ ಇವೆ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1160. ವೈಭೋಗ ರಾಜಸ್ಥಾನ by ಪ್ರಭುಗ-
VAIBHŌGARĀJĀSTHĀNA BY PRABHUGA.

Substance, Paper. Size, 10 7/16 × 9 7/16 inches. Pages, 13. Lines, 20 on a page. Character, Kannada. Condition, good. Mode of writing, fair.

Restored in 1916–17 from the Ms. described above.

Begins on page 1, part 2. The other works herein are :—(1) *Allama prabhusaṅgīta.* Page 1, Part 1. (2) *Immaḍi Timmarāya-Kemparāyara-*padagalu. Page 4. Part 1. (3) Banavasiya Kaifieth and *Baṇṇayya-*kulada kaifieth, etc. Page 1. Part 3.

Incomplete.

Contains stanzas 1–37 only.

(ವಿ-ವಿ.)—

ಅಸಮಗ್ರ. ೩೭ ಪದ್ಯಗಳಿವೆ. ಕಾಗದದ ಪ್ರತಿ. ಲಿಪಿ ಸಾಮಾನ್ಯ ಚೆನ್ನಾಗಿದೆ. ಇದು ಹಿಂದೆ ವರ್ಣಿತವಾಗಿರುವ (ಸಮಗ್ರ ಪ್ರತಿಯ) ಪ್ರತಿಕೃತಿಯಾಗಿದೆ. (ಪೂರ್ಣವಾಗಿ ಪ್ರತಿ ತೆಗೆದಿಲ್ಲ.)

ಈ ಪುಸ್ತಕದಲ್ಲಿ ಮೂರು ಭಾಗಗಳಿವೆ. ಅವುಗಳಲ್ಲಿ ವೈಭೋಗರಾಜಾಸ್ಥಾನವು ಎರಡನೆಯ ಭಾಗ. ಒಂದನೆಯ ಭಾಗದಲ್ಲಿ ಅಲ್ಲಮಪ್ರಭು ಸಂಗೀತ ಮತ್ತು ಇಮ್ಮಡಿ ತಿಮ್ಮರಾಯ ಕೆಂಪರಾಯರ ಪದಗಳೂ ಮೂರನೆಯದರಲ್ಲಿ ಬನವಾಸಿ ಕೈಫಿಯತ್ತು ಮತ್ತು ಚೆನ್ನಯ್ಯ ಕುಲದ ಕೈಫಿಯತ್ತು ಮುಂತಾದುವೂ ಇವೆ. ಮೂರು ಭಾಗಗಳಲ್ಲಿ ಕ್ರಮವಾಗಿ ೨೩, ೧೩, ೭೧ ಪುಟಗಳಿವೆ. ಒಟ್ಟು ಪುಟಗಳು ೧೦೭.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1161. ವೈಭೋಗ ರಾಜಸ್ಥಾನ by ಪ್ರಭುಗ-
VAIBHŌGARĀJĀSTHĀNA BY PRABHUGA.

Substance, Palm-leaf. Size, 11 7/16 × 1 1/16 inches. Pages, 98. Lines, 5 on a page. Character, Kannada. Condition, much injured. Appearance, old.

Begins on fol. 1a of the manuscript described under No. 1131 ante.

Wants some foll. in the beginning ; otherwise complete.

Same work as that described above.

ಆದಿ ಭಾಗವಿಲ್ಲ. ಅತ್ಯಂತ ಶಿಥಿಲವಾದ ಪ್ರತಿ. ಇದರೊಡನೆ ಜೊಡನಾಸ್ಥಾನವಿದೆ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1162. ಶಿವಲಿಂಗ ಚಾರಿತ್ರ by ಶಾಂತವೀರ- ŚIVALIṄGA CĀRITRA BY ŚĀNTAVĪRA.

Substance, Palm-leaf. Size, 9⅞ × 1⅜ inches. Pages, 46. Lines, 6 and 7 on a page. Extent, 360 granthas. Character, Kannada. Condition, much injured. Appearance, old. Mode of writing, not good.

Begins on fol. 1a of the Ms. described under No. 755 ante.

Complete.

A campu work in three adhyāyas describing the life of Śivaliṅgārya or Śivaliṅgācārya, a descendent of Paṇḍitārādhya. The author is Śāntavīra or Śāntavīradēśika. He was a vīraśaiva by religion, and lived in about 1650 A.D. For details see extract below.

Beginning :

ಶಾ॥ ಶ್ರೀಮಚ್ಛಂಕರ ಕಾರಣಾತ್ಮಕ ಕವೀಶಾನಂದ ಕಾವ್ಯಪ್ರದಂ ।
ಸೋಮ ಬ್ರೇಮ ಸಮಸ್ತದೇವ ಜನಕಂ ಶೈಲೇಂದ್ರಜಾ ವಲ್ಲಭಂ ॥
ಆ ಮರ್ತ್ಯಾಧಿಪನಾತ್ಮಜ ಸ್ತುತಿಯುತಂ ಐಶ್ವರ್ಯಸನ್ಮಂದಿರಂ ।
[ನೀ](ತಾಂ) ಮಾಟ್ಕೆಕೃತಿಗಿಷ್ಟ ಸಿದ್ಧಿಯ ನಿಜಂ ಶ್ರೀ ಶಾಂತವೀರೇಶ್ವ
[ರಾ] (ರಂ) ॥ ೧ ॥

* * * *

ಮ॥ ವಿ॥ ವರವೀರೇಶ ಗಣೇಶ ಷಣ್ಮುಖ ಸದಾ ನಂದೀಶ ಭೃಂಗೀಶ ಸು ।
ಸ್ತರ ಮಾಚಯ್ಯ ಮಹಾತ್ಮ ಶ್ರೀ ಬಸವರಾಜಂ ಭಕ್ತಿಸಂಪನ್ನ ಕಿಂ ।
ನರ ಬೊಮಯ್ಯ ಶಿವೈಕ್ಯ ಚೆನ್ನಬಸವಂ ಮುಂತಾದರಂ ಕೀರ್ತಿಸು ।
ತ್ತಿರ[ದೆ] (ದಾಂ) ಪೇಳುವೆನೀ ಪ್ರಬಂಧಮನಿದಂ ಸದ್ಭಕ್ತರಾಕರ್ಣಿಸಲ್ ॥ ೨ ॥

ದೋಧಕ ವೃತ್ತ ॥

ರಾಘವ ಹಂಪೆಯ ಶ್ರೀಹರಿ ದೇವಂ ।
ಆ ಗುರು ಗುಬ್ಬಿಯ ಮಲ್ಲ ಮಹೇಶಂ ।
ಜೀಗುವ ಮಲ್ಲಣ ಮುಖ್ಯ ಕವೀಂದ್ರರ್ ।
ಯೊಗೆನಗೀವುದು ಮಂಗಳ ಮತಿಯಂ ॥ ೪ ॥

ಶಾ॥ ಆನಂದಾಗಮ ವೇದ ಶಂಕರ ಪುರಾಣಾರ್ಥಜ್ಞ ಸತ್ಶ್ರೋತ್ರವಿದಂ ।
ನಾನಾಕಾವ್ಯ ವಿಚಾರಪೂರ ಕವಿತಾ ಕರ್ಣಾಟ ಚಕ್ರೇಶ್ವರಂ ॥

ಗಾನ ಪ್ರಿಯ ಗಭೀರ ವಾರ್ಧಿಗುರುವಂಶೋದ್ಧಾರ ಚೆನ್ನಾರ್ಯಕಂ ॥
ನಾನೀ ಕಾವ್ಯವನಟಿಸ್ತಿಯಿಂದೊರೆವೆ ಕೇಳ್ ನಿಮ್ಮಂಪ್ರಿ ಕಾರುಣ್ಯದೊಳ್ ॥ ೬ ॥

* * * *

ಮ॥ ವಿ॥ ಕೃತಿನಾಮಂ ಶಿವಲಿಂಗ ದೇವರ ಮಹಾ ಸತ್ಪುಣ್ಯಚಾರಿತ್ರ ಮಿೂ ।
ಕೃತಿಕರ್ತಂ ಕುಜನಾಪಹಾರ ಮುಹಿ[ಮಾ] (ಮಂ) ಶ್ರೀ ಶಾಂತವೀರೇಶನೀ
ಕೃತಿಯಾಕರ್ಣಿಸುತುತ್ಸವಂ ಬಡೆವರೊಲ್ದೀ ಶಾರ್ಚಕರ್ಮತ್ತ ಮಿೂ
ಕೃತಿಯಂ ಪೇಟಿದ ಶಾಂತವೀರ ಕವಿತಾ ಕಾರುಣ್ಯ ರತ್ನಾಕರಂ ॥ ೯ ॥

* * * *

ಉ॥ ಮಾ॥ ಈ ಪರಿ ಶಿಷ್ಯರಲ್ಲಿ ನಿಜಪೂಜೆಯನೆಲ್ಲಿಡೆ ಕೆಯ್ಕೊಳುತ್ತ ತ ।
ಮ್ಮಾ ಪುರಿಗೆಯ್ದಿ ಬಂದು ಬಹು ಸಂತಸ ಕೆಯ್ಮಿಗೆ ವೀರಣಾರ್ಯನೆಂ ॥
ಬಾ ಪರಿಣಾಮಿಯಪ್ಪ ಸುತಗಂ ಗುರುಪಟ್ಟವನೊಲ್ದು ಕಟ್ಟಿ ತಾ ।
ರಾಪತಿ ಮಾಟನೊರ್ಗ್ ನಡೆದೊಪ್ಪಿದನಂದು ಪುರಾಣದಾಹ್ವಯಂ ॥ ೪೪ ॥

Colophon :

ಇತಿ ಶ್ರೀ ಪಂಡಿತಾರಾಧ್ಯ ವಂಶೋದ್ಭೂತನಪ್ಪ ಶಿವಲಿಂಗಾಚಾರ್ಯ ಚಾರಿತ್ರದೊಳ್ ಪ್ರಥಮಾಧ್ಯಾಯ ಪೀಠಿಕಾ ವಿವರಣಂ ಸಂಪೂರ್ಣಂ—

End :

ಕಂ॥ ಈ ಪರಿ ಗಣರಿಗೆ ತೋಱಿದ ।
ಯಾಪರ ಕೊಂಡಾಡಿ ಕೊನರುತಾ ಚೆನ್ನಾರ್ಯಂ ॥
ಗಾ ಪರಿಣಾಮದೊಳತ್ತನು ।
ಮಾಪತಿ ಸಾಯುಜ್ಯ ಪದವ ನೇಪಣ್ಣಿಸುವೆಂ ॥ ೩೧ ॥

ಶಾ॥ ಚಂದ್ರಾದಿತ್ಯ ಸಮಿೂರ ಬಾಂಧವ ಸದಾ ತ್ರ್ಯನೇತ್ರನೊಲ್ದೊಪ್ಪಿದಂ ।
ಇಂದ್ರೋಪೇಂದ್ರ ವಿರಿಂಚಿ ಪೂಜಿತ ಪದಾಂಭೋಜಾತತಾನೊಪ್ಪಿದಂ ।
ಕಂದರ್ಪಾಚಲ ವಜ್ರದಂಡ ಗಿರಿಜಾ ವಾಮಾಂಗನೆಂದೊಪ್ಪಿದಂ ।
ಸೌಂದರ್ಯಂ ಮಿಗಿಲೊಪ್ಪಿದಂ ಸರಸದಿಂದಾ ಶಾಂತವೀರೇಶ್ವರಂ ॥ ೩೨ ॥

ಕಂ॥ ಈ ಶಿವಲಿಂಗ ಚರಿತ್ರವು ।
ಬೇಸರಿಸದೆ ಯೋದಿ ಕೇಳಲಾ ಭಕ್ತರ್ಗಂ ॥
ಐಶ್ವರ್ಯ ಮಿತ್ತು ಪೊರೆವ ಸ ।
ದಾಶಿವ ಗುರುಶಾಂತವೀರಲಿಂಗ ದಯಾಂಗಂ ॥ ೩೩ ॥

Colophon :

ಅಂತು ತೃತೀಯಾಧ್ಯಾಯ ಸಹಪದನು ೧೦೪ ಕ್ಕಂ ಶಿವಲಿಂಗ ಚಾರಿತ್ರಂ ಸಂಪೂರ್ಣಂ ॥
ಮಂಗಳ ಮಹಾ ಶ್ರೀ ॥

(ವಿ-ವಿ.)—

ಸಮಗ್ರ. ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ. ಇದರೊಡನೆ ಬಸವ ಪವಾಡದ ರಗಳೆ, ಹಾಡುಗಳು ಇವೂ ಇವೆ.

ಇದು ಚಂಪೂ ರೂಪವಾಗಿದೆ. ಅಧ್ಯಾಯ ೩, ಪದ್ಯಗಳು ೧೨೪. ಇದರಲ್ಲಿ ಪಂಡಿತಾರಾಧ್ಯ ವಂಶೋದ್ಭವನಾದ ಶಿವಲಿಂಗಾರ್ಯನ ಅಥವಾ ಶಿವಲಿಂಗಾಚಾರ್ಯನ ಚರಿತ್ರವು ಉಕ್ತವಾಗಿದೆ.

ಕವಿ ಶಾಂತವೀರ ಅಥವಾ ಶಾಂತವೀರ ದೇಶಿಕನೆಂಬವನು. ವೀರಶೈವ ಮತದವನು. ಇವನ ತಂದೆ ಚೆನ್ನಾರ್ಯ, ತಾತ ವೀರಣಾರ್ಯ, ಮುತ್ತಾತ ಶಿವಲಿಂಗಾರ್ಯ. ಕವಿಚರಿತ್ರೆಯಲ್ಲಿ ಇವರ ವಿಷಯವಾಗಿ ಈ ಗ್ರಂಥದಿಂದ ಸಂಗ್ರಹಿಸಿ ಹೀಗೆ ಬರೆದಿದೆ.—

ಶಿವಲಿಂಗಾರ್ಯ. ಇವನು ಕವಿಯ ಪ್ರಪಿತಾಮಹನು. ಇವನ ಸ್ಥಳ ಬೆನುಗೊಂಡೆಯ ದೇಶದ ಅಪ್ಪೆಯಕೆರೆ. ಇವನ ಮಗ ವೀರಣಾರಾಧ್ಯನು. ಪದಿನಾಡ ಶಿವಪೂಜೆಯ ನೃಪನಿಂದಲೂ ಬೆಂಗಳೂರು ಕೆಂಪೆಗೌಡನಿಂದಲೂ ಮರ್ಯಾದೆಯನ್ನು ಹೊಂದಿದನು. ಇವನ ಮಗ ಚೆನ್ನವೀರಾರ್ಯನು. ಮೈಸೂರು ರಾಜಮಹೇಂದ್ರನಿಂದ ಪೂಜಿತನಾಗಿ ಹುಲ್ಲಹಳ್ಳಿಯ ಬಸವರಾಜನ ಮಗನಾದ ವೀರನಿಂದಲೂ ಹುಣಿಸನಹಾಳು ನಂಜರಾಜನಿಂದಲೂ ಸನ್ಮಾನಿತನಾಗಿದ್ದನು. ಕೊಡಸಾಲತ್ತೂರಲ್ಲಿ ಒಂದು ಮಠವನ್ನು ಕಟ್ಟಿಸಿದನು. ಕವಿಯ ಕಾಲವು ಸುಮಾರು ೧೬೫೦ ಎಂದು ಕವಿಚರಿತ್ರಕಾರರ ಮತವು. ಇವನು "ಶಿವಗಣ ಚಾರಿತ್ರ." ಎಂಬ ಇನ್ನೊಂದು ಪುಸ್ತಕವನ್ನು ಬರೆದಿದ್ದಾನೆ. ಅದು ಹಿಂದೆ ೪೦೩ನೆಯ ನಂಬರಿನಲ್ಲಿ ವರ್ಣಿತವಾಗಿದೆ. ಉಳಿದ ವಿಷಯಗಳನ್ನು ಉದಾಹೃತ ಭಾಗಗಳಿಂದಲೂ ಕವಿ ಚರಿತ್ರೆಯಿಂದಲೂ ತಿಳಿಯುವುದು.

No. 1163. ಸರಜಾ ಹನುಮೇಂದ್ರ ಚರಿತ್ರ by ಕೃಷ್ಣಶರ್ಮ.
SARAJĀ HANUMĒNDRA CARITRE BY KRṢṆA ŚARMA.

Substance, Paper. Size, 12¼ × 8 inches. Pages, 66. Lines, 32 on a page. Extent, 1,250 granthas. Character, Kannada. Condition, slightly injured. Appearance, old. Mode of writing, not good.

Complete in 5 Asvāśas.

Gives an account of Sarajā hanumēndra who was the son of Sītārāma and the chief of Tarikere. The author is Kṛṣṇa śarma who lived in 1700 A.D.

Beginning :

ಸರಜಾ ಹನುಮೇಂದ್ರನ ಚರಿತೆ.

ಪದ್ಮವೃತ್ತ॥ ಶ್ರೀರತಿ ಸರಸ್ವತೀ ಪಾದಪೂಜ್ಯೆ ।
ಮೂರು ಭುವನಂಗಳ ಕರ್ತೆ ಕೋಟಿ ॥
ಸೂರ್ಯ ಸಮಾನ ಪ್ರಕಾಶೆ ಗೌರಿ ।
ಆರು ಮೊಗನವ್ವೆ ಶ್ರೀ ವಾಣಿ ವಂದೇ ॥ (?)

ಭಾಮಿನಿ॥ ಶ್ರೀರಮಣ ಸರಸಿಜದಳಾಕ್ಷ ಸು ।
ಮೇರು ಚಾಪನ ಗೆಣೆಯ ವರಬ್ರಂ ।
ದಾರಕಾದಿ ಕಿರೀಟ ಸೇವಿತ ಪಾದಪದ್ಮಯುಗ ।

ಭೂರಿ ದನುಜಾಂತಕ ದಶರಥಜು ।
ಮಾರ ಮಾರಜನಕ ವಿಜೃಂಭಿಪ ।
ಕ್ಷೀರ ವಾರಧಿ ಶಯನ ಭಕ್ತರ ಸಲಹು ಕೃಪೆಯಿಂದ ॥ ೨ ॥

End :

ಸಾಂಗತ್ಯ॥ ದೊರೆಗಳ್ಗೆ ಶೂರತ್ವ ದ್ವಿಜರಿಗೆ ತೋರ್ಕುಂ ।
ನಿರುತದಿ ತತ್ವಮಯವು ।
ವಿರಹಿಗೆ ಶೃಂಗಾರ ಮೀನಾಕ್ಷಿ ಭಕ್ತನು ।
ವಿರಚಿಸಿದಾ ಕಾವ್ಯಸಾರ ॥ ೪೯ ॥

ಇದು ಮಧುರಾ ಸೋಮ ಸುಂದರನ ರಾಣಿಯ ।
ಪದ ಕಮಲದ ದಯೆಯಿಂದ ।
ಮುದದಲಿ ಪೇಳದೆ ಪೂರ್ವಲ ವಂಶಜ ।
ಚದುರ ಹನುಮನ ಕೃತಿಯು ॥ ೫೦ ॥

ಗದ್ಯ॥ ಇತಿ ಶ್ರೀ ಕದಂಬ ಪನ ವಾಸಿನೀ ಮೀನಾಕ್ಷೀ ಚರಣ ಕೋಕನದ ಮಕರಂದಾಸಕ್ತ ಭ್ರಮರ ಭರದ್ವಾಜ ಗೋತ್ರೋದ್ಭವ ಯಜುಶ್ಶಾಖಾಧ್ಯಾಯಿ ಮಹಿಶೂರ ರಾಡ್ಗೇಹ ದ್ವಾರಾಧ್ಯಕ್ಷ ಅಚ್ಚಿವಂಗ್ಯಪುರಂ ಕಾರ್ಯಖಡ್ಗ ಕವಿತ್ವ ಕರಣಿಕ ಕಕಾರ ಚತುರ್ವಿಧ ಕ್ರಮಾಚಾರ್ಯಧುರ್ಯ ಅಪ್ಪಾಜಿ ಪದಾಂಕ ನಪ್ಪಾಜಿ ಪೌತ್ರ ರಸಿಕ ಪಕ್ತಿ ತಿಮ್ಮಾರ್ಯ ಪುತ್ರ ತಿರುಮಲಾಂಬೆಯ ಬೆರ್ಗವರ ಸಲ್ಲಕ್ಷಣ ಸಂಪನ್ನ ಕುಕವಿ [ನಿರ್ದೇರು] (ನೀರದ) ಪ್ರಚಂಡ ಜಂಝಾ ಮಾರುತನಾ ಕುಕವಿ ಕೃಷ್ಣಶರ್ಮಂ ಶ್ರೀ ಸೂರ್ಯ ಕುಲೋತ್ತುಂಗ ಸೀತಾರಾಮ ಗರ್ಭಾಬ್ಧಿ ಚಂದ್ರ ಗಂಗಾವಧೂವಲ್ಲಭ ಹನುಮೇಂದ್ರ ಯಶೋವಿಲಾಸಮಂ ಪೇಳ್ಕೆಯೊಟಿಪ್ಪೆಯಿದ ಕಬ್ಬದೊಳ್ ರಾಜ್ಯ ಪರಿಪಾಲನ ಪ್ರಘಟಿಕೆಯೆಂಬ ಪಂಚಮಾಶ್ವಾಸಂ ಸಂಪೂರ್ಣಂ.

(ವಿ.ವಿ.)—

ಸಮಗ್ರ. ಕಾಗದ ಪ್ರತಿ. ಲಿಪಿ ಅಷ್ಟು ಚೆನ್ನಾಗಿಲ್ಲ. ಪುಸ್ತಕದ ಕೊನೆಯಲ್ಲಿ ಪ್ರತಿ ಮಾಡಿದವನು "ತರೀಕೆರೆ" ಎಂದು ಬರೆದು ಅದರ ಕೆಳಗೆ 24-3-'96 ಎಂದು ಬರವಣಿಗೆಯು ಮುಗಿದ ದಿನವನ್ನು ಕೊಟ್ಟಿರುವನು. ಮುಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯು ಇದರ ಪುತ್ರಿಕೆಯು.

ಇದು ಚಂಪೂರೂಪನಾಗಿದೆ. ಆಶ್ವಾಸಗಳು ೫. ಅಲ್ಲಲ್ಲಿ ಸಾಂಗತ್ಯ ಷಟ್ಪದಿಗಳೂ ಇವೆ. ಇದರಲ್ಲಿ ಸೂರ್ಯ ಕುಲೋದ್ಭವನಾದ ಸೀತಾರಾಮನ ಮಗ "ತರೀಕೆರೆ" ಪ್ರಭು ಸರಜಾ ಹನುಮೇಂದ್ರನ ಚರಿತ್ರೆ ಉಕ್ತವಾಗಿದೆ. ಕವಿ ಕೃಷ್ಣಶರ್ಮನೆಂಬವನು. ಉಳಿದ ವಿಷಯ ಗಳನ್ನು ಉದಾಹೃತ ಭಾಗದಿಂದಲೂ ಕವಿ ಚರಿತ್ರೆಯಿಂದಲೂ ತಿಳಿಯುವುದು. ಕವಿಯ ಕಾಲವು ಸು. ೧೭೦೦ ಎಂದು ಕವಿ ಚರಿತ್ರಕಾರರ ಅಭಿಪ್ರಾಯವು.

No. 1164. ಸರಜಾ ಹನುಮೇಂದ್ರ ಚರಿತ್ರ by ಕೃಷ್ಣ ಶರ್ಮ- SARAJĀHANUMĒNDRA CARITRE BY KṚṢṆA ŚARMA.

Substance, Paper. Size, 10 7/16 × 9 7/16 inches. Pages, 113. Lines, 20 on a page. Extent, 1,250 granthas. Character, Kannada. Condition, good. Appearance, new. Mode of writing, good.

Restored in 1926–27 from the Ms. described above.

Complete in 5 Āśvāsas.

(ಬಿ-ವಿ.)—

ಸಮಗ್ರ ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯು ಇದರ ಮಾತೃಕೆಯು.

No. 1165. ಸಾಹಸಭೀಮ ವಿಜಯ by ರನ್ನ- SĀHASA BHĪMAVIJAYA BY RANNA.

Substance, Palm-leaf. Size, 10⅜ × 1⅜ inches. Pages, 72. Lines, 78 on a page. Extent, 900 granthas. Character, Kannada. Condition, badly injured. Appearance, old. Mode of writing good.

Incomplete—from the 40th verse of the 2nd Āśvāsa to the end of 10th Āśvāsa. This is a supreme masterpiece of Kannada literature and it describes the Mahābhārata story of the last fight of Bhīma with Duryōdhana in which Duryōdhana was defeated and killed. The author Ratna, popularly known as Ranna, has compared the Prince Satyāśraya (styled Iṟīvabeḍaṅga, Ammanagandhavāraṇa and Sāhasabhīma.) son of the Cāḷukya king Āhavamalla, who was his patron, to Bhīma in this work. The work is also known as Gadāyuddha. The author lived in the second half of tenth century.

This was published in 1895 by the Kāvayakalānidhi Press, Mysore. It has recently been republished by late Vidwan Sri K. V. Krishna Bhat, B.A., B.O.L., mainly basing on this manuscript.

Beginning :

. . . . ।
. . . . . . ಬಾನು ಸೂನುವುಂ ಕಳಶಜನುಂ ॥
ಶಾಂತ ತನೂಜನು ಮಾಱಿದೆ ।
ಕೊಂತಿಯು ಸುತನಂ ಗೆಲಲ್ಕೆ ಬೆಱರಾರ್ತಪರೇ ॥

* * * *

ಪುಗೆ ಸೌಗಂಧಿಕ ಕೊಳನಂ ।
ಪುಗಲೀಯದೆ ಪೊಣರ್ದ ಯಕ್ಷರಂ ಯಮಪುರಮಂ ॥
ಪುಗಿಸಿ ಕನಕಾಬ್ಜಮಂ ತಂ ।
ದಗಡಂ ನಾಜೆ ಪ್ರಚಂಡನಿತಿವ ಬೆಡಂಗಂ ॥

. . . . ಕನಂ ಕೀ ।
ಚಕನಂ ಕೆಮ್ಮಿರನಂ ಬಟಾಸುರನಂ ಕೊಂ ॥
ದಕಳಿ ಜರಾಸಂಧನನಸು ।
ವ ಕಳಲ್ಲಿದಂ ಮರುತ್ಸುತಂ ಕೇವಳಮೇ ॥

Colophon :

ಇದು ಸಮಸ್ತ ಭುವನಾಶ್ರಯಂ ಶ್ರೀ ಪೃಥ್ವೀವಲ್ಲಭಂ ಮಹಾರಾಜಾಧಿರಾಜ ರಾಜಪರಮೇಶ್ವರಂ ಪರಮ ಭಟ್ಟಾರಕಂ ಶ್ರೀ ಸತ್ಯಾಶ್ರಯ ಕುಲತಿಲಕಂ ಶ್ರೀಮದಾಹವಮಲ್ಲದೇವ ಶ್ರೀಪಾದ ಕಲ್ಪಪಾದಪಚ್ಛಾಯಾಸನ್ನವರ್ತಿ ಕವಿಚಕ್ರವರ್ತಿ ಕವಿರತ್ನವಿರಚಿತಮಪ್ಪ ಚಾಳುಕ್ಯ ಚಕ್ರವರ್ತಿ ಶ್ರೀ ಸಾಹಸಭೀಮ ವಿಜಯದೊಳ್ ಸಂಜಯುವಚನ ವ್ಯಾವರ್ಣನಂ ದ್ವಿತೀಯಾಶ್ವಾಸಂ.

End :

ಛಲದೊಳ್ ದುರ್ಯೋಧನಂ ನನ್ನಿಯೊಳಿನ ತನಯಂ ಗಂಡಿನೊಳ್ ಭೀಮ
ಸೇನಂ ।
ಬಲದೊಳ್ [ಮಾದ್ರೀ] (ಮದ್ರೇಶ) ನತ್ಯುನ್ನತಿಯೊಳಮರ ಸಿಂಧೂದ್ಭವಂ
[ಭಾರಿ] (ಚಾಪ) ವಿದ್ಯಾ ।
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲುಗುಣಂ ಧರ್ಮ
ದೊಳ್ ನಿ ।
ರ್ಮಲಚಿತ್ತಂ ಧರ್ಮಪುತ್ರಂ ಮಿಗಿಲೆನಿಪಿವರಿಂ ಭಾರತಂ ಲೋಕ ಪೂಜ್ಯಂ ॥

Colophon :

ಇದು ಸಮಸ್ತಭುವನಾಶ್ರಯಂ . . . . ಶ್ರೀ ಸಾಹಸ ಭೀಮ ವಿಜಯದೊಳ್ ಹಸ್ತಿನಾಪುರ ಪ್ರವೇಶ ವರ್ಣನಂ ದಶಮಾಶ್ವಾಸಂ.

ಅಂತು ಆಶ್ವಾಸ ೧೦ ಕ್ಕಂ ರನ್ನಗದಾಯುದ್ಧಂ ಸಂಪೂರ್ಣ.
ಮಂಗಳಮಹಾಶ್ರೀ.

(ವಿ.ವಿ.)—

ಅಸಮಗ್ರ. ೨ ನೆಯ ಆಶ್ವಾಸದ ೪೦ ನೆಯ ಪದ್ಯದಿಂದ ೧೦ ನೆಯ ಆಶ್ವಾಸದ ಅಂತ್ಯದವರೆಗಿದೆ. ಆದರೆ ಅಲ್ಲಲ್ಲಿ ಗ್ರಂಥ ಪಾತವು ಬಹಳವಾಗಿದೆ. ಇದರ ಹಿಂದಣ ಭಾಗವು ಜೀರ್ಣವಾಗಿ ಹೋಗಿದೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದನ್ನು ಪ್ರತಿ ಮಾಡಲಾಗಿದೆ.

ಇದು ಚಂಪೂ ರೂಪವಾಗಿದೆ. ೧೦ ಆಶ್ವಾಸಗಳನುಳ್ಳುದು. ಇದರಲ್ಲಿ ಭೀಮನು ದ್ರೌಪದಿಯ ಮುಂದೆ ಶಪಥಮಾಡಿದಂತೆ ಗದಾಯುದ್ಧದಲ್ಲಿ ದುರ್ಯೋಧನನ ಮಕುಟೋರು ಗಳನ್ನು ಭಂಗಮಾಡಿದುದಲ್ಲದೆ ಅವನನ್ನು ಕೊಂದು ಪಟ್ಟಾಭಿಷಿಕ್ತನಾದ ವಿಷಯವು ವರ್ಣಿತ ವಾಗಿದೆ. ಚಾಳುಕ್ಯ ಚಕ್ರವರ್ತಿಯೂ ತನ್ನ ಪೋಷಕನೂ ಆದ ಆಹವಮಲ್ಲದೇವನ ಮಗನಾದ ಇರಿವಬೆಡಂಗ, ಸಾಹಸಭೀಮ, ಚಾಳುಕ್ಯ ನಾರಾಯಣ, ಅಮ್ಮನ ಗಂಧವಾರಣ, ಮುಂತಾದ ಬಿರುದುಗಳುಳ್ಳ ಯುವರಾಜ ಸತ್ಯಾಶ್ರಯನ ಸಾಹಸಗಳನ್ನು ವರ್ಣಿಸಬೇಕೆಂಬ ಅಭಿಲಾಷೆ ಯಿಂದ ಕವಿ ಈ ರಾಜನನ್ನು ಭೀಮನಿಗೆ ಹೋಲಿಸಿ ಸಿಂಹಾವಲೋಕನ ಕ್ರಮದಿಂದ ಭಾರತ ಕಥೆಯನ್ನು ಈ ಸಾಹಸಭೀಮ ವಿಜಯ ವೆಂಬ ಹೆಸರಿನಲ್ಲಿ ಬರೆದಿದ್ದಾನೆ. ಇದು ಲಲಿತವಾಗಿಯೂ

ಹಿಂದಣ ಅಸ್ಮತ್ಕೃತವು ಗ್ರಂಥಗಳಲ್ಲಿ ಒಂದಾಗಿಯೂ ಇದೆ. ಇದಕ್ಕೆ ಗದಾಯುದ್ಧವೆಂಬ ಹೆಸರೂ ಉಂಟು. ಇದನ್ನು ಮೈಸೂರು ಕಾವ್ಯಕಲಾನಿಧಿಯವರು ಕ್ರಿ.ಶ. ೧೮೯೫ ರಲ್ಲಿ ಮುದ್ರಿಸಿದ್ದಾರೆ ; ಮತ್ತು ಇತ್ತೀಚೆಗೆ ಕೀರ್ತಿಶೇಷರಾದ ಶ್ರೀ ವಿದ್ವಾನ್ ಕೆ. ವಿ. ಕೃಷ್ಣ ಭಟ್ಟ, ಬಿ.ಎ.,ಬಿ.ಒ.ಯಲ್ ; ಇವರು ಈ ಗ್ರಂಥವನ್ನು ಪರಿಷ್ಕರಿಸಿ ಪುನರ್ಮುದ್ರಣ ಮಾಡಿದ್ದಾರೆ. ಕವಿ ರನ್ನನೆಂಬವನು. ಇವನಿಗೆ ಕವಿಚಕ್ರವರ್ತಿ, ಕವಿಕುಂಜರಾಂಕುಶ, ಉಭಯ ಕವಿ, ಮುಂತಾದ ಬಿರುದುಗಳಿದ್ದವು. ಇವನು ಅಜಿತನಾಥ ಪುರಾಣ, ಚಕ್ರೇಶ್ವರ ಚರಿತೆ, ಪರಶುರಾಮ ಚರಿತೆ, ಎಂಬ ಗ್ರಂಥಗಳನ್ನೂ ಬರೆದಿದ್ದಾನೆ. ಇವನು ೧೦ ನೆಯ ಶತಮಾನದ ಉತ್ತರಾರ್ಧದಲ್ಲಿದ್ದನೆಂದು ಗೊತ್ತಾಗುತ್ತದೆ. ಹೆಚ್ಚು ಬಯಸುವವರು ಕವಿಚರಿತೆ ಮುದ್ರಿತ ಪುಸ್ತಕಗಳನ್ನು ನೋಡಿ ತಿಳಿಯುವುದು.

No. 1166. ಮಿತ್ರವಿಂದಾಗೋವಿಂದ by ಸಿಂಗರಾರ್ಯ-
MITRAVINDĀGŌVINDA BY SIṄGARĀRYA.

Substance, Śrītāḷa. Size, 10½ × 1 9/16 inches. Pages, 102. Lines, 6 and 7 on a page. Extent, 1,150 granthas. Character, Kannada. Condition, injured. Appearance, old. Mode of writing, fair.

Complete.

It is a nāṭikā in four acts. This is almost a true translation of the Sanskrit Nātikā, Ratnāvalī of Śrīharṣa. In the place of king Vatsa the hero of Ratnāvalī Lord Kṛṣṇa is introduced in this work. The other corresponding characters are introduced only—with different names. The plot is also the same except with one or two minor differences.

The author is Siṅgarārya, a court pandit of Cikkadēvarāya of Mysore—(1672–1704). He is also the author of Rāghavābhyudaya, and Gītaraṅgēśvara.

Beginning :

ಶಾ॥ ಶ್ರೀ ಯಾದವಾಲ್ಗಡಲಿಂದಮೆನ್ನೆರ್ದೆಗೆ ಬಂದಿಂತೊಲ್ಮೆಯಿಂದಿರ್ಪಳೆ ।
ನ್ನೀಯಂಘ್ರಿದ್ವಯ ಸೇವೆಯೊಳ್ ನೆಲಸಿದೀ ಭೂದೇವಿಯುಂನಾಡೆ ಕೇ ।
ಟಿಕ್ಗಳ್ಯಲ್ಬ್ಬರದೆನುತ್ತಮೆತ್ತಿ ಪಿರಿದುಂ ಸೌಕರ್ಯದಿಂದಂಕವುಂ ।
ರೈಯ್ಯಂ ಕೃಮಿಗೆ ಸಾರ್ಚೆ ಸಂತವಿಸಿದಾ ಗೋವಿಂದ ನಂಮಂದಿಪೆಂ ॥

(ಇಂತು ನಾಂದಿಗೆಯ್ದು ಸೂತ್ರಧಾರಂ ಸೆರೆಯೊಳ್ ಪ್ರೊ-
ರೈಸಿದ ಕುಸುಮಂಗಳಂ ರಂಗದೊಳ್ ಚೆಲ್ಲಿ ಸಭೆಗೆವಂದಿಸಿ ತೆರೆಯಂ ನೋಡಿ)

ಸೂತ್ರಧಾರಂ.—ಎಲೆ ಆರ್ಯೆ ಇತ್ತ ಬಾರಾ. (ಎಂಬುದುಂ)

ನಟಿ.—(ಸಾರ್ಕಂದು) ಅಯ್ಯಾ ಇದೆ ಬಂದೆಂ. ಅವ ಕಜ್ಜಮೊಗಳಾಜ್ಜಿಗೆ ಪು(ದು.) ?

ಸೂತ್ರಧಾರಂ.—ಈಗಳೀ ವಸಂತೋತ್ಸವದೊಳ್ ಪಲನಾಡುಗಳಂ ಪಶ್ಚಿಮ ಶ್ರೀರಂಗರಾಜ ನದಿದಾವರೆಯಂ ಸೇವಿಸಲ್ಬಂದು ನೆರದಣಿಸಿ ಸಭೆಯಂದ ಸಿಂಗರಿಸುವೀ ಬಜ್ಜವಳರೆಯಿತೆಯರೆನ್ನಂ ಕರೆದಿಂತು ನಿರವಿಸಿದರ್ ।

ಅದೆಂತೆನೆ.—ಎಲೆ ನಟ್ಟುವಿಗರ ಕಟ್ಟೊಡೆಯನೆ :—

ಕಂ॥ ಶೌರಿಯ ಚರಿತ್ರದ ಕಥೆಯಾ ।
ಧಾರದೆ ಕಿವಿಗಿಂಪುಗಱೆವ ಸಿಂಗರದಿರವಂ ॥
ಏರೂಪಕಂ ನಿರೂಪಿಕು ।
ಮಾರರೂಪಕಮಂ ನಿರೂಪಿಸೆಂದೊಲವಿಂದಂ ॥ (ಎಂಬುದುಂ)

ನ.ವಿ.—(ಇನಿಸುಂ ಬೆಳಗ್ತು, ಜಾನಿಸಿ ಸೂತ್ರಧಾರನಂ ನೋಡಿ) ಅಯ್ಯಾ ಆವುದಂತು ಮನಂಗೊಳಿಪ ರೂಪಕಂ?

ಸೂತ್ರ.—ಆರ್ಯೆ! ಇದಲ್ತೆ ಮಿತ್ರವಿಂದಾಗೋವಿಂದಮೆಂಬ ನಾಟಕಂ

ನಟಿ.—(ಅಚ್ಚರಿಗೊಂಡು) ಆದೊಡಾರಿದಂ ನಿರವಿಸಿದರ್?

ಸೂತ್ರ.—ಎಲೆಗೆ, ಏಂ ಕೇಟ್ಡಿಪೆಯಯಾ?

ಶಾ॥ ಶ್ರೀಮತ್ಸ್ವಹ್ಯ ನೃಸಿಂಹಸೂರಿ ತನಯಂ ಶ್ರೀ ತಿರ್ಮಲಾರ್ಯಾನುಜಂ ।
ಶ್ರೀಮತ್ಕೌಶಿಕ ಸಿಂಗರಾರ್ಯನುಸಿರ್ದಂ ತಾನೆಮ್ಮೊಳ್ಪೊರ್ಲ್ಮೆಯಿಂ ॥
ಈ ಮಾಚಾರ್ಯನ ಕಬ್ಬಮೈಸೆ ಮಧುವಂ ಸೂಸುತ್ತು ಮಾಮೋದದಿಂ ।
ದಾ ಮಂದಾರದ ಪೂದೊಡಂಬೆಯೆನಿಕುಂ ಸೊಂಪಿಂ ಸುದೃಕ್ಕರ್ಣದೊಳ್ ॥

* * * *

ಮತ್ತಮಿದಲ್ಲದೆಯುಂ—

ಕಂ॥ ರಂಜಿಪುದು ರಸಿಕರಂ ಕಾ ।
ವ್ಯಂ ಜಾಣೆಂದಾರ ರಾಘವಾಭ್ಯುದಯಾಖ್ಯಂ ॥
ಕಂಜಾಕ್ಷನ ಸಂಕೀರ್ತಿಸು ।
ತ್ರಂ ಜಸಮಂ ಪಡೆದ ಗೀತರಂಗೇಶ್ವರಮುಂ ॥

ನಟಿ:—ಅಯ್ಯಾ, ಇವರಲ್ತೆ ಪದವಾಕ್ಯ ಪ್ರಮಾಣ ಪಾರಾವಾರ ಪಾರೀಣರೆಂದು ಜಗದೊಳ್ನೆಗಳ್ದರ್ಪರ್" ಎಂತಿ ವರ್ಗೆ ಕವಿತಾ ಕೌಶಲಮುಂ ?

ಸೂತ್ರ.—ಎಲೆಗೆ, ಆದೊಡಾಲಿಸು. ಶ್ರೀ ಮನ್ಮಹಾರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಬಿರುದಂತೆಂಬರ ಗಂಡನಪ್ರತಿಮ ಲೋಕೈಕ ವೀರ ಮಹಿಶೂರ ನರಪತಿ ಶ್ರೀ ಚಿಕದೇವ ಮಾರಾಯನ ನಿಯೋಗವಡೆದ ಕಡುನೇಹಕ್ಕೆ ನೆಲೆವನೆಯುಮಶೇಷಕಲಾನಿಧಿಯುಮೆನಿಸಿ ನೆಗಳ್ದ ತಿರುಮಲಾರ್ಯರ ಕೃಪೆಯಿಂದೆಣಿಕೆಗಳವಡದ ಪಲವುಂ ಬಿಜ್ಜೆಗಳಂ ನೆರವಣಿಗೆಗೊಂಡು ರಸಿಕರೆಱೆಯರೆನಿಸಿ ಚದುರಿಂ ಜಾಣಿಂ ಜಗದೊಳ್, ಜಸಮಂ ಪಡೆದವರ್ಗೆ ಕವಿತೆಯೊಳ್ ಪ್ರವೀಣತೆಯಂ ಬಣ್ಣಿಪುದೇಂ ?

* * * *

ವಾಸುದೇವಂ—(ನಡೆಯುತ್ತ, ದೇವಿಯಂ ನೋಡಿ)

ಮ। ವಿ। ಅರಸೀ ನಲ್ಗಳೆಯೊಂದಿ ಕಂದುಗಳೆವೀ ನಿನ್ನಾಸ್ಯ ಪೂರ್ಣೇಂದುವಿಂ ।
ದರವಿಂದಂ ಕಡುಕಂದಿ ಕುಂದಿ ಪೊಳಪಂ ಬೀಟ್ಕೊಟ್ಟು ಸಂಕೋಚಮಾಂ ।

ತಿರೆ ನಿಸ್ಕೊಳಗವೆಣ್ಗಳಂಪಿನೊರೆವೊಳ್ಪಡಂದವಂ ಕೇಳ್ದನಾ ।
ಕ್ಕೈರೆದಂತಲ್ಲಿಯಡಂಗುತಿರ್ಕುಮುರದಿಂ ಬೆಣ್ದಂಬಿಗಳ್ ನಿಟ್ಟಸಾ ॥
(ಎನುತ್ತನಿಬರುಂ ತೆರಳ್ದರ್)

Colophon :

ಇದು ಮೊದಲಂಕಂ ಸಮಾಪ್ತಂ ।

End :

ವಿದೂಷಕಂ.—(ಕಡು ಸಂತಸಂದಳೆದು) ಹಿ. ಹಿ ! ಎಲೆ ಮಾರಾಯನೆ ಈ ಸಕಲ ಲೋಕದ್ದೈ [ಸ] (ಸಿ) ರಿವೆರಸಿದೀ ಪೊಡವಿ ಮಾತ್ರಮೆ ನಿನ್ನ ಕೈ [ವಶ] (ಬಸ) ಮಾಗಿರ್ಪು ದಲ್ತು. ಮತ್ತಮಿೂರಾಣಿಯೆಂಬ ಪೊಸಸಿರಿಯುಂ ಕೈ [ವಶ] (ಬಸ) ಮಾದಳ್ (ಎನುತ್ತೆ ನರ್ತಿಸಿದಂ)

ಸುನಂದಂ.— ಎಲೆಯಾಳ್ದನಣೆಗಿ ! ನೀಂ ರಾಣಿವೆಸರನಾಂತೆ. ಚೆನ್ನಾಗಿ ಸೊಗವಾಳ್.
ಸುಭದ್ರಂ.—ಈಗಳ್ತಾಂ ಪಟ್ಟ ಕೋಟಲೆಯನಿತುಂ ಸಫಲಮಾದುದು.
ಉದ್ಧವಂ.—ಎಲೆ ಜೀಯಾ ! ನಿನಗಿನ್ನುಂ ಪ್ರಿಯಮನೇನ [ಗೆನ]ನೆಸಗುವೆಂ ?
ವಾಸು—ಎಲೆ ಉದ್ಧವನೆ, ಎನಗಿದಱಿಂದೆಯುಮಿನ್ನೇಂ ?

ಶಾ॥ ಈ ನಮ್ಮೊಳ್ ಮಿಗೆ ಮೈತ್ರಿ ಪೆರ್ಚಿತು ಜಯುತ್ಸೇನಂಗೆ ಕೈಸಾರ್ದಳಂ ।
ಶ್ರೀ ನಾರೀಮಣಿ ಮಿತ್ರವಿಂದೆ ಮುದವಿಂದೀತಂಗೆ ಯಿಂದಾಯ್ತುದೆಂ ॥
ತಾನುಂದೇವಿಗೆ ಗೆಲ್ದು ಸ್ವಾಭಪತಿಯುಂ ಪ್ರದ್ಯುಮ್ನನುಂ ಬಂಧನಿಂ ।
ದಾನಂದೋದಯಮುಣ್ಕ್ಮೆತಾದುದು ಜಯಂ ನೀನೇ ಗಡಾ ಉದ್ಧವಂ ॥
ಅಂತಾದೊಡಮಕ್ಕೆದೆಂದು ಭರತ ವಾಕ್ಯಂ ॥

ಚ॥ ಮಳೆಱೆಗದುರ್ವಿಯಂ ಸುರಪನುರ್ವರೆಯೊನ್ನಿಸುಗೇಱೆಗ್ಗವೆತ್ತವೆ ।
ವೆಳಸುಗಳಿಂದೆ ಭೂಸುರರ ಜನ್ನದ ಸಂದಣೆಯಿಂದೆ ಸಂತಸಂ ॥
ಬಳೆಗೆ ಸುರರ್ಗೆ ಸಜ್ಜನರ ಸಂಗಡಮುಂ ಸೊಗಮಿರ್ಕೆ ದುರ್ಜನ ।
ರ್ಕಳ ಹಿಸುಣ್ಣೆಲ್ಲಮುಂ ತವುಗೆ ಧರ್ಮದಿನಾಳ್ಗ ನೃಪರ್ ಧರಿತ್ರಿಯಂ ॥
(ಎಂದೆಲ್ಲರುಂ ತೆರಳ್ದರ್.)

Colophon :

ಇದು ನಾಲ್ಕನೆಯಂಕಂ.

(ಪಿ-ವಿ.)—

ಸಮಗ್ರ. ಶ್ರೀತಾಳ ಪ್ರತಿ. ಶಿಥಿಲವಾಗಿದೆ. ಲಿಪಿ ಚೆನ್ನಾಗಿದೆ.

ಇದು ನಾಟಕೆಯು. ಈ ಗ್ರಂಥದಲ್ಲಿ ಇದನ್ನು ನಾಟಕವೆಂದು ಬರೆದಿದೆ. ನಾಲ್ಕು ಅಂಕಗಳವೆ. ಇದನ್ನು ರತ್ನಾವಳಿಯೆಂಬ ಸಂಸ್ಕೃತ ನಾಟಿಕೆಯ ಭಾಷಾಂತರ ವೆನ್ನಬಹುದು. ರತ್ನಾವಳೀ ನಾಟಿಕೆಯಲ್ಲಿರುವ ರಾಜನಿಗೆ ಬದಲಾಗಿ ಇದರಲ್ಲಿ ಶ್ರೀ ಕೃಷ್ಣನನ್ನು ನಾಯಕನನ್ನಾಗಿ ಮಾಡಿ ಉಳಿದ ಪಾತ್ರವರ್ಗಕ್ಕೂ ಉಚಿತವಾದ ನಾಮಾಂತರಗಳನ್ನು ಕಲ್ಪಿಸಿದೆ. ರತ್ನಾವಳಿಗೂ ಇದಕ್ಕೂ ಒಂದೆರಡೆಡೆ ವ್ಯತ್ಯಾಸವಿರುವದು ಇದನ್ನು ಓದುವಾಗ ಗೊತ್ತಾಗುವುದು.

ಕವಿ ಸಿಂಗರಾರ್ಯನೆಂಬವನು. ಇವನು ರಾಘವಾಭ್ಯುದಯ, ಗೀತರಂಗೇಶ್ವರಗಳೆಂಬ ಗ್ರಂಥಗಳನ್ನೂ ಬರೆದಿರುವದಾಗಿ ಇವನ ಪದ್ಯಗಳಿಂದ ತಿಳಿಯಬರುತ್ತದೆ. ಇವನು ಶ್ರೀ ವೈಷ್ಣವ ಕವಿ. ಚಿಕ್ಕದೇವ ರಾಜನ (೧೬೭೨—೧೭೦೪) ಆಸ್ಥಾನ ಪಂಡಿತನಾಗಿದ್ದಂತೆ ತೋರುತ್ತದೆ. ಉಳಿದ ವಿಷಯಗಳನ್ನು ಉದಾಹೃತ ಭಾಗಗಳಿಂದ ತಿಳಿಯುವುದು.—

No. 1167. ಮಿತ್ರವಿಂದಾಗೋವಿಂದ by ಸಿಂಗರಾರ್ಯ-
MITRAVINDĀGŌVINDA BY SIṄGARĀRYA.

Substance, Palm-leaf. Size, 13½ × 1 5/16 inches. Pages, 166. Lines, 4 on a page. Extent, 1,150 granthas. Character, Kannada. Condition, good. Appearance, old. Mode of writing, good.

Complete.

Same work as that described above.

(ವಿ.-ವಿ.)—

ಸಮಗ್ರ ೧, ೪೧, ೪೩ ನೆಯ ಓಲೆಗಳು ಮುರಿದಿವೆ. ಪ್ರತಿ ಚೆನ್ನಾಗಿದೆ. ಲಿಪಿ ಉತ್ತಮವಾಗಿದೆ.

ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

ಯಕ್ಷಗಾನ-

No. 1168. ಕಪೋತ ವಾಕ್ಯ by ನಂಜಯ್ಯ-
KAPŌTA VĀKYA BY NAÑJAYYA.

Substance, Palm-leaf. Size, 9⅛ × 1 3/16 inches. Pages, 120. Lines, 4 and 5 on a page. Extent, 600 granthas. Character, Kannada. Condition, much injured. Appearance, old. Mode of writing, good.

Complete.

Describes the story of the two birds, who sacrificed their lives to save a hunter suffering from hunger, as narrated by Śri Rāma to Sugrīva, when the latter pleaded that Vibhīṣaṇa should not be taken into their ranks. The author Nañjayya is a Saiva by religion.

Beginning :

ದ್ವಿಪದಿ ॥ ಶ್ರೀ ಗೌರೀಹೃತ್ಕಮಲಸ್ಥಿರತರ ಭೃಂಗ ।
ಭಾಗೀರಥೀಧರ ಭವಬಂಧ ದೂರ ।
ಭಾನು ಶಶಿ ಶಿಖಿನೇತ್ರ ಭವ್ಯಚಾರಿತ್ರ ।
ಗಾನ ನಾದಪ್ರಿಯಾ ! ಕೈಲಾಸನಿಲಯಾ ! ।
ಗಜ ಚರ್ಮಧರ ಈಶ ಕಾರುಣ್ಯಕೋಶ ।
ಅಜಶಿರಃ ಕರಪಾತ್ರ ಅಮರ ಮುನಿಸ್ತೋತ್ರ ॥ (?)

* * * *

ವಚನ ॥ ಎಂದು ಇಷ್ಟದೇವತಾ ಪ್ರಾರ್ಥನೆಯಂ ಮಾಡಿ ಶಾರದಾ ಗಣಪತಿಗಳ ನೇನೆಂದು ಕೊಂಡಾಡುತ್ತಿರ್ದಾನು.

* * * *

ಕಂದ ॥ ಧರೆಯೊಳ್ ಕಪೋತ ವಾಕ್ಯದ ।
ವರ ಕಥೆಯನು ಪೇಳ್ವೆ ನಾನು ವರ್ಣಿಸಿ ಸುಜನರ್ ।
ಕರುಣದಿ ಲಾಲಿಸಿ ಕೇಳ್ವುದು ।
ಮುರಹರನೇ ಬೇಟ್ವಿ ಚರಿತೆ ಮುಖ್ಯವಿದೆನುತಂ ॥

* * * * *

End :

ದ್ವಿಪದೆ ॥ ಪ್ರಮಥಗಣ ವಂದ್ಯನಿಗೆ । ಪಾರ್ವತೀಪ್ರಿಯಗೆ ॥
ಅಮಿತಗುಣನಾಮನಿಗೆ । ಅರ್ಧೇಂದುಧರಗೆ ।
ಗರಳಪುರ ವಾಸನಿಗೆ । ಕಪಟನಾಟಕಗೆ ।
ನರನಿಗಸ್ತ್ರವನಿತ್ತ । ವರ ನಂಜುಂಡನಿಗೆ ।
ಅಂಕಿತ ಮಾಗಿಯಾ । ಅವನಿಯೊಳ್ ಮುನ್ನ ।
ಪಂಕಜ ಹಿತ ಕುಲನು । ಪಾವನದಿ ಪೇಳ್ದ ।
ವಸುಧೆಯೊಳು ಕಾಪೋತ ವಾಕ್ಯದ ಕಥೆಯು ।
ಪೊಸತಾಗಿ ಕನ್ನಡದಿ । ಹೊಂದಿಸಿಯೆ ಪೇಳ್ವ ॥
ಮೆರೆವ ಕಾಶ್ಯಪಗೋತ್ರ । ಮಿಗೆ ಪಾಂಡ್ಯವಂಶ
ಧರೆಯೊಳು ಮೂಗೂರ । ಸ್ಥಿರ ಶಾಸನಾಂಕ ॥
ಲಾವಣ್ಯ, ಜಿತಮಾರ ಲಾಲಿತಾಕಾರ ।
ಬಾಗಿಳಿಯ ಕೆಂಪ ॥
ಭೂಪಾಲ ವರಪುತ್ರ । ಬುಧಜನಸ್ತೋತ್ರ ।
ಕಾಪಾಲ ಧರಚರಣ । ಕಮಲ ಸದ್ಭೃಂಗ ।
ಸ್ಥಿರಕೀರ್ತಿಯುತನಾದ । ದೇಶ ಭೂಪತಿಯು ।
ವರಪುತ್ರ ಗಿರಿಧೈರ್ಯ । ವನಧಿಗಾಂಭೀರ್ಯ ।
ಸರಸದಿಂ ಸಂಗೀತ । ಸಾಹಿತ್ಯನಿಪುಣ ।
ಅಂಗಜ ಜಿತರೂಪ । . . . . ಜಯ ।
ಲಿಂಗರಾಜೇಂದ್ರಂಗೆ । ಲೇಸಿನ ಪ್ರಿಯದ ॥
ವರಪುತ್ರ ಶಿವಭಕ್ತ । ವ . . . . . ಸೇವಕನು ।
ಬರೆದನು ನಂಜಯ್ಯ । ನೊಪ್ಪದಿಂ ಕಥೆಯ ।

(ಈ) ಚತುರಬ್ಧಿ ಪರ್ಯಂತ ವಿಲಸಿತವಾಗಿ ॥
ಆಚಂದ್ರತಾರಾರ್ಕವಾಗೊಪ್ಪುತಿಹುದು ॥

Colophon :

ಕಪೋತ ವಾಕ್ಯಂ ಸಂಪೂರ್ಣಂ ಮಂಗಳ ಮಹಾಶ್ರೀ ॥

(ವಿ-ವಿ.)—

ಸಮಗ್ರ. ಬರವಣಿಗೆಯು ಸಾಮಾನ್ಯವಾಗಿದೆ. ತಪ್ಪುಗಳಿವೆ. ಇದು "ಹೊಸತಾಗಿ ಕನ್ನಡದಿ ಹೊಂದಿಸಿಯೆ ಪೇಳ್ದ" ಯಕ್ಷಗಾನ ಪ್ರಬಂಧವಾಗಿದೆ. ಕವಿಯು ಕಾಶ್ಯಪ ಗೋತ್ರದವನು. ಪಾಂಡ್ಯವಂಶದವರಾಗಿ ಮೂಗೂರಲ್ಲಿದ್ದು ಆಳಿದ ಅರಸರಲ್ಲಿ ಪ್ರಸಿದ್ಧನಾದ ಬಾಗಳೆಯ ಕೆಂಪ ಭೂಪಾಲನ ಪ್ರಪೌತ್ರನೂ, ದೇಶ ಭೂಪತಿಯ ವರಪೌತ್ರನೂ ಲಿಂಗರಾಜೇಂದ್ರನ ವರ ಪುತ್ರನೂ ಆಗಿದ್ದನು. ನಂಜಯ್ಯನೆಂದು ಪ್ರಸಿದ್ಧನಾದೀ ಕವಿಯು ಶಿವಭಕ್ತನು. ಈತನ ಕಾಲವು ಕ್ರಿ.ಶ. ಸುಮಾರು ೧೭೪೦ ಎಂದು ಕವಿ ಚರಿತ್ರೆಯಲ್ಲಿ ಹೇಳಿದೆ.

ಗ್ರಂಥದ ಆದಿಯಲ್ಲಿ ಶಿವಸ್ತುತಿಯಿದೆ. ಅನಂತರ ಕ್ರಮವಾಗಿ ಶಾರದೆ, ಗಣಪತಿ, ತ್ರಿಪುರಾಂಬೆ, ಚೋಳಪುರದ ವೀರೇಶ, ಕಾವೇರೀಪುರದ ಜಲಕಂಠ ದೇವ, ಇವರುಗಳ ಸ್ತುತಿಯಿದೆ. ಆ ಮೇಲೆ ಕವಿಯು ಗುರುಲಿಂಗ ಮೂರ್ತಿಯ ಚರಣಕ್ಕೆರಗಿ ವಾಲ್ಮೀಕಿ ವ್ಯಾಸರ ವಂದಿಸಿ ಕವಿ ಕಾಳಿದಾಸನನ್ನು ನೆನೆದು ಪುನಃ ತನ್ನಿಷ್ಟದೈವವಾದ ಗರಳಪುರೀಶ್ವರನನ್ನು ಕೊಂಡಾಡಿ ಪ್ರಬಂಧವನ್ನಾರಂಭಿಸುವನು.

ವಿಭೀಷಣನು ಶ್ರೀರಾಮನನ್ನು ಸಮೀಪಿಸಿ ಆಶ್ರಯವನ್ನು ಬೇಡುವಾಗ ಸುಗ್ರೀವನು ಆಕ್ಷೇಪಿಸಲಾಗಿ ಅದನ್ನಲ್ಲಗಳೆದು, ಶ್ರೀರಾಮನು ವಿಭೀಷಣನನ್ನು ಸ್ವಾಗತೀಕರಿಸುವ ಸಂದರ್ಭದಲ್ಲಿ ಹೇಳಿದ ಆಖ್ಯಾನವನ್ನು ಯಕ್ಷಗಾನ ರೂಪದಲ್ಲಿ ಕವಿಯು ನಿರೂಪಿಸಿರುವನು.

ಉಳಿದ ವಿಷಯಗಳನ್ನು ಉದ್ಧೃತ ಭಾಗದಿಂದರಿವುದು.

No. 1169. ಕರಿಯಬಂಟನ ಕಥೆ by ಸಂಬಯ್ಯ.
KARIYABANṬANA KATHE BY SAMBAYYA.

Substance, Palm-leaf. Size, 13½ × 1⅜ inches. Pages, 122. Lines, 4—5 on a page. Extent, 1,200 granthas. Character, Kannada. Condition, injured. Appearance, old. Mode of writing, good.

Begins on fol. 1*a*. The other work herein is :—Sāraṅgadhara Caritre, (Yakṣagāna) 62*a*.

Complete.

Describes the story of Kariyabaṇṭa, son of Mārabhubhuja, King of Dhārāpura in Kāśmīra. The story runs thus—Once Kariyabaṇṭa wants to pay a visit to Ballāḷarāya, King of Haḷeyabīḍu. On the way he marries one Puṇḍarīkākṣi, daughter of a Rakkasi (demon) Mālini who was under a curse. The Rakkasi disapproves this marriage and kills Kariyabaṇṭa. Thereupon, delivered from her curse, she goes to Kailāsa in her real form as Mālini. Kariyabaṇṭa is brought back to his life by the good grace of Śiva and lives happily with Puṇḍarīkākṣi.

Beginning :

ದ್ವಿಪದೆ ॥ ಶ್ರೀನಗಜಾಧೀಶ ಶ್ರೀಪರಮೇಶ ।
ಭಾನುಜಮದ ಭಂಗ ಪರಮ ಕೃಪಾಂಗ ॥

ಫಣಿರಾಜಹಾರ ಸದ್ಭಕ್ತಮಂದಾರ ।
ಪ್ರಣಿತಾಗಮ ಪ್ರೇಮ ಬಹು ಪುಣ್ಯ ನಾಮ ॥

ಕರಿಚರ್ಮ ಚೇಲ ಸ । ತ್ಕರುಣಾ ನೃಪಾಲ ।
ಗಿರಿರಾಜ ನಗಚಾಪ, ಕೀರ್ತಿಕಲಾಪ ॥

ಸುಲಲಿತ ನಿಜಲಾಕ್ಷ ಜನಲೋಕರಕ್ಷ ।
ಚೆಲುವ ಸಜ್ಜನ ಸಂಗ ಶ್ರೀ ಶಂಭುಲಿಂಗ ॥

ಎಂದು ಪ್ರಾರ್ಥನೆಯಂ ಮಾಡಿ ಹಿಮಶೈಲ ಸುತೆಗೆ ವಂದಿಸಿ , ಇಷ್ಟಾರ್ಥವರಗಳಂ ಪಡೆದು ;

* * * *

ಶಂಭು ವಿಜೃಂಭ ಸಂ । ರಂಭ ಕೀರ್ತಿಗಳಿಂದ ।
ಕುಂಭಿನಿಯನಾಳ್ವ ಶ್ರೀ- । ಶಂಭು ಲಿಂಗನಿಗೆ ॥

ಇಂತು ಅಂಕಿತವಾಗಿ ಪೊಂಕಿಸಲ್ಪಟ್ಟಂಥಾ ಕರಿಯು ಬಂಟನ ವಿಜಯ, ಯಕ್ಷಗಾನದ ಕಥೆಯು ಪ್ರಾರಂಭವದೆಂತೆಂದರೆ.—

* * * * *

End :

ದ್ವಿಪದೆ ॥ ಇಂದು ಲೋಕೇಶಂಗೆ, ಇಂದು ಶೇಖರಗೆ ।
ಕಂದರ್ಪ ವೈರಿಗೆ ಕಾರುಣ್ಯನಿಧಿಗೆ ।
ಪಾರ್ವತೀ ಪತಿಗೆ ಸ । ದ್ಭಕ್ತ ಪಾಲಿತಗೆ
ಸರ್ವ ಜೀವಾತ್ಮಂಗೆ । ಶಂಭು ಲಿಂಗನಿಗೆ ।
ಅಂಕಿತವಾಗಿಯೆ । ಬೊಂಬೆಯಾಟದ ರಾಯ
ಶಂಕರನ ವರವುಳ್ಳ ಭಕ್ತ । ಚರಣ ಸೇವಕನು ॥
ಘನವಾದ ಮೋಹನ ಕವಿ ಬಿರುದಾಂಕ ।
ಜನನುತ ಸಂಗೀತ ಸಾಹಿತ್ಯ ನಿಪುಣ ।
ಸಿದ್ಧೈಯ್ಯಡೆಣಾಗ ಪ್ರಸಿದ್ಧ ನಾಯಕನು ।
ಸದ್ಧರ್ಮ ಗುಣಯುತ ಸಂಬಯ್ಯ ನನುಜ ॥
ಅಂಬುಜವದನೆ ಯಲ್ಲಮ್ಮ ನಾತ್ಮಜನು ।
ಶಂಬರಾರಿಯು ಭಕ್ತ ಸಂಬಯ್ಯ ಪೇಟ್ಟಿ ।
ಭುಜ ಪರಾಕ್ರಮ ದೊಳೊಪ್ಪುವ ಕರಿಯ ಬಂಟನ ।
ವಿಜಯ ವಾಕ್ಯವು ಲೋಕ ವಿಖ್ಯಾತ ಮಾಗಿ ॥
ಭೂಚಕ್ರದೊಳಗೆ ಸತಪ್ರಜೆಯಂ ತಾಳ ।
ಆಚಂದ್ರತಾರಾರ್ಕವಾಗುವದಿಳೆಗೆ ॥

Colophon :

ಕರಿಯು ಬಂಟನ ಕಥೆ.

ಸಮಾಪ್ತ "ಶ್ರೀ".

ಇದು ಯಕ್ಷಗಾನದಲ್ಲಿ ಬರೆದಿದೆ. ಕಥಾಸಾರ:—ಕಾಶ್ಮೀರ ದೇಶದ ಧಾರಾಪುರವನಾಳ್ವ ಹಾರ ಭೂಭುಜನ ಕುಮಾರ ಕರಿಯುಬಂಟನೆಂಬವನು ತನ್ನವ್ಮ ಬನವಂತ ದೇವಿಯ ವಾಕ್ಯವನ್ನು

ವಿಂರಿ ಹಳಿಯ ಬೀದಿನ ಬಲ್ಲಾಳ ರಾಯನಲ್ಲಿಗೆ ಹೋಗುತ್ತಾ ದಾರಿಯಲ್ಲಿ ಕೊಂಡನೂರ ರಕ್ಕಸಿಯ ಮಗಳಾದ ಪುಂಡರೀಕಾಕ್ಷಿಯಂ ಗಾಂಧರ್ವ ವಿಧಿಯಿಂದ ಲಗ್ನವಾಗುವನು. ತಾಯಿ ರಕ್ಕಸಿಯು ಬಂದಾಗ ಈ ವೃತ್ತಾಂತವನ್ನರಿತು ಅದನ್ನು ಸಮ್ಮತಿಸದೆ ಅಳಿಯನನ್ನುಕೊಂದು ಶಾಪವಿಮುಕ್ತಳಾಗಿ ಮಾಲಿನಿಯೆಂಬ ತನ್ನ ನಿಜ ನಾಮದಿಂದ ಕೈಲಾಸಕ್ಕೆ ಹೋಗುವಳು. ಇತ್ತ ಕರಿಯಬಂಟನು ಶಿವನ ವರ ಪ್ರಸಾದದಿಂದ ಉಜ್ಜೀವಿತನಾಗಿ ಪುಂಡರೀಕಾಕ್ಷಿ ಯೊಡನೆ ರಾಜ್ಯವನ್ನಾಳಕೊಂಡು ಸುಖವಾಗಿರುವನು. ಕವಿ ಸಂಬಯ್ಯ ನೆಂಬವನು. ಇವನ ಕಾಲವು ಸುಮಾರು ೧೭೫೦ ಎಂದು ಕವಿ ಚರಿತ್ರೆಯ (2 ನೆಯ ಸಂಪುಟ) ದಲ್ಲಿ ಹೇಳದೆ.

(ವಿ.ವಿ.)—

ಈ ಪುಸ್ತಕದ 50, 51 ನೆಯ ಓಲೆಗಳು ಮುರಿದು ಹೋಗಿವೆ. ಉಳಿದ ಭಾಗವು ಸಮಗ್ರವಾಗಿದೆ. ಕವಿಯು ಆದಿಯಲ್ಲಿ ಶಿವನನ್ನು ಸ್ತುತಿಸಿ ಬಳಿಕ ಶಂಭು ಲಿಂಗ, ಭದ್ರಕಾಳೀಶ, ಹರಪುತ್ರ ವೀರೇಶ, ಪಾಪನಾಶಲಿಂಗ, ರಾಮ, ಗಣಪತಿ, ವಾಣಿಗಳನ್ನು ಭಜಿಸಿದ್ದಾನೆ. ಆಮೇಲೆ ಆದಿ ಸತ್ಕವಿಗಳನ್ನು ನೆನೆದು ಕುಕವಿಗಳಿಗೆ ನಮಸ್ಕರಿಸಿ, ಕಥೆಯನ್ನಾರಂಭಿಸಿರುವನು.

No. 1170. ಕರಿಯ ಬಂಟನ ಕಥೆ by ಸಂಬಯ್ಯ. KARIYABANṬANA KATHE BY SAMBAYYA.

Substance, Palm-leaf. Size, 9⅛ × 1⅜ inches. Pages, 233. Lines, 4 to 5 on a page. Extent, 950 granthas. Character, Kannada. Condition, much injured. Appearance, old. Mode of writing, good.

Complete.

Date of transcription :—Tuesday the eighth day of the bright fortnight of the lunar month Kārtika in the year Citrabhānu. Name of the scribe :—Vīraṇṇa.

Same work as that described above.

(ವಿ.ವಿ.)—

ಸಮಗ್ರ. ಹಿಂದೆ ವರ್ಣಿತವಾದ ಪ್ರತಿಗಳಿಗೂ ಇದಕ್ಕೂ ಅಲ್ಲಲ್ಲಿ ಪಾಠಭೇದವಿದೆ. ಲಿಪಿಯು ಚೆನ್ನಾಗಿದೆ. 37-b. 3 , 39 ನೆಯ ಓಲೆಗಳಲ್ಲಿ ಏನೂ ಬರೆದಿಲ್ಲ. 48, 49 ನೆಯ ಓಲೆಗಳು ಹೋಗಿವೆ. 121 ನೆಯದು ಕೊನೆಯ ಓಲೆಯಾಗಿದೆ. ಪುಸ್ತಕದ ಅಂತ್ಯದಲ್ಲಿ.—
ಶುಭಕೃತು ಸಂವತ್ಸರದ ಆಶ್ವೀಜ ಬ(ಹು)ಳ ೧೦ ರಲ್ಲು ಕಲ್ಲಹಳ್ಳಿಯ ಕೆಂಪಯ್ಯ ಅರಸಿನವರ ಕೊಮಾರ ಲಕ್ಷ್ಮೀಕಾಂತಯ್ಯ ಅರಸಿನವರ ಊಳಿಗದ . . . . ಜಣನಿಗೆ ಹಂಚಿದ ಶ್ಯಾನಭಾಗ ಬಸವನಯ್ಯನವರ ಮಗ ಮುದ್ದಯ್ಯ ಬರೆದ ಕರಿಯ ಬಂಟನ ಪುಸ್ತಕಕ್ಕೆ ಮಂಗಳ ಮಹಾಶ್ರೀ । ಶ್ರೀ ।

ಚಿತ್ರಭಾನು ಸಂವತ್ಸರದ ಕಾರ್ತಿಕ ಶುದ್ಧ ೮ ಮಂಗಳವಾರಕ್ಕೆ ಕರಿಯ ಬಂಟನ ಕಥೆ ಸಂಪೂರ್ಣ ಮಂಗಳ ಮಹಾಶ್ರೀ ॥

ಬರೆದಾತನು [ಯಿ] (ವೀ) ರಣ್ಣನು. ಎಂದಿದೆ. ಇದರಲ್ಲಿ ಮೊದಲು ಕೊಟ್ಟಿರುವ ಪುಸ್ತಕ ನಿರ್ಮಾಣ ಕಾಲವು ಇದರ ಮಾತೃಕೆಯದೆಂದೂಹಿಸಬಹುದು

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1171. ಕರಿಯಬಂಟನ ಕಥೆ by ಸಂಬಯ್ಯ.
KARIYABANṬANA KATHE. by SAMBAYYA.

Substance, Palm-leaf. Size, 7¾ × 1⅛ inches. Pages, 161. Lines, 5 on a page. Extent, 850 granthas. Character, Kannada. Condition, very much injured. Appearance, old. Mode of writing, fair.

Incomplete.

Same work as that described above.

(ವಿ-ವಿ.)—

ಅಸಮಗ್ರ. ಅತ್ಯಂತ ಶಿಥಿಲ. ಬರವಣಿಗೆ ಚೆನ್ನಾಗಿದೆ. ೧, ೧೨, ೨೩, ೨೯, ೩೪, ೩೭, ೪೦, ೪೧, ೪೪, ೪೮, ೭೧, ೭೨, ೮೦, ೮೪, ೯೬ ಈ ಓಲೆಗಳು ಹೋಗಿವೆ. ೯೭ ನೆಯದೆ ಕೊನೆಯ ಓಲೆಯಾಗಿದೆ. ಕೆಲವು ಓಲೆಗಳು ಮುರಿದಿವೆ. ೯೭ ನೆಯ ಓಲೆಯಲ್ಲಿ ಒಂದೇ ಪುಟದಲ್ಲಿ ಬರೆದಿದೆ.

ಮೇಲೆ ವರ್ಣಿತವಾದ ಗ್ರಂಥವೇ ಆಗಿದೆ.

No. 1172. ಕರಿಯಬಂಟನ ಕಥೆ by ಸಂಬಯ್ಯ.
KARIYABANṬANA KATHE BY SAMBAYYA.

Substance, Palm-leaf. Size, 8⅜ × 15/16 inches. Pages, 72. Lines, 3 on a page. Extent, 190 granthas. Character, Kannada. Condition, much injured. Appearance, old. Mode of writing, not good.

Incomplete.

Same work as that described above.

ಅಸಮಗ್ರ. ಅತ್ಯಂತ ಶಿಥಿಲ. ಬರವಣಿಗೆ ಚೆನ್ನಾಗಿಲ್ಲ. ಮೇಲೆ ವರ್ಣಿತವಾದ ಗ್ರಂಥವೇ ಆಗಿದೆ.

No. 1173. ಕರಿಯ ಬಂಟನ ಕಥೆ by ಸಂಬಯ್ಯ.
KARIYABANṬANA KATHE BY SAMBAYYA.

Substance, Palm-leaf. Size, 13¾ × 1 7/16 inches. Pages, 62. Lines, 4 to 6 on a page. Extent, 600 granthas. Character, Kannada. Condition, injured. Appearance, old. Mode of writing, fair.

Begins on fol. 38*a* of the Ms. described under No. 62 ante.

Incomplete.

Same work as that described above.

(ವಿ-ವಿ.)—

ಅಸಮಗ್ರ. ಶಿಥಿಲವಾದ ಪ್ರತಿ ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಕೆಲವು ಪುಸ್ತಕಗಳು—(ಭಾರತ ಇದು ಹಿಂದಣ 62 ನೆಯ ನಂಬರಿನಲ್ಲಿ ವರ್ಣಿತವಾಗಿದೆ. ನಾಮಲಿಂಗಾನು ಶಾಸನ—ಸಂಸ್ಕೃತದಲ್ಲಿ, ಔಷಧಿ—ಈ ಎರಡು ಒಂದೊಂದೋಲೆಗಳವೆ.) ಇವೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ

No. 1174. ಕರಿಯಬಂಟನ ಕಥೆ by ಸಂಬಯ್ಯ.

KARIYABANṬANA KATHE BY SAMBAYYA.

Substance, Palm-leaf. Size, 10⅝ × 1 5/16 inches. Pages, 10. Lines, 4 on a page. Extent, 35 granthas. Character, Kannada. Condition, very much injured. Appearance, old. Mode of writing, fair.

Begins on fol. 1*a*. The other work herein is (1) Gangāgaurîsamvāda 11*a*. Foll. 6 to 10 are left blank.

Incomplete.

Same work as that described above.

(ವಿ-ವಿ.)—

ಅಸಮಗ್ರ. ಬಹು ಶಿಥಿಲ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1175. ಕರಿಯಬಂಟನ ಕಥೆ by ಭಾಳಾಕ್ಷ.

KARIYABANṬANA KATHE BY BHAḶĀKṢA.

Substance, Paper. Size, 8 13/16 × 6 11/16 inches. Pages, 70. Lines, 21 to 26 on a page. Extent, 1,100 granthas. Character, Kannada. Condition, much injured. Appearance, old. Mode of writing, very bad.

Begins on page 1 of the Ms. described under No. 684 ante.

Complete.

The same story of Kariyabanṭa as written by Sambayya is described in this more elaborately by Bhāḷākṣa.

Beginning :

ದ್ವಿಪದೆ ॥ ಶ್ರೀ ಗಿರಿಜೇಶ ಶಂ । ಕರ ಭೂತೇಶ ।
ಭಾಗೀರಥೀಧರ । ಭವರೋಗ ಹರನೆ ॥
ಮನ್ಮಥ ಭಸಿತಾಂಗ । ಮಾಯಾಮದ ಭಂಗ ।
ಮುನಿ ಜನ ನುತಿ ಪಾತ್ರ । ಅನಲ ಸುನೇತ್ರ ॥

* * * *

ಕಂದ ॥ ಬಾಳೆಯು ತನಿವಣ್ಣಿಂ ಕನೆ ।
ಹಾಲುಂ ಸಕ್ಕರೆಯು ಜೇನು ಸುಧೆ ಮಧುರಸದೊಲ್ ॥

ಕೇಳುವರ ಕರ್ಣಕೆಂಪೆನೆ ।
ಬೇಳದ ಭಾಳಾಕ್ಷ ಕರಿಯ ಬಂಟನ [ಕೃತಿಯಂ] (ಕಥೆಯಂ) ॥

End :

ದ್ವಿ ॥ ಹೊಂದುವಪ್ಪಿಟ್ಟಲ್ಲದಾನಂದನೊಪ್ಪಿದನು ।
ಸ್ಕಂದ ಗಣನಾಥನಿಗೆ ತಂದೆಯೊಪ್ಪಿದನು ॥
ಸೂಕ್ಷ್ಮದೊಳಗೀ ಕೃತಿಯು ಸುಲಭವಾಗಿರಲು ।
ಯಕ್ಷಗಾನವ ಮಾಡಿದಾತನಾರೆನಲು ।
ಲಲನಾ ರತುನವೆಸಿಪ । ಅಲಗವ್ವಿ ಗರ್ಭ ।
ಲಳಿತಾಕ್ಷಿ ಶಂಭುವಿಗೆ ಕಳೆ ಚೆನ್ನಾಗಿ ॥
ಭಾವ ಜನ ಪಡಿರೂಪ ಭಾಳಾಕ್ಷ ಬೇಳ್ದ ।
ಕೋವಿದರಾಲಿಸಿ ಕೇಳ್ವುದೀ ಕೃತಿಯು ॥
ಆ ವೀರನೊಲಿಸಿದ ಶಿವ ಚರಿತ್ರೆಯನು ।
ಬರೆದ ಕವೀಶ್ವರರ್ಗೆ ದೊರಕುವುದು ಮುಕ್ತಿ ।
ಬರೆದಗೆ ಭಾಗ್ಯವು ಸ್ಥಿರವಾಗಿ ಇಹುದು ॥
ಸರಸದಿಂದೋದಿದೊಡೆ ಸಾಲೋಕ್ಯವಹುದು ;
ಅನುನಯದಿಂದ ಆಲಿಸಿ ಕೇಳ್ದವರ್ಗೆ ।
ಧನ ಕನಕ ವಸ್ತುವಾಹನ ಸಮೃದ್ಧಿಯಹುದು ॥
ಮಮತೆಯಿಂದೀ ಕಥೆಯ ಸಿ . . ಕರುಣದಿಂದ ।
ಭೂಚಕ್ರದಲ್ಲಿ ಸ್ಥಿರವಾಗಿಯೀ ಕಥೆಯು ।
ಆಚಂದ್ರ ತಾರಾರ್ಕವಾಗಿಯೊಪ್ಪುವುದು ॥

Colophon :

ಶ್ರೀ ನಾಗನಾಥ ವಿರೂಪಾಕ್ಷನ ಕರಿಯಬಂಟನ ಯಕ್ಷಗಾನ ಪುಸ್ತಕಂ ಸಮಾಪ್ತಂ ॥

(ವಿ.-ವಿ.)—

ಸಮಗ್ರ. ಬರವಣಿಗೆಯು ಚೆನ್ನಾಗಿಲ್ಲ. ತಪ್ಪುಗಳು ಬಹಳವಾಗಿವೆ.

ಕವಿಯು ಭಾಳಾಕ್ಷನೆಂಬವನು. ಸಂಬಯ್ಯನು ಬರೆದ ಕಥೆಯನ್ನೇ ಇವನು ಸ್ವಲ್ಪ ಚಂದಗಾಣಿಸಿ ಬರೆದಿರುವನು.

No. 1176. ಕರಿಯಬಂಟನ ಕಥೆ by ಭಾಳಾಕ್ಷ-
KARIYABANṬANA KATHE BY BHĀḶĀKṢA.

Substance, Palm-leaf. Size, 12⅜ × 1-5/16 inches. Pages, 67. Lines, 7 to 8 on a page. Extent, 1,100 granthas. Character, Kannada. Condition, much injured. Appearance, old. Mode of writing, good.

Begins on fol. 33*a*. The other work herein Sāraṅgadhara Caritre 1*a*.

Complete.

Same work as that described above.

(ವಿ-ವಿ.)—

ಸಮಗ್ರ. ೩೭ ನೆಯ ಓಲೆಯಲ್ಲಿ ಏನೂ ಬರೆದಿಲ್ಲ. ೬೬ ನೆಯ ಓಲೆಯಲ್ಲಿ ಒಂದೇ ಪುಟದಲ್ಲಿ ಬರೆದಿದೆ. ಬಹಳ ಶಿಥಿಲ. ಅನೇಕ ಓಲೆಗಳ ಮಧ್ಯದಲ್ಲಿ ಮೇಲಿನ ಭಾಗವು ಇಲಿಗಳಿಂದ ತಿನ್ನಲ್ಪಟ್ಟಿದೆ. ಲಿಪಿ ಚೆನ್ನಾಗಿದೆ. ಇದರೊಡನೆ ಸಾರಂಗಧರ ಚರಿತ್ರೆಯಿದೆ.

ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ. ಕವಿ ಭಾಳಾಕ್ಷನೆಂಬವನು. ಈ ಪುಸ್ತಕದ ಪಾಠವು ಶ್ಲಾಘ್ಯತರವಾಗಿದೆ. ಪುಸ್ತಕಾಂತ್ಯದಲ್ಲಿ "ಕಂದ" ತಪ್ಪುಂಬರೆದಾತಂ ಕಡು ಜಡರ ನಪ್ಪನೆಂದು ಬಯ್ಯಲ್ವೇಡಂ ॥ . . . . ಧಿ ಸಂವತ್ಸರದ ಕಾರ್ತಿಕ ಬ. ೭ ಲು ಮಂಗಳವಾರ ಪ್ರತಿ ಸಮಾಪ್ತ ॥ ಎಂದಿದೆ.

No. 1177. ಕರಿಯಬಂಟನ ಕಥೆ by ಭಾಳಾಕ್ಷ.
KARIYABANṬANA KATHE BY BHĀḶĀKṢA.

Substance, Palm-leaf. Size, 14¾ × 1 5/16 inches. Pages, 146. Lines 4 to 5 on a page. Extent, 1,150 granthas. Character, Kannada. Condition, much injured. Appearance, old. Mode of writing, good.

Incomplete.

Same work as that described above.

(ವಿ-ವಿ.)—

ಅಸಮಗ್ರ. ಕೊನೆಯ ಓಲೆಯಿಲ್ಲ. ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1178. ಕೊರವಂಜಿ ಕಟ್ಲೆ.
KORAVANJI KAṬLE.

Substance, Śritaḷa. Size, 19 × 1 13/16 inches. Pages, 3. Lines, 7 on a page. Extent, 45 granthas. Character, Kannada. Condition, slightly injured. Appearance, old. Mode of writing, good.

Begins on fol. 4*b*. of the manuscript described under No. 1128 ante.

Complete.

This is about a soothsayer telling a woman who is love with King Kanṭhirava, that her desire would be fulfilled. The author is not known.

Beginning :

ಕನ್ನಡ ಕೊರವಂಜಿ.

ಕಂ॥ ಶ್ರೀಕಾಂತ ನಂಬುಜಾಕ್ಷಂ ।
ಲೋಕಸ್ತುತ ದಿವ್ಯಚಾರು ಮಹಿಮೋತ್ತುಂಗಂ ॥
ಶ್ರೀ ಕಂಠೀರವನೃಪತಿ ಗ ।
ವೇಕೈಶ್ವರ್ಯಮನೊಡಚರ್ಗೀ ರಂಗೇಶಂ ॥

* * * * *

"ದರು"

"ಶಂಕರಾಭರಣ" ಅಟತಾಳ.

ಪಲ್ಲವಿ ॥ ಮಡದಿ ತಾನಿದೆ ಬಂದಳು ಕನ್ನಡ ಮಡದಿ ತಾನಿದೆ ಬಂದಳು ।
ವೊಡನೆ ಕಂಠೀರವಜನಪಾಲಗೆ ಮಿಗೆ ವೊಲಿದು ಮಹಾನಂದದಿಂದಿಲ್ಲಿಗೆ ॥

End :

(ಕೊರವಂಜಿ)

(ದರು)

ಆವನು ಜಗದೇಶವೀರ ವಿಕ್ರಮನು ಮ ।
ತ್ತಾವನು ಚಾಗಿಗಳರೆಯ ॥
ಆವನು ರಾಜಕಂಠೀರವ ರಾಯನು ಆ ವಸುಧೇಶನ ಬಯಸಿಹೆ ನೀನು ॥

ನೀನೇತಕೆಂತು ಚಿಂತಿಸಿಯೆ ನೆನೆದ ಕಾರ್ಯವಾದೀತು ಕಾಣೆ. ಒಂದೆ-ಎರಡೆ-ಮೂರೆ: ಮೂರೆಂದರೆ :—ಮೂರು ಗಳಿಗೆಯೋ ಮೂರು ದಿವಸವೋ ಏನೆಂದು ಕೇಳೀಯೆ ದುಂಡಿ. ಮೂರೆಂದರೆ ಮೂರುಗಳಿಗೆಯೊಳಾದೀತು. ಕಾಣೆಯವ್ವ, ನನ್ನ ಮಾತ ನನ್ನಿಯೆಂದು ಬಗೆದಿರು. ಮುನ್ನ ಪಾಂಡ್ಯ ದೇಶದಲ್ಲಿ ಬಾಣಾವತಿಗೆ ಪೇಳಿದೆನು. ಕೇರಳ ದೇಶದಲ್ಲಿ ಕೀರವಾಣಿಗುಸುರಿದೆನು. ಈ ತೆರದಿನನೇಕರಿಗೆ ಪೇಳಿದೆನು. ನಾನು ಪೇಳಿದುದು ತಪ್ಪದು. ನಿನಗೂ ನೆನೆದ ಕಾರ್ಯ ಕೈಗೂಡಿ ಸಂತೋಷವಾದೀತು. ಕಾಣೆಯವ್ವ !

Colophon :

(ಕನ್ನಡ ಕೊರವಂಜಿ ಕಟ್ಟಿ ಸಂಪೂರ್ಣ.)

(ವಿ-ವಿ.)—

ಸಮಗ್ರ. ಶ್ರೀತಾಳೆ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೂ ಅನೇಕ ಪುಸ್ತಕಗಳಿವೆ. ಆ ಬಗೆಗೆ ಹಿಂದಣ ೧೧೨೮ ನೆಯ ನಂಬರನ್ನು ನೋಡುವುದು. ಇದರಲ್ಲಿ ಕಂಠೀರವ ರಾಜನಲ್ಲಿ ವಿರಹಗೊಂಡ ಓರ್ವಳಿಗೆ ಅವಳ ಇಚ್ಛೆಯು ನೆರವೇರುವುದೆಂದು ಕೊರವಂಜಿ ಶಾಸ್ತ್ರವನ್ನು (ಪ್ರಶ್ನೆ) ಹೇಳುವ ವಿಷಯವು ಉಕ್ತವಾಗಿದೆ.

No. 1179. ಗಯ ಚರಿತ್ರೆ.

GAYA CARITRE.

Substance, Śrītāḷa. Size, 13⅜ × 1 15/16 inches. Pages, 36. Lines, 8 to 10 on a page. Extent, 700 granthas. Character, Kannada. Condition, injured. Appearance, old. Mode of writing, good.

Begins on fol. 73*a*. of the manuscript described under No. 1051 ante.

Incomplete.

Describes the Purāṇic story of the fight between Śrīkṛṣṇa and Arjuna when the latter wanted to defend Gaya who had offended Śrīkṛṣṇa. The work is dedicated to Śrīkṛṣṇa worshipped at Udipi.

Beginning :

ಶಾ ॥ ವಿ ॥ ಶ್ರೀ ಮದ್ಬ್ರಹ್ಮಪುರಂದರಾದಿ ವಿಬುಧ ಶ್ರೇಣೀ ಶಿರೋ ಭೂಷಣಾ ।
ಸ್ತೋತ್ರೋದ್ವರ್ತನ ಕುಂಚಿ[ಕೋ] (ತಾ) ಮಲ ನಖಂ ಸೂಕ್ಷ್ಮೇತರ ಪ್ರಸ್ತರಂ॥
ವಾಮಾಕ್ಷೀ ಕರಣೋ ಹದ ಪ್ರಘಟಿಕಾ ವೃತ್ತಪ್ರಗುಲ್ಫಾನ್ವಿತಂ ॥
ವ್ಯೋಮಸ್ನಾನ ಧುನೀಯುತಂ ಹರಿಪದಾಂಭೋಜಂ ಸದಾ ಭಾವಯೇತ್ ॥

ವಚನ ॥ ಈ ಪ್ರಕಾರದಲ್ಲಿ ಪ್ರಬಂಧಕಲ್ಪಕನು ನಿಃಶ್ರೇಯಸಾದಿ ಸಕಲ ಮನೋಭೀಷ್ಟಂಗಳನ್ನು ಕೊಡುವಂಥಾ ಶ್ರೀ ಕೃಷ್ಣನ ಚರಣಾರವಿಂದಗಳನ್ನು ಧ್ಯಾನವಂ ಮಾಡಿದವನಾಗಿ ಆ ಮೇಲೆ ಪ್ರತ್ಯೂಹ ನಿವಾರಣಾರ್ಥವಾಗಿ ವಿನಾಯಕಾದಿ ಸಕಲ ದೇವತೆಗಳ ಪ್ರಾರ್ಥನೆಯಂ ಮಾಡುತ್ತಿದ್ದಾನೆ.

ರಾಗ "ಸೌರಾಷ್ಟ್ರ" ತ್ರಿವುಡೆ ॥

ಗುರುವಿನಂಘ್ರಿಗೆ ನಮಿಸಿ ಗಣಪಗೆ ।
ಕರವ ಮುಗಿದಂಭೋಜ ಸಂಭವ ॥
ನರಸಿ ವಾಗೀಶ್ವರಿಯ ಚರಣಾಂಬುರುಹಕೆರಗಿ ॥ ೧ ॥
ಹರಿಹರ ಬ್ರಹ್ಮೇಂದ್ರ ಶಿಖಿಯಮ ।
ವರುಣ ಪವನ ಕುಬೇರ ಶಶಿರವಿ ।
ಧರಣಿ ಸುತ ಬುಧ ಧಿಷಣ ಕವಿಗೆಲ್ಲರಿಗೆ ಮಣಿದು ॥ ೨ ॥
ಮರುತ ಪಿತೃವಸು ವಿಶ್ವರುದ್ರರ । ಗರುಡ ಫಣಿ ಗಂಧರ್ವ ಸಾಧ್ಯರ ॥
ಮೆರೆವ ಮುನಿಮನುಗಳ । ಪದಾಬ್ಜಕೆ ಮುಗಿದು ಕೈಯ್ಯ ॥ ೩ ॥

ವಚನ ॥ ಆ ಮೇಲೆ ಇಷ್ಟದೇವತೆಯ ಪ್ರಾರ್ಥನೆಯಂ ಮಾಡುತ್ತಿದ್ದಾನೆ.

"ಅರ್ಥ ಚಂದ್ರಿಕೆ."

ಶರಣೆಂಬೆ ಸಲಹೆನ್ನ ಶೇಷಗಿರಿವಾಸ । ಕಾಯೆನ್ನ
ಮೂಕಾಂಬಿಕಾ ಮಹಾದೇವಿ, ಕೊಡು ಯೆನಗೆ
ಮತಿಯ ಕುಕ್ಕೆಯ ಸುಬ್ಬರಾಯ ॥

ವಚನ ॥ ಆ ಮೇಲೆ ಆದಿ ಮಹಾಕವಿಗಳಿಗೆ ವಂದಿಸುತ್ತಾನೆ.

ಏಕತಾಳ ಕಲ್ಮಷರಹಿತಗೆ ಕಮನೀಯ ಚರಿತಗೆ ವಾಲ್ಮೀಕಿ—

ಮುನಿಪಗೆ ವಂದಿಪೆನು ನಾನು ॥
ಶ್ರೀ ಶಾವತಾರಗೆ ಶ್ರುತಿ ಮೂಲಾಧಾರಗೆ ।
ವ್ಯಾಸ ಮುನೀಂದ್ರಗೆ ವಂದಿಪೆ ನಾನು ॥ ೨ ॥
ಅಕಳಂಕ ಚರಿತಗೆ ಅತಿ ಪುಣ್ಯ ಭರಿತಗೆ ।
ಶುಕಯೋಗಿವರ್ಯಗೆ ಶರಣೆಂಬೆ ನಾನು ॥ ೩ ॥

ವಚನ ॥ ಆ ಮೇಲೆ ಷಡ್ದರ್ಶನ ಸ್ಥಾಪನಾಚಾರ್ಯರಾದ ಜಗದ್ಗುರುಗಳಿಗೆ ವಂದಿಸುತ್ತಿದ್ದೇನೆ.

ಅರ್ಥ ಚಂದ್ರಿಕೆ ॥ ಶಂಕರಾಚಾರ್ಯರಿಗೆ ಶರಣೆಂಬೆ ನಾನು ।

ಧ್ಯಾನಿಸುವೆ ಮತ್ತೆ ವಿದ್ಯಾರಣ್ಯ ಮುನಿಯ । ವಂದಿಸು
ವೆನು ಚಿದಾನಂದ ಭಾರತಿಗೆ ।

ವಚನ ॥ ಆ ಮೇಲೆ ಪುರಾತನ ಕವಿಗಳಿಗೆ ವಂದಿಸುತ್ತಿದ್ದಾನೆ.

ಕಂದ ॥ ಕವಿವರ್ಯ ಕಾಳಿದಾಸನ ।
ಭವಭೂತಿಯು ದಂಡಿಕವಿಯು ಬಾಣ ಮಯೂರರ ॥ (?)
ಶಿವ ಭಕ್ತ ಬಿಲ್ಹಣಾಂಕನ ।
ಕವಲಿಲ್ಲದೆ ನುತಿಸಿ ಪೇಳ್ವೆ ಕೃತಿಯಂ ಧರೆಯೊಳ್ ॥

ಘನವೆತ್ತ ವ್ಯಾಸರಾಯರ ।
ಮುನಿ ಜನವರ ವಾದಿರಾಜ ಮೌನಿವರೇಣ್ಯರ ॥ (?)
ಕನಕ ಪುರಂದರ ವಿಠ್ಠಲ ।
ರನು ವಂದಿಸಿ ಪೇಳ್ವೆ ಕೃತಿಯನವನೀತಳದೊಳ್ ॥

ಕಂದ ॥ ಆ ರುದ್ರ ಭಟ್ಟ ವರ್ಯನ
ಭಾರತ ರಘುರಾಮ ಚರಿತ ಭಾಗವತಂಗಳ । ? ॥
ನೋರಂತೆ ಪೇಳ್ದ ಕವಿಗಳ ।
ಕಾರುಣ್ಯದೆ ಪೇಳ್ವೆ ಕೃತಿಯಂ ಧರೆಯೊಳ್ ॥

ವಿದ್ವಜ್ಜಲದೊಳ . . . ।
ಗದ್ವೈತಮನಲ್ಲಗಳೆದು ದ್ವೈತನ ಸಾಧಿಪ ॥
ಮಧ್ವ ಮುನಿಗೊಲಿದ ದಾನವ ।
ವಿಧ್ವಂಸಿಗೆ ಪೇಳ್ವೆ ಕೃತಿಯ ನುಡುಪಿಯ ಕೃಷ್ಣಗೆ ॥

ವಚನ ॥ ತದನಂತರದಲ್ಲಿ ಸೂತಪೌರಾಣಿಕನು ನೈಮಿಶಾರಣ್ಯ ಪುಣ್ಯಕ್ಷೇತ್ರ ನಿವಾಸಿಗಳಾದ ಶೌನಕಾದಿ ಮುನಿಗಳಿಗೆ ಪೇಳದಂಥಾ, ಕೃಷ್ಣಾರ್ಜುನ ಸಂಗ್ರಾಮದ ಪ್ರಸಂಗವನು [ಕನ್ನಡ] (ಕರ್ಣಾಟ) ಗೀರ್ವಾಣ ಭಾಷೆಯಿಂದ ದ್ರಾಕ್ಷಾಪಾಕದಿಂದ ಯಕ್ಷಗಾನ ಪ್ರಬಂಧವನು ವಿರಚಿಸು ವಂಥವನಾಗಿ ಆ ಸೂತ ಪೌರಾಣಿಕನು ಆ ಮುನಿಗಳಿಗೆ ಏನೆಂದು ಹೇಳುತ್ತಿದ್ದಾನೆ.

* * * *

End :

ವಚನ ॥ ಇತ್ತಲೀ ದ್ರೌಪದಿಯು ಅರ್ಜುನನ ಸಮೀಪಕ್ಕೆ ಬಂದು ಏನೆಂದಳು ಎಂದರೆ—

ಝಂಪೆ ॥ ಬಂದಿಹುದು ಪೋರೆದಪ್ಪಿದ ಶರಧಿಯಂದದಲಿ ॥
ನಂದ ನಂದ . . . . ॥

(ವಿ-ವಿ.)—

ಅಸಮಗ್ರ. ಶಿಥಿಲ. ಬರವಣಿಗೆ ಚೆನ್ನಾಗಿದೆ. ಇದರೊಡನಿರುವ ಇನ್ನೊಂದು ಗ್ರಂಥ, ವಿಕ್ರಮ ವಿಲಾಸ ಕಾವ್ಯ. ಕವಿಯು ತಾನು ಇಷ್ಟದೇವತೆಗಳನ್ನು ಸ್ತುತಿಸುವಾಗ "ಮೂಕಾಂಬಿಕಾ ದೇವಿ" ಮತ್ತು "ಕುಕ್ಕೆಯ ಸುಬ್ಬರಾಯ" ದೇವರ ನಾಮಸ್ಮರಣೆಯ ಮಾಡುತ್ತಾನೆ. ಉಡುಪಿಯ "ಕೃಷ್ಣ"ನಿಗೆ ತನ್ನ ಕೃತಿಯನ್ನು ಹೇಳುತ್ತಿರುವನಾಗಿ ಬರೆದಿರುವನು. ಮತ್ತು.

ಮಧ್ವ ಮುನಿಗಳನ್ನೂ ರುದ್ರ ಭಟ್ಟನನ್ನೂ ಸ್ತುತಿಸಿರುವನು. ಈ ಎಲ್ಲ ಕಾರಣಗಳಿಂದ ಈತನು "ದಕ್ಷಿಣ ಕನ್ನಡ" ದವನೆಂದೂ ಕ್ರಿ. ಶ. 12 ನೆಯ ಶತಮಾನದ ಅನಂತರದವನೆಂದೂ ಹೇಳ ಬಹುದು.

No. 1180. ಗಯ ಚರಿತೆ.

GAYA CARITE.

Substance, Paper. Size, 10⅜ × 9 7/16 inches. Pages, 39. Lines 20 on a page. Extent, 700 granthas. Character, Kannada. Condition, good. Appearance, new. Mode of writing, good.

Restored in 1936–37 from the Ms. described above.

Begins on page 164 of the manuscript described under No. 1052 ante.

Incomplete.

(ಕ.ವಿ.)—

ಅಸಮಗ್ರ. ಕಾಗದದ ಪ್ರತಿ. ಇದು ಹಿಂದಣ ನಂಬ ನಲ್ಲಿ ವರ್ಣಿತವಾಗಿರುವ ಪ್ರತಿಯ ಪುತ್ರಿಕೆಯಾಗಿದೆ. ಲಿಪಿ ಚೆನ್ನಾಗಿದೆ. ಇದರೊಡನೆ "ವಿಕ್ರಮ ವಿಲಾಸ" ವೆಂಬ ಪುಸ್ತಕವೂ ಇದೆ. ಅದು ಹಿಂದೆ ೧೦೫೨ ನೆಯ ನಂಬರಿನಲ್ಲಿ ವರ್ಣಿತವಾಗಿದೆ.

No. 1181. ಗಿರಿಜಾ ಕಲ್ಯಾಣ by ಗಂಗ.

GIRIJĀKALYĀṆA BY GAÑGA.

Substance, Sritala. Size. 7¼ × 1¾ inches. Pages, 248. Lines, 6 to 8 on a page. Character, Kannada. Extent, 1650 granthas. Condition, slightly injured. Appearance, old. Mode of writing, fair.

Complete.

Describes the story of the marriage of Pārvati with Śiva. The author is Gaṅga, son of Gōpaya and Pārvatamma.

Date of transcription :—Wednesday the 10th day of the bright fortnight of lunar month Kārtika in the year Śubhakṛtu.

Name of the scribe :—Gaudayya, son of Lingayya of Mūgūru, who copied at the instance of Oḍeya, son of Basavayya of Mūgūru.

Beginning :

ದ್ವಿಪದೆ ॥ ಶ್ರೀರಜತ ಗಿರಿವಾಸ । ಶ್ರೀ ಪಾರ್ವತೀಶ ।
ಸುರರಾಜರಾಜ । ಸುಮನೋಜ ಭೂಜ ॥
ಫಣಿಕುಂಡಲಾಭರಣ । ಪಂಚಾಕ್ಷರೀ ರಮಣ ।
ಅಣುಮಹಾವರಕಾಯ । ಆನತ ಜನಪ್ರಿಯ ॥

* * *

ಗುರುವೆ ಮದ್ಗುರುವೆ ಸ । ದ್ಗುರು ಸದಾಶಿವ ಮೂರ್ತಿ ।
ಗುರು ಶಂಕರಾಚಾರ್ಯ । ಗೆರಗಿ ಪೇಳುವೆನು ॥ ೯ ॥

* * * * *

End :

ಪರಮ ಮುನಿ ಶುಕಪರೀಕ್ಷಿತಗೆ ಪೇಳದನು ।
ಗಿರಿಜಾ ಕಲ್ಯಾಣದಾಘನ ಪುಣ್ಯ ಕಥೆಯ ॥
ಜನಗೇಂದ್ರನ ಸುತೆಯ ಕಲ್ಯಾಣವನು ಯಕ್ಷ ।
ಗಾನದಿಂ ಪೇಳದಾ ಕವಿಯಾರು ಎನಲು ॥
ಕಕುದದ್ರಿ ಪುರವಾಸ ಕಾತ್ಯಾಯನ ಸೂತ್ರ ।
ಅಕಳಂಕ ಚಾರಿತ್ರ ಶಾಂಡಿಲ್ಯ ಗೋತ್ರ ॥
ಶರನಿಧಿಯ ಚಂದ್ರ ಗೋಪಯ ತಮ್ಮನ ಪುತ್ರ ।
ಹರಗಂಗೇಶನ ಚರಣ ಸರೋಜ ಭೃಂಗ ॥
ಅಂಗನೆಯು ಪಾರ್ವತಮ್ಮನ ತನೂಜಾತ ।
ಗಂಗನೀ ಕೃತಿಯ ಗಂಗೇಶಗೊಪ್ಪಿಸಿದ ॥

* * *

ದ್ವಿ॥ ಹರನ ಕಲ್ಯಾಣದ ಚರಿತೆಯೊಂದಕ್ಷರವು।
ನರರ ಕರ್ಣಕೆ ಸೋಂಕೆ ದುರಿತವೋಡುವುದು ॥
ಎಂದು ಶುಕಯೋಗಿ ಪರೀಕ್ಷಿತಗೆ ಪೇಳದಾ ।
ಇಂದುಧರ ಕಲ್ಯಾಣ ಸಮಾಪ್ತವಾಯಿತ್ತು ॥

ವಚನ॥ ಆ ಸಮಯಾಂತರದಲ್ಲಿ ಕುಮಾರಸ್ವಾಮಿಗೆ ಪಾರ್ವತಿದೇವಿಯಮ್ಮನವರು ಮಂಗಳಾರತಿಯನೆತ್ತಿದರದೆಂತೆನೆ॥

ಧವಳಾರ ಸೋಭಾನ ॥

ಮೃಡಕುಮಾರನಾದವಗೆ । ಕಡುಗಲಿ ತಾರಕ ವೈರಿಗೆ ।
ಜಡದಮರರ ರಕ್ಷಿಸಿದಗೆ । ಸಡಗರದಲ್ಲಿ ಷಡುಮುಖಗೆ ॥
ಗಂಭೀರ ಕುಮರಗೆ ಹೂಹಾಗೆ । ಸಂಭ್ರಮದಲ್ಲಿ ಶರಜನ್ಮಗೆ ।
ಜಂಭಾರಿ ವೈರಿಯ ಜೈಸಿದವಗೆ । ಶಂಭುಪುತ್ರಗೆ ಷಣ್ಮುಖಗೆ ॥
ಶೃಂಗಮಗಿರಿಯ ವಾಸನಿಗೆ । ಹಿಂಗದೊರವ ನೀವಂಥಂಗೆ ।
ಗಂಗೇಶನ ನಿಜಸುತಗೆ । ಮಂಗಳಮಾರುತಿ ಹರಗೆ ॥

Colophon :

ಕುಮಾರ ಸಂಭವ ಸಮಾಪ್ತಂ ಮಂಗಳಮಹಾಶ್ರೀ ।
ಶ್ರೀ ಶಂಭುಲಿಂಗಾಯ ನಮಃ ನಂಜುಂಡಂ.

ಪುಸ್ತಕದ ಕೊನೆಯಲ್ಲಿ "ಮೋಕ್ಷಾಪುರದ ತ್ರಿಪುರಾಂತಕಾಯನಮಃ ಶುಭಕೃತು ಸಂವತ್ಸರದ ಕಾರ್ತೀಕ ಶು. ೧೦ ಬುಧವಾರ ದಿವಸ, ಮೂಗೂರ ಸ್ಥಳಲಿಂಗಯ್ಯನ ಮಗ ಗೂಡಯ್ಯನು ಈ ಊರಲ್ಲಿರುವ ಬಸವಯ್ಯನ ಮಗ ಒಡೆಯರಿಗೆ ಬರೆದುಕೊಟ್ಟ ಗಿರಿಜಾಕಲ್ಯಾಣದ ಪುಸ್ತಕಕ್ಕೆ ಶುಭಮಸ್ತು " ಎಂದಿದೆ.

(ವಿ-ವಿ.)—

ಸಮಗ್ರ. ಪ್ರತಿ ಚೆನ್ನಾಗಿದೆ. ಲಿಪಿ ಚೆನ್ನಾಗಿದೆ. ಕವಿ ಗಂಗನೆಂಬವನು. ಇವನ ತಂದೆ ಗೋಪಯ್ಯ, ತಾಯಿ ಪಾರ್ವತಮ್ಮ, ಇಷ್ಟದೇವತಾ ಪ್ರಾರ್ಥನೆಯ ಮಧ್ಯದಲ್ಲಿ ಈತನು "ಶೃಂಗವಾ ಚಲವಾಸ ಗಂಗಾಧರೇಶ" "ಕಕುದ್ಗಿರೀಶ ವಿಘ್ನೇಶ" ಎಂದು ಮೊದಲಾಗಿ ಹೇಳುವುದರಿಂದ ನಂದಿದುರ್ಗದ ಪ್ರಾಂತದವನಾಗಿದ್ದರೂ ಇರಬಹುದು. ತನ್ನ ಕೃತಿಯ ವಿಷಯದಲ್ಲೀತನು "ಗಿರಿಜಾಕಲ್ಯಾಣವ । ಘನರಸಾಮೃತವ" ಎಂಬ ಪದ್ಯಭಾಗದಿಂದ ತನ್ನಾಶಯವನ್ನು ಪ್ರಕಟಿಸುವನು.

No. 1182. ಗಿರಿಜಾಕಲ್ಯಾಣ by ಲಿಂಗ-
GIRIJĀKALYĀṆA BY LIÑGA.

Substance, paper. Size, 10½ × 9-7/16 inches. Pages, 117. Lines, 20 on a page. Extent, 1,650 granthas. Character, Kannada. Condition, fair. Appearance, new. Mode of writing, not bad and not free from mistakes.

Restored in 1924–25 from the Ms. described above.

Complete.

(ವಿ-ವಿ.)—

ಸಮಗ್ರ. ಕಾಗದದ ಪ್ರತಿ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಯಾಗಿದೆ. ಲಿಪಿ ಚೆನ್ನಾಗಿದೆ.

No. 1183. ಗಂಗಾ ಗೌರೀ ಸಂವಾದ by ನೀಲಲೋಹಿತೆ alias ನೀಲಮ್ಮ-
GAÑGĀGAURĪSAMVĀDA BY NĪLALŌHITE *alias* NĪLAMMA.

Substance, palm-leaf. Size, 13-5/16 × 1⅜ inches. Pages, 264. Lines, 5 to 6 on a page. Extent, 1,950 granthas. Character, Kannada. Condition, much injured. Appearance, old. Mode of writing, good.

Incomplete—Contains 4 sandhis and 51 verses in the 5th sandhi.

This is a dialogue between Gaṅgā and Gaurī the two wives of Śiva. The story is said to have been narrated by Nīlalōhite also called Nīlamma her husband Basavēśvara.

Beginning :

ಸೂಚನೆ ;— ಶ್ರೀ ಮಹ . . . . ಪರಮಜ್ಞಾನ
ಶಕ್ತಿಯಾದಂಥಾ ನೀಲಲೋಚನೆ ತನ್ನ ಪುರು (ಷಬಸವೇಶ್ವರನಿಗೆ)————————ದಳು
ಗಂಗೆ ಗಿರಿಜೆಯ ಸಂವಾದ ನವರಸ ಸಂಪೂರ್ಣ ಚರಿತೆಯ . . . .
. . . . . ಜ್ಞಾನವೆಂಬ ಶಿಷ್ಯನಿಗೆ ನಿರೂಪಿಸಿ ಪೇಳ್ದ ಗಂಗೆ ಗಿರಿಜೆಯ ಸಂವಾದದ
ಪ . . . . , ... ಅಂ
ಬರದ ಗಂಗೆಯನು ಬೊಂಬೆಯ ರೂಪನೆ ಮಾಡಿ । ಅಂಬಿಗರ ಶರಣಾತ್ಮಜೆಯೆನಿಪ
. . . .

* * * *

ಕೂಲಧರನ ಸ್ತುತಿ ಮಾಡಿದಳು ನೀಲಮ್ಮ

*　*　*　*

ಸಾಂಗತ್ಯ॥ ಮುತ್ತೈಯೆದ್ದ ನೀಲಮ್ಮ ಮುನಿ ಮಹಾಜೋಗಿಯಾ ।
ಪುತ್ಥಳಿಯ ರೂಪ ನಿರ್ಭಿಸುತ ॥
ಮರ್ತ್ಯ ಲೋಕದ ಮಹಾ ಮಹಿಮ ಶ್ರೀ ಬಸವನೊಳ್ ।
ಚಿತ್ರದ ಕಥೆಯ ಪೇಳದಳು ॥

*　*　*　*

ನೀಲಲೋಚನೆ ತನ್ನ ಪುರುಷ ಬಸವೇಶ್ವರದೇವರಿಗೆ ಗಂಗೆ ಗೌರಿ ಸಂವಾದವ ನಿರೂಪಿಸ ಬೇಕೆಂದಳು.

*　*　*　*

ಸತಿಯು ನೀಲರತ್ನವೇಣಿ ನೀಸೆಲೆ ಹೆಣ್ಣೆ । ನಿನ್ನ
ಮತಿಗೆ ಮಂಗಳಾತ್ಮಕ ಶಿವನು ಎಲೆ ಹೆಣ್ಣೆ ॥
ಕಥನ ಗೌರೀಗಂಗೆ ಜಗಳ ಯೆಲೆ ಹೆಣ್ಣೆ । ಪೇಳು
ಪೃಥಿವೀ ಜನರು ಕೇಳುವಂತೆ ಯೆಲೆ ಹೆಣ್ಣೆ.
ಹಳಗನ್ನಡವ ಲಾಲಿಸಿನ್ನು ಬಸವಯ್ಯಾ ॥ ಗೋಪ್ಯ ॥
ಪಳಗನ್ನಡವ ಲಾಲಿಸಿನ್ನು ಬಸವಯ್ಯಾ ।
ಇಳೆಯ ಬಾಲರು ನಗುವಂತ್ರಿನ್ನು ಬಸವಯ್ಯಾ ॥ ನನ್ನ ॥
ತಿಳಿಗನ್ನಡವ ಲಾಲಿಸಿನ್ನು ಬಸವಯ್ಯಾ ॥

(೬೬ ನೆಯ ಓಲೆಯಿಂದ)

ಅಕ್ಕಟ ಗಿರಿಜೆ ಕೇ । ಳ್ಮರ್ಕಟಗುಣದೊಳಿ । ಯೆಕ್ಕಲ ಜೋಗರ ಮಗಳ್ ॥
ಕುಕ್ಕು ಹೊರಸು ನಿನ್ನ । ಲೆಕ್ಕಿಸುವೆನೆ ನಿಮ್ಮ । ಮುಕ್ಕಣ್ಣ ಶಿವನ ಬಲುವೆನಗೆ ॥
ಮಂಗಳ ಹೊಲತಿ ಕೇ । ಳ್ಮಂಗಯ್ಯ ಬಾಚಲು । ಅಂಗುಳ ನಾಲಗೆಕೊಯ್ವೆ।
ಹೆಂಗುಸು ಬಾಡಿಗ ನಿವನಾದ ಶಿವನಗ । ಣಂಗಳ ಬಲುಹುಂಟುಯೆನಗೆ ॥
ಭುಲ್ಲಿ ಗಿರಿಜೆ ನಿನ್ನ । ಸೊಲ್ಲುಡುಗಲು ಕೇಳು । ಯೆಲ್ಲಿಯ ಶಿವಗಣನಿನಗೆ ।
ಎಲ್ಲ ದೇವರ ಸಾಲಿಗ ಭೇದ್ಯನೆ ನಮ್ಮ । ಬಲ್ಲಿದ ಶಿವಗೆಣೆ ಯಾರು ॥

*　*　*　*

(೬೯ ನೆಯ ಓಲೆಯಿಂದ)

ಹುತ್ತೆ ಕೇಳು ಮಂತ್ರಿ ಬಸವ ನೆಲೆ ದೇವಾ, ಮನೆಯ । ತೊತ್ತುಮಾಡಿ ।
ಜ . . . ಗರಿನ್ನು ಯೆಲೆ ದೇವಾ ॥ ಗಿರಿಜೆ । ಹತ್ತಿಸಿನ್ನು ಝೂಡಿಸಿದ್ಯ
ಯೆಲೆ ದೇವಾ ॥
ಹೊಟ್ಟುಗೂಳ ತಿಂದ ಸಾಮಿ ಎಲ ಹೆಣ್ಣೇ । ದೊಡ್ಡ । ಬೆಟ್ಟಗಿರಿಗೆ ।
ಬೋಗುಳಲೆನೂಯೆಲೆ ಹೆಣ್ಣೇ । ನೆಟ್ಟಗುಂಡು ನಡುಗುವುದೆ ।
ಯೆಲ । ಹೆಣ್ಣೇ । ನಿನ್ನ । ಲೊಟ್ಟೆಜಾತಿಗುಣಕೆ ಹೋದೆಯೆಲೆ ಹೆಣ್ಣೇ ।
ಜೋಕು ಮಾರ ಹೊಲತಿ ಕೇಳುಯೆಲೆ ಹೆಣ್ಣೇ ।

ನಾಯಿಗೇಕೆ ಹಳೆಯ ತೊಗಲುಗಳು ಯೆಲೆ ಹೆಣ್ಣೇ ।
ಹಾಕೆ ಹತ್ತಿ ಮದ್ದಾನೆಗಳ ಯೆಲೆ ಹೆಣ್ಣೇ ।
ಕೆಡಹು । ನೂಕುವರೆ ಮೂಳ ಹೊಲತಿಯುಲೆ ಹೆಣ್ಣೆ ॥

Colophon :

ಅಂತು ಸಂಧಿ ನಾಲ್ಕಕ್ಕಂ ಪದನು ೬೦೧೦ ಕ್ಕಂ ಮಂಗಳ ಮಹಾಶ್ರೀ.

End :

ಪಕ ಪಕನೆ ನಗುತಲಾಗ ।
ಕರಬ್ಬೆಯು ದಿಕ್ಕಿನೊಳಗಾರ್ಭಟಿಸಲು ।
ಕಕುನ ಶಾಸ್ತ್ರವ ಪೇಳ್ವ ಕುಕ್ಕುಟ ನಾಯ್ಗಳಿಂದು ।
ಶಿಖಿಯು ಬಾಣ ದೊಳೆಸೆಯಲು ॥

(ಬಿ-ಬಿ.)—

ಅಸಮಗ್ರ. ಮೊದಲಿಂದ ನಾಲ್ಕು ಸಂಧಿಗಳೂ ಐದರಲ್ಲಿ ೫೧ ಪದ್ಯಗಳೂ ಇವೆ. ಅತ್ಯಂತ ಶಿಥಿಲವಾದ ಪ್ರತಿ. ಗ್ರಂಥಪಾತವಿದೆ. ೨ ನೆಯ ಓಲೆಯಿಲ್ಲ. ಅಲ್ಲಲ್ಲಿ ಅನೇಕ ಓಲೆಗಳು ತುಂಡಾಗಿವೆ. ಬರವಣಿಗೆ ಚೆನ್ನಾಗಿದೆ. ಈ ಗ್ರಂಥವನ್ನು ಬರೆದ ಕವಯಿತ್ರಿಯು ಇದಕ್ಕೆ "ಶಿವನು ಗಂಗೆ ತಂದ ಕಥೆಗಳು" ಎಂಬ ಹೆಸರನ್ನು ಕೊಡುತ್ತಾಳೆ. ನೀಲಮ್ಮನೆಂಬ ಬೇರೊಂದು ಹೆಸರನ್ನುಳ್ಳ ನೀಲಲೋಚನೆಯು ಈ ಗ್ರಂಥವನ್ನು ಬರೆದವಳು. ಇತರ ವಿಷಯಗಳನ್ನು ದಾಹೃತ ಭಾಗಗಳಿಂದ ತಿಳಿಯುವುದು. ಗ್ರಂಥ ನಿರ್ಮಾಣ ಕಾಲವು ಸು ೧೭೦೦ ಇರಬಹುದೆಂದು ಕವಿಚರಿತ್ರಕಾರರ ಮತವು.

No. 1184- ಗಂಗಾ ಗೌರೀ ಸಂವಾದ by ನೀಲಲೋಹಿತೆ alias ನೀಲಮ್ಮ-
GAṄGĀGAURĪSAMVĀDA BY NĪLALŌHITE *alias* NĪLAMMA.

Substance, palm-leaf. Size, 10⅝ × 1-5/16 inches. Pages, 80. Lines, 4 on a page. Extent, 300 granthas. Character, Kannada. Condition, much injured. Appearance, old. Mode of writing, good.

Begins on fol. 11 of the Ms. described under No. 1174 *ante*.

Incomplete.

Same work as that described above.

Beginning :

ಸೂಚನೆ—ಶ್ರೀ ಕಲ್ಯಾಣವೆಂಬುವ ಪಟ್ಟಣದಲ್ಲಿ ಪರಮಜ್ಞಾನಾಶಕ್ತಿಯನಾಗುತ ನೀಲಲೋಚನೆ ತನ್ನ ಪುರುಷ ಬಸವೇಶ್ವರ ದೇವರಿಗೆ ಬಿನ್ನಹಂ ಮಾಡಿ ಪೇಳ್ದ ಗಂಗೆ ಗೌರಿ ಸಂವಾದದ ತ್ರಿವರ್ಣದ ಸಾಂಗತ್ಯಕ್ಕೆ ಶ್ರೀರಸ್ತು.

* * * *

ಅರಸಿ ಗಿರಿಜೆ ಗಂಗೆ ಜಗಳೆವ ನೀಲಮ್ಮ ಗಂಡ ।
ಗೊರೆದು ಪೇಳ್ದ ಶಿವನ ಕೃತಿಯು ನೀಲಮ್ಮ ॥

* * * *

ನೀಲವ್ಮ ಮುಂದೆ ಕೊಂಡವನ ಸ್ತುತಿ ಮಾಡಿದಳು । ನೀಲಮ್ಮ ।

*   *   *   *

ಸಾಕೆ ಸಲಹಿ ನನ್ನ ದೊಡ್ಡವಳ ಮಾಡಿ ॥
ಲೋಕದ ಮನುಜರಿಗಳವಲ್ಲ ನೋಡಿ ॥

(ವಿ-ವಿ.)—

ಅಸಮಗ್ರ. ಬರವಣಿಗೆ ಚೆನ್ನಾಗಿದೆ. ಅತ್ಯಂತ ಶಿಥಿಲ. ಹಿಂದೆ ವರ್ಣಿತವಾದ "ಶಿವನು ಗಂಗೆ ತಂದ ಕಣೆಗಳು ಅಥವಾ ಗಂಗಾ ಗೌರೀ ಸಂವಾದ" ಎಂಬ ಕಥೆಯು ಸ್ವಲ್ಪ ಭಾಗವನ್ನೊಳಕೊಂಡಿದೆ.

No. 1185. ಚೂಡಿಕ್ಕುಡುತ್ತ ನಾಯಿಚ್ಚಿಯಾರ್ ಕಲ್ಯಾಣ-
CŪḌIKKUḌUTTANAICCIĀR KALYĀṆA.

Substance, palm-leaf. Size, $8\frac{1}{4} \times 1\text{-}5/16$ inches. Pages, 102. Lines, 6 on a page. Extent, 580 granthas. Character, Kannada. Condition, badly injured. Appearance, old. Mode of writing, good.

Incomplete.

Describes the story of how Bhūputri of Gōda, the foster daughter of Bhaṭṭanātha also known as Viṣṇucitta and Periyāḻvār of Śrīvilliputtūr, came to be called 'Cūḍikkuḍuttanaicciār' (the giver of worn garlands) married by God Raṅganātha, the deity worshipped at Śrīraṅga which was formed by sage Gautama from his efficacy of devotion. In Telugu, there is a book by name 'Āmuktamālyada' of Śrīkṛṣṇadēvaraya, which deals with the same story. In Tamil 'Tiruppāvai,' a sacred book of Vaiṣṇavas, was composed by the heroine of the story.

Beginning :

. . . . ಡುತ ಕಲ್ಯಾಣ ಯಾಕ್ಷಗಾನ ।

ಶ್ರೀ ವನಿತಾತ್ಮೇಶ । ಚಿತ್ರ ಮನೋಲ್ಲಾಸ ।
ದೇವಗಣಾಧೀಶ । . . . . ।
ಕಮಲ ಭವಾರ್ಚಿತ ಗಾಂಭೀರ್ಯ ಚರಿತ ' (?)
ಕಮಲಾಕ್ಷ ಲೋಕೇಶ . . ನಪಿ . . .

*   *   *

ಎಂದು ಸ್ತುತಿಗೆಯ್ದು ಇಂದಿರಾಂ . . . ಶಿ ।
ಇಷ್ಟಾರ್ಥವಂ ಕೇಳ ।
ವೈಭೋಗ ರಂಗನ ವೈವಾಹವಧಿಕ ।
ವೈಭವದಿಂ ಪೇಳ್ದ . . . . . . ।

*   *   *

ದಯಾಂತರಂಗನಹ ಶ್ರೀರಂಗಧಾಮುಸು ಏನೆಂದು ವರ್ಣಿಸುತ್ತಿದ್ದಾನು.

* * * *

ಇಂದಿರಾ ದೇವಿಗಭಿವಂದೆನೆಯುಂ ಗೆಯ್ದು ವ್ಯಾಸ ವಾಲ್ಮೀಕಾದಿ ಸತ್ಕವೀಶ್ವರರ ವಿನುತಿಸಿದ (ಅನಂತ) ರದಲ್ಲಿ ಮತ್ತಂತೆವೆ ॥

ಕಂ॥ ರಾಜಗೋಪಾಲ ಮುನಿಪದೆ ।
ರಾಜೀವಕೆ ಭೃಂಗನಾಗಿ ರಂಜಿಪ ಕೃತಿ . . . ॥
. . . ದೊಳರ್ಚಿಸಿದನು ಕವಿ ।
ರಾಜರು ಅಹುದೆನಲು ರಂಗರಾಜನನಿಶಂ ॥ (?)

ಇಂಥಾ ದೇವೇಶಗಂಕಿತವಾಗಿ ಪೊಂಕೆ (ಶಿ) [ಸಿ] ದ ಚೂಡುಗುಡುತಾಕಲ್ಯಾಣ
. . . ಕಥಾ ಕ್ರಮವೆಂತೆನೆ :—

* * * *

ಜಂಪ॥ ತಿರುವಿಲ್ಲಿ ಪುತ್ತೂರು । ಸ್ಥಿರವಾಗಿ ಯಿರ್ದುದಾ ।
ತರವು ಶೇಷನಿಗೆ ವಿ । ಸ್ತರಿಸಲಳವಲ್ಲ ॥ ೧ ॥
ಇರಲಿಂತು ಈ ಪುರದಿ । ಯಿರವಾಗಿ ವಿಪ್ರ ಶೇ ।
ಖರ ಭಟ್ಟನಾಥಾಖ್ಯ । ವರನು ಯಿರುತಿಹನು ॥ ೨ ॥

* * * *

. . . . ನಿನ್ನ । ಪುತ್ರಿತಾ ಮುಡಿದಿರ್ದ ।
ಭಾಸುರದ ಸುಮವೀಯೆ । ಭಾವಿಸಿಯು ಕೊಂಬೆ ॥ ೧ ॥
ಈ ಸುಮವನೊಲ್ಲೆ ನೀನೀಗಲೇ ಪೋಗೆನಲು ।
ಭೂಸುರನು ಬಂದು ನಿಜಪುತ್ರಿ ಮುಡಿದಿರ್ದ ॥ ೨ ॥
ರಾಶಿ ಮಾಲಿಕೆಯ ವಾರಾಶಿ ಶಯನನಿಗಿತ್ತು ।
ವಾಶಿರಚ್ಚರಿಲಿ ನಿಜವಾಶಿಯಾಗಿರ್ದ ॥ ೩ ॥ (?)
ಅಲರ ಹರಿಗೀಯೆ ತನ್ನಣುಗಿಗಭಿಧಾನವನು ।
ಸಲೆ ಚೂಡುಗುಡುತನಾಚ್ಚಾರಯೆಂದೊರೆದ ॥ ೪ ॥

End :

ನಾರದಾದಿಗಳು ವಿಸ್ತಾರ ವೀಣೆಯೊಳೆಣಿಸೆ । ಆರಾಧನೆಯ ಗೆಯ್ದನಲ್ಲಿ
ಗೌತಮನು ॥

ಕಂದ॥ ಧರಣಿಯಲಿ ಸಸ್ಯವೆಸೆಯಲು ।
ಶರಧಿಗಳತಿ ಪುಣ್ಯ ಘನವು ಸಫಲವದಾಗಲ್ ।
ಹರುಷವೆಲ್ಲರಿಗೆ ಸಂದಿರೆ ।
ಸಿರಿವರ ರಂಗೇಶನಲ್ಲಿ ಚಿರದಿಂ [ನಿಂತನು] (ನಿಂದಂ) ॥

ತ್ರಿವುಡೆ॥ ಇಂತು ಗೌತಮ ತನಯಾಕ್ರಮದಿರವಿನಲಿ
ಶ್ರೀರಂಗ ಪತಿಯಾನನಂತಹುಹಿಮಾನ ಪೂಜಿಸಿದ ವರ್ಣನೆಗಳಂದ ॥ ೧ ॥

(ವಿ-ವಿ.)— .

ಅಸಮಗ್ರ. ಅತ್ಯಂತ ಶಿಥಿಲ. ಬರವಣಿಗೆ ಚೆನ್ನಾಗಿದೆ. ಈ ಗ್ರಂಥಕ್ಕೆ "ವೈಭೋಗ ರಂಗನ ವೈವಾಹ" ವೆಂಬ ಇನ್ನೊಂದು ಹೆಸರೂ ಇದ್ದಂತೆ ತೋರುತ್ತದೆ. ತಾನು ಮಾಡಿದ ಹೂವಿನ ಸರವನ್ನು ಭಗವಂತನಿಗೆ ಅರ್ಪಣೆಮಾಡುವಂತೆಸಗಿ "ಚೂಡಿಕೊಡುತ್ತ ನಾಚ್ಚಿಯಾರ್' ಎಂಬ ಹೆಸರನ್ನು ಪಡೆದವಳಾದ ಶ್ರೀವಿಲ್ಲಿಪುತ್ತೂರು ಎಂಬ ಕ್ಷೇತ್ರದಲ್ಲಿದ್ದ ಭಟ್ಟನಾಥನೆಂಬ ಬ್ರಾಹ್ಮಣೋತ್ತಮನ ಸಾಕು ಮಗಳಾದ ಭೂಪುತ್ರಿ (ಆಂಡಾಳ್ ಅಥವಾ ಗೋದಾದೇವಿ) ಯೆಂಬವಳನ್ನು ಶ್ರೀರಂಗನಾಥ ಸ್ವಾಮಿಯು ಪ್ರತ್ಯಕ್ಷವಾಗಿ ಬಂದು ಮದುವೆಯಾಗಿ, ಗೌತಮ ಋಷಿಯು ತಮ್ಮ ಆಶ್ರಮದ ಬಳಿಯಲ್ಲಿ ತನ್ನ ತಪಃ ಪ್ರಭಾವದಿಂದ ನಿರ್ಮಿಸಿದ ಶ್ರೀರಂಗ ಕ್ಷೇತ್ರದಲ್ಲಿ ಅವಳೊಡನೆ ನೆಲೆನಿಂತ ಕಥೆಯು ಇದರಲ್ಲಿ ವರ್ಣಿಸಲ್ಪಟ್ಟಿದೆ. ಸ್ವಲ್ಪ ಹೆಚ್ಚು ಕಡಿಮೆಯೊಡನೆ ಇದೇ ಕಥೆಯನ್ನವಲಂಬಿಸಿ ತೆಲುಗಿನಲ್ಲಿ "ಆಮುಕ್ತ ಮಾಲ್ಯದ" ಎಂಬ ಪ್ರೌಢ ಕಾವ್ಯವು ಶ್ರೀಕೃಷ್ಣದೇವರಾಯನಿಂದ ರಚಿಸಲ್ಪಟ್ಟಿದೆ. ಈ ಗೋದಾದೇವಿಯು ವಿಷ್ಣು ಪತ್ನಿಯಾದ ನೀಲಾದೇವಿಯ ಅವತಾರವೆಂದು ಭಾವಿಸಲ್ಪಟ್ಟಿದ್ದಾಳೆ. ಇವಳು ರಚಿಸಿದ "ತಿರುಪ್ಪಾವೈ" ಎಂಬ ಭಕ್ತಿರಸ ಪ್ರಧಾನವಾದ ಗ್ರಂಥವು ತಮಿಳು ಭಾಷೆಯಲ್ಲಿ ಪ್ರಸಿದ್ಧವಾಗಿದ್ದು ವೈಷ್ಣವರಿಂದ ಅತ್ಯಂತ ಪವಿತ್ರವೆಂದು ಪರಿಗಣಿಸಲ್ಪಟ್ಟಿದೆ. ಇವಳ ತಂದೆಯ ಹೆಸರು "ವಿಷ್ಣುಚಿತ್ತ" ಎಂದು ಬೇರೆ ಕಡೆಗಳಲ್ಲಿ ಕಾಣುತ್ತದೆ. ಇವರಿಗೆ 'ಪೆರಿಯಾಳ್ವಾರ್' ಎಂಬ ಪ್ರಸಿದ್ಧಿಯೂ ಇದೆ.

No. 1186. ಚೋರಕಥೆ by ಕಸ್ತೂರಿ ಸಿದ್ಧ.

CŌRAKATHE BY KASTŪRI SIDDHA.

Substance, palm-leaf. Size, $17\frac{5}{8} \times 1{\cdot}7/16$ inches. Pages, 130. Lines, 5–6 on a page. Extent, 1,500 granthas. Character, Kannada. Condition, injured. Appearance, old. Mode of writing, good and free from mistakes.

Begins on fol. 1*a* of the Ms. The other work herein is Jyautiṣaviṣaya 66*a*.

Complete in 10 sandhis.

Describes the story of the two sons of Vajramakuṭarāya, who turned out to be robbers. The author Kastūri Siddha was the son of Kastūri-nāgaṇṇa and Guruvamma. For other particulars see extracts below.

The copying of this Ms. is said to have been made by clerk Girirāma at the instance Mahārāja Rāja śēkharayya, son of Nañjarāja, grandson of Daḷavāyi Hampabhūpāla and completed on the lunar month Puṣyā in the year Vijaya.

Beginning :

ಶ್ರೀ ಗಿರಿಜಾಧೀಶ ಶ್ರೀಗಿರಿವಾಸ ।
ಭಾಗೀರಥೀಯೊಳ ಭಾನುಪ್ರಕಾಶ ॥
ಏಣನಂ ಧರಿಸಿದನೆ ಯೆಸೆವ ಚರ್ಮಾಂಬರನೆ ।
ವಾಣೀಶ ಶಿರಕರನೆ ವಸುಧೆ ಪಾಲಕನೆ ।

*   *   *

ವಚನ॥ ಇಂತು ಆ ಜ್ಯೋತಿರ್ಮಯನಾದ ಸದಾಶಿವನ ಕೀರ್ತಿಪೆನದೆಂತೆನೆ ; — ॥ ೨ ॥

ಏಕತಾಳ॥ ಇಳೆಯೊಳಧಿಕವಾದ ಪೊಳೆವ ಕಕುದ್ಗಿರಿ ।
ಯೊಳು ನೆಲಸಿದ ಮೂಕ ಸಲಹೊ ಗಂಗೇಶಾ ॥

* * *

ಏಕತಾಳ॥ ಉತ್ತಮ ವಜ್ರ ಮಕುಟರಾಯನಿರ್ವರು ।
ಪುತ್ರರು ಚೋರರ ಆರ್ತಿಯ ಕೃತಿಯ ॥ ೧೦ ॥
ವಿಸ್ತಾರಿಸಿಯೆ ಯಕ್ಷಗಾನವಾಗಿಯೆ ಪೇಳ್ದ ।
ಕಸ್ತೂರಿಸಿದ್ಧನು ಕಡುಹರುಷದಲಿ ॥ ೧೩ ॥

* * *

ಕೆನೆಪಾಲಿನಂತೆ ಕೆತ್ತಿದ ಕಬ್ಬುಸವಿದಂತೆ ।
ಇನಿಮಾವಿನ ರಸಾಯನ ಎನ್ನ ಕೃತಿಯು ॥ ೧೪ ॥

ಕಂದ ಪದ್ಯ॥ ಧರೆಯೊಳಗಱಿವ ಸುಜಾಣರ್ ।
ನರಕೃತಿಯನು ಪೇಳ್ದಿಸೆಂದು ನಿಂದ್ಯವಮಾಡದೆ ।
ಹರನ ವರದಿಂದ ಜನಿಸಿದ ।
ವರಪುತ್ರರ ಕಥೆಯ ಪೇಳ್ದಿತ್ವೆ ಲಾಲಿಸಿ ರಸಿಕರ್ ॥

* * *

End :

ಸೋಮ ಶೇಖರ ಚಿತ್ರಶೇಖರಗೆ ತನ್ನಯಾ ।
ಕುಮಾರರಿಗೆ ಪಿರಿದಾಗಿ ಗಣಪದವಿಯನ್ನಿತ್ತು ॥
ಸರಸ ಕೋವಿದರು ಸಂಗರ ಭೀಮಾದಿತ್ಯಮರು ।
ಸ್ಮರರೂಪರೆಂದೆನಿಪ ನೆರೆಜಾಣರುಗಳು ॥
ಅರಿಗಳಿದೆ ಡಲ್ಲಣರು ಪರಬಲತಿಮಿರಕುಷ್ಣಕರನಂತೆ ಬಾಳದರ ಚರಿತೆ ಜಗ
ದೊಳಗೆ ॥
ಚೋರಕಥೆಯೆನಿಸಿ ಚರಿಸುತಿರಲು ಬಲ್ಲಗಂ- ।
ಭೀರ ಪುರುಷರು ಯಕ್ಷಗಾನದ ತೆರದೊಳು ॥
ಹರುಷದಿಂ ಮಾಡೆನಲು ವಿರೂಪಾಕ್ಷದೇವರ ।
ಕರ ಕಸ್ತೂರಿಯ ನಾಗಣ್ಣನೆನಿಪ ।
ಅಲರಂಬ ಸಮರೂಪ ಸಲೆ ಜಾಣ ಸಂಪನ್ನ
ಗೆಲುಗಯ್ಯ ನಾತನಿಗೆ ಲಲನೆಯೆನಿಸುವಳು ।
ಪರಮ ಪತಿವ್ರತೆ ಯರುಂಧತಿಗೆ ಸರಿಯೆಂದೆನಿಪ ।
ಗುರು ವೆನಿಸುವಳ ವರಪುತ್ರನಾದ ।
ಕಸ್ತೂರಿಯ ಸಿದ್ಧನಿದ ಬೋಳೇಶನೆಂದೆಂಬ- ।
ಕರ್ತೃವಿನ ಕೃಪೆಯಿಂದ ವಿಸ್ತರವಾಗಿ ।
ಸೋಮಶೇಖರ ಯಕ್ಷಗಾನ ವೆಂದೀಕೃತಿಗೆ ।
ನಾಮವಿಟ್ಟನು ಬಹು ಪ್ರೇಮದಿಂ ಪೇಳ್ದ ।

ನೆರೆ ಜಾಣರುಗಳು ಹರ ಕವಿಗಳಾರುವರೆಲ್ಲ ।
ಅಱಿಯುದವ ಪೇಳ್ದನೆಂದೆರಪು ಮಾಡದಿರಿ ।
ಶಬ್ದಾಲಂಕಾರ ವ್ಯಾಕರಣಪರಿತ್ರವನಲ್ಲ .
ಮುಗ್ಧ ಭಾವದಿ ಪೇಳ್ದೆ ಮುನಿವರನ ವರದಿ ॥
ತಪ್ಪುಳ್ಳ ಡಿದತಿದ್ದಿ ಶರಣರಾದವರೆಲ್ಲ ।
ಕಪ್ಪುಗೊರಳನ ಸುತನ ಕಾರಣದ ಕೃತಿಯು ।
ಮನ ಹರುಷದಿಂದ ಕರ್ಣದಿ ಕೇಳದೋದಿದರ್ಗೆ । (?)
ಅನವರತ ಆಯುರಾರೋಗ್ಯ ಐಶ್ವರ್ಯ ಸಂತಾನಾಭಿವೃದ್ಧಿಯನು ॥
ಹರನೊಲಿದು ಕರುಣಿಪನು ಶರಧಿ ಗಿರಿಜಾತಾರೆ ಹಿಮ ।
ಕರತರಣಿಯುಳ್ಳನಕ ಸ್ಥಿರವಾದ ಕೃತಿಯು ॥

Colophon :

ಅಂತು ಸಂಧಿ ೧೦ ಕ್ಕಂ ಪದನು ೧೦೦೦ ಕ್ಕಂ ಮಂಗಳ ಮಹಾಶ್ರೀ ॥

ಈ ಚೋರಕಥಾ ಸಮಾಪ್ತಂ ।

(ವಿ.ವಿ.)—

ಸಮಗ್ರ. ಶಿಥಿಲ ಬರವಣಿಗೆ ಚೆನ್ನಾಗಿದೆ. ತಪ್ಪುಗಳು ವಿರಳ. ಓಲೆಗಳು ೪ ; ೧೯, ೨೦ ಇವು ಮುರಿದಿವೆ. ಗ್ರಂಥಾದಿಯಲ್ಲಿ ಶಿವಸ್ತುತಿಯೂ ನಂಜಿಯ ಸ್ತುತಿಯೂ ಇದೆ. ಆ ಮೇಲೆ ಕ್ರಮವಾಗಿ ಕಕುದ್ಗಿರೀಶ, ಪಾರ್ವತಿ, ವೀರೇಶ್ವರ, ಸ್ತುತಿಯೂ ಇದೆ. ಕುಹಕ ಕವಿಗಳನ್ನು ಕುರಿತ ವಂದನೆಯೂ ಇವೆ. ಕಥಾ ವಿಷಯವನ್ನು ಕವಿ, "ಉತ್ತಮ ವಜ್ರ ಮಕುಟರಾಯ" ಎಂಬ ಪದ್ಯದಲ್ಲಿ ತಿಳಿಸುತ್ತಾನೆ. ಈ ಗ್ರಂಥಕ್ಕೆ ಚಿತ್ರ ಶೇಖರ, ಸೋಮಶೇಖರ ಕಥೆ ಎಂಬ ಹೆಸರೂ ಇದೆ.

ಪುಸ್ತಕದ ಕೊನೆಯಲ್ಲಿ ವಿಜಯ ಸಂವತ್ಸರದ ಪುಷ್ಯಮಾಸದಲ್ಲಿ ದಳವಾಯಿ ಹಂಪಭೂಪಾಲರವರ ಪುತ್ರ ನಂಜರಾಜ ಗರ್ಭ ಚಂದ್ರಾಬ್ಧಿಯಲ್ಲಿ ಉದಿಸಿದ ? ಗರ್ಭಾಬ್ಧಿಯಲ್ಲುದಿಸಿದ ಚಂದ್ರನಾದ ಮಹಾರಾಜ ರಾಜ ಶೇಖರಯ್ಯರಸಿನವರು ರಾಯಸದ ಗಿರಿರಾಮನಕಯ್ಯ ಬರಸಿದ ಸೋಮಶೇಖರ ಚಿತ್ರಶೇಖರನ ಕಥೆಗೆ ಮಂಗಳ ಮಹಾ ಶ್ರೀ ಎಂದಿದೆ. ಇದರೊಡನೆ ಜ್ಯೋತಿಷ ವಿಷಯ (ಆಯುಸ್ಸಿನ ಪರಿಮಿತಿ ೬೬ ನೆಯ ಓಲೆಯಲ್ಲಿ) ಇದೆ.

ಕವಿ ಕಸ್ತೂರಿ ಸಿದ್ಧನು. ಇವನ ಕಾಲವು ಸು ೧೮೦೦ ಎಂದು ಕವಿಚರಿತ್ರೆ (೩ ನೆಯ ಸಂಪುಟ) ಯಲ್ಲಿ ಹೇಳಿದೆ. ಉಳಿದ ವಿಷಯಗಳನ್ನು ಉದಾಹೃತ ಭಾಗಗಳಿಂದ ತಿಳಿಯುವುದು.

No. 1187. ಚೋರ ಕಥೆ by ಕಸ್ತೂರಿ ಸಿದ್ಧ.
CŌRAKATHE BY KASTŪRI SIDDHA.

Substance, Śrītāla. Size, 7-7/16 × 1½ inches. Pages, 281. Lines, 7 on a page. Extent, 1,500 granthas. Character, Kannada. Condition, injured. Appearance, old. Mode of writing, fair.

Complete in 8 sandhis.

Date of transcription :—Begun on Monday, the second day of the dark fortnight of the lunar month Āṣāḍha in the year Raudri and finished

on the tenth day of the dark fortnight of the lunar month Śrāvaṇa in the same Raudri year.

Name of the scribe :—Rēvaṇṇa (Rēvaṇṇa sampage Uṅgrāvaia) the son of Siddhappa and the grandson of Basavaliṅgadēvaru.

Same work as that described above.

(ವಿ-ವಿ.)—

ಸಮಗ್ರ. ಸಂಧಿಗಳು ೮. ಪದಗಳು ೧೦೦೦. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಹಿಂದಣ ಪ್ರತಿಗೂ ಇದಕ್ಕೂ ಸಂಧಿ ಸಂಖ್ಯೆಯಲ್ಲಿ ವ್ಯತ್ಯಾಸವಿದ್ದರೂ ಪದ್ಯಗಳ ಸಂಖ್ಯೆಯು ಒಂದೇಯಾಗಿದೆ. ಪುಸ್ತಕದಾದಿಯಲ್ಲಿ ("ರೌದ್ರಿಸಂವತ್ಸರದ ಆಷಾಢ ಬ ೨ ಸೋಮವಾರ ಸಿದ್ಧಪ್ಪನ ಕುಮಾರ ರೇವಣ್ಣ ಸಂಪಿಗೆ ಸೋಮಶೇಖರ ಚಿತ್ರಶೇಖರ, ಯಕ್ಷಗಾನ ಬರೆವುದಕ್ಕೆ ಶುಭಮಸ್ತು" ಎಂದೂ ಪುಸ್ತಕದ ಕೊನೆಯಲ್ಲಿ ರೌದ್ರಿ ಸಂವತ್ಸರ ಶ್ರಾವಣ ಬ. ೧೦ ಲೂ ಬಸವಲಿಂಗ ದೇವರ ಸಿದ್ಧಪ್ಪನ ಮಗ ರೇವಣ್ಣ ಸಂಪಿಗೆ ಉಂಗ್ರಾವೈಯ್ಯನು ಹರಸಿ ಬರೆದು ಕೊಟ್ಟ ಚಿತ್ರಶೇಖರ ಸೋಮಶೇಖರರ ಕಥೆ ಸಮಾಪ್ತ, ಎಂದೂ ಇದೆ. ಇದರಲ್ಲಿ ೬೩ ನೆಯ ಓಲೆಯಿಲ್ಲ. ೧೧೭ ನೆಯ ಸಂಖ್ಯೆಯು ಎರಡು ಓಲೆಗಳಲ್ಲಿ ಬರೆದಿದೆ. ಕೊನೆಯ ಓಲೆಯ ಸಂಖ್ಯೆ. ೧೪೧ ಹುದ್ಯೇ ಕೆಲವು ಓಲೆಗಳು ಮುರಿದಿವೆ. ೧೪೧ ನೆಯ ಓಲೆಯು ಒಂದೇ ಪುಟದಲ್ಲಿ ಬರೆದಿದೆ.

ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1188. ಚೋರ ಕಥೆ by ಕಸ್ತೂರಿ ಸಿದ್ಧ-

CŌRAKATHE BY KASTŪRI SIDDHA.

Substance, palm-leaf. Size, $18\frac{5}{8} \times 1\frac{1}{8}$ to $\frac{1}{4}$ inches. Pages, 133. Lines, 5 to 6 on a page. Extent, 1,500 granthas. Character, Kannada. Condition, much injured. Appearance, old. Mode of writing, good.

Complete.

Same work as that described above.

Date of transcription :—Thursday the 15th day of the bright fortnight of the lunar month Āṣaḍha in the year Raudri.

(ವಿ-ವಿ.)—

ಸಮಗ್ರ. ಬಹು ಶಿಥಿಲ. ಅನೇಕ ಓಲೆಗಳು ಮುರಿದಿವೆ. ೬೭ ನೆಯ ಓಲೆಯಲ್ಲಿ ಒಂದೇ ಪುಟದಲ್ಲಿ ಬರೆದಿದೆ. ಬರವಣಿಗೆ ಚೆನ್ನಾಗಿದೆ. ಪುಸ್ತಕದ ಕೊನೆಯಲ್ಲಿ "ರೌದ್ರಿನಾಮ ಸಂವತ್ಸರದ ಆಷಾಢ ಶು. ೧೫. ಗುರುವಾರ ಕೊಕ್ಕೂರ ಶ್ರೀವೆಂಕಟಪತಯ್ಯನ ಮಗ ವೆಂಕಟನಾರಾಯಣನು ಬರೆದನು" ಎಂದಿದೆ.

No. 1189. ಚೋರ ಕಥೆ by ಕಸ್ತೂರಿ ಸಿದ್ಧ-

CŌRAKATHE BY KASTŪRI SIDDHA.

Substance, palm-leaf. Size, 9·5/16 × 1·3/16 inches. Pages, 160. Lines, 5 on a page. Extent, 1,200 granthas. Character, Kannada. Condition, badly injured. Appearance, old. Mode of writing, fair.

Complete in 9 sandhis. Some leaves are wanting in the middle here and there.

(ವಿ-ವಿ.)—

ಸಮಗ್ರ. ಸಂಧಿ ೯. ಪದನು ೯೭೫. ಅತ್ಯಂತ ಶಿಥಿಲವಾದ ಪ್ರತಿ. ಓಲೆಗಳೆಲ್ಲಾ ಹುಳು ಕೊರೆದಿವೆ. ಕೆಲವು ತುಂಡಾಗಿವೆ. ಮಧ್ಯೇ ಅಲ್ಲಲ್ಲಿ ಕೆಲವು ಓಲೆಗಳು ಹೋಗಿವೆ. ಲಿಪಿ ಚೆನ್ನಾಗಿದೆ. ಹಿಂದಿನ ಮತ್ತು ಈ ಪ್ರತಿಗಳಿಗೆ ಸಂಧಿ ಪದ್ಯ ಸಂಖ್ಯೆಗಳಲ್ಲಿ ಹೆಚ್ಚು ಕಡಿಮೆಯಿದೆ. ಪುಸ್ತಕದ ಕೊನೆಯಲ್ಲಿ ' 'ಸುರ ನಗರಿಗೆ ಸಾಟಿಯೆನಿಪ ವ್ಯಾಘ್ರದ ಪುರಕಂ. . . . . ಪರಪುತ್ರನ ತನುಜ ಬರೆದ ಚೋರರ ಕೃತಿ . . . ಯನು ಬರೆದಾತ ಹುದಿಯೂರ ಸ್ಥಳದ ಶಾನುಭಾಗ . . . . ಕ್ಕಂ . ಸಿಂಹಾಸನಾಧೀಶ್ವರರಾದ ದಳವಾಯಿ . . . . . . ಕೆಂಪ . . . . . ಕಯ್ಯ . . ಅರಸು . . . . । . ದ್ದಿಯ್ಯ . . . . . . ನವರ ಕುಮಾರ ಪುಟ್ಟ ನಂಜರಾಜಯ್ಯ ಅ . . . . ರದು ಕೊಟ್ಟ ಪುಸ್ತಕಕ್ಕೆ . . . . . . " ಎಂದಿದೆ.

ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1190. ಚೋರರ ಕಥೆ by ಕಸ್ತೂರಿ ಸಿದ್ಧ-
CŌRAKATHE BY KASTŪRI SIDDHA.

Substance, palm-leaf. Size, 9⅞ × 1¼ inches. Pages, 112. Lines, 5 on a page. Extent, 1,000 granthas. Character, Kannada. Condition, extremely injured and broken to fragments. Mode of writing, not bad.

Complete.

Date of transcription :—Tuesday, the first day of the bright fortnight of the lunar month Puṣya in the year Śrīmukha.

Same work as that described above.

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾಗಿದೆ. ಬರವಣಿಗೆ ಸಾಮಾನ್ಯ. ಪುಸ್ತಕ ಲೇಖನ ಕಾಲವು ಶ್ರೀಮುಖ ನಾಮ ಸಂವತ್ಸರದ ಪುಷ್ಯ ಶು. ೧ ಮಂಗಳವಾರದಲ್ಲಿ ಬರೆದು . . . . ಪುಸ್ತಕಕ್ಕೆ ಮಹದೈಶ್ವರ್ಯಮಸ್ತು. ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1191. ಚೋರರ ಕಥೆ by ಕಸ್ತೂರಿ ಸಿದ್ಧ-
CŌRAKATHE BY KASTŪRI SIDDHA.

Substance, palm-leaf. Size, 15-3/16 × 1¼ inches. Pages, 185. Lines, 4 to 5 on a page. Extent, 1,500 granthas. Character, Kannada. Condition, injured. Appearance, old. Mode of writing, good.

Complete.

Same work as that described above.

Date of transcription :—Begun on Sunday, the first day of the dark fortnight of the month Puṣya in the year Khara and finished on Sunday, the 30th day of the same month of the same year.

Name of the scribe :—Dāsaṇṇa, brother of Mūdlapa, son of Veṅkaṇṇa of Gummagaṭṭegalagallu who wrote this for Dāsaṇṇa, son of Varadatammaṇṇa and gave it to him on Thursday, the 3rd day of the bright fortnight of the lunar month Māgha in the year Khara, Saka year 1699 corresponding to 1777 A.D.

(ವಿ-ವಿ.)—

ಸಮಗ್ರ. ಶಿಥಿಲ. ಲಿಪಿ ಚೆನ್ನಾಗಿದೆ. ಓಲೆಗಳು ೧೫೦. ಈ ಎರಡು ಹೋಗಿವೆ. ೯೫ ನೆಯದು ಕೊನೆಯ ಓಲೆ. ಅದರಲ್ಲಿ ಒಂದೇ ಪುಟದಲ್ಲಿ ಬರೆದಿದೆ. ಪುಸ್ತಕದ ಆದಿಯಲ್ಲಿ "ಖರನಾಮ ಸಂವತ್ಸರದ ಪುಷ್ಯ ಬ. ೧ ಇಂದುವಾರದಲ್ಲು ಚಿತ್ರಶೇಖರ ಸೋಮಶೇಖರ. ಯಕ್ಷಗಾನ ಬರೆವುದಕ್ಕೆ ಸಕಲ ಕಂಟಕ ನಿರ್ಹರಣ ಮಸ್ತು", ಎಂದೂ ಕೊನೆಯಲ್ಲಿ "ಪುಷ್ಯ ಬ. ೩೦. ಇಂದು ವಾರಕ್ಕೆ ಮುಗಿದು ಇದ್ದಿತ್ತು."

"ವಿಜಯಾಭ್ಯುದಯ ಶಾಲಿವಾಹನ ಶಕ ವರ್ಷಂಗಳು ೧೬೯೯ ಖರನಾಮ ಸಂವತ್ಸರದ ಮಾಗ (? ಘ) ಶು. ೩ ಗುರುವಾರದಲ್ಲು ಗುಮ್ಮಗಟ್ಟೆ ಗಲಗಲ್ಲು ಯಜಮಾನಿಕೆಗೆ ಅಧಿಕರ್ತರಾದಂಥ ವೆಂಕಣ್ಣನವರ ಕುಮಾರ ಮೂಡ್ಲಪನ ಸಹೋದರನಾದಂತ ಚಿನ್ನಪ್ಪನು ಕೂಡ್ಲಿಗೆ ವರದತಮ್ಮಣ್ಣನ ಪುತ್ರನಾದಂತ ದಾಸಣ್ಣನಿಗೆ ತ್ರಿಸಂಧ್ಯಾ ಕಾಲದಲ್ಲು ಹರಸಿಬರೆದು ಕೊಟ್ಟ ಚೋರ ಕಥೆ ಯಕ್ಷಗಾನಕ್ಕೆ ಮಂಗಳ ಮಹಾ ಶ್ರೀ॥ ಎಂದಿದೆ. ಈ ಕೊನೆಯಲ್ಲಿ ಸೂಚಿಸಿರುವ ಕಾಲವು ಪ್ರತಿಯನ್ನು ದಾಸಣ್ಣನ ಕೈಗೊಪ್ಪಿಸಿರುವ ಸಮಯವಾಗಿರಬೇಕು.

ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1192. ಚೋರ ಕಥೆ by ಕಸ್ತೂರಿ ಸಿದ್ಧ-

CŌRAKATHE BY KASTŪRI SIDDHA.

Substance, paper. Size, 12⅜ × 7¾ inches. Pages, 69. Lines, 21 or 22 on a page. Character, Kannada. Condition, fair. Appearance, old. Mode of writing good.

Begins on page 145. The other works herein are (1) Kālajñāna of Sarvajña, pp. 1–36. (2) Sarvajñana trividhi by Sarvajña, pp. 37–127. (3) Contents of the Cōrakathe or Royal-thieves written in Kannada verse (in English), pp. 215–241. Pages 128–144 and 214 are left blank.

Complete.

Same work as that described above.

(ವಿ-ವಿ.)—

ಸಮಗ್ರ. ಚೆನ್ನಾಗಿದೆ. ಬರವಣಿಗೆ ಮುದ್ದಾಗಿದೆ. ಇದರೊಡನೆ ಸರ್ವಜ್ಞನ ಕಾಲಜ್ಞಾನವು ಮೊದಲಿನ ೧೨೭ ಪುಟಗಳಲ್ಲಿ ಬರೆದು ಸೇರಿಸಿದೆ. ಕೊನೆಯ ೨೭ ಪುಟಗಳಲ್ಲಿ

ಇದೇ ಚೋರ ಕಥೆಯು ಕಥಾವಸ್ತುವು ಆಂಗ್ಲೇಯ ಭಾಷೆಯಲ್ಲಿ ಬರೆಯಲ್ಪಟ್ಟಿದೆ. ೧೭೮-೧೪೪ ಮತ್ತು ೨೧೪ ನೆಯ ಪುಟಗಳು ಬರೆಯದೆ ಬಿಟ್ಟಿವೆ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1193. ಚೋರ ಕಥೆ by ಕಸ್ತೂರಿ ಸಿದ್ಧ-
CŌRAKATHE BY KASTŪRI SIDDHA.

Substance, palm-leaf. Size, 15⅛ × 1-5/16 to 1-7/16 inches. Pages, 118. Lines, 6 on a page. Extent, 1,250 granthas. Character, Kannada. Condition, injured. Appearance, old. Mode of writing, fair.

Incomplete.

Same work as that described above.

(ವಿ-ವಿ.)—

ಅಸಮಗ್ರ. ಅಂತ್ಯದಲ್ಲಿ ಸ್ವಲ್ಪ ಹೋಗಿದೆ. ಶಿಥಿಲವಾದ ಪ್ರತಿ. ಇದರಲ್ಲಿರುವ ಓಲೆಗಳಲ್ಲಿ ಮೊದಲು ೧ ರಿಂದ ೬೩ ರ ವರೆಗೆ ಕ್ರಮವಾಗಿ ಸಂಖ್ಯೆಯು ಕೊಟ್ಟಿದೆ. ಮಧ್ಯದಲ್ಲಿ ೩೮ ಮತ್ತು ೪೯ ನೆಯ ಓಲೆಗಳು ಕಾಣುವದಿಲ್ಲ. ನಂತರ ೮ ಓಲೆಗಳಲ್ಲಿ ಸಂಖ್ಯೆಯು ಕೊಟ್ಟಿಲ್ಲ. ಒಟ್ಟು ಓಲೆಗಳು ೫೯. ಲಿಪಿ ಚೆನ್ನಾಗಿದೆ. ಈ ಪುಸ್ತಕದ ಅಂತ್ಯದಲ್ಲಿ ಎಲ್ಲಿಯ ವರೆಗಿದೆ ಎಂಬುದನ್ನು ವಾಚಕರು ತಿಳಿದು ಕೊಳ್ಳುವದಕ್ಕಾಗಿ ಸ್ವಲ್ಪವನ್ನಿಲ್ಲಿ ಉದ್ಧರಿಸಲಾಗಿದೆ.

End :

"ಅಟತಾಳ".

ವಹ್ನಿಯೊಳಗಿರೆ ಕರ್ಣ ಪತ್ರವು ಮುನ್ನಿನಂತೆಯೆ ಮಾಡಿದೆನು । ಪನ್ನಗ ಧರನೊರದಿ ಪಡೆದನು ನಿನ್ನ ಪತಿಯ ॥ ೧ ॥

* * * * *

ದಾರಿಣೀಪತಿ ಕೇಳು ಮದುವೆಯ । ನಾರುದಿನದಲಿ ಧಾರೆಯೆರೆವೆನು । ಬೇರೆಯರ ಮನೆಯನ್ನು ಕಟ್ಟಿಸು ಧಾರೆಯೆರೆವೆ ॥ ೫ ॥

ವಚನ॥ ಇಂತೆಂದ ಮಾತಿಗೆ ಉಗ್ರಬಾಹುಕನು ಸಂತೋಷದಿಂದ ತನೆಗೆ ಬಹ ಕೇಡನರಿಯದೆ . . . .

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1194- ಚೋರ ಕಥೆ by ಕಸ್ತೂರಿ ಸಿದ್ಧ-
CŌRAKATHE BY KASTŪRI SIDDHA.

Substance, palm-leaf. Size, 9⅞ × 1¼ to 1⅜ inches. Pages, 182. Lines, 5 to 6 on a page. Extent, 1,150 granthas. Character, Kannada. Condition, much injured. Appearance, old. Mode of writing, not bad.

Incomplete.

Same work as that described above.

(ವಿ-ವಿ.)—

ಅಸಮಗ್ರ. ಬಹಳ ಶಿಥಿಲ. ಬರವಣಿಗೆ ಸಾಮಾನ್ಯವಾಗಿದೆ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1195. ಚೋರ ಕಥೆ by ಕಸ್ತೂರಿ ಸಿದ್ಧ-
CŌRAKATHE BY KASTŪRI SIDDHA.

Substance, palm-leaf. Size, 11⅞ × 1-3/16 inches. Pages, 146. Lines, 4 to 5 on a page. Extent, 900 granthas. Character, Kannada. Condition, injured. Appearance, old. Mode of writing, good.

Incomplete.

Same work as that described above.

(ವಿ-ವಿ.)—

ಅಸಮಗ್ರ. ಶಿಥಿಲ. ಬರವಣಿಗೆ ಚೆನ್ನಾಗಿದೆ. ಕೆಲವು ಓಲೆಗಳ ಒಂದು ಪಾರ್ಶ್ವವು ಇಲಿಗಳಿಂದ ತಿನ್ನಲ್ಪಟ್ಟಿವೆ. ಕೆಲವು ಮುರಿದಿವೆ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1196 ಚೋರ ಕಥೆ by ಕಸ್ತೂರಿ ಸಿದ್ಧ-
CŌRAKATHE BY KASTŪRI SIDDHA.

Substance, Śrītāla. Size, 8-5/16 × 1⅞ inches. Pages, 86. Lines, 9 to 10 on a page. Character, Kannada. Condition, slightly injured. Appearance, old. Mode of writing, good.

Incomplete.

Same work as that described above.

(ವಿ-ವಿ.)—

ಅಸಮಗ್ರ. ಸ್ವಲ್ಪ ಶಿಥಿಲ. ಅಲ್ಲಲ್ಲಿ ಕೆಲವು ಓಲೆಗಳು ಹೋಗಿವೆ. ಆದಿಯ ಏಳು ಓಲೆಗಳಿಲ್ಲ. ಬರಹವು ಚೆನ್ನಾಗಿದೆ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1197. ಚೋರ ಕಥೆ by ಮಲ್ಲಿಕಾರ್ಜುನರಾಯ-
CŌRAKATHE BY MALLIKĀRJUNARĀYA.

Substance, Śrītāla. Size, 8⅞ × 1½ inches. Pages, 95. Lines, 10 to 11 on a page, Extent, 1,200 granthas. Character, Kannada. Condition, extremely injured. Appearance, old. Mode of writing, good.

Complete in 6 sandhis. Some leaves are wanting in the middle here and there and some are broken to fragments.

Similar to the work described above.

Beginning :

ಕಂದ ಪದ್ಯ॥ ದಾರಿಣಿಯೊಳು ಹೊಸತೆನಿಸುವ ।

. . . . . . ಕ್ಯಾಪುರಿಯಿಂ ।

. ವೀರನತಿ ವಜ್ರಮುಕುಟನು ।
ದಾರನು ರಾಜ್ಯವನು ಪಾಲಿಸುತ್ತ ಸುಖಮಿರ್ದಂ ॥
* * * * *

End :

ಈ ಕಥೆಯನು ಕೇಳ್ವ ಮನುಜರಿಗೆಲ್ಲ ।
ನಾಕಪತಿಯ ಸೌಭಾಗ್ಯ ।
ನಾಕಪತಿಯ ಸೌಭಾಗ್ಯವನೀವ । (ಎ)
ನಾ[ಕಿ](ಕ)ಧರನು ಕರುಣದೊಳಿಂದ ॥ ೧೨೪ ॥
ವಿರೂಪಾಕ್ಷನ ಕರುಣದಿ ಹೇಳಿದ ।
ವರ ಮಲ್ಲಿಕಾರ್ಜುನ ರಾಯನು ॥
ವರ ಮಲ್ಲಿಕಾರ್ಜುನರಾಯ ಹೇಳಿದನಿದ ।
ಹರುಷದಿಂ ಜನರು ಲಾಲಿಪ್ಪುದೆಂದು ॥ ೧೩೯ ॥

ಅಂತು ಸಂಧಿ ೬ ಕ್ಕಂ ಪದನು. ೭೭೦ ಕ್ಕಂ ಮಂಗಳ ಮಹಾ ಶ್ರೀಃ ಶ್ರೀಃ ಶ್ರೀಃ ।

(ವಿ.ವಿ.)—

ಸುಮಗ್ರ. ಅತ್ಯಂತ ಶಿಥಿಲ. ಬರವಣಿಗೆ ಚೆನ್ನಾಗಿದೆ. ಕವಿಯು ಮಲ್ಲಿಕಾರ್ಜುನ ರಾಯನೆಂಬವನು. ಈತನು ಆದಿಯಲ್ಲಿ, ವಿರೂಪಾಕ್ಷ, ಕೃಷ್ಣ, ಗಣಪತಿಗಳನ್ನು ಸ್ಮರಿಸಿ ಗ್ರಂಥವನ್ನಾರಂಭಿಸುವನು. ತನ್ನ ಗ್ರಂಥಕ್ಕೆ "ಮುಕ್ಕಣ್ಣನವರ ಪುತ್ರರ" ಕಥೆಯೆಂಬ ಹೆಸರನ್ನು ಕೊಟ್ಟಿರುವನು. ಹಿಂದಿನ ಕವಿಗಳಲ್ಲಿ ಮಲುಹಣ, ಮಯೂರ, ಕಾಳಿದಾಸ, ಹಂಪೆಯ ಹರಿಹರ, ರಾಘವಾಂಕ, ಇವರನ್ನು ಸ್ತುತಿಸಿರುವನು. ಆದುದರಿಂದ ೧೨ ನೆಯ ಶತಮಾನದ ಅನಂತರದವನೆಂದು ಸ್ಪಷ್ಟವಾಗುವುದು. ಈತನ ಕಾಲವನ್ನು ಕವಿ ಚರಿತ್ರೆಕಾರರು ಸು. ೧೬೦೦ ಎಂದಿರುವರು. ಹಿಂದೆ ೧೧೪೬ ನೆಯ ನಂಬರಿನಲ್ಲಿ ವರ್ಣಿತವಾದ ಕಸ್ತೂರಿ ಸಿದ್ಧನ ಚೋರ ಕಥೆಯ ಕಥಾ ವಸ್ತುವೇ ಇದರಲ್ಲಿ ಪ್ರತಿಪಾದ್ಯವಾಗಿದೆ.

No. 1198. ಜೈಮಿನಿ ಭಾರತ by ತಟ್ಟೆಕೆರೆಯರಂಗ-
JAIMINIBHĀRATA BY TAṬṬEKEREYARAÑGA.

Substance, palm-leaf. Size, $15\frac{1}{2} \times 1\frac{1}{4}$ inches. Pages, 460. Lines, 6 to 8 on a page. Extent, 8,000 granthas. Character, Kannada. Condition, badly injured. Appearance, old. Mode of writing, good.

Incomplete.

This is the Kannada version of the same work in Sanskrit by Jaimini, describing the Aśvamēdha sacrifice performed by Dharmarāja.

Beginning :

ಶ್ರೀ ತಟ್ಟೆಕೆರೆಯ ರಂಗನ . . . .
. . . . ಚಂದ್ರಚೂಡ . . . . ಪಾದಹರ ಘೋರರೂಪ ।
ವೇದ ತಸ್ಕರರ . . . . ಯೋಗವಂ . . . .
. . . ವ ಭಂಗ ಕರುಣಾಂತರಂಗ ತರಳ ಗಭಯುವ ನಿತ್ಯ ತಪನ ಕುಲ . . .
* * * *

. . . ರಂಗ ಪುತ್ರನೆ । ಪುಂಗವಾಚಲ ವಾಸ ಪರಶಿವ ಗಂಗೆಯರಸ ! ಇಂತೆಂದು ಕಕುದ್ಗಿರೀಶನಂ ಕೊಂಡಾಡಿ.

* * * * *

ಓಂಕಾರಿ ದುರಿತ ಭಯಂಕರಿ ಕಾಕುದ್ಗಿರಿ ।

ಶಂಕರಿ ನಿಮ್ಮಡಿ ಗೆರಗುವೆನು॥ ಇಂತೆಂದು ಸ್ವರ್ಣಾಂಬಿಕೆಯಂ ಕೊಂಡಾಡಿ ಕುಲಸ್ವಾಮಿಯಾದ ರಂಗನಾಯಕರಂ ಏನೆಂದು ಕೊಂಡಾಡುತಿರ್ದನು.

* * * * *

. . . . . . ಮೂರ್ತಿ ಗುರುವರ್ಯ ಶಂಕರಾಚಾರ್ಯ ॥

ಪರಮ ಪಾವನನಾದ ದುರಿತ ದುರ್ಗ ವಿಭೇದ ।

ಕರುಣಾ ಸಾಗರ ಜೀಯ . . . . . ಶಂಕರಾಚಾರ್ಯ ॥ ೫ ॥

ವ॥ ಇಂತೆಂದು ಗುರುಸ್ವಾಮಿಯಂ ಕೊಂಡಾಡಿ ಶ್ರೀ . . . . . ಶಾರದಾ ದೇವಿಯನ್ನು ಏನೆಂದು ಕೊಂಡಾಡುತ್ತಿರ್ದನು ॥

* * * * *

ಸೋಲೂರ ಸ . . . . ದಲಿ . ವೇದ

. . . ಥು ಗುರು ರಂಗೇಶನು ॥

* * * * *

ಮಾಡಿ ಗುರು ರಂಗೇಶನ ಕೃಪೆಯಿಂದ ಪೇಟಿಗ್ವಿಯಾಗ ಚರಿತ್ರೆಯಂ . . . .

ತಟ್ಟೆಗೆರೆಯ ರಂಗಯೀ (? ನೀ) ಕೃತಿಯನುಸುರಿದಂ । . . . .

* * * * *

End :

ಹೇಳೆನುತ ಪಾರ್ಥನಿಗೆ . . . ತಾ ।
ವೇಳೆ ನಗುತ ॥ ೩ ॥
ತನ್ನ ಶರಣರ ಜೀವವಾಗಲು ತನಗೆ ಜೀವನವೆಂದು ನೋಡುವೆ ।
ತನ್ನ ಶರಣರು ಬೇರೆ ನೋಡಲು ತಾನು ಬೇರಲ್ಲಾ ॥

(ವಿ-ವಿ.)—

ಅಸಮಗ್ರ. ಅತ್ಯಂತ ಶಿಥಿಲ. ಬರವಣಿಗೆ ಚೆನ್ನಾಗಿದೆ. ಇದರಲ್ಲಿ ಚಂದ್ರಹಾಸನ ಕತೆಯ ಕಡೆಯ ಭಾಗವಿಲ್ಲ. ಅದಿದ್ದರೆ ಪೂರ್ಣ ಪ್ರತಿಯೆನ್ನಬಹುದಿದ್ದಿತು. ಧರ್ಮರಾಯನು ಮಾಡಿದ ಅಶ್ವಮೇಧ ಯಾಗವನ್ನು ಜೈಮಿನಿಯು ಸಂಸ್ಕೃತದಲ್ಲಿ ವರ್ಣಿಸಿರುವರು. ಇದಕ್ಕೆ ಜೈಮಿನಿ ಭಾರತದ ಅಶ್ವಮೇಧಿಕಪರ್ವವೆಂದು ಹೆಸರಿದೆ. ಇದನ್ನೇ ತಟ್ಟಿಕೆರೆಯ ರಂಗನೆಂಬವನು ಕನ್ನಡಿಸಿ ಬರೆದಿರುವನು. ಹಿಂದಿನ ಕವಿಗಳ ಮಧ್ಯದಲ್ಲಿ ಬಾಣ ಮಯೂರರರನ್ನು ಸ್ಮರಿಸಿರುವನು.

No. 1199. ದುರ್ಗಾವಿಜಯ-
DURGĀVIJAYA.

Substance, paper. Size, 10⅜ × 9-7/16 inches. Pages, 82. Lines, 20 on a page. Extent, 1,125 granthas. Character, Kannada. Condition, good. Appearance, new. Mode of writing, good.

Restored in 1932–33 from the Ms. described under No. 208 *ante*.

Begins on the 1st page. The other work herein is :—Auṣadhagaḷu, 83.

Complete.

(ವಿ-ವಿ.)—

ಸಮಗ್ರ. ಕಾಗದದ ಪ್ರತಿ. ಇದು ಹಿಂದಣ ೨೦೮ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪುತ್ರಿಕೆಯಾಗಿದೆ. ಲಿಪಿ ಚೆನ್ನಾಗಿದೆ. ಹಿಂದಣ ನಂಬರಿನಲ್ಲಿ ಪೂರ್ವ ಕವಿ ಸ್ತುತಿ ಮುಂತಾದುವನ್ನು ಕೊಟ್ಟಿಲ್ಲವಾಗಿ ಅವನ್ನಿಲ್ಲಿ ಉದ್ಧರಿಸಿ ಬರೆಯಲಾಗಿದೆ

"ವರ್ಣ" ತ್ರಿವುಡೆ.

ಭಜಿಸುವೆನು ಬಾಣನ ಮಯೂರನ ಭಾವನೆಯೊಳಾಕಾಳಿಯ ।
ನಿಜರೂಪ ಕದಡಿಯ ನರ್ಚಿಪೆ ನಿರ್ಮಲದೊಳು ॥ ೧ ॥
ನೀರ ನಿಘಂಟಿನ ನಿಕೇತನ ವೆಸರಿನವನ ನಿಚ್ಚಯ ।
ಮಾರುತೇಷ್ಟನ ಮಗಗಿ ತೋಚಿದ ಬಸುಜೆನವನ ॥ ೨ ॥
ನಿತ್ಯ ಶಿವ ನೇತ್ರ ದೊಳ ಗೊಪ್ಪುವ ನಾಮದವನಾ ನಿರುಪಮ ।
ಚಿತ್ರಕರ ನಭಿಗಾನವನು ನೆರೆ ತಾಳದವನ ॥ ೩ ॥
ರುದ್ರ ಸಂಖ್ಯೆಯ ಮಾಸವೆಸರನ ರೂಢಿಯೊಳಗೆ ಸಂತತ ।
ನಿದ್ರ ರಹಿತಾ ಹರಿಯ ಪೊಗಳು ಸುಮುಕವೆಳಗೆ ॥ ೪ ॥
ಅಲಗುಗರಿ ವರ್ಜಿತದ ಅಂಚಿನನಿಸುವನ ಪೊಗಳ್ವೆ ಅಂಗಜ ।
ಬಲುಮೊಮ್ಮಿದ್ದ ಶಿಖಂಡಿವೆಸರನ ನುತಿಸಿ ಕೇಳ್ವೆ ॥ ೫ ॥ (?)

* * * * *

ವಚನ॥ ಇಂತು ಕವೀಶ್ವರರ ಸಮೂಹಕ್ಕೆ ತಲೆವಾಗಿ ಛಪ್ಪನ್ನ ಭಾಷಾ ಪ್ರೌಢರಂ ಬಲಗೊಂಡು ತಪ್ಪ ತಿದ್ದುವಂತಾ ಪ್ರವೀಣರಿಗೆ ಸಾಷ್ಟಾಂಗವೆರಗಿ ಕರ್ಣಾಟಕ ಕೌತುಕ ವಹಂತಾ ಪ್ರಸಂಗವನು ಗಂಧರ್ವಗಾನವಂಮಾಡಿ, ಮಹಾದೇವಿ ನಿರೂಪಿಸಿದ ಕೃತಿಯಂ ಪೇಳ್ವೆನ ದೆಂತೆನೆ.

ದ್ವಿಪದೆ॥ ಧರೆಗೆ ದಕ್ಷಿಣೇಶ ದಮಾರ್ಥವಾಸ ।
ನಿರುತ ಸುಜನ ಸ್ತೋಮ ನಿತ್ಯಾಭಿರಾಮ ॥

* * * * *

ವಚನ॥ ಇಂತು ದಕ್ಷಿಣ ದೇಶದಲ್ಲಿ ಧರ್ಮಾರ್ಥ ಕಾಮ ಮೋಕ್ಷಾಧಿಕಾರ ವಹಂತ, ಉಭಯ ಕಾವೇರಿ ಶ್ರೀರಂಗ ಪಟ್ಟಣವೆನಿಸಲ್ಪಟ್ಟಂತ ಪಟ್ಟಣದಲ್ಲಿ ತೆಂಕಲರಾಯ ಮೈಸೂರ ಶಾಸನಾಂಕ

ದೇವ ರಾಜೇಂದ್ರ ಚಂದ್ರಮನು. ಪೂರ್ರ್ವೋತ್ತರ ಪಶ್ಚಿಮ ದಿಗ್ವಿಜಯಮಂ. ಮಾಡಿ ದುಷ್ಟ ನಿಗ್ರಹ ಶಿಷ್ಟಪರಿಪಾಲನಾರ್ಥ ಪರ ಸೈನ್ಯ ಬಿರುದಂಕ ಪ್ರತಾಪ ನಿಶ್ಶಂಕ ದೇವರಾಜಮಹಾ ರಾಜನೊಪ್ಪುತ್ತಿಹನು.

ಕವಿಯು ಮೈಸೂರು ದೊರೆ ದೇವರಾಜನ ಕಾಲದಲ್ಲಿದ್ದವನೆಂದು ಹೇಳಬಹುದಾಗಿದೆ. ದೇವರಾಜೇಂದ್ರ ಚಂದ್ರಮನ ಸೇನಾಪತಿಯುಹಾತ ಚತುರಂಗ ಪ್ರಮುಖ ವಜೀರನ ಆ ದಿಗ್ವಿಜಯ ನಾಯಿಕೆಯು ಅಪರೂಪವಹಂತದೊಂದು ಕತೆಯನ್ನು ಬೆಸಗೊಳಲು ಚತುರಂಗ ಪ್ರಮುಖನು ದುರ್ಗಾದೇವಿಯು ನಡೆಯಿಸಿದ ವಿಜಯಗಳನ್ನು ಬಣ್ಣಿಸಿದಂತೆ ಇದರಲ್ಲಿ ಹೇಳದೆ.

No. 1200- ನಳಚರಿತ್ರ by ಕೆಂಪಯ್ಯ,

NAḶA CARITRE BY KEMPAYYA.

Substance, palm-leaf. Size, 17-7/16 × $1\frac{1}{2}$ inches. Pages, 154. Lines, 7 to 9 on a page. Extent, 2,650 granthas. Character, Kannada. Condition, much injured. Appearance, old. Mode of writing good.

Complete.

This is written on the lines of the Dvipadakāvya of Rāghavayya, which describes the story of king Naḷa, as told by Bṛhadaśvamuni to Dharmarāya. The author Kempayya is the son of Kempaṇṇa and Timmamma.

Date of transcription :—Wednesday, the 13th day of the second fortnight in the lunar month Puṣya in the year Prabhava.

Name of the scribe :—Tirumaladēva, son of Pūjāri Timmappayya of Niḍuvanda.

Beginning :

ದ್ವಿಪದೆ ॥ ಶ್ರೀ ಜಾನಕೀ ವಾಸ ಶ್ರೀ ಗಿರಿವಾಸ ।
ಭಾನುಕೋಟಿ ಪ್ರಕಾಶ, ಭಕ್ತಜನಪೋಷ ।
ಭಾಳನೇತ್ರನ ಸಖನೆ । ಭಜಕ ರಕ್ಷಕನೆ ।
ಶ್ರೀ ಲಕ್ಷ್ಮೀಧರನಾದ ಶಂಕರ ಪ್ರಿಯನೆ ॥

* * * *

ಆರಯ್ದು ಸಲಹಯ್ಯ ಕಾರುಣ್ಯ ಮೂರ್ತಿ ।
ಅಮರರನು ಕಾಯ್ದವನೆ ಅಸುರ ಮರ್ದನನೆ ॥

* * * *

ಇಂತೆಂದು ತನ್ನ ಸ್ವಾಮಿಯಾದ ವೆಂಕಟೇಶ್ವರನಂ ಭಜಿಸಿ ಸರ್ವ ಲೋಕಮಾತೆಯಾದ ಜಾನಕೀದೇವಿಯಾನೇನೆಂದು ಕೊಂಡಾಡುತಿರ್ದನು ॥

* * * *

ಕಂದ ॥ ಸಕ್ಕರೆಯು ಜೇನ ಸವಿವೊಲ್ ।
ಕರ್ಕಸ ಕುಚವುಳ್ಳ ಕಾಂತೆ ಕಂಗೊಳಿಸುವವೊಲ್ ॥

ನಳನ ಕಥೆ ಯಕ್ಷಗಾನದಿ ।
ಈ ಕ್ಷಿತಿಯೊಳು ಸಕಲ ಜನರು ಲಾಲಿಸಿ ಕೇಳ್ವುದು ॥

* * * *

End :

•• ಸಾಷ್ಟಾಂಗವೆರಗಿ । ಸದ್ಭಕ್ತಿಯೊಳು ಪೇಳ್ವಾತನಾರು ಯೆಂದೆನಲು । ಬುಧ ಜನರು ಕೇಳ ಸಕಲ ಸೌಭಾಗ್ಯವುಂ, ಸಕಲ ಗುಣ ಸಂಪನ್ನನಾದ ಸುವಿವೇಕಿ ಕೆಂಪಣ್ಣನಾತನರ್ಧಾಂಗಿ ಲಲನ ರತುನವು ಎಂಬ ತಿಮ್ಮಮ್ಮನ ಗರ್ಭಾಬ್ಧಿ, ಸತಿ ಚಂದ್ರನೆನಿಪ ನೆರೆಜಾಣ ಕೆಂಪಯ್ಯನೀ ಕಥೆಯ ಯಕ್ಷಗಾನದಿಮಾಡಿ ಅಧಿಕ ಠೀವಿಯೊಳು ಸಕಲಕವಿಗಳಿಗೆಲ್ಲಸಾಷ್ಟಾಂಗವೆರಗಿ ॥ ಕನ್ನಡದಿ ಪೇಳದಾ ಬಿನ್ನಾಣದಿಂದ । ಈ ಕಥೆಯ ಪೂರ್ವದೊಳು ಬೃಹದಶ್ವ ಮುನಿಯು ಧರ್ಮರಾಯಗೆ ಪೇಳ್ದ ಕಥೆಯ ಮರ್ತ್ಯದೊಳು. ಆಮೇಲೆ ಈ ಕಥೆಯನ್ನು ರಾಘವಯ್ಯನು ಪೇಳ್ದ ದ್ವಿಪದಿ ಕಾವ್ಯದೊಳು. ಅವರಿಗೆ ಸಾಷ್ಟಾಂಗವೆರಗಿ ನಾಂ ಸ್ತುತಿಸಿ, ಈಗ ನಾ ಪೇಳ ದೆನು ಯಕ್ಷಗಾನದೊಳು॥ ಬರೆದವರ್ಗೆ ಭಾಗ್ಯ ಅಚ್ಚುಡಿಸಿದವರ್ಗೈಶ್ವರ್ಯ, ಓದಿದವರ್ಗೆ ಸಕಲ ಭಾಗ್ಯ ಸಂಪದವು ॥

ನಳಚರಿತ್ರೆಯ ಮುದದಿ ಇಳೆಯೊಳಹ ಜನರು ॥
ಬಳಕ ಬರೆದೋದಿ ಕೇಳದ ಜನರಿಗೆ
ಇನ್ನು ಶನಿ ತಾನು ಸೇರಲಂಜುವನು,
ಧರೆಯೊಳಗೆ ನಳ ಚಕ್ರವರ್ತಿ ಕಥೆಯನ್ನು,
ರವಿ ಶಶಿಯುಳ್ಳನಕ ಭೂಚಕ್ರದಲ್ಲಿ
ರಾಮ ಭಕ್ತನಾದಂತ್ತ ನಳರಾಜ ಚಂದನಾ ಕಥೆಯು ।
ಇಳೆಯೊಳಗೆ ಆ ಚಂದ್ರಾರ್ಕವಾಗಿ ಪ್ರೊಪ್ಪಿಹುದು ಶ್ರೀ

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾಗಿದೆ. ಲಿಪಿ ಚನ್ನಾಗಿದೆ. ಪುಸ್ತಕದಾದಿಯಲ್ಲಿ "ಪ್ರಭವ ಸಂವತ್ಸರದ ಕಾರ್ತಿಕ ಬ ೧೦ ಶ್ರೀಮತ್ ನಿಡುವಂದದ ತಿಮ್ಮಪ್ಪಯ್ಯನವರ ಪುಸ್ತಕಕ್ಕೆ ನಳಚರಿತ್ರೆ ಬರೆಯುವುದಕ್ಕೆ ಶುಭಮಸ್ತು," ಎಂದೂ ಅಂತ್ಯದಲ್ಲಿ ಬರೆದಾತ ಶ್ರೀಮತು ನಿಡುವಂದದ ಪೂಜಾರಿ ತಿಮ್ಮಪ್ಪಯ್ಯನ ಕುಮಾರ ತಿರುಮಲ ದ್ಯಾ (?ದೇ) ವರು ಪ್ರಭವ ನಾಮ ಸಂವತ್ಸರದ ಪುಷ್ಯ ಬ ೧೩ ಲು ಬುಧುವಾರ ದಿವಸ (ಬುಧವಾರ) ಮೂರು ಜಾಮಕ್ಕೆ ನಳ ಚರಿತ್ರೆ ಸಂಪೂರ್ಣ ಮಂಗಳ ಮಹಾ ಶ್ರೀ. ಕವಿಯು ಕೆಂಪಯ್ಯ ನೆಂಬವನು. ಆದಿಯಲ್ಲಿ ವೆಂಕಟೇಶ್ವರ ದೇವರನ್ನು ಸ್ತುತಿಸಿ ಆಮೇಲೆ ಕ್ರಮವಾಗಿ ಲಕ್ಷ್ಮೀ, ಸದಾಶಿವ, ಪಾರ್ವತಿ, ವಿಘ್ನೇಶ್ವರ, ಶಾರದಾದೇವಿಯರನ್ನು ಪೊಗಳಿ, ದೇವ ಕವಿಗಳನ್ನು ಸ್ಮರಿಸಿ, ಶೇಷ, ವಾಲ್ಮೀಕಿ, ವ್ಯಾಸ, ಕುಶ, ಕನಕ, ಕಾಳಿದಾಸರನ್ನು ನೆನೆದು, ಕೃತಿಯನ್ನಾರಂಭಿಸಿರುವನು. ಆದುದರಿಂದೀತನು ಸುಮಾರು 16 ನೆಯ ಶತಮಾನದ ಅಂತ್ಯ ಭಾಗದಲ್ಲಿ ಇದ್ದಿರಬಹುದು. ಇದರಲ್ಲಿ ನಳ, ಚಕ್ರವರ್ತಿಯ ಚರಿತ್ರೆಯು ಯಕ್ಷಗಾನ ರೂಪದಲ್ಲಿ ಉಕ್ತವಾಗಿದೆ. ಕವಿಯ ವಂಶ ಪರಂಪರೆ, ಮುಂತಾದ ಇನ್ನೂ ಕೆಲವು ವಿಷಯಗಳು ಉದ್ಧೃತ ಭಾಗಗಳಲ್ಲಿವೆ. ಅವನ್ನಲ್ಲಿ ನೋಡಿ ತಿಳಿಯುವುದು.

No. 1201. ಪಾರಿಜಾತ-

PĀRIJĀTA.

Substance, Palm-leaf. Size, $9\frac{3}{4} \times 1\frac{1}{2}$ inches. Pages, 190. Lines, 6 to 7 on a page. Extent, 1350 granthas. Character, Kannada. Condition, injured. Appearance, old. Mode of writing, good.

Incomplete.

Yakṣagāna written in Kannada and Telugu. The Purāṇic story of Śrīkṛṣṇa getting the Pārijāta tree from pleasure garden of Indra is described in this. The name of the author is not known.

Beginning :

"ರಾಗ ॥ ತ್ರಿವುಡೆ"

ಗೆಜ್ಜೆಲಂದ್ಯುಲು ಪಾದಮುಲನು ಗಲ್ಲುಗಲ್ಲುನಿ ಬೋವಗಾ ।
ಗುಜ್ಜುರೂಪನ ಬೊಜಗದಲಗಾ ವಚ್ಚಿನಾಟ್ಯಮುವಾಡುಚು. ॥ ೧ ॥
ಎಂತೊಖಿಂತನಿ ಚೂಚಿ ಚೂಡುಗ ಕಂತುಹರಸುಕುಮಾರುನಿ ।
ಇಂತಗಾ ಯೊಜಗಮು ಲೋಪಲವೀಡಿ ವಿದ್ಯಲಗುರುವಟ ॥ ೨ ॥
ಹರಿಹರ ಬ್ರಹ್ಮಾದಿ ಸುರುಲನು ಆವಳಗ ಬೋಧಿಂಪಗಾ ।
ಭರತಶಾಸ್ತ್ರಮು ಖಿಂಚಿನಾಟ್ಯಮು ಪರಿಪರಿಗ ಗತುಲಾಡುಚು ॥ ೩ ॥

"ರಾಗ ॥ ದರುಲು"

ಪಲ್ಲವಿ॥— ಅಡಿನೆದೆವ್ರುಡಾಡಿನೆ ಆಡಿಪಾಡಿ ಸಕಲಂದರು ಜೂಡಗಾ
ಭಾಳಾಕ್ಷ ತನಯುಡು ಭಕ್ತಮಂಧಾರುಡು ॥

ಚರಣಗಳು ॥ ಕಂಠಮುನ ವೇಸಿನ ಕನಕಹಾರಮುಲು
ಗೆಜ್ಜೆ ಕಡಕ ಮುಲುರೆ ನೆನಗಾ ॥ ೧ ॥
ಕನಕಾಭರಣಮುಲು ಕಳಕಳ ಮನಗಾ ।
ನೀಲ ಮೌಕ್ತಿಕರತ್ನ ನಿಗ ನಿಗ ಮನಗಾ ॥ ೨ ॥
ಮೂಷಕವಾಹನ ಮೋದಕ ಹಸ್ತುಡು ।
ಮುನಿಜನ ವಂದಿತ ಮುದ್ದು ಗಣೇಶುಡು ॥ ೩ ॥

ಇತಿ ಪೀಠಿಕೆ ॥

"ಪದ"

ಭದ್ರ ಗಜ ಮುಕುಡಾತೋ ಪರಗಾಮನ್ನಯು ವೀರ ।
ಭದ್ರುಡು ಕೋರಿಕ ಪಿಚು ಪಾರ್ವತಿ ನಂದನ ॥ ೧ ॥
ಆದಿತ್ಯ ಕುಲುಡು ಖಿಮ್ಮು ಆರಾಧಿಂಚಿ ಅಬ್ಧಿಗಟ್ಟಿ ।
ಸಾಧಿಂಚಿ ಲಂಕಲೊ ರಾವಣು ಸಕುಲನು ಜಂಪಾನು ॥ ೨ ॥
ಪರಗಭಿಕ್ಷ ವಾಲ್ಮೀಕಿ ನಾಪಸೇವಕುಡ ನಾವೈ ।
ನ್ಪೋರ್ಷಿಲೊ ನಾನ್ಕಯು ವೀರವ್ರುಚಿತಮುಲೊಸಗು ॥ ೩ ॥

“ ರಾಗ ॥ ತ್ರಿವುಡೆ ”

ಕ್ರತುವ ಪುಟ್ಟಿಸಿದವನ ರಾಣಿ ಕಮಲವದನ ನಂಬಿದೆ ।
ಅತಿಶಯದಿ ಶೃಂಗಪುರದ ವಾಸಿನಿ ವರದರಾಣಿ ॥ ೧ ॥
ಬಾಲಕರಿಗೆ ಭಕ್ತಿ ಪುಟ್ಟಿಪ ಭಾವೆ ಶೀಲೆ ನಂಬಿದೆ ।
ಓಲೆ ಮೂಗುತಿ ಮುದ್ದು ಮೊಗದ ಮುಗುಳ್ನಲ್ಲೆ ॥ ೨ ।
ಕುಂವರದನದ ಕುಮುದದಂತ ಕುಶಲದಿಂದ ಮೆರೆವುದು ।
ಇಂದು ಯೆನ್ನಯ ಹೃದಯದೊಳು ನೀ ಬಂದು ನಿಂದು ॥ ೩ ॥

“ ಪದ್ಯ ”

ಹರ ಗಿರಿಜೆ ಹರಿಯಿಂ (ದಿ) ರೆ ಕಮಲ ಜಾತ (ವಾಣಿ)
ಯಿಂದ್ರಾದ್ಯಷ್ಟ ದಿಕ್ಪಾಲಕರಂ ಭೂವ್ಯಾಕಾಶ (ವಾಣಿ)
ಸೂರ್ಯ ಚಂದ್ರ ನಿತ್ಯ ಸೂರಿ ಮುಂತಾದ್ಯರಂ ಭಜಿಪಿಸಾರ ।
ಸಂಗ್ರಹ ನಾಟಕ ಪಾರಿಜಾತ ಕಥೆಯಂ ಪೇಳ್ವೆನದೆಂತೆನೆ :—

End :

ವಚನ :—ದಳಪತಿಯಾಗಿರ್ದ ಚಂದ್ರಸೇನಂ ಬಂದು ಪಾರಿಜಾತವ . . . .
ಕೊಂಡುಬರುವ ಗರುತ್ಮಂತನಂ ನೋಡಿ ಚಂದ್ರಸೇನ ನೇನೆನ್ನುತಿರ್ದನು.
ದ್ವಿಪದಿ ॥ . . . . ಜಪಿತಿ ।

ಈ ವೀಡು ವೃಕ್ಷಮುನನು ಅಮರ ಲೋಕಮು . . . . ವ್ಯಾ ಪ್ರೊರಿ ॥
. . . . . . ಕಲಹಂಬು ಸುಖ . . ದುಪ್ರೋರಿ ।
ಯೀ ವಾಡೆ ರೆಗುನೇ ವೆಲಮಿ ವೃಕ್ಷಮುನು ಗೊರುವೆರು ॥

(ವಿ-ವಿ.)—

ಅಸಮಗ್ರ. ಈ ಪುಸ್ತಕದ ಮೊದಲ ಓಲೆಗಳು ಚೆನ್ನಾಗಿದ್ದು ಬರ ಬರುತ್ತ ಓಲೆಗಳು ಸ್ವಲ್ಪ ಸ್ವಲ್ಪ ಹುಳು ತಿಂದು ಕಡೆಗೆ ತುಂಬಾ ಶಿಥಿಲವಾಗಿಹೋದಿವೆ. ಲಿಪಿ ಚೆನ್ನಾಗಿದೆ. ಮೊದಲಿಂದ ೯೫ ಓಲೆಗಳು ಇವೆ.

ಇದು ಯಕ್ಷಗಾನ ರೂಪವಾದುದು. ಕರ್ಣಾಟಕಾಂಧ್ರ ಭಾಷೆಗಳೆರಡೂ ಇದರಲ್ಲಿ ಉಪಯುಕ್ತಗಳಾಗಿವೆ. ಕೃಷ್ಣನು ದೇವಲೋಕದಿಂದ ಪಾರಿಜಾತವನ್ನು ತಂದ ಕಥೆಯು ಇದರಲ್ಲಿ ಉಕ್ತವಾಗಿದೆ. ಹಾಡುಗಳಲ್ಲಿ “ ಶೃಂಗಾರ ಪುರವಾಸಿನಿ—ಶ್ವೇತಪುರನಿವಾಸ । ಮುಂತಾದ ಅಂಕಿತಗಳು ಕಂಡು ಬರುತ್ತವೆ. ಕವಿ ಯಾರೆಂಬುದು ಗೊತ್ತಾಗುವದಿಲ್ಲ.

No. 1202. ಪಾರಿಜಾತ ಪ್ರಸಂಗ by ಸಾಮಿಕವಿ.

PĀRIJĀTA PRASAṄGA BY SĀMIKAVI.

Substance, Palm-leaf. Size, 11⅜ × 1¼ inches. Pages, 60. Lines, 5 to 6 on a page. Extent, 580 granthas. Character, Kannada. Condition, injured. Appearance, old. Mode of writing, fair.

Begins on fol. 76-*a* of the Ms. described under No. 1035 *ante*.

Incomplete.

Describes the story of Śrīkṛṣṇa taking away the Pārijāta tree from Indra's graden to satisfy his wife Satyabhāma. The author Sāmikavi is a native of Dēvanūru. The work breaks off in the beginning of the plot. For other particulars see extracts given below.

Beginning :

ಬಿಳಿಕಲ್ಲ ರಂಗಸ್ವಾಮಿಯವರ ಪಾರಿಜಾತ ಪ್ರಸಂಗದ ಪುಸ್ತಕ ಬರೆವುದಕ್ಕೆ ನಿರ್ವಿಘ್ನಮಸ್ತು. ಈ ಪ್ರಸಂಗವ ದೇವನೂರ ವಾಮನಾಚಾರ್ಯರ ಶಿಷ್ಯ ಸಾಮಿಕವೀಶ್ವರನು ಮಾದವನಹಳ್ಳಿ ವೆಂಕಟಯ್ಯನ ಸುಪುತ್ರ ವಾಯುಪ್ಪಯ್ಯಗೆ ಆಯುರಾರೋಗ್ಯೈಶ್ವರ್ಯವಾಗಲೆಂದು ಸ್ವಯಂ ಕವಿತ್ವವಿಟ್ಟು ಪೇಳ್ದನದೆಂತೆನೆ :—

ದ್ವಿಪದಿ ॥ ಶ್ರೀ ವನಿತೆಯೊಳ್ದಂತ ಶೃಂಗಾರಕಾಯ ।
ದೇವಕಿಯ ಗರ್ಭದಲಿ ಜನಿಸಿ ಮುನಿಪ್ರಿಯ ॥
ಮಾವ ಕಂಸನ ಗೆಲಿದು ಮಧುರೆಯೊಳಗೊಲಿದು ॥
ಸಾವಕಾಶದಿ ಉಗ್ರಸೇನನಂ ಪೊರೆದು ।
ಭಾವದಲಿ ಜನನಿ ಜನಕರ ಮುಂದೆ ನಲಿದು.

* * * *

ಭೂವಲಯದೊಳಧಿಕ ವೆನಿಸುವ ದ್ವಾರಕೆ ಪುರದೊಳ್ದೇವ ।
ದೇವೋತ್ತಮನಾದ ಶ್ರೀಕೃಷ್ಣನು ರುಕ್ಮಿಣಿ ಸತ್ಯಭಾಮೆ ।
ಮೊದಲಾಗಿರುವಂಥ . . . ಸಾಸಿರ ಸತಿಯರ ಸಮ್ಮೇಳನ ।
ದಿಂ ಕ್ರೀಡಿಸುವ ವಿನೋದವಂ ಬೇಳ್ವೆನದೆಂತೆನೆ :—

* * * *

ಈ ತೆರದೊಳ್ಖ್ಯಾತಿ ನಾಯಕ ವಿಖ್ಯಾತ ಬಿಳಿಗಿರಿ—
. . . ನಾಥ ಸುರಜನ ಪ್ರೀತ ।
ಸ್ಮರನಿಗೆ ತಾತ ದೇವಕೀಜಾತ ವಿನಮಿತರಿಗೆ ದಾತನೆಂ ಬಾತನಂ ಸ್ಮರಿಪೆನದೆಂತೆನೆ :—

* * * *

ನಾಮ ಸಾಸಿರವಾಂತ ಶಂಕರ । ಸೋಮಶೇಖರ ಶಂಭು ಪುರಹರ ।
ಸಾಮಿ ಕವಿಯಂ ಬಿಡದೆ ರಕ್ಷಿಸು ಪ್ರೇಮದಿಂದ ॥

* * * * *

ವಚನ ॥ ಇನಿತು ಪರಿಯೊಳು ದೇವತಾ ಸುತ್ತಿಯಂ ಘನವೆನಲ್ನೆಗಳ್ಚಿ ದನುಜಾರಿ ಕೃಷ್ಣನು—ತನ್ನ ವನಿತೆಯರೊಡನೆ ದಿನಗಳೆದ ಪರಿಯಂ ಅನುಪಿನಿಂದುಸಿರ್ದಪೆನದೆಂತೆನೆ :—

End :

ಸಿತ್ರಗಿರಿಯ ವಾಸನೆ, ಶ್ರುತಿಕರ್ತರಂಗೇಶನೆ
ಮತಿಯುತನು ರಾಯಮಂತ್ರಿಗೆ ಗತಿ ನೀನೆ ಸರ್ವೇಶನೆ ।
ಸತತ ಉನ್ನೊಳು ಬಹುರತಿಯಿಂದ ಕೂಡಿರುವ ।
ಕಥನ ಕಾರಣ ಉನ್ನತ ಮೋಹ ನಿಮಗೆ ॥

(ವಿ-ವಿ.)—

ಅಸಮಗ್ರ. ಶಿಥಿಲ. ಬರವಣಿಗೆ ಚೆನ್ನಾಗಿದೆ. ಕವಿಯ ಹೆಸರು ಸ್ವಾಮಿ ಕವೀಶ್ವರನೆಂದು. ಈತನು ದೇವನೂರಿನವನು. ಆದಿಯಲ್ಲಿ ಶ್ವೇತಗಿರಿಯಲ್ಲಿ ನೆಲೆಗೊಂಡ ಶ್ರೀಕೃಷ್ಣನನ್ನೂ ಶಂಭುವನ್ನೂ ಸ್ತುತಿಸಿ ಆ ಮೇಲೆ ಬ್ರಹ್ಮ, ಅಷ್ಟ ದಿಕ್ಪಾಲಕರು, ಋಷಿಗಳು, ಹಿರಿಯ ಕವಿಗಳು, ಇವರ್ಗಳನ್ನು ವಂದಿಸಿ ಗಣಪತಿ, ಶಾರದೆಯರನ್ನು ಪೊಗಳಿ, ಗ್ರಂಥವನ್ನಾರಂಭಿಸುವನು. ಈ ಪ್ರತಿಯಲ್ಲಿ ಪ್ರಕೃತ ಕಥಾವಸ್ತುವನ್ನು ಮುಟ್ಟುವುದಕ್ಕೆ ಮೊದಲೇ ಗ್ರಂಥವು ತುಂಡಾಗಿರುವುದು. ಕಥಾರಂಭದಲ್ಲಿ ವಿರಹ ಸಂತಪ್ತೆಯರಾಗಿ ಸಂದೇಶದೊಡನೆ ದೂತಿಗಳನ್ನು ಕಳುಹಿಸಿದ ತನ್ನ ಎಂಟುಮಂದಿ ಪಟ್ಟದ ಮಡದಿಯರನ್ನು ಸಂತೈಸುವದಕ್ಕಾಗಿ ಶ್ರೀಕೃಷ್ಣನು ಒಬ್ಬೊಬ್ಬರ ಮನೆಗೂ ಕ್ರಮವಾಗಿ ಹೋಗುವುದನ್ನು ವರ್ಣಿಸುವುದಕ್ಕೆ ಕವಿಯು ಉಜ್ಜುಗಿಸಿರುವನು. ಶ್ರೀಕೃಷ್ಣನು ಸತ್ಯಭಾಮೆ, ರುಕ್ಮಿಣಿ, ರಾಧೆ, ಜಾಂಬವತಿ ಇವರೊಡನೆ ರಮಿಸಿ ಕಾಳಿಂದಿಯೊಡನೆ ಸರಸವಾಡುತ್ತಿರುವ ಸಂದರ್ಭದ ವರೆಗೆ ಮಾತ್ರ ಇದರಲ್ಲಿದೆ. ವರ್ಣನೆಯು ಚೆನ್ನಾಗಿದೆ. ಬರವಣಿಗೆಯಲ್ಲಿ ಹೆಚ್ಚು ತಪ್ಪುಗಳಲ್ಲ.

No. 1203. ಪಾರ್ವತಿ ಕೊರವಂಜಿ by ವೆಂಕ-
PĀRVATIKORAVAÑJI BY VEṄKA.

Substance, Palm-leaf. Size, 17 × $1\frac{3}{8}$ to $1\frac{5}{8}$ inches. Pages, 30. Lines, 5 to 7 on a page. Extent, 500 granthas. Character, Kannada. Condition, injured. Appearance, old. Mode of writing, good.

Wants 2 leaves in the beginning, otherwise complete.

The story described herein is as follows—While Kausalya, wife of King Daśaratha, was feeling sorry for not having children, Pārvati, at the instructions of Śiva goes to Kausalya in the guise of a soothsayer, and tells her that she will have a son, Rama. She also describes in brief the story of Rāmāyaṇa. The author Veṅka was the son of Veṅkateśayya and grandson of Tirumalayya, who lived in Meḷeyakōṭe.

Date of transcription.—Thursday, the 12th day of the dark fortnight of the lunar month Srāvaṇa in the year Viśvavāsu.

Name of the scribe—Cāyappa, son of Subbayya of Halasūru, a division of Kṛṣṇarājapura which itself is a part of Bangalore City.

Beginning :

ದಾಸನು ಮೊದಲಾದ ಕವಿಗಳಗೆಯೆಲ್ಲರಿಗೆ ಸಾಷ್ಟಾಂಗವೆರಗಿ ಪೇಳುವೆನು ॥ ೫ ॥

ವ ॥ ಇಂತು ದೇವಕವಿಗಳಂ ಕೊಂಡಾಡಿ ಮತ್ತು ಕುಟಿಲ ಕುಚೋದ್ಯವಂ ಮಾಡುವ ವ್ರಣವನೆಣಿಸುವ ನೊಣನ ತೆರದಿ ಕುಹಕ ಕವಿಗಳಗೆರಗಿ ನಾನೀ ಕೃತಿಯಂ ಪೇಳ್ವೆನು. ॥

ಕಂ ॥ ಸಕ್ಕರೆಯ ಜೇನ ಸವಿವೊಲ್,
ಕಕ್ಕಸ ಕುಚವುಳ್ಳ ಕಾಂತೆಕಂಗೊಳಸುವವೊಲ್ ।
ಅಕ್ಕರ ಪುಟ್ಟುವುದೀ ಕೃತಿ ।
ಪೆಕ್ಕಸ ದೋರಿಸದು ಕೇಳ್ದ ಸುಜನರಿಗೆಲ್ಲಂ ॥

ವ ॥ ಅಂಕಿತವಾಗಿ ನಿಜಾಂಕಿತವಾದ ದಶರಥರಾಯನ ಕುಮಾರನಾದ ರಾಮಚಂದ್ರನ ಚರಿತ್ರೆಯು ಕೈಲಾಸವಾಸಿಯಾದಂಥ ಪಾರ್ವತಿ ದೇವಿಯು ಕೌಸಲ್ಯಾದೇವಿಗೆ ಹೇಳ್ದ ಕೊರವಂಜಿ ಕಟ್ಟಿ ಯಕ್ಷಗಾನಕ್ಕೆ ಕಥಾ ಪ್ರಾರಂಭವದೆಂತೆನೆ :—

End :

ಕುರುಜ ಜಂಪೆ :—

ಧರೆಯೊಳಗೆ ಈ ಕೃತಿಯು ಹೇಳಿದವರ್ಗೆ,
ಹರಕೊಡುವ ಬೇಕಾದ ಇಷ್ಟಾರ್ಥ ಪದವಿಗಳ,

* * *

ಕಂಗೊರಳ ಅಭವಂಗೆ ಕಾಕುದ್ಗಿರೀಶಂಗೆ ।
ವರ ಗಂಗಾಧರಗೆ ವನಜನಾಭನಿಗೆ ॥

* * *

ಮೆಳೆಯು ಕೋಟೆಯ (ತಿರು) ಮಲಯ್ಯನ ಕುಮಾರ ನೊಲವಿಂದ ವೆಂಕಟೇಶಯ್ಯನ ಪುತ್ರ ॥

ಸರಸ ಕವಿ ವರ ವೆಂಕ, ಸಾರೆ ರಾಘವನ ।
ಕೃತಿಯನತಿಶಯ ಚಮತ್ಕಾರದಿಂದೊರೆದಿಹನು ।
ಧರೆಯೊಳಗೆ ರವಿಶಶಿಗಳುಳ್ಳನಕ ಯೀಕೃತಿಯು ।
ಆ ಚಂದ್ರ ತಾರಾರ್ಕ ವಾಗೊಪ್ಪುತಿಹುದು ।

ಪಾರ್ವತಿ ಕೊರವಂಜಿ ಸಂಪೂರ್ಣಂ.

ಮಂಗಳ ಮಹಾ ಶ್ರೀ—.

(ವಿ-ವಿ.)—

ಮೊದಲಿನೆರಡು ಓಲೆಗಳಿಲ್ಲ. ಅವುಗಳಿದ್ದರೆ ಗ್ರಂಥವು ಸಮಗ್ರವಾಗುತ್ತಿದ್ದಿತು. ಶಿಥಿಲ. ಪುಸ್ತಕದ ಕೊನೆಯಲ್ಲಿ "ವಿಶ್ವಾವಸು ನಾಮ ಸಂ॥ ಶ್ರಾವಣ ಬಹುಳ ೧೦ ಗುರುವಾರ, ೧೬ ನೆಯ ಘಳಿಗ್ಗೆ ಪಾರ್ವತಿ ಕೊರವಂಜಿ ಮುಕ್ತಾಯವಾದುದ್ದು. ಶ್ರೀ ॥

ಬೆಂಗಳೂರು ವಳಿತವಾದ ಕೃಷ್ಣರಾಜಪುರಕ್ಕೆ ಸಲ್ಲುವ ಹಲಸೂರು ಸುಬ್ಬಯ್ಯನವರ ಕುಮಾರ ಚಾಯಪ್ಪ ಬರೆದ ಪಾರ್ವತಿ ಕೊರವಂಜಿ . ಮಂಗಳ ಮಹಾಶ್ರೀ ॥ ಎಂದಿದೆ. ಈ ಗ್ರಂಥಕ್ಕೆ ಶ್ರೀ ರಾಮ ಚರಿತ್ರೆ ಎಂಬ ಇನ್ನೊಂದು ಹೆಸರೂ ಇದೆ. ಗ್ರಂಥಾಂತ್ಯದ ಶ್ರೀ ರಾಮ ಚರಿತ್ರೆಯ ಕೇಳಿದವರಿಗೆ॥ ಹರಿಕೊಡುವ ಬೇಕಾದ ಸೌಖ್ಯ ಸಂಪದವ । ಎಂಬ ಪದ್ಯದಿಂದೀ ಅಂಶವನ್ನು ತಿಳಿಯಬಹುದು. ಕವಿ "ವೆಂಕ ಎಂಬವನು. ಇವನ ತಂದೆ ವೆಂಕಟೇಶಯ್ಯ. ಪಿತಾಮಹನು ತಿರುಮಲಯ್ಯ, "ಮೆಳೆಯ ಕೋಟೆ" ಯೆಂಬ ಸ್ಥಳದಲ್ಲಿದ್ದನು.

No. 1204. ಶರಣಲೀಲಾಮೃತ by ಚೆನ್ನಪ್ಪ.
ŚARAṆALĪLĀMṚTA BY CENNAPPA.

Substance, Palm-leaf. Size, $16\frac{7}{8} \times 1\frac{1}{2}$ inches. Pages, 234. Lines, 7 to 9 on a page. Extent, 6,000 granthas. Character, Kannada. Condition, injured. Appearance, old. Mode of writing, good.

Complete in 11 sandhis.

A Vīraśaiva work describing the miraculous deeds of the devotees of Śiva, viz., Basava and his contemporaries and how they attained salvation. The name of the author is Cennappa. He was a disciple of Pañcavaṇṇige Cennamallikārjuna. The work has been edited by Siddhānti Subrahmanya Śāstri and published in 1871 at Bangalore. The third edition of the same came out in the year 1892.

Date of transcription.—Eighth day of the bright fortnight of lunar month Āśvauja in the year Viḷambi.

Name of the scribe.—Rēvappa, son of Doḍḍaśāntappa of Rāmaghaṭṭa for cavidagire Mallappa of Koṭṭūru.

Beginning :

ದ್ವಿಪದೆ ॥ ಶ್ರೀಗಿರಿಜೆಯರ್ಧಾಂಗ ಶ್ರೀದಿವ್ಯಲಿಂಗ ।
ನಾಗಸುರಚರ್ಮಾಂಗ ನಮಿತಾಭುಜಂಗ ॥
ಸಾಗರ ಧರಾಭಕ್ತ ಸರಸಿಜ ಭೃಂಗ ।
ಶ್ರೀಗುರು ಶಿವಲಿಂಗ ಸಿದ್ಧಾಂತರಂಗ ॥

* * *

ದ್ವಿಪದೆ ॥ ಮಲುಹಣನು ಮಯೂರ ಮಲಯರಾಜೇಂದ್ರ ।
ಚೆಲದಂಕ ಬಾಣಾಶ್ವ ಚರಿತ ಸುತ್ರಾಣ ॥
ಹಲಾಯುಧನು ಹಂಪೆ ಹರಿದೇವ ಮುಖ್ಯ ।
ಮಲಿಹರನ ವರಭಕ್ತ ಮಹಿತಾ ವಿರಕ್ತಾ ।
ಸುಲಲಿತ ಪಾಲ್ಕುರಿಕೆ ಸೋಮ ವರಭೀಮ ॥
ನಂದೀಶ ನಿಜಗುಣಾನತ ರಾಘವಾಂಕ ।
ಗಂಧರ್ವ ಸುರಯಕ್ಷಗಾನರು ಮುಖ್ಯ ॥
ನಂಬಿ ಧೂರ್ಜಟಿ ಕಪಿನಾಯಕ ವ್ಯಾಸ ।
ಶಂಭು ಮೋಹದ ಶಿವ ಕವಿ ಕಾಳಿದಾಸ ॥
ಪುರಹರ ವರಭಕ್ತ ಪುಣ್ಯಗುಣಯುಕ್ತ ।
ಕೆರೆಯ ಪದ್ಮರಸಯ್ಯ ಕೇಶಿರಾಜಯ್ಯ ॥
ಪರಮ ಸದ್ಗುಣಹಾರ ಪಾಪಸಂಹಾರ ।
ದುರಿತ ದುರ್ಗುಣದೂರ ಧರ್ಮಸಂಪೂರ ॥

* * *

ಹರಶರಣರತಿಮೆಚ್ಚ ಹಾಸ್ಯ ಜನರೆದೆಗಿಚ್ಚ ।
ಪರಶಿವನ ಮನಮೆಚ್ಚ ಪಾಪಿಗತಿ ಹುಚ್ಚ ।
ಮೃಡಶರಣರ ಪಡಲು ಮುಕ್ತ್ಯಮೃತದ ಕಡಲು !
ಜಡರಿಗಡರಿದ ಸಿಡಿಲು ಜಗಕೆ ಸೊಂಪಿಡಲು ॥

ಏನ ಪೇಳದನಿವನು ಮಾನವರ ಕಥೆಯೆಂಬ ।
ಹೀನ ಮನುಜರ [ಹಿಂಡಿಗೆ] (ನುಡಿಗೆ) ಮನವ ಕೊಂಡ ॥

* * * *

ದ್ವಿಪದೆ ॥ ಶ್ರೀಗುರುವರಭಕ್ತ ಸಕಲಗುಣಯುಕ್ತ ।
ನಾಗರಧರ ಶರಣ ಸೇವಕ ಭೃತ್ಯ ॥
ಪಂಚವರ್ಣಿಗೆ ಚೆನ್ನಮಲ್ಲಿಕಾರ್ಜುನನ ।
ಸಂಚಿತ ಕರಜಾತ ಸಕಲಜನ ಪ್ರೀತ ॥
ಪನ್ನಗಧರ ಪಾದ ಕರುಣವಂ ಪಡೆದು ।
ಮುನ್ನಮಾಡಿದ ಶಾಸ್ತ್ರ ಮೂಲೋಕವಂ ಪಿಡಿದು ॥
ಉನ್ನತಗುಣರನ್ನ ಉಚಿತ ಸಂಪನ್ನ ।
ಚೆನ್ನಪ್ಪಪೇಳದ ಚೆಲುವ ಸತ್ಕೃತಿಯು ॥
ಹರನ ಭಕ್ತರು ಕೇಳ ಹರುಷವನು ತಾಳ ।
ಸ್ಥಿರವೆಂದು ಹರಸಿ ಸತ್ಕರಿಸಿ ಭಕ್ತಾಳ ॥

* * * *

End :

ಷಟ್ಪದಿ ॥ ಇದುವೆ ದಕ್ಷಿಣ ಕಾಶಿ ಹಂಪೆಯು ।
ಮದನಹರ ವಿರುಪಾಕ್ಷನಿರುತಿಹ ।
ನಿಧಿಗಿ ಟೆಂಕಣ ಸದನ ನಿಡುಗಲ್ಲೆಂಬ ಪಟ್ಟಣದ ॥
ಚದುರ ಪೇಟೆಯ ಬಸವರಾಜನ ।
ಮದನ ಮಂಟಪದಲ್ಲಿ ಸದ್ಗುಣ ।
ಹೃದಯ ಚೆನ್ನಪ್ಪಯ್ಯದೇವರು ಪೇಳ್ದರೀಕೃತಿಯು ॥ ೩ ॥
ನಾನುಪೇಳುವನಲ್ಲ ಲೋಕದ ।
ಮಾನವರಿಗಳವಲ್ಲ ತತ್ವದ
ಜ್ಞಾನ ಶಿವಸಂಧಾನ ಮಂತ್ರಾಧೀನ ಸುಖಸಾನ ।
ನಾನು ಮದಡನು ನನ್ನ ಹೃದಯದಿ ।
ತಾನು ಪೇಳದ ಬಸವರಾಜನು ।
ಏನು ಪೇಳದನೆಂದು ಯೆಕ್ಕಸವಾಡದಿರಿ ನರರು ॥ ೪ ॥
ಕಾಗೆ ಚಂದ್ರನ ಗೂಗೆ ಸೂರ್ಯನ ।
ಹ್ಯೇಗೆ ಶಾಸ್ತ್ರವ ಮೂಕವಾಕ್ಯವ ।
ರೋಗಿಗಮೃತವು ಆಗಬಹುದೆ ಶಿವನ ಸಂತಿ (ತತಿ) ಯು ॥
ಭೋಗವರಿಯದ ನರರು ನರಕಕೆ ।
ಪೋಗಿ ಕೀಟಕನಾಗಿಯದರೊಳು ।
ವಿಗ್ಗೈವ ಪಾತಕವು ಅವರಿಗೆ ಶರಣ ಸತ್ಕೃತಿಯು ॥ ೫ ॥
ಕಾಶಿ ಗಯ ಕಾವೇರಿ ವಾರಾ ।
ಣಾಸಿ ಹಂಪೆಯು ತುಂಗಭದ್ರೆಯು ।

ಲೇಸೆನಿಪ ಮಹಗಂಗೆ ಕೃಷ್ಣವೇಣಿ ಸರಸ್ವತಿಯು ॥
ನೇಸರೊಳಗಿಹ ನದಿಯು ನಿಧಿ ರಾ ।
ಮೇಶ ಸಹ ಸಕಲಾದಿ ತೀರ್ಥವು ।
ಈಶ ಶರಣರ ಚರಣಸ್ತುತಿಪದಕೆಣೆಯೆ ಧಾತ್ರಿಯಲಿ ॥ ೬ ॥

ಶಂಭು ಸ್ತುತಿಸಿದ ಶರಣ ಪದವನು ।
ನಂಬಿ ಸ್ತುತಿಸಿದ ಶರಣ ಪದವನು ।
ಕುಂಭ ಸಂಭವ ಹರಿಯಜೇಂದ್ರ ಮುನೀಂದ್ರವರರೆಲ್ಲ ॥
ಶಂಭು ಪೂಜೆಗಳಲ್ಲಿ ಸ್ತುತಿಸುತ ।
ಶಂಭುವನು ಪ್ರತ್ಯಕ್ಷಮಾಡಿಯೆ ।
ಶಂಭುಲೋಕಕೆ ಪೋದರೆಂಬುದು ಸಕಲಶಾಸ್ತ್ರವಲಿ ॥ ೭ ॥

ಪಾಲ್ಕುರಿಕೆ ಸೋಮ ವರಕವಿ ಲ । (?)
ಭೀಮ ಶಂಕರದೇವ ಧೂರ್ಜಟಿ ।
ಫಾಲಲೋಚನ ಭಕ್ತ ಮಲುಹಣ ಗುಬ್ಬಿಮಾಲ್ಯಣ್ಣ ॥
ಲೀಲೆ ಚಾಮರಸಯ್ಯ ಗುಸುರಿದ ।
ಕಾಲಹರಸುತ ವೀರಭದ್ರಕ್ಕೆ ।
ಪಾಲರೆಲ್ಲರು ಶಿವನ ಶರಣರ ಸ್ತುತಿಸಿ ಬಾಳಿದರು ॥ ೮ ॥

* * *

ಸಕಲ ಮಂತ್ರಕೆ ಸಕಲ ತಂತ್ರಕೆ ।
ಸಕಲವೇದಾಗಮ ಪುರಾಣಕೆ ।
ಸಕಲಶಾಸ್ತ್ರಕೆ ಹೆಚ್ಚು ಮೆಚ್ಚಿನ ಶರಣ ಸ್ತುತಿಯೆಂದು ॥
ಸಕಲ ಭಕ್ತರು ತಿಳವರೀತಿಗೆ ।
ಪ್ರಕಟಿಸಿದ ಶ್ರೀ ಸೋಮ ನಾಥನ ।
ಸಕಲ ಭಕ್ತರು ಕೇಳಿ ಹರುಷವ ತಾಳಹರಸುವುದು ॥ ೧೦ ॥

ಶರಣ ಸ್ತುತಿಯಿದನಾವ ಭಕ್ತರು ।
ಧರೆಯೊಳಗೆ ಯೊರೆದೋದಿ ಕೇಳಲು ।
ಪರಮ ಶುಭಕರ ದುರಿತ ಪರಿಹರ ಪೊರೆವ ಶಿವನೊಲಿದು ॥
ಧರೆಯ ಪಾಲಿಪ ಬಸವರಾಜನು ।
ಹರುಷದಲಿ ದಯವಿಟ್ಟು ಸಲಹುವ ।
ಶರಣ ಸಂತತಿಯೊಳಗೆ ಸಂತತ ಬೆರೆದು ಸುಖವಿಹರು ॥ ೧೧ ॥

ಶರಣು ಜಗದಾರಾಧ್ಯ ಪ್ರಭುವಿಗೆ ।
ಶರಣು ಶ್ರೀಗುರು ಬಸವರಾಜಗೆ ।
ಶರಣು ಪರಶಿವನೊರ ಕುಮಾರಗೆ ಚೆನ್ನಬಸವನಿಗೆ ॥
ಶರಣು ಶಿವಸಕಲಾದಿ ಪ್ರಮಥರ ।

ಚರಣ ಕಮಲವಸ್ತುತಿಸಿ ಕೀರ್ತಿಸಿ ।
ಶರಣಲೀಲಾ ಯಕ್ಷಗಾನವ ವಿರಚಿಸಿದೆ ನಾನು ॥ ೧೨ ॥

ಗುರುಲಘುವು ಛಂದಸ್ಸು ಯತಿಗಣ ।
ಸ್ವರವು ರೂಪಕ ಧಾತು ಮೊದಲಾ ।
ಗಿರುವ ಶಾಸ್ತ್ರವನೊರೆದು ನೋಡಿಸಿ ನೋಡಿದವನಲ್ಲ ॥
ಪರಮ ಶ್ರೀಗುರು ಚೆನ್ನಸಂಗಮ ।
ನೊರದಿ ಪೇಳದೆ ನಾನು ಈ ಕೃತಿ ।
ಹರನ ಭಕ್ತರು ಕೇಳಿ ಹರುಷವ ತಾಳಿ ಸುಖಿಸುವುದು ॥ ೧೩ ॥

ಅರಿಯದೇ ಪೇಳದನಿದ್ಯಾತರ ।
ಬರಿಯ ಮಾತಿನ ಬಣಬೆಯೆನುತಲಿ ।
ಜರಿದು ನುಡಿಯಲಿ ಬೇಡಿ ಶರಣರಕರುಣರಸವಿದನು ॥
ಧರೆಯೊಳಗೆ ಸದ್ಭಕ್ತಜನ ಶಿವ ।
ಶರಣರಾದ ಮಹಾನುಭಾವರು ।
ಬರೆದು ತಪ್ಪುಳ್ಳರೆ ವಿಚಾರಿಸಿ ಬರೆದು ತಿದ್ದುವುದು ॥ ೧೪ ॥

ಕಾನನದ ನಿಜ ಸೊಂಪನರಿಯದ ।
ಕಾಗೆ ನಂದನ ವನವ ಜರೆದಡೆ ।
ಏನು ಕೊರತೆಯು ದಿವ್ಯಗಂಧದಲೆಸೆವುದಾವನವು ॥
ಹೀನಮನುಜರ ಹೆಚ್ಚು ಕುಂದಿಗೆ ।
ತಾನು ಕೆಡುವುದೆ ಶಿವಮಹಾತ್ಮೆಯು ।
ಭಾನು ಕಳೆಗುಂದುವುದೆ ಮೇಘದ ಬಲುಮೆ ಹೆಚ್ಚಿದರೆ ॥ ೧೫ ॥

ಕೂಟ ಸಾಕ್ಷ್ಯರು ಕುಲವಿಹೀನರು ।
ತಾಟಕರು ಬಹು ಠೌಳಕಾರರು ।
ಮಾಟಮಾಡುವ ಶೂನ್ಯಗಾರರು ಮಾಂಸಭಕ್ಷಕರು ॥
ತಾಟಜೂಟನ ಕಾಳಮಾತ್ರನು ।
ಪಾಟಮಾಡುವ ಪರಮಪಾತಕ ।
ವಿಟಗಾಯಗಳರಿವರೇ ಶಿವಶರಣರಿಂಗಿತವ ॥ ೧೬ ॥

ಇದುಶರಣ ವಿಸ್ತಾರ ರತ್ನದ ।
ಹಾರ ಭಕ್ತವಿಚಾರ ಕರ್ಣಿಕೆ । (?)
ಮಧುರ ಅಮೃತದ ಸಾರ ಕೇಳ್ದರಿಗಿಂಪು ಬಹುಸೊಂಪು ॥
ಮದನ ಹರಮಂದಾರ ಮಹಿಮರ ।
ಹೃದಯಕಿದು ಗಂಭೀರ ವಿಕೃತಿ ।
ಸದಮಲಾತ್ಮರು ಕೇಳಹರುಷವ ತಾಳಿಹರಸುವರು । ೧೭ ।

ಕಂದ ॥ ಇದುಶರಣರ ಲೀಲಾಮೃತ ।
ವಿದು ಭಕ್ತರ ಭಕ್ತಿ ಮುಕ್ತಿ ಮೋಕ್ಷದಮಾರ್ಗಂ ॥

ಇದನೋದಿ ಕೇಳ್ದರಿಗೆ ಸಂ ।
ಪದವೀವನು ಸಂಗಮೇಶ ಕರ್ಮವಿನಾಶಂ ॥ ೧೮ ॥

Colophon :

ಶರಣಲೀಲಾಮೃತ ಯಕ್ಷಗಾನಂ ಸಮಾಪ್ತಂ ।
ಅಂತು ಸಂಧಿ (೧೦) ಕ್ಕಂ ಪದನು . . . ಕ್ಕಂ ಮಂಗಳಮಹಾಶ್ರೀ ।

(ವಿ.ವಿ.)—

ಸಮಗ್ರ. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಪುಸ್ತಕದಾದಿಯಲ್ಲಿ "ವಿಳಂಬಿ ಸಂವತ್ಸರದ. ಶ್ರಾವಣ ಶು. ೧೩ ಬುಧವಾರ ಪ್ರಾತಃಕಾಲದಲ್ಲಿ [ಶರಣಲೀಲಾಮೃತದ ಪುಸ್ತಕವನ್ನು] ಆ ಚಂದ್ರಾರ್ಕವಾಗಿಯಿರಲೆಂದು ಬರೆದ (ಶರಣಲೀಲಾಮೃತ) ಪುಸ್ತಕ" ಎಂದೂ ಅಂತ್ಯದಲ್ಲಿ ವಿಳಂಬಿ ಸಂವತ್ಸರದ ಆಶ್ವೀಜ ಶು. ೮ ಲು ಬರಿಸಿದಾತ ಕೊಟ್ಟೂರ ಚವಿದಗಿರೆ ಮಲ್ಲಪ್ಪ, ಬರೆದಾತ ರಾಮಗಟ್ಟದ ದೊಡ್ಡಶಾಂತಪ್ಪನವರ ಉದಾರಾಬ್ಧಿಚಂದ್ರ ರೇವಪ್ಪನು ಬರೆದ ಪುಸ್ತಕ ಸಮಾಪ್ತಂ ಎಂದಿದೆ.

ಇದು ಯಕ್ಷಗಾನದಲ್ಲಿ ಬರೆದಿದೆ. ಇದರಲ್ಲಿ ಬಸವನ ಮತ್ತು ಅವನ ಸಮಕಾಲಿಕರಾದ ಪುರಾತನರ ಚರಿತ್ರೆಯು ವರ್ಣಿತವಾಗಿದೆ. ಗ್ರಂಥದಾದಿಯಲ್ಲಿ ಶಿವಲಿಂಗಸ್ತುತಿಯಿದೆ. ಬಳಿಕ ಕವಿ ನಂದೀಶ, ಚೆನ್ನಮಲ್ಲೇಶ, ಪಾರ್ವತಿ, ವಿದ್ಯಾಕರ್ತೃ ಗಣಾಧಿಪತಿ, ಶಾರದೆ, ಗುರುಸಂಗಮೇಶ್ವರ, ವೀರಭದ್ರ, ಸಂಗನ ಬಸವೇಶ್ವರ, ಗಣಂಗಳು ಇವರನ್ನು ಸ್ತುತಿಸಿದ್ದಾನೆ. ಉಳಿದ ವಿಷಯಗಳನ್ನು ಉದಾಹೃತ ಭಾಗಗಳಿಂದ ತಿಳಿಯಬಹುದು.

ಕವಿ ಚೆನ್ನಪ್ಪನೆಂಬುವನು. ಇವನ ಕಾಲವು ಸು. ೧೭೫೦ ಎಂದು ಕವಿಚರಿತೆ (೩ ನೆಯ ಸಂಪುಟ) ಯಲ್ಲಿ ಹೇಳಿದೆ.

No. 1205. ಶರಣಲೀಲಾಮೃತ by ಚೆನ್ನಪ್ಪ.
ŚARAṆALĪLĀMṚTA BY CENNAPPA.

Substance, Sritāla. Size, $13\frac{1}{2} \times 1\frac{13}{16}$ inches. Pages, 449. Lines, 7 to 10 on a page. Extent, 6000 granthas. Character, Kannada. Condition, slightly injured. Appearance, old. Mode of writing, good.

Complete in 11 sandhis.

Date of transcription.—Third day of the bright fortnight of the lunar month Śrāvaṇa in the year Krōdhana.

Same work as that described above by Cennappa.

(ವಿ.ವಿ.)—

ಸಮಗ್ರ. ಸಂಧಿಗಳು ೧೧. ಶ್ರೀತಾಳಪ್ರತಿ. ಸ್ವಲ್ಪಶಿಥಿಲ. ಲಿಪಿ ಚೆನ್ನಾಗಿದೆ. ಪುಸ್ತಕದಾದಿಯಲ್ಲಿ "ಕ್ರೋಧನನಾಮ ಸಂವತ್ಸರದ ಶ್ರಾವಣ ಶು. ೩ ರಲ್ಲು ಶರಣ ಲೀಲಾಮೃತದ ಪುಸ್ತಕ ಬರೆವುದಕ್ಕೆ ಶುಭಮಸ್ತು" ಎಂದಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ

No. 1206. ಶರಣಲೀಲಾಮೃತ (ಸಂಪುಟ ೧, ೨) by ಚೆನ್ನಪ್ಪ-
ŚARAṆALĪLĀMṚTA (VOLS. I & II) BY CENNAPPA.

Substance, Paper. Size, $9\frac{1}{16} \times 6\frac{1}{4}$ and $8\frac{1}{2} \times 6\frac{3}{8}$ inches. Pages, 143 + 172=315. Lines 16 to 19 on a page. Character, Kannada. Condition, much injured. Appearance, old. Mode of writing, fair.

Complete in two vols. in 11 sandhis.

Date of transcription.—Finished on the tenth day of the dark fortnight of the lunar month Phālguṇa in the year Śukla.

Name of the scribe.—Appayya, son of Hanumappa and the grandson of Tammaṇṇa, who was an " Arcaka " or priest of Śrīmukhyārāya at Sammatinayākalakavitāḷa.

Same work as that described above.

(ವಿ.ವಿ.)—

ಸಮಗ್ರ. ಎರಡು ಸಂಪುಟಗಳಲ್ಲಿವೆ. ಪುಟಗಳು ೧೪೩ ಮತ್ತು ೧೭೨ ಇವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಎರಡನೆಯ ಸಂಪುಟದ ಕೊನೆಯಲ್ಲಿ "ಈ ಶರಣ ಲೀಲಾಮೃತ ಮುಗಿದದ್ದು ಶುಕ್ಲನಾಮ ಸಂವತ್ಸರದ ಫಾಲ್ಗುಣ ಬ. ೧೦ ರಲ್ಲು ಮುಗಿದು ಇದ್ದೀತು. ಇದು ದಾರು ಬರೆದರು ಅಂದರೆ ಸಮ್ಮತಿ ನಯಾಕಲ ಕವಿತಾಳದ ಶ್ರೀಮುಖ್ಯರಾಯನ ಅರ್ಚಕನಾದಂಥ ತಮ್ಮಣ್ಣಯ್ಯನವರ ಕುಮಾರನಾದ ಹನುಮಪ್ಪನವರ ಪುತ್ರನಾದಪ್ಪಯ್ಯನು ಬರೆದು ಇದ್ದಾನು" ಎಂದಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1207. ಶರಣಲೀಲಾಮೃತ by ಚೆನ್ನಪ್ಪ-
ŚARAṆALĪLĀMṚTA BY CENNAPPA.

Substance, Paper. Size, $9\frac{11}{16} \times 7\frac{1}{2}$ inches. Pages, 239. Lines, 15 to 18 on a page. Extent, 2,900 granthas. Character, Kannada. Condition, slightly injured. Appearnce, old. Mode of writing, fair.

Incomplete.—Contains the sandhis 1 to 5 complete and the 6th incomplete.

Same work as that described above.

(ವಿ.ವಿ.)—

ಅಸಮಗ್ರ. ಆದಿಯಿಂದ ೫ ಸಂಧಿಗಳು ಸಂಪೂರ್ಣವಾಗಿಯೂ ೬ ನೆಯದು ಅಸಂಪೂರ್ಣವಾಗಿಯೂ ಇದೆ. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರಲ್ಲಿ ಕೊಟ್ಟ ಪುಟಸಂಖ್ಯೆಯಲ್ಲಿ ಸ್ವಲ್ಪ ನ್ಯೂನಾತಿರೇಕ ವಿದೆ. ೧೫೧ ನೆಯ ಪುಟ ಸಂಖ್ಯೆಯು ಕೊಟ್ಟಿಲ್ಲ. ೫೪, ೫೫, ೮೨, ೧೯೨ ಇವುಗಳು ಆ ಆಸ್ಥಳಗಳಲ್ಲಿ ಎರಡೆರಡು ಪುಟಗಳಲ್ಲಿ ಬರೆಯಲ್ಪಟ್ಟಿವೆ. ೧೬೫ ಮತ್ತು ೧೬೬ ನೆಯ ಪುಟಗಳ ಮಧ್ಯದಲ್ಲಿ ಎರಡು ಪುಟಗಳಲ್ಲಿ ೧೫೭ ಮತ್ತು ೧೫೮ ಎಂಬ

ಸಂಖ್ಯೆಗಳು ಬರೆಯಲ್ಪಟ್ಟಿವೆ. ಕಡೆಗೆ ಕಾಣಿಸಿದ ಪುಟ ಸಂಖ್ಯೆ ೨೩೪. ಪುಸ್ತಕದ ಕೊನೆಯಲ್ಲಿ ಸೀಸದ ಕಡ್ಡಿಯಿಂದ 12th September, 1844 ಎಂದು ಬರೆದಿದೆ.

ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1208. ಶರಣಲೀಲಾಮೃತ by ಚೆನ್ನಪ್ಪ.
ŚARAṆALĪLĀMṚTA BY CENNAPPA.

Substance, Paper. Size, 12¼ × 9½ inches. Pages, 130. Lines, 21 to 30 on a page. Extent, 3,000 granthas. Character, Kannada. Condition, injured. Appearance, old. Mode of writing good.

Incomplete.

Contains 3 to 7 sandhis complete and 8th incomplete.

Same work as that described above.

(ವಿ-ವಿ.)—

ಅಸಮಗ್ರ. ೩ ರಿಂದ ೭ ರವರೆಗಿನ ಸಂಧಿಗಳು ಸಂಪೂರ್ಣವಾಗಿಯೂ ೮ ನೆಯದು ಅಸಂಪೂರ್ಣವಾಗಿಯೂ ಇವೆ. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1209. ಶರಣಲೀಲಾಮೃತ by ಚೆನ್ನಪ್ಪ.
ŚARAṆALĪLĀMṚTA BY CENNAPPA.

Substance, Palm-leaf. Size, 15 × 1$\frac{7}{16}$ inches. Pages, 82. Lines, 5 to 6 on a page. Extent, 950 granthas. Character, Kannada. Condition, injured. Appearance old. Mode of writing, good.

Incomplete.

Contains 4th and 5th sandhis complete and 3rd and 6th incomplete.

Same work as that described above.

(ವಿ-ವಿ.)—

ಅಸಮಗ್ರ. ನಾಲ್ಕು ಮತ್ತು ಐದನೆಯ ಸಂಧಿಗಳು ಸಮಗ್ರವಾಗಿಯೂ ಮೂರು ಮತ್ತು ಆರನೆಯ ಸಂಧಿಗಳು ಅಸಮಗ್ರವಾಗಿಯೂ ಇವೆ. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಈ ಪ್ರತಿಯಲ್ಲಿ ಮೊದಲಿನ ಓಲೆಯು ೬೮ ನೆಯದೂ ಕೊನೆಯ ಓಲೆಯೂ ೧೦೮ ನೆಯದೂ ಆಗಿದೆ. ಒಟ್ಟು ಓಲೆಗಳು ೪೧.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No .1210. ಸತ್ಯಭಾಮಾ ಕಲ್ಯಾಣ.
SATYABHĀMĀ KALYĀṆA.

Substance, Palm-leaf. Size, 7⅝ × 1⅜ inches. Pages, 146. Lines, 4 to 5 on a page. Extent 520 granthas. Character, Kannada. Condition, much injured. Appearance, old. Mode of writing, fair.

Complete.

Describes the story of Śrīkṛṣṇa with Satyabhāmā. This work belongs to "Yakṣagāna" group. The name of the author is not known. As the author in his expression 'ಕೆರೆಯೂರ ಪುರದಲಿ ನೆಲಸಿ। ವರವಭಕ್ತರಿಗೀವ ವೆಂಕಟೇಶ್ವರಗೆ' salutes God Veṅkaṭēśvara settled at Kereyūru, he might have been the native of the surroundings of 'Kereyūru.'

Beginning :

ಶ್ರೀಕಾಂತ ನಿವಾಸ . . . . ಶ್ರೀ ಸೋಮ
ದೈವರಿಪು ಮದಭಂಗ ದಿವ್ಯಕೃಪಾಂಗ । ರಾ . . . ರಿಪುವಿ . . .
ತದಾನವ ಸಂಹಾರ ದಾರಿದ್ರದೂರ ।
ವಾನರ ಸೇನಾ ವೈಕುಂಠ ವಾಸ ॥ ಕ . . . .
. . . ವರ್ತಭೂಷ ಕಂದರ್ಪ ರೂಪ ।
ದಿನಕರ ಸಮವೀರ್ಯ ಶ್ರೀ ತಿಮ್ಮರಾಯ ।

ವಚನ ॥ ಇಂತೆಂದು ಪ್ರಾರ್ಥನೆಯಂ ಮಾಡಿ ಇಷ್ಟಾರ್ಥ ವರಂಗಳಂ ಪಡೆದು
(ಅ) ಹೋಬಲವಾಸ ಶತರವಿ ಸಂಕಾಶ ।
ಕಾಯಜವರಜನಕ ಕಾರುಣ್ಯಗಮಕ ।
ನಾರಸಿಂಹ ಸ್ವರೂಪ ನಾನಾಭೀತಿ ಪೋಷ ।
ನರಸಿಂಹ ಬಹುನಾಮ ನಾಥಜನ ಪ್ರೇಮ ॥

ಎಂದು ರಾಜೀವಾಕ್ಷಂಗೆರಗಿ ಅಕ್ಷಯ ವರಮಂ ಪಡೆದು ಆನಂದದಿಂದ ದೇವನಂ ಭಕ್ತರನು ಕಾವನಂ ಚಂದ್ರಂಗೆ ಭಾವನಂ ಸಂಜೀವ . . . . ಶ್ರೀ ಕೃಷ್ಣ ದೇವನಂ ಭಜಿಸಿ—

* * * *

ಕಂದ ॥ ಯಾತಕೆ ಬಂದಳು ಯೆಂಬಯೊ ।
ಪ್ರೀತಿ [ಯಿಂದೆನ್ನ ಮಾತಂ] (ಯೊಳನಿವಾತ) ಕೇಳ [ಪಿಂದೆ ಬಪ್ಪ]
(ಪಿಂಗಡೆಬಹ) ನೋ ।
ಭೂತಳ (ದ) ದೊರೆಯು ನುಡಿಸಲು ।
ಭೀತಿ (ಯ) [ಗೊಳುತ] (ನೊಳಕೊಳುತೆ) ಬಹಳಚಿಂತಿಸುತಿರ್ದಳ್ ॥

ಇಂತು ಆಸ್ಥಾನದ ಸಮೀಪದಲ್ಲಿ ಭಯ ಭ್ರಾಂತಳಾಗಿರುವ ಕಾಮಲತೆಯ ಮನೋಭಾವವಂ ಶ್ರೀ ಸರ್ವೇಶ್ವರನು ತಿಳದು ತಾನು ಅರಿಯದವನ ಹಾಗೆ ತನ್ನ ಪ್ರಹಸ್ತ ಮಂತ್ರಿಗಳೊಡನೆ ಏನೆನ್ನುತಿರ್ದನು :—

ಕಂ ॥ ನಳನಾಕ್ಷಿ ಯಾವ ನಾಡೋ !
ಬಳಲಿಕೆ ಬಲುವಾಗಿ (ಯಿ) ಹಳಿ ಬಲ್ಲರು ಕೇಳೀ ॥
ವಳಯಿಂ ಕರೆತಾರೆನುತಲಿ ।
ಯಿಳದನು ಸಿಂಹಾಸನವನು ಯಿಂದಿರೆಯರಸನು ॥

ವ ।

ಇಂತು ಕೃಷ್ಣದೇವನು ಕಾಮಲತೆಯ ರಹಸ್ಯದಲ್ಲಿ ಕರೆ (ಯಿ) ಸಿ ಕೊಂಡು ಕೇಳಲು ಆ ಕೃಷ್ಣನ ಚರಣಾರವಿಂದಕ್ಕೆರಗಿ ಹತ್ತಿರ ನಿಂತು ಏನೆನ್ನುತಿರ್ದಳು.

End :

ಮಂಗಳಂ.

ನಂದಗೋಪನ ಸುತಗೆ । ನವನೀತ ಚೋರನಿಗೆ ।
ಮಂದ ಹಿರಣ್ಯಾಕ್ಷನ ಮಡುಹಿದವಗೆ । ಚಂದದಿಂದಲಿ
ಇಂದ್ರಮಳೆಗರೆಯಲು । ಅಂದು ರುಕ್ಮಿಣಿಯನು
ಅಸುರ ಶಿಶುಪಾಲಂಗೆ । ತಂದು ಮದುವೆಯಮಾಳ್ಪ
ತೆರದಿಯಿರಲು । ಬಂದು ಮೋಸವ ಮಾಡಿ ।
ರುಕ್ಮಿಣಿಯನು ನೆರೆದ । ಅಂದಗಾರ ಕೃಷ್ಣನಿಗೆ ।
ಅಸುರ ಹರಗೆ । ಜಯಮಂಗಳಂ ನಿತ್ಯ ಶುಭಮಂಗಳಂ ॥

ಇಂತೆಂದು ಮಂಗಳಾರತಿಯನೆತ್ತಿ ನಾಗವಲ್ಲಿಯ ಶಾಸ್ತ್ರವನ್ನು ಮಾಡಿ ಸ್ಥಿರಸಾಮ್ರಾಜ್ಯವನ್ನು ಆಳುತ್ತಿರ್ದ ಸಿಂಹಾಸನಾಧೀಶ ಶ್ರೀ ವಾಸುದೇವಾರ್ಪಣಮಸ್ತು.

ಸತ್ಯಭಾಮಾ ಕಲ್ಯಾಣ ಅವನಿಯೊಳಿಲ್ಲ ಆ ಚಂದ್ರಾರ್ಕವಾಗಿ ಚತುಸ್ಸಾಗರ ಪರಿಯಂತರ ಅವನಿಯೊಳೆಲ್ಲ ಪ್ರಕಟಿಸುತ್ತಿರಲಿ.

Colophon :

ಇತಿ ಸತ್ಯಭಾಮಾ ಕಲ್ಯಾಣ ಮಹೋತ್ಸವ ಸಂಪೂರ್ಣಂ.

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದು ಯಕ್ಷಗಾನದಲ್ಲಿ ಬರೆದಿದೆ. ಕಥಾಸಾರ.—ಸತ್ರಾಜಿತುವಿನ ಮನೆಗೆ ಊಟಕ್ಕೆ ಹೋಗಿದ್ದ ವಟುವೇಷಧಾರಿಯನ್ನು ಸತ್ಯಭಾಮೆಯು ಕೃಷ್ಣನೇ ಅವನೆಂದರಿತು, ಅವನ ರೂಪಲಾವಣ್ಯಾದಿಗಳಿಗೆ ಮೋಹಗೊಂಡು ಆತನಲ್ಲಿಯೇ ನೆಟ್ಟದಿಟ್ಟಿಯುಳ್ಳವಳಾಗಿ ವಿರಹಸಂತಾಪದಿಂದ ಕೊರಗುತ್ತಿರಲು ಆಕೆಯ ಸಖಿಯಾದ ಕಾಮಲತೆಯು ಕೃಷ್ಣನ ಬಳಿಗೆ ಹೋಗಿ ಯಾವದ್ವೃತ್ತಾಂತವನ್ನೂ ಬಿನ್ನವಿಸಲು ಕೃಷ್ಣನು ಸತ್ಯಭಾಮಗೆ ತನ್ನಲ್ಲಿ ದೃಢವಾದ ಅನುರಾಗವಿರುವುದನ್ನು ಪರೀಕ್ಷಿಸಿ ಆಕೆಯನ್ನು ಲಗ್ನವಾಗುವನು ' ಎಂಬುದು.

ಕವಿ ಯಾರೆಂಬುದು ಗೊತ್ತಾಗುವುದಿಲ್ಲ. ಗ್ರಂಥದ ಪೀಠಿಕಾ ಭಾಗದಲ್ಲಿ "ಕೆರೆಯೂರ ಪುರದಿ ನೆಲಸಿ । ವರವ ಭಕ್ತರಿಗೀವ ವೆಂಕಟೇಶ್ವರಗೆ" ಎಂದು ಕವಿಯು ಕೆರೆಯೂರ ವೆಂಕಟೇಶ್ವರನನ್ನು ಸ್ತೋತ್ರಮಾಡುವುದರಿಂದ ಕೆರೆಯೂರು ಅಥವಾ ಅದರ ಸಮೀಪದ ಪ್ರಾಂತವು ಕವಿಯ ದೇಶವಾಗಿರಬಹುದು.

No. 1211. ಸತ್ಯಭಾಮಾ ಕಲ್ಯಾಣ-
SATYABHĀMĀ KALYĀṆA.

Substance, Paper. Size, 10½ × 9½ inches. Pages, 42. Lines, 20 on a page. Extent, 520 granthas. Character, Kannada. Condition, good. Appearance, new. Mode of writing, not bad.

Restored in 1924—25 from the Ms. described above. No. 1210.

Complete.

(ವಿ-ವಿ.)—

ಸಮಗ್ರ. ಇದು ಹಿಂದಣ ಸಂಬಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತ್ರಿಕೆಯಾಗಿದೆ. ಕಾಗದದ ಪ್ರತಿ. ಲಿಪಿ ಸಾಮಾನ್ಯ.

No. 1212. ಸಾರಂಗಧರ ಚರಿತ್ರ by ಸಾಂಬಯ್ಯ.

SĀRAṄGADHARA CARITRE BY SĀMBAYYA.

Substance, Paper. Size, $11\frac{7}{8} \times 7\frac{1}{2}$ inches. Pages, 62. Lines, 19 to 21 on a page. Extent, 852 granthas. Character, Kannada. Condition, slightly injured. Appearance, old. Mode of writing good and full of mistakes.

Begins on the 87th page of the Ms. described under No. 976 *ante*.

Complete.

This is the story of Sāraṅgadhara styled in ' Yakṣagāna '. The story runs as follows :—Rājanarēndra was the king of Rājamahēndrapura on the banks of the holy Goutami and Puṣkariṇi. He had two wives by name Ratnāṅgi and Citrāṅgi. Sārangadhara was his son by his first wife Ratnāngi. While Rājanarēndra was out hunting, Sāraṅgadhara was playing with doves, one of the doves escaped from his hand and flew into the apartment of Citrāngi, his stepmother. When Sāraṅgadhara himself went for it Citrāṅgi fell in love with him and expressed her intention to him. As he did not comply with her request, she misrepresented to the king that Sāraṅgadhara molested her. At once in rage Rājanarēndra ordered Sāraṅgadhara's hands and legs to be chopped off in a forest. Sāraṅgadhara by the grace of a Siddha named Macchēndra, got back his hands and legs and returned to his father with the Siddha. Meanwhile, Citrāngi was killed by the command of the King who came to know the truth by a divine utterance. Sāraṅgadhara on the otherhand, pardoned his stepmother, Citrāngi and restored her to life with the immortal power, secured by the grace of the Siddha. Then the king was granted youth by the Siddha on account of the request of Citrāngi. Then Sārangadhara ruled over the country happily for several years.

It is stated in the Ms. Madanamōhinīkathe D. No. 1015 that the story of Sāraṅgadhara is narrated by Madanamōhini to her husband Jayasēna.

The author is Sāmbayya, son of Siddhayya alias Mōhanakavi. It is mentioned in the end of the Mss. D. Nos. 1213, 1215 and 1220 that one Allamāmba or Yellamma was the mother and of the Mss. D. Nos. 1213, 1214 and 1220, one Sambayya is the elder brother of the author. The date of the author according to " Karnātaka Kavicarite " is about 1750 A.D. He is alṣo the author of " Kariyabanṭanakathe " He states that he was an expert of puppet show.

Beginning :

[ದ್ವಿಪದಿ] (ಸೀಸಪದ್ಯ) ||

ಶ್ರೀ ಗೌರಿಗರ್ಧಾಂಗಮಂ ಭಾಗೀರಥಿಗೆ ಮೌಳಿಯಂ [ಇನಿತು]
(ಇತ್ತು) ಸಂತೋಷದಿಂದೆಸೆವದೇವ । ಕೊರಳಲ್ಲಿ ಗರಳಮಂ
ಶಿರದಲ್ಲಿ ಚಂದ್ರನಂ ಇಟ್ಟುಕೊಂಡಿರುವ ಸರ್ವೇಶ ಈಶ ||
ಉರಗಭೂಷಣಂಗಳಂ ಸಲೆಯಲಂಕರಿಸಿರ್ದ ಸಾರ್ವಭೌಮಾ [ನ]
ಸಕಲ ಸುರಮುನಿ ಸೇವಿತ ಚರಣಯುಗಳ । ಪ್ರಮಥಗಣ
ವಂದ್ಯ ಪುರಹರ ಭಾಳನೇತ್ರ । ಅಂಗಜನ ಭಸಿತಾಂಗಧರ
ಶಂಭುಲಿಂಗ ಕರುಣದಿಂದೆನಗೆ ಬೇಡಿದ ವರವ ನೀವ || ೧ ||

ವಚನ ||

ಎಂದು ಕವೀಶ್ವರನಧಿಕಾನಂದದಿಂದ ಚೆಂದದಿಂದಲಿ ಕೃತಿಕರ್ತನಾದ ಇಂದುಶೇಖರನ ಮತ್ತೀ ನೆಂದು ಕೊಂಡಾಡುತಿದಾನು||

ರಾಗ । ಝಂಪೆ ||

ಸರಸ ಕೀರ್ತಿ ತುರಂಗ ಚಾರುತರ ಧವಳಾಂಗ । ಚಿರನೆಲೆಯಗಿರಿಶ್ರೃಂಗ ।
ಶ್ರೀ ಶಂಭುಲಿಂಗ || ೧ ||
[ದುಷ್ಟ ಅರಿ] (ದುಷ್ಟಾರಿ) ಮದಭಂಗ । ದುರಿತ ತಿಮಿರ ಪತಂಗ ।
ಸೃಷ್ಟ್ಯಾಗಧಿಕ ಕೃಪಾಂಗ ಶ್ರೀ ಶಂಭುಲಿಂಗ || ೨ ||

* * * *

ದ್ವಿಪದಿ ||

ಎಂದು ಪಾರ್ವತಿದೇವಿಗೆರಗಿ ಲೋಕೈಕ ।
ವಂದಿತ ಲೇಪಾಕ್ಷಿವಾಸ ವೀರೇಶ ||
ಪಾಪನಾಶನ ರಾಮಭದ್ರ [ಸಂ] (ನಂ) ಭಜಿಸಿ ।
ಪಾಪಸಂಗಮರ [ನ] ಪರಿಹಾರವಂ ಮಾಡಿ ||
ಹೇರಂಬ ದೇವನ ಇಚ್ಛೆಯಿಂ ಪೊಗಳ ||
ಪಾರ್ವತೀ ದೇವಿಗೆ ಸಾಷ್ಟಾಂಗವೆರಗಿ ।
ಕವಿಗಳಂ ಪೊಗಳಿ ದುಷ್ಕವಿಗಳಂ ತೆಗಳಿ ।
ಸವಿಮಾತಿನಿಂದಲೀ ಶಂಭುಲಿಂಗನಿಗೆ ||
ಅಂಕಿತವಾಗಿ ರತ್ನಾಂಗಿಯಾಕುವರ ।
ಶಂಕರನ ವರವುಳ್ಳ ಸಾರಂಗಧರನ ।
ಕಥೆಯನು ತಾಂ ಯಕ್ಷಗಾನವಂ ಮಾಡಿ ।
ಪೃಥ್ವಿವಿಗಚ್ಚರಿಯಾಗಿ ವೇಳ್ವೆನೆಂದೆನಲು ||

End :

ಕಂದ ಪದ್ಯ||

ಹರನ ವರದಿಂ (ದ) ಜನಿಸಿದ ।
ಗುರುವನು ಸಾರಂಗಧರನು ಸ್ಥಿರಪಟ್ಟದೊಳಾಂ ||

[ಅ] ಗುರು ಮಚ್ಛೇಂದ್ರನ ಕರುಣದಿ ।
ಚಿರಕಾಲವು ಬಾಳುತಿರ್ದ ಚಿಂತಾರತ್ನ ॥

ದ್ವಿಪದಿ ॥

ಗಿರಿಜಾತನರಸಂಗೆ ಕೀರ್ತಿ ಕೋವಿದಗೆ ।
ಗರಳ ಕಂಧರಗೆ - ಯಾ - ಕಾರುಣ್ಯನಿಧಿಗೆ ॥
ಅಕಳಂಕ ರೂಪಂಗೆ ಅಮರಪಾಲಕಗೆ ।
ಸಕಲ ಜೀವಾತ್ಮಂಗೆ ಶಂಭುಲಿಂಗನಿಗೆ ॥
ಅಂಕಿತವಾಗಿ ಶಾಸ್ತ್ರಾಗಮ ನಿಪುಣ ।
ಶಂಕರ ಚರಣ ಸದ್ಭಕ್ತ ಸೇವಕನು ।
ಘಾಟದಿಂ ಮೋಹನ ಕವಿವರಂ ಬೊಂಬೆ ।
ಯಾಟದ ಸಿದ್ದಯ್ಯನಾತ್ಮ ಸಂಭವನು ।
ಶಂಭಯ ಹೇಳಿದ ಸಾರಂಗಧರನ ॥
ಕಥೆಯನು ತಾಂ ಯಕ್ಷಗಾನವಂ ಮಾಡಿ ।
ಪೃಥಿವಿಯೊಳೆಲ್ಲರು ಬೇಕೆಂಬ ಹಾಂಗೆ ॥
ಆ ಚತುರಬ್ಧಿ ಪರ್ಯಂತರದಲ್ಲಿ ।
ಆ ಚಂದ್ರ ತಾರಾರ್ಕವಾಗಿಯೊಪ್ಪಿಹುದು ।

Colophon :

ಇಂತೀ ಸಾರಂಗಧರನ ಕಥೆ ಸಮಾಪ್ತಂ.

ಮಂಗಳ ಮಹಾಶ್ರೀ.

(ವಿ.ವಿ.)—

ಸಮಗ್ರ. ಶಿಥಿಲ. ಬರೆವಣಿಗೆ ಚೆನ್ನಾಗಿದೆ. ತಪ್ಪುಗಳಿವೆ. ಕಥಾಸಾರ :—ರಾಜಮಹೇಂದ್ರ ಪುರಾಧಿಪತಿಯಾದ ರಾಜನರೇಂದ್ರನು ಬೇಟೆಗೆ ಹೋಗಿರಲು ಅವನ ಪ್ರಥಮ ಪತ್ನಿಯಾದ ರತ್ನಾಂಗಿಯ ಮಗನಾದ ಸಾರಂಗಧರನು ತಾನು ವಿನೋದಾರ್ಥವಾಗಿ ಬಿಟ್ಟ ಪಾರಿವಾಳಗಳ ಜೋಡಿಯಲ್ಲೊಂದು ತನ್ನ ಮಲತಾಯಿಯಾದ ಚಿತ್ರಾಂಗಿಯ ಬಳಗೆ ಹಾರಿಹೋಗಲು ಅದನ್ನು ಅವಳಿಂದ ಪಡೆಕೊಳ್ಳುವ ನಿಮಿತ್ತವಾಗಿ ಅವಳ ಬಳಗೆ ತಾನೊಬ್ಬನೇ ಹೋಗುವನು. ಕಾಮಾತುರ ಳಾದ ಅವಳು ತನ್ನ ಇಚ್ಛಾಪೂರ್ತಿಗಾಗಿ ಸಾರಂಗಧರನನ್ನು ಪ್ರಾರ್ಥಿಸುವಳು. ಸಾರಂಗಧರನು ತಿರಸ್ಕರಿಸಲು ಚಿತ್ರಾಂಗಿಯು ಅವನ ಮೇಲೆ ತನ್ನನ್ನು ಬಲಾತ್ಕರಿಸಿದನೆಂಬ ದೋಷವನ್ನಾ ರೋಪಿಸಿ ಬೇಟೆಯಿಂದ ನಿವೃತ್ತನಾದ ತನ್ನ ಪತಿಯ ಮುಂದೆ ದೂರಿಡುವಳು. ಅರಸನು ಕೋಪಾವಿಷ್ಟನಾಗಿ ಸಾರಂಗಧರನ ಕೈಕಾಲುಗಳನ್ನು ಅರಣ್ಯದಲ್ಲಿ ಛೇದಿಸುವಂತೆ ದಂಡವನ್ನು ವಿಧಿಸುವನು. ಅರಣ್ಯದಲ್ಲಿ ಸಾರಂಗಧರನು ಮಚ್ಛೇಂದ್ರನೆಂಬ ಸಿದ್ಧನ ಅನುಗ್ರಹದಿಂದ ಕೈಕಾಲು ಗಳನ್ನು ಪುನಃ ಪಡೆದವನಾಗಿ, ಕೆಲವು ದಿನಗಳ ನಂತರ ಅವನೊಡನೆ ತಂದೆಯಬಳಗೆ ಬರುವನು. ಇದರೆಡೆಯಲ್ಲಿ ಅಶರೀರವಾಣಿಯಿಂದ ತಥ್ಯಾಂಶವನ್ನು ತಿಳಿದವನಾದ ಅರಸನು ಚಿತ್ರಾಂಗಿಯನ್ನು ಹಾಳು ಬಾವಿಯಲ್ಲಿ ನೂಕಿಸಿ ಕೊಲ್ಲುವಂತೆ ಆಜ್ಞಾಪಿಸುವನು. ಹಾಳುಬಾವಿಯಿಂದ ಚಿಕ್ಕಮ್ಮನ ಶವವನ್ನು ತೆಗೆಯಿಸಿ ಪ್ರಾಣದಾನವನ್ನು ಮಾಡಿಸಿ ಪಶ್ಚಾತ್ತಾಪ ದಗ್ಧಳಾದ

ಅವಳನ್ನು ಮನ್ನಿಸಿ ಅವಳ ಇಷ್ಟದ ಪ್ರಕಾರ ಮಚ್ಛೇಂದ್ರನ ಅನುಗ್ರಹದ ಮೂಲಕ ತಂದೆಗೆ ಯೌವನವು ಪ್ರಾಪ್ತವಾಗುವಂತೆ ಮಾಡಿ ತಾನು ಬಹಳ ವರ್ಷಗಳ ವರೆಗೆ ರಾಜ್ಯ ಭಾರವನ್ನು ಮಾಡುವನು.

ಬೊಂಬೆಯಾಟದ ಕವಿವರನಾದ ಸಿದ್ಧಯ್ಯನ ಮಗನಾದ ಶಂಭಯ ಅಥವಾ ಸಾಂಬಯ್ಯನು ಈ ಗ್ರಂಥವನ್ನು ಬರೆದನು. "ಬೊಂಬೆಯಾಟದವರೆ ಯಕ್ಷಗಾನದ ಸೃಷ್ಟಿಕರ್ತರು" ಎಂದು ಕೆಲವು ಪುರಾಣಗಳಿಂದ ಊಹಿಸಬಹುದಾಗಿದೆ. ಕವಿಯು ತನ್ನ ಹಿರಿಯರ ಹೆಸರಿನೊಂದಿಗೆ ತನ್ನ ಕುಲವೃತ್ತಿಯನ್ನು ಹೇಳಿಕೊಂಡುದರಿಂದ ಆ ಬೊಂಬೆಯಾಟದಲ್ಲಿ ತಾನೂ ನಿಷ್ಣಾತನೆಂಬುದನ್ನು ತೋರಿಸಿಕೊಟ್ಟಂತಾಗುವುದು. ಇದರ ಮೂಲಕ ಯಕ್ಷಗಾನದಲ್ಲಿ ಆತನು ಪ್ರೌಢನೆಂದೆಣಿಸ ಬೇಕಾಗಿದೆ.

ಕರ್ಣಾಟಕ ಕವಿಚರಿತೆಯ 2 ನೆಯ ಸಂಪುಟದಲ್ಲಿ ಸಾಂಬಯ್ಯನೆಂಬ (ಸು. ೧೭೫೦) ವನು ಕರಿಯಬಂಟನ ಕಥೆ, ಸಾರಂಗಧರನ ಕಥೆ ಎಂಬ ಯಕ್ಷಗಾನಗಳನ್ನು ಬರೆದುದಾಗಿ ಹೇಳಿರುವುದು.

ಈ ಕವಿಯು ಕರಿಯಬಂಟನ ಕಥೆಯನ್ನೂ ಬರೆದಿದ್ದಾನೆ. ಅಲ್ಲಿಯೂ ತನ್ನ ಕುಲಮುಂತಾದುವುಗಳನ್ನು ಹೇಳಿಕೊಂಡಿದ್ದಾನೆ. ಈ ಬಗೆಗೆ ಹಿಂದಣ ೧೧೯೭ ನೆಯ ನಂಬರನ್ನು ನೋಡುವುದು.

No. 1213. ಸಾರಂಗಧರ ಚರಿತ್ರೆ by ಸಾಂಬಯ್ಯ.
SĀRAÑGADHARA CARITRE BY SĀMBAYYA.

Substance, Palm-leaf. Size, 9 × 1 11/16 inches. Pages 172. Lines, 6 to 7 on a page. Extent, 975 granthas. Character, Kannada. Condition, much injured. Appearance, old. Mode of writing, fair.

Complete.

Same work as that described above.

(ವಿ-ವಿ.)—

ಸಮಗ್ರ. ಶಿಥಿಲವಾದ ಪ್ರತಿ. ಲಿಪಿ ಸಾಮಾನ್ಯವಾಗಿದೆ.

ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1214. ಸಾರಂಗಧರ ಚರಿತ್ರೆ by ಸಾಂಬಯ್ಯ.
SĀRANGADHARA CARITRE BY SĀMBAYYA.

Substance, Palm-leaf. Size, 13⅛ × 1 5/16 inches. Pages, 64. Lines, 6 to 7 on a page. Extent, 840 granthas. Character, Kannada. Condition, very much injured. Appearance, old. Mode of writing, good.

Begins on fol. 1-*a* of the manuscript described under No. 1176 ante.

Almost complete.

Same work as that described under No. 1212.

The copying of this Ms. is said to have been finished on Thursday, the 2nd day of the dark fortnight of the Bhādrapada month in the year Krōdhi.

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಕೆಲವು ಓಲೆಗಳು ಮುರಿದಿವೆ. ಲಿಪಿ ಚೆನ್ನಾಗಿದೆ. ಪುಸ್ತಕಾಂತ್ಯದಲ್ಲಿ "ಕ್ರೋಧಿ ಸಂವತ್ಸರ ಭಾದ್ರಪದ ಬ. ೨ ಮಂಗಳವಾರ ಸಮಾಪ್ತ" ಎಂದಿದೆ.

ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

ಈ ಪುಸ್ತಕದಲ್ಲಿ ಸಾರಂಗಧರನು ಅರಣ್ಯದಲ್ಲಿ ಮಚ್ಛೇಂದ್ರನ ಅನುಗ್ರಹದಿಂದ ಕೈಕಾಲುಗಳನ್ನು ಪಡೆದು ಚಿರಂಜೀವಿಯಾಗಿ ಬಾಳಿದನು ಎಂಬಲ್ಲಿಗೆ ಕಥೆಯು ಸಮಾಪ್ತವಾದಂತೆ ವರ್ಣಿಸಲ್ಪಟ್ಟಿದೆ. ಆದರೆ ಇತರ ಪ್ರತಿಗಳ ರೀತಿಯಿಂದ ಇದು ಅಸಮಗ್ರವೆಂದು ಹೇಳಬೇಕಾಗುವುದು.

No. 1215. ಸಾರಂಗಧರ ಚರಿತ್ರ by ಸಾಂಬಯ್ಯ.

SĀRANGADHARA CARITRE BY SĀMBAYYA.

Substance, palm-leaf. Size, $10\frac{1}{4} \times 1\frac{1}{2}$ inches. Pages, 134. Lines, 5 to 7 on a page. Extent, 880 granthas. Character, Kannada. Condition, much injured. Appearance, old. Mode of writing, good.

Begins on fol. 1-*a*. The other work herein is :—Sārangadhara caritre—68-*a*.

Complete.

Date of transcription :—Friday the second day of the bright fortnight of the lunar month Srāvana in the year Pramāthi.

Same work as that described above under No. 1212 ante.

(ವಿ-ವಿ.)—

ಸಮಗ್ರ. ಅತಿಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಪುಸ್ತಕದ ಕೊನೆಯಲ್ಲಿ "ಪ್ರಮಾಥಿ ಸಂವತ್ಸರದ ಶ್ರಾವಣ ಶು. ೨ ಶುಕ್ರವಾರ ದಿವಸ ಸೂರ್ಯೋದಯವಾದ ೫ ನೆಯ ಘಳಿಗೆಯಲ್ಲಿ ಅರೆಕೆರೆ ದೊಂಕೇರಿ ಗುಡಿಕಲಲ್ಲಿ ಮಲ್ಲಿಲಿಂಗನಗದ್ದೆ ಉಳಿಸುವ ನಿಮಿತ್ತ ಕುಳಿತುಕೊಂಡು ಬರೆದು ಸಂಪೂರ್ಣವಾದ ಪುಸ್ತಕ" ಎಂದು ಬರೆದು ನಂತರ ಈ ಕೆಳಗಿನ ಪದ್ಯವು ಬರೆಯಲ್ಪಟ್ಟಿದೆ :—

ಮಂಗಳಂ ಚಂಡೀಶಗೆ । ಜಯಮಂಗಳಂ । ಗರಳಪುರನಿವಾಸಗೆ ॥ ಪಲ್ಲ ॥
ನಂದಿವಾಹನನಿಗೆ ನಾಗಭೂಷಣನಿಗೆ ।
ವಂದಿತಸುರಮುನಿ ವಂದ್ಯನಿಗೆ ।
ಅಂದದಿಂ ಭಕ್ತರಿಂಗೈಶ್ವರ್ಯ ವಿತ್ತವಗೆ ।
ಈಶ್ವರನಿಗೆ ವಿಶ್ವೇಶ್ವರಗೆ ॥ ೧ ॥
ತ್ರಿಪುರಸಂಹಾರನಿಗೆ ತ್ರಿಜಗವಂ(ದಿ)ತನಿಗೆ ।
ಕೌಪೀನ ಖಂಡ (ದಿಂ) ತಿರಿವವನಿಗೆ ।
ವಿಪರೀತದಿಂ ಬಹು ವಿಷವ ಧರಿಸಿದಗೆ ।
ಕಪಟನಾಟಕ ಕರುಣಾಕರಗೆ ॥ ೨ ॥

ಸರಸದಿಂ . . . . . ವಂಶಾಂಬೋಧಿ ಚಂದ್ರಗೆ
ಧರಣೀಶ ಬಸವೇಂದ್ರ ತನಯುನಿಗೆ ।
ನರನಾಥ ಚಂದ್ರ ಶ್ರೀ ನಂಜರಾಜೇಂದ್ರಂಗೆ ।
ನ್ಯಾಯದಿಂ ವರವಿತ್ತ ನಂಜಂಗೆ ॥ ೩ ॥

ಇದರೊಡನೆ ಮತ್ತೊಂದು ಸಾರಂಗಧರನ ಕಥೆಯಿದೆ.
ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1216. ಸಾರಂಗಧರ ಚರಿತ್ರೆ by ಸಾಂಬಯ್ಯ-
SĀRANGADHARA CARITRE BY SĀMBAYYA.

Substance, Paper. Size, 9¼ × 7¼ inches. Pages, 74. Lines, 15 to 18 on a page. Extent, 850 granthas. Character, Kannada. Condition, injured. Appearance, old. Mode of writing, good, but not free from mistakes.

Begins on the 186th page of the Ms. described under No. 19 ante.

Complete.

Same work as that described under No. 1212 ante.

(ವಿ.ವಿ.)—

ಸಮಗ್ರ. ಶಿಥಿಲ. ಬರವಣಿಗೆ ಚೆನ್ನಾಗಿದೆ. ಆದರೆ ತಪ್ಪುಗಳು ತುಂಬಾ ಯಿವೆ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1217. ಸಾರಂಗಧರ ಚರಿತ್ರೆ by ಸಾಂಬಯ್ಯ-
SĀRANGADHARA CARITRE BY SĀMBAYYA.

Substance, paper. Size, 12¼ × 7 7/16 inches. Pages, 57. Lines, 19 to 22 on a page. Extent, 862 granthas. Character, Kannada. Condition, injured. Appearance old. Mode of writing, good.

Begins on the 1st page of the Ms. described under No. 975 ante.

Complete.

Same work as that described above in No. 1212 ante.

(ವಿ.ವಿ.)—

ಸಮಗ್ರ. ಶಿಥಿಲ. ಲಿಪಿ ಚೆನ್ನಾಗಿದೆ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ. ಇದರೊಡನೆ ನಳಚರಿತ್ರೆ (ಡಿ. ನಂ. ೯೭೫) ಇದೆ.

No. 1218. ಸಾರಂಗಧರ ಚರಿತ್ರೆ by ಸಾಂಬಯ್ಯ-
SĀRANGADHARA CARITRE BY SĀMBAYYA.

Substance, Palm-leaf. Size, 13 11/16 × 1⅜ inches. Pages, 66. Lines, 5 on a page. Extent, 580 granthas. Character, Kannada. Condition, injured. Appearance, old. Mode of writing, good.

Begins on fol. 62-*a* of the Ms. described under No. 1169 ante.

Incomplete.

Same work as that described under No. 1212.

(ವಿ-ವಿ.)—

ಅಸಮಗ್ರ. ಶಿಥಿಲ. ಶುದ್ಧವಾದ ಪ್ರತಿ. ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1219. ಸಾರಂಗಧರ ಚರಿತ್ರೆ by ಸಾಂಬಯ್ಯ-
SĀRANGADHARA CARITRE BY SĀMBAYYA.

Substance, Palm-leaf. Size, 11 × 1¼ inches. Pages, 30. Lines, 6 to 8 on a page. Extent, 420 granthas. Character, Kannada. Condition, much injured. Appearance, old. Mode of writing ,fair.

Begins on fol. 68-*a* of the manuscript described under No. 1215 *ante.*

Incomplete.

Same work as that described under No. 1212.

(ವಿ-ವಿ.)—

ಅಸಮಗ್ರ. ಸಿದ್ಧನಾದ ಮಚ್ಛೇಂದ್ರನು ಮೃತನಾದ ಸಾರಂಗಧರನನ್ನು ಜೀವಂತನನ್ನಾಗಿ ಮಾಡಿ ಕೈಕಾಲುಗಳು ಪುನಃ ಅವನಿಗೆ ಪ್ರಾಪ್ತವಾಗುವಂತೆ ಮಾಡಿದನು ಎಂಬಲ್ಲಿಗೆ ಕಥೆಯು ತುಂಡಾಗುವುದು. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನೊಂದು ಸಾರಂಗಧರ ಚರಿತ್ರೆಯಿದೆ. ಆ ಬಗೆಗೆ ಹಿಂದಣ ೧೨೧೫ ನೆಯ ನಂಬರನ್ನು ನೋಡುವುದು.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1220. ಸಾರಂಗಧರ ಚರಿತ್ರೆ by ಸಾಂಬಯ್ಯ-
SĀRANGADHARA CARITRE BY SĀMBAYYA.

Substance, Palm-leaf. Size, 13¾ × 1$\frac{7}{16}$ inches. Pages, 12. Lines, 5 to 7 on a page. Character, Kannada. Condition, much injured. Appearance, old. Mode of writing, good.

Incomplete—Contains the last portion only.

Same work as that described under No. 1212.

Folio 7 contains the last portion of a Telugu Yakṣagāna work entitled Kṛṣṇa vilāsa, dealing with the deeds of Śrīkṛṣṇa as described in Bhāgavata by a chief attendant of Timmayya Daṇḍanātha, son of Śrirāmamantri. There is an incomplete Yakṣagāna work with the same title in the Library described under No. 1863 of the D.C. of Telugu Mss. of which may not this be the end ? For the end see the extracts given below.

(ವಿ-ವಿ.)—

ಅಸಮಗ್ರ. ಕೊನೆಯ ಭಾಗವು ಮಾತ್ರ ಇದೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

ಈ ಪುಸ್ತಕದ ಕೊನೆಯಲ್ಲಿ ಶ್ರೀರಾಮಮಂತ್ರಿ ಸುತನಾದ ತಿಮ್ಮಯ್ಯ ದಂಡನಾಥನ ಸಭೆಯಲ್ಲಿ ಪ್ರಧಾನನಾದೊಬ್ಬನಿಂದ ರಚಿತವಾದ ಕೃಷ್ಣವಿಲಾಸವೆಂಬ ತೆಲುಗು ಯಕ್ಷಗಾನ ಕಾವ್ಯದ ಕೊನೆಯ ಒಂದು ಓಲೆಯು ಇದೆ. ತೆಲುಗು ಡಿಸ್ಕ್ರಿಪ್ಟಿವ್ ಕೆಟಲಾಗಿನ ೧೪೬೩ ನೆಯ ನಂಬರಿನಲ್ಲಿ ಕೃಷ್ಣವಿಳಾಸವೆಂಬ ಯಕ್ಷಗಾನವೊಂದು "ವೆನ್ನಮುದ್ದ ಗಣಪತಿ ಪೆದ್ದಕವಿ" ಯಿಂದ ರಚಿತವಾದಂತೆ ವರ್ಣಿತವಾಗಿದೆ. ಅದು ಅಸಂಪೂರ್ಣ ಪ್ರತಿ. ಒಂದು ವೇಳೆ ಈ ಓಲೆಯ ಭಾಗವು ಅದರ ಅಂತ್ಯವಾಗಿರಬಹುದೇ? ವಿಮರ್ಶಕರ ಅವಗಾಹನೆಗಾಗಿ ಈ ಓಲೆಯ ಕೊನೆಯು ಕೆಳಗೆ ಕೊಡಲ್ಪಟ್ಟಿದೆ:—

ದ್ವಿಪದ ॥ ಅನಿ ಗೋಪಿಕಾಮನೋಹಾರುನಿ ಪೇರ । ನನಿತರ ಸುಲಭವಿಹಾರುನಿಪೇರ ।

ಭಾಮಿನೀ ಜನಪಂಚಬಾಣುನಿ ಪೇರ । ಮಲಿನನಿರ್ಭರರಾತಿ ಭಾವಜಪೇರ ।
. . . . . . ಕ ಭಕ್ತಮಂದಾರುನಿಪೇರ । ಆತತವತ್ಸ ಕೌಸ್ತುಭೋ
ಧಾರು ಪೇರ ।
ಅಂಕಿತಂಬುಗ ವೆಂಕಟಾಧಿಪು ಪಾದ । ಪಂಕಜಯುಗಳ ಮದಭ್ರಮರ ।
ಮಣಿ ಮತಿಯುತ ಶ್ರೀರಾಮ ಮಂತ್ರಿ ಗರ್ಭಾಬ್ಧಿ । ಸಿತಕರವಾಸಿತ ಸರಸ ಭಾಷಿತ ।
ಮನಸಿಜಾಕಾರು ತಿಮ್ಮಯ ದಂಡನಾಥ । ತನ ಸಭವೊಕ್ಕ ಪ್ರಧಾನ
ಶೇಖರುಡು ।
ವರಭಕ್ತಿ ಮ್ಯೈ ಭಾಗವತ ಕಥಾಸರಣಿ । ನಿರುಪಮ ವಾಕ್ಪ್ರೌಢಿ ನಿರ್ಮಿಂಚಿ
ನಟ್ಟಿ ।
ಲಕ್ಷಣಯುತ ನವರಸಾಲಂಕಾರ ಮಹಿತ । ಲಕ್ಷಣ ಕೃಷ್ಣವಿಲಾಸಂಬು ವೆಲಸೆ ।
ಆ ಚತುರಬ್ಧಿ ವೆಲಯುನಿಯಂದು । ನಾ ಚಂದ್ರತಾರಾರ್ಕಮ್ಮೈ ಯೊಪ್ಪಗಾಕ ॥

ಮಂಗಳ ಮಹಾ ಶ್ರೀ.

ಗದ್ಯ ಕಾವ್ಯ.

No. 1221. ಕನ್ನಡ ಕಾದಂಬರಿ-

KANNADA KĀDAMBARI.

Substance, Palm-leaf. Size, 17½ to 17¾ × 1½ inches. Pages, 174. Lines, 4 to 5 on a page. Extent, 1,900 granthas. Character, Kannada. Condition, very much injured. Appearance, old. Mode of writing, fair.

Contains Pūrvabhāga complete .

A Kannada version of Bānas Sanskrit Kādambari . The name of the author is not known.

Beginning :

ಉತ್ತರ ದೇಶದಲ್ಲಿ ವೇದಾವತಿ (ವೇತ್ರವತಿ) ಯೆಂಬ ನದಿಯ ತೀರದಲ್ಲಿ ಇರುವ ವಿದಿಶಾ ಪಟ್ಟಣದಲ್ಲಿ ಸಮಸ್ತ ಗುಣಸಂಪನ್ನ [ರಾ] (ನಾ) ದ ಶೂದ್ರಕನೆಂಬರಸು ಧರ್ಮದಲ್ಲಿ ರಾಜ್ಯವನಾಳಕೊಂಡು ಒಂದುದಿನ ಹಗಲೋಲಗವಾಗಿ ಹಜಾರದಲ್ಲಿರುವ ಸಮಯದಲ್ಲಿ ದಕ್ಷಿಣ ದೇಶದಿಂದ ಮಾತಂಗ ಕನ್ನಿಕೆಯೊಬ್ಬಳು ಒಬ್ಬ ಮುದುಕನ ಮುಂದಿಟ್ಟುಕೊಂಡು ಮತ್ತೊಬ್ಬ ಸಣ್ಣವನ ಕೈಯಲ್ಲಿ ಗಿಣಿಸಹ ಪಂಜರವನು ಹೊರಿಸಿಕೊಂಡು ಬಂದು ಅರಸಿಗೆ ಕೈಮುಗಿದು ಕೆಲಕೆ ನಿಂತಲ್ಲಿ ಆ ಮುದುಕನು ಗಿಣಿಯ ಪಂಜರವನು ಅರಸಿನ ಮುಂದೆ ಮಡಗಿ—ದೇವರು, ಈ ಗಿಣಿಯು ಸಂಗೀತ ಸಾಹಿತ್ಯವ ಬಲ್ಲುದು. ರಾಜನೀತಿಯರಿತು ಸಮಯೋಚಿತವಾಗಿ ಮಾತನಾಡಬಲ್ಲುದು. ಎಂದು ತಮ್ಮೊಡೆಯನ ಮಗಳು ತಂದುಕೊಂಡು ಇದ್ದಾಳೆ. ಅಂತಃ ಪುರ ಸ್ತ್ರೀಯರ ಕೋಪವ ತಿಳುಹಿ ಅನುಗೊಳಿಸಬಲ್ಲುದು. ಇಂತಹ ಗಿಳಿಯು ದೇವರ ಸಮ್ಮುಖಕ್ಕೆ ಸಲ್ಲುವುದು, ಎಂದು ತಂದಿದ್ದಾಳೆ. ಇದು ಅರಮನೆಗೆ ಇರಲಿ ಎಂದು ಒಪ್ಪಿಸಿದನು.

End :

ತಂದೆ ಬಂದಿದ್ದುದನು ಕಂಡು ಚಂದ್ರಾಪೀಡನು ಕುದುರೆಯಿಂದಿಳಿದು ವಿನಯಗೂಡಿ ಸಮೀಪವಸೇರಿ ಅಡ್ಡಬೀಳಲಾಗಿ, ತಾರಾಪೀಡನು ಕೈಗಳ ನೀಡಿ ಸಮೀಪಕ್ಕೆ ಕರೆದು ಗಾಢಾಲಿಂಗನವ ಮಾಡಿಕೊಂಡು ಕ್ಷೇಮವನು ಕೇಳ ಅರಸು ಮನೆಯ ಒಳಂಕೆ ಕಳುಹಿದನು.

ಆ ಸಮಯದಲ್ಲಿ ಅಲ್ಲಿರುವ ನಿಯೋಗಿಗಳು ಊಳಗದವರು ಮೊದಲಾಗಿ ಕೈಮುಗಿದವರೆಲ್ಲರನೂ ಯಥೋಚಿತವಾಗಿ ಮಾತನಾಡಿಸಿ ವಿಲಾಸವತಿಯ ಅರಮನೆಗೆ ಹೋಗಿ ಆ ವಿಲಾಸವತಿಗಡ್ಡ ಬಿದ್ದು ಅಲ್ಲಿರುವ ಸಕಲ ಜನರುಗಳನ್ನೂ ಮನ್ನಿಸಿ, ತನ್ನರಮನೆಯಲ್ಲಿ ಸ್ತ್ರೀ ಸಮೇತನಾಗಿ ಸುಖದಲ್ಲಿರ್ದನು.

Colophon :

ಶ್ರೀ. ಶ್ರೀ. ಶ್ರೀ.

(ವಿ-ವಿ.)—

ಪೂರ್ವಭಾಗ ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಓಲೆ ೬, ೧೧, ೧೪, ೧೬, ೧೮, ೧೯, ೩೩, ೩೯, ೪೦, ೪೭-೪೨, ೫೫, ೫೮, ೬೦, ೬೫-೬೯, ೨೧-೨೪, ೨೬, ೨೯, ೮೭, ೮೨ ಇವುಮುರಿದಿವೆ. ಕೊನೆಯ ಓಲೆ ೮೨ ನೆಯದು. ಲಿಪಿ ಚೆನ್ನಾಗಿದೆ. ಪುಸ್ತಕದ ಕೊನೆಯಲ್ಲಿ 'ಅಮ್ಮಯ್ಯನವರ ಪಾದಕ್ಕೆ . . . ಕರಿ ಮಾಡು ಬಿನ್ನಹಾ ರಾಮನ ಸಾಂಗತ್ಯ (ಬರೆದು) [ಬಗೆದು] ಎರಡು ಸಾವಿರದ ಒಂಭೈನೂರ ಅಯಿವತ್ತಕ್ಕೆ ಸಾವಿರ ೧ಕ್ಕೆ ೫ ಹಣ ಪ್ರಕಾರಕ್ಕೆ ವರದಪ್ಪನು ಕೊಟ್ಟದ್ದು ಕಂಠಿರಾಯ ಹದಿಮೂರು ಹಣ ತಂದು ಕೊಟ್ಟುಯಿದಾರೆ. ಇನ್ನು ಎರಡು ಹಣ ದಯಮಾಡಿಸುವುದು. ಈ ಬಗೆ ಅಪ್ರತಿಮ . . . . ಬರೆದು ಕಂಗ ೧೧ ಕಾದ . . . ಬ . . ಸಮ್ಮನ . . . ಅಕು ೮ ಹಿದಲ ರಾಮನ ಸಾಂಗತ್ಯಗೆದು ಸಹಾ ೧೦ ಹಣ ಕೊಡಬೇಕೆಂದು ವರದಮ್ಮ . . . . ಡೆ ಹೇಳ ಯಿದ್ದೇನೆ. ಇಂತೀ ಬಿನ್ನಹ' ಎಂದಿದೆ.

ಇದು ಗದ್ಯದಲ್ಲಿ ಬರೆದಿದೆ. ಅತಿ ಪ್ರಾಚೀನವೂ ಅತ್ಯಾಧುನಿಕವೂ ಅಲ್ಲದ ನಡುತೆರದ ಕನ್ನಡವಾಗಿದೆ. ಸಂಸ್ಕೃತ ಕವಿ ಬಾಣ ಭಟ್ಟನ ಕಾದಂಬರಿಯ ಗದ್ಯಾನುವಾದವು. ಕತೆ:—ಕಥಾ ನಾಯಕನಾದ ಚಂದ್ರಾಪೀಡನು ಕಾದಂಬರೀ ಮಹಾಶ್ವೇತೆಯವರ ಒಪ್ಪಿಗೆ

ಯನ್ನು ಪಡೆದು, ತಂದೆಯಪ್ಪಣೆಯಂತೆ ತನ್ನ ರಾಜಧಾನಿಗೆ ಸೇರಿದನು ಎನ್ನುವ ತನಕ ಇದೆ. ಇದರ ಶೈಲಿಯು ಲಲಿತವಾಗಿಯೂ ಶ್ಲಾಘನೀಯವಾಗಿಯೂ ಇದೆ. ಭಾಷೆಯನ್ನು ನೋಡಿದರೆ ಒಂದೆರಡು ಶತಮಾನಗಳಿಗೆ ಹಿಂದಣದೆಂದು ಹೇಳಬಹುದಾಗಿದೆ. ಕವಿಯಾರೆಂಬುದು ಗೊತ್ತಾಗುವುದಿಲ್ಲ.

No. 1222. ಕನ್ನಡ ಕಾದಂಬರಿ- KANNAḌA KĀDAMBARI.

Substance, Sritāla. Size, $11\frac{1}{8}$—$11\frac{5}{16} \times 1\frac{5}{8}$ inches. Pages, 147. Lines, 5 to 8 on a page. Extent, 1,800 granthas. Character, Kannada. Condition, much injured. Appearance, old. Mode of writing fair.

Contains Pūrvabhāga complete.

Some of the folios are torn at the edge. Fol. 74-*b* is left blank.

At the end of this Ms. it is stated that one Mārayya, son of Cennarājayya and grandson of Bokkasabāḷayya copied this Ms. and offered it to the Princess Amṛtājamma, daughter of His Highness Cikkadēvarāya on the 7th day of the dark fortnight of the lunar month "Aśvīja.'"

Same work as that described above (D. 1221).

(ವಿ-ವಿ.)—

ಪೂರ್ವ ಭಾಗ ಸಮಗ್ರ. ಶ್ರೀತಾಳ ಪತ್ರಿ ತುಂಬಾ ಶಿಥಿಲವಾಗಿದೆ. ಓಲೆಗಳು ೧, ೧೫, ೧೯, ೩೯, ೪೧, ೪೬, ೪೭, ೫೫, ೫೭, ೫೯, ೭೪, ೭೫, ೭೭, ಇವುಗಳ ಒಂದು ಬದಿಯು ತುಂಡಾಗಿದೆ. ಲಿಪಿ ಚೆನ್ನಾಗಿದೆ. ಕಡೆಯಲ್ಲಿ 'ಆಶ್ವೀಜ ಬ. ೭ ಲು ಚಿಕ್ಕದೇವರಾಯಸ್ವಾಮಿಯವರ ಕುಮಾರತಿ ಆದ ಚಿಕ್ಕ ಅಮೃತಾಜಮ್ಮಣ್ಣಿಯವರ ಪಾದದ ದಯಕ್ಕೆ ಪಾತ್ರನಾದ ಬೊಕ್ಕಸ ಬಾಳಯ್ಯನವರ ಮಕ್ಕಳು ಚೆನ್ನರಾಜಯ್ಯನವರ ಮಗ [ಮ] (ಮಾ) ರಯ್ಯನು ಬರೆದು ಒಪ್ಪಿಸಿದ ಕನ್ನಡ ಕಾದಂಬರಿ ಪುಸ್ತಕಕ್ಕೆ ಶುಭಮಸ್ತು' ಎಂದಿದೆ. ಅದರನಂತರ ಶ್ರೀ ಕೃಷ್ಣನ ಮತ್ತು ಶ್ರೀರಾಮಚಂದ್ರನ ಸ್ತೋತ್ರ ರೂಪವಾದ ಶ್ಲೇಷದಿಂದ ಉಭಯಾನ್ವಯಿಯಾದ ಕೆಳಗಿನ ಸಂಸ್ಕೃತ ಶ್ಲೋಕವು ಆಶೀರ್ವಾದ ಗ್ರಂಥವೆಂದು ಬರೆದು ಕೊಡಲ್ಪಟ್ಟಿದೆ.

ಶ್ಲೋ॥ ಯಃ ಪೂತನಾಮಾರಣ ಲಬ್ಧ ವರ್ಣಃ ಕಾಕೋದರೋಯೇನವಿನೀತ ದರ್ಪಃ।
ಯಶೋದಯಾಲಂಕೃತ ಮೂರ್ತಿ ರವ್ಯಾನ್ನಾಥೋ ಯದೂನಾಮಥವಾ
ರಘೂಣಾಂ ॥

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1223. ಕನ್ನಡ ಕಾದಂಬರಿ- KANNADA KĀDAMBARI.

Substance, Sritāla. Size, $10\frac{1}{4} \times 1\frac{1}{2}$ inches. Pages, 211. Lines, 6 on a page. Extent, 1,790 granthas. Character, Kannada. Condition, injured. Appearance, old. Mode of writing, fair.

Incomplete. Wants 1st fol. in the beginning. Foll. 7, 8, 10, 11 and 49 are broken.

Same work as that described under No. 1221 *ante*.

(ವಿ ವಿ.)—

ಮೊದಲ ಒಂದೋಲೆಯಲ್ಲಿ ೨೭ ನೆಯ ಮುಂದಣ ಓಲೆಗೆ ಕೈತಪ್ಪಿನಿಂದ '೨೯' ಸಂಖ್ಯೆ ಗುರುತಿಸಿದೆ. ೪೧ ನೆಯ ಸಂಖ್ಯೆಯ ಎರಡೋಲೆಗಳವೆ. ೪೪ ನೆಯ ಓಲೆಯಲ್ಲಿ ಎರಡು ಪಙ್ಕ್ತಿಯನ್ನು ಮಾತ್ರ ಬರೆದು ಉಳಿದ ಭಾಗವನ್ನು ಹಾಗೆಯೇ ಬಿಟ್ಟಿದೆ. ೬೫ ನೆಯ ಓಲೆಯ ಮುಂದಣ ಓಲೆಯಲ್ಲಿ ಕೈತಪ್ಪಿನಿಂದ ೬೭ ಸಂಖ್ಯೆಯನ್ನು ಗುರುತಿಸಿದೆ. ೯೨ ನೆಯ ಓಲೆಯ ಒಂದೇ ಪಕ್ಕದಲ್ಲಿ ಬರೆದಿದೆ. ಕೊನೆಯ ಓಲೆ ೧೦೮ ನೆಯದು. ಓಲೆ ೭, ೮, ೧೦, ೧೧, ೪೯, ಇವು ಮುರಿದಿವೆ. ಪ್ರತಿ ಶಿಥಿಲವಾಗಿದೆ. ಅಕ್ಷರಗಳು ಚೆನ್ನಾಗಿವೆ.

ಹಿಂದೆ ೧೨೨೧ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1224. ಕನ್ನಡ ಕಾದಂಬರಿ-
KANNADA KĀDAMBARI.

Substance, Palm-leaf. Size, 15 × 1$\frac{3}{16}$ inches. Pages, 364. Lines, 3 on a page. Extent, 1,700 granthas. Character, Kannada. Condition, much injured. Appearance, old. Mode of writing, fair.

Incomplete. Foll. 1-3, 26, 27, 48, 89 and 90 are wanting. Many of the foll. are broken.

Same work as that described under No. 1221 *ante*.

(ವಿ.ವಿ.)—

ಓಲೆಗಳು ೧-೩, ೨೬, ೨೭, ೪೮, ೮೯, ೯೦ ಇಲ್ಲ. ಅನೇಕ ಓಲೆಗಳು ಮುರಿದಿವೆ. ಕೊನೆಯ ಓಲೆ ೧೯೦ ನೆಯದು. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಹಿಂದೆ ೧೨೨೧ ನೆಯ ನಂಬರಿನಲ್ಲಿ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1225. ಕುಶಲವೋಪಾಖ್ಯಾನ-
KUŚALAVŌPĀKHYĀNA.

Substance, Palm-leaf. Size, 15$\frac{7}{16}$ × 1$\frac{1}{4}$—1$\frac{3}{8}$ inches. Pages, 190. Lines, 6 on a page. Extent, 2,250 granthas. Character, Kannada. Condition, very much injured. Appearance, old. Mode of writing , good.

Complete.

A prose work in 20 adhyāyas giving the Kannada version of the story of Lava and Kuśa found in Jaiminibhārata in Sanskrit. The name of the author is not known, but the work appears to be of a recent origin.

Beginning:

ಕುಶಲವರ ಕಥೆ । ಕನ್ನಡ ವಚನಕಾವ್ಯ . . . . ಳ್ಳಂಥ ಬಹು ಪ್ರಕಾಶವುಳ್ಳ ಕಿರೀಟಗಳಲ್ಲಿ ಅಲಂಕರಿಸ . . . . . . ವಾದ ಕೌಸ್ತುಭಮಾಣಿಕ್ಯಕ್ಕೆ ನಾಯಕ ರತ್ನ . . . . ಣ್ಯ ಸ್ತ್ರೀಯರು ಪಾದಸೇವೆ ಮಾಡುವ ಸಮಯ . . . . ವನಾಗಿ ಕೈಲಾಸದಲ್ಲಿ ಪ್ರಮಥ ಗಣಂಗಳೊಡನೆ ಒಡ್ಡೋಲಗ . . . . ಓಲೈಸಲು ಜಗತ್ತುಗಳ ನಿರ್ಮಿಸಿ ಘನೋದ್ಯೋಗವು . . . . ಕರು ಮೊದಲಾದ ಸಕಲ ಋಷೀಶ್ವರರಿಗೆಲ್ಲರಿಗೆ ವಂದನೆಯಂ ಮಾಡಿ,

End:

ರಾಮಾಯಣ ಮಹಾ ಕಾವ್ಯದಲ್ಲಿ ವಾಲ್ಮೀಕಿ ಕುಶಲವೋಪಾಖ್ಯಾನ . . . . ನು ತಾನು ಕರೆದು ಕೊಂಡುಹೋಗಿ ತನ್ನಾಶ್ರಮದಲ್ಲಿ ಆ ಕುಶಲವರು ಹುಟ್ಟಲು ಅವರಿಗೆ ಸಕಲ ವಿದ್ಯೆಗಳನ್ನೂ ಕಲಿಸಿ ದೊಡ್ಡವರಂ ಮಾಡಿ . . . . ರನು ಎಲ್ಲರನ್ನೂ ಜೈಸಿದುದಕ್ಕೆ ಅವರನ್ನೆಲ್ಲರನ್ನೂ ಎಬ್ಬಿಸಿದವನಾದ ಕಾರಣ ತನ್ನ ಮಹಿಮೆ ತಾನೇ ಹೇಳಿಕೊಳ್ಳಬಾರದೆಂದು ಕುಶಲವ . . . . ದು ಹೊರತಾಗಿ ಮಿಕ್ಕಾದ ಕಥೆಗಳೆಲ್ಲವೂ ರಾಮಾಯಣದೊಳಗೆ . . . . ನು. ಆ ಕುಶಲವ ಕಥೆ ನಿನಗೆ ವಿಸ್ತಾರವಾಗಿ ಹೇಳಬೇಕಾಯಿತಷ್ಟೆ; ಎಂದು ಈ ಪ್ರಕಾರ ಜೈಮಿನಿಯು ಜನಮೇಜಯನ ಕೂಡೆ ಹೇಳಿದನೆಂದು ಸೂತ ಪೌರಾಣಿಕರು ಶೌನಕಾದಿ ಋಷೀಶ್ವರರ ಕೂಡೆ ಇಂತೆಂದರು.

ಕೇಳಿರಯ್ಯಾ ಶೌನಕಾದಿ ಋಷಿಗಳಿರಾ! ಈ ಕಥೆ ಯಾರು ಯಾವಾಗಲೂ ಕೇಳುತ್ತಾ ಇದ್ದಾರೆಯೋ, ಯಾರು ಓದುತ್ತಾ ಇದ್ದಾರೆಯೋ, ಯಾರು ಬರೆಯುತ್ತಾ ಇದ್ದಾರೆಯೋ ಅಂಥಾ ಪುಣ್ಯಾತ್ಮರಿಗೆ ಸಕಲ ಪಾಪವೂ ಪರಿಹಾರವಾಗಿ ಬಹಳ ಐಶ್ವರ್ಯವಂತರಾಗಿ ಬಹಳ ಆಯುಸ್ಸುಳ್ಳವರಾಗಿ ಮಕ್ಕಳು ಮೊಮ್ಮಕ್ಕಳು ಮರಿ ಮಕ್ಕಳು ಮೊಮ್ಮಂದಿರು ನಂಟರಿಷ್ಟರೊಡಗೂಡಿ ಸೌಖ್ಯದಲ್ಲಿರುವರು. ಈ ಪ್ರಕಾರ ಭೂಲೋಕದಲ್ಲಿ ಬಹುಕಾಲ ಸುಖಿಗಳಾಗಿದ್ದು ಕಡೆಯಲ್ಲಿ ಕೈವ . . . . ಯಹುದು. ಈ ಅರ್ಥದಲ್ಲಿ ಸಂದೇಹವಿಲ್ಲವೆಂದು ಸೂತ ಪೌರಾಣಿಕರು ಶೌನಕಾದಿ ಋಷಿಗಳಿಗೆ ಹೇಳಿದ ಕಥೆ.

Colophon:

ಇದು ಶ್ರೀ ಜೈಮಿನಿ ಭಾರತದಲ್ಲಿ ಕುಶಲವೋಪಾಖ್ಯಾನದ ಕತೆ ಇಪ್ಪತ್ತನೆಯ ಅಧ್ಯಾಯ ಪೂರ್ವೋತ್ತರ ಭಾಗವು ಸಮಾಪ್ತಂ.

(ವಿ.ವಿ.)—

ಸಮಗ್ರ. ಅತ್ಯಂತ ಜೀರ್ಣವಾಗಿರುವ ಪ್ರತಿ. ೪೯, ೫೦, ೭೮, ೯೩ ನೆಯ ಓಲೆಗಳಿಲ್ಲ. ಕೊನೆಯ ಓಲೆ ೯೯ ನೆಯದು. ಓಲೆಗಳು ಅನೇಕವಾಗಿ ಮುರಿದಿವೆ; ಹುಳತಿಂದು ಛಿದ್ರವುಳ್ಳವಾಗಿವೆ. ಲಿಪಿ ಚೆನ್ನಾಗಿದೆ. ಮುಂದಿನ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯು ಇದರ ಪ್ರತಿಕೃತಿಯು.

ಇದು ಗದ್ಯದಲ್ಲಿ ಬರೆದಿದೆ. ೨೦ ಅಧ್ಯಾಯಗಳು; ಪೂರ್ವೋತ್ತರ ಭಾಗಗಳಾಗಿ ವಿಂಗಡಿಸಿ ಕೊಂಡಂತಿದೆ. ಸಂಸ್ಕೃತ ಜೈಮಿನಿ ಭಾರತದಲ್ಲಿರುವ ಕುಶಲವೋಪಾಖ್ಯಾನವನ್ನೇ ಕವಿ ಕನ್ನಡದಲ್ಲಿ ಬರೆದಿದ್ದಾನೆ. ಕವಿಯಾರೆಂಬುದು ಈ ಗ್ರಂಥದಿಂದ ಗೊತ್ತಾಗುವುದಿಲ್ಲ. ಭಾಷೆಯನ್ನು ನೋಡಿದರೆ ಕವಿ ಆಧುನಿಕನೆಂದು ಹೇಳಬಹುದು.

No. 1226. ಕುಶಲವೋಪಾಖ್ಯಾನ- KUŚALAVŌPĀKHYĀNA.

Substance, Paper. Size, $10\frac{7}{16} \times 9\frac{1}{2}$ inches. Pages, 225. Lines, 20 on a page. Extent, 2,250 granthas. Character, Kannada. Condition, good. Appearance, new. Mode of writing, good.

Restored in 1927–28 from the Ms. described above (No. 1225).

Complete in 20 Adhyāyas.

(ವಿ-ವಿ.)—

ಸಮಗ್ರ. ಕಾಗದದ ಪ್ರತಿ. ಗ್ರಂಥಪಾತವಿದೆ. ಲಿಪಿ ಚೆನ್ನಾಗಿದೆ. ಇದು ಹಿಂದೆ ವರ್ಣಿತವಾಗಿರುವ ಪ್ರತಿಯ ಪುತ್ರಿಕೆಯು.

No. 1227. ಕುಶಲವೋಪಾಖ್ಯಾನ- KUŚALAVŌPAKHYĀNA.

Substance, Palm-leaf. Size, $7\frac{7}{16} \times 1\frac{3}{8}$ inches. Pages, 237. Lines, 8 on a page. Extent, 2,000 granthas. Character, Kannada. Condition, much injured. Appearance, old. Mode of writing, good.

Complete in 13 Adhyāyas.

Describes the story of Kuśa and Lava as found in the Sanskrit Jaiminibhārata, and also the story of Rāmāśvamēdha. The name of the author is not known.

Beginning :

ಶ್ರೀ ಲಕ್ಷ್ಮೀದೇವಿ (ಯಂ) ಹೃದಯದಲ್ಲಿ ಇರಿಸಿಕೊಂಡು ಇದ್ದಂಥ ಬಿಳಿದಾವರೆಯೋಪಾದಿಯ ಕಣ್ಣುಗಳುಂಟಾದಂಥ, ದೇವಕೆಯ ಕುಮಾರನಾಗಿ ಯಿದ್ದಂಥ, ದಿವ್ಯ ಚರಿತ್ರೆಯುಂಟಾದಂಥ, ಸಕಲ ಲೋಕಗಳಿಗೊಡೆಯನಾಗಿಯಿದ್ದಂಥ ನಿತ್ಯಕಲ್ಯಾಣ ಪ್ರುಂಟಾದ ಸಕಲ ತತ್ವಗಳಿಗೆ ಆಧಾರವಾಗಿ ಯಿದ್ದಂಥ, ಗರುಡಕೇತನನಾಗಿ ಯಿದ್ಧಂಥ, ಸತ್ಯ ಸಂಕಲ್ಪನಾದಂಥ,

End :

ಗಂಗಾತೀರದಲ್ಲಿರುವ ಯಾಗಶಾಲೆಯೊಳಗೆ ಪ್ರವೇಶಿಸಿ, ಉಳಿದ ಯಾಗವಂ ಸಮಾಪ್ತಿಯಂ ಮಾಡಿ ಸೀತಾದೇವಿಗೂ ಸಹ ಅವಭೃತ ಸ್ನಾನವಂ ಮಾಡಿ(ಸಿ) ದಿವ್ಯಾಂಬರಾಭರಣ ಭೂಷಿತರಾಗಿ ಕನಕ ರಥಾರೂಢರಾಗಿ ಪಂಚಮಹಾವಾದ್ಯ ಧ್ವನಿಗಳಿಂದ ಅಯೋಧ್ಯಾಪುರವಂ ಪ್ರವೇಶಿಸಿ, ಓಲಗದ ಚಾವಡಿಯಲ್ಲಿ ಕುಳಿತು ಇರಲು ಲಕ್ಷ್ಮಣ ಭರತಶತ್ರುಘ್ನರು ಸೇವಿಸಲು ಸಾಮ್ರಾಜ್ಯವನ್ನಾಳುತ್ತ ಬಹಳ ಸಂಭ್ರಮದಿಂದ ದುಷ್ಟನಿಗ್ರಹ ಶಿಷ್ಟಪರಿಪಾಲನೆಯಂ ಮಾಡಿ ಸಕಲ ಸಾಮ್ರಾಜ್ಯವಂ ಆಳುತ್ತಾ ಇದ್ದನು ಎಂದು ಜೈಮಿನಿ ಜನಮೇಜಯ ರಾಯನಿಗೆ ಹೇಳಿದನು ಎಂದು ಸೂತ ಪೌರಾಣಿಕರು ಶೌನಕಾದಿ ಋಷಿಗಳಿಗೆ ಹೇಳುತ್ತಿದ್ದಾರೆ.

ಕುಶಲವರ ಚರಿತ್ರೆಯನ್ನು ಯಾರು ಓದುತ್ತಿದ್ದಾರೆಯೋ ಯಾರು ಬರೆಯುತ್ತಿದ್ದಾರೆಯೋ ಅವರೆಲ್ಲರಿಗೂ . . . . . . ಯಾರ್ಭಿವೃದ್ಧಿಯಾಗಿ ಪುತ್ರಸಂತಾನ . . . . ದಲ್ಲಿ ಬಾಳುವುದು . . . . ನೀ ಭಾರತ ಕುಶಲವೋಪಾಖ್ಯಾನ. ಹದಿಮೂರನೆಯ ಅಧ್ಯಾಯ ಸಮಾಪ್ತಂ.

Colophon :

ಕುಶಲವೋಪಾಖ್ಯಾನಂ ಸಂಪೂರ್ಣಂ.

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾಗಿದೆ. ಲಿಪಿ ಚೆನ್ನಾಗಿದ. ಓಲೆಗಳು ೧, ೨, ೯೯, ೧೨೦ ಇವು ಮುರಿದಿವೆ. ೧೧೧ ನೆಯ ಓಲೆಯಿಲ್ಲ. ಆದರೆ ಕತೆ ಲೋಪವಾಗಿಲ್ಲ. ಕೊನೆಯ ಓಲೆ ೧೨೦ ನೆಯದು ; ಅದರಲ್ಲಿ ಒಂದೇ ಪುಟದಲ್ಲಿ ಬರೆದಿದೆ.

ಇದು ಗದ್ಯದಲ್ಲಿ ಬರೆದಿದೆ. ಅಧ್ಯಾಯಗಳು ೧೩ ; ಸಂಸ್ಕೃತ ಜೈಮಿನಿ ಭಾರತದಲ್ಲಿರುವ ಕುಶಲವೋಪಾಖ್ಯಾನದ ಗದ್ಯಾನುವಾದವು ; ಇದರಲ್ಲಿ ರಾಮಾಶ್ವಮೇಧದ ಕತೆ ಉಕ್ತವಾಗಿದೆ. ಇದಕ್ಕೆ ಕುಶಲವಕಥೆ ಎಂಬ ಹೆಸರೂ ಉಂಟು. ಕವಿಯಾರೆಂಬುದು ಇದರಿಂದ ಗೊತ್ತಾಗುವುದಿಲ್ಲ.

No. 1228. ಕುಶಲವೋಪಾಖ್ಯಾನ-
KUŚALAVŌPĀKHYĀNA.

Substance, Paper. Size, 10-7/16 × 9½ inches. Pages, 143. Lines, 20 on a page. Extent, 2,000 granthas. Character, Kannada. Condition, good. Appearance, new. Mode of writing, good.

Restored in 1924–25 from the Ms. described above (No. 1227).

Complete in 13 Adhyāyas.

(ವಿ-ವಿ.)—

ಸಮಗ್ರ. ೧೩ ಅಧ್ಯಾಯಗಳು. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿ ಇದಕ್ಕೆ ಮಾತೃಕೆಯು.

No. 1229- ಚಿಕ್ಕದೇವರಾಜ ವಂಶಾವಳಿ by ತಿರುಮಲಾರ್ಯ-
CIKKADĒVARĀJA VAMŚĀVAḶI BY TIRUMALĀRYA.

Substance, Palm-leaf. Size, 17 × 1½ inches. Pages, 270. Lines, 5 on a page. Extent 2,530 granthas. Character, Kannada. Condition, injured. Appearance, old. Mode of writing, good.

Wants first folio ; Breaks off in the course of the history of Chikadēvarāya after his succession to the Kingdom. Foll. 30, 47, 122 and 134 to 136 are broken. Foll. 135 *b* and 137-*b* are left blank.

Describes the genealogy of Srīraṅgarāya of Āndhradēśa and Cikadēvarāya of Mysore and also the greatness of Yādavagiri. This is written in ornate prose. The author Tirumalārya is a prominent writer in Kannada literature. He was the son of Aḷahiya Siṅgarārya (Saumya Nṛismha) and was the minister of Cikadēvarāya, King of Mysore (1672–1704.)

Besides the present work he also wrote the other works, viz., Apratimavīracarita, Cikadēvarāyavijaya, etc. His date is 1645–1706 A.D.

This work is published by the "Karnāṭake kāvya manjari" (a monthly journal containing rare and excellent works in old Kannada Language) edited by S. G. Narasimhācār and M. A. Rāmānuja Iyengar of Mysore in 1892 to 1898, which also contains the same portion as that of this Ms. The remaining portion of the work is not found so far.

Date of transcription :—The 10th day of the dark fortnight of the lunar month Āṣāḍha in the year "Virōdhikṛtu."

Beginning :

. . . . . ತ್ತಿರೆ, ಇತ್ತಲೀ ರಾಮರಾಜಂ ಕೆಲವುಂ ಕಾಲಕ್ಕೆ ಕಾಲಧರ್ಮವ ನೆಯ್ದಿದ ಬಳಿಕ ತಿರುಮಲರಾಜಂ ಮೊದಲಾದ ಅವನ ಕುವರರ್ ಶ್ರೀರಂಗಪಟ್ಟಣದಲ್ಲಿ ರೇಮಟಿ ವೆಂಕಟಯ್ಯನೆಂಬ ತಮ್ಮ ದಳವಾಯನಿರಿಸಿ ತಾವೆಳಪರಯಾದವರಾದುದರಿಂದ ಪೆನುಗೊಂಡೆಯಂ ಪೊರ್ದಿ ಕಿರಿಯಯ್ಯನ ಬಳಿಯೊಳಿರ್ದು ಬಳ್ದರ್.

End :

ಚೆಂತನಕಲ್ಲ ದ್ದಗಿರಿ ನಿಡುಗಲ್ಲುಂತಾದ ಪಲವುಂ ಹಟ್ಟಿಗೊಟ್ಟದ ದೊರೆಗಳ ಬಲಮಂ ತನ್ನ ಮೂಲ ಬಲಮಂ ತನ್ನ ಸೇರಿದ ತುಳುವ ಕೊಂಕಣ ಕೊಡಗು ಮಲಯಾಳಂಗಳಂ ದಳಮುಮಂ ಕೊಂಡು ಪಟ್ಟಣಕ್ಕೆ ನಡೆತಂದು,

Colophon :

ಇತಿ ಶ್ರೀರಂಗರಾಯರ ವಂಶ ಪ್ರಭಾವ ಚಿಕ ದೇವರಾಜರ ವಂಶ ಪ್ರಭಾವ ಯಾದವಗಿರಿ ಮಾಹಾತ್ಮ್ಯ ಸಹ ಪದನು ೧೦೦೦ ಕ್ಕೆ ಮಂಗಳ ಮಹಾ ಶ್ರೀ.

(ವಿ-ವಿ.)—

ಮೊದಲ ಒಂದೋಲೆ ಇಲ್ಲ. ಚಿಕದೇವರಾಜನು ಪಟ್ಟಾಭಿಷಿಕ್ತನಾದ ಬಳಿಕ ಅವನ ವಿಜಯ ಯಾತ್ರೆಯ ವರ್ಣನಾ ಪ್ರಸ್ತಾಪದ ಮಧ್ಯದಲ್ಲಿ ಗ್ರಂಥವು ನಿಲ್ಲುತ್ತದೆ. ಆದರೆ ಗ್ರಂಥವನ್ನು ಪರಿಶೀಲಿಸುವಾಗ ಅದು ಅಲ್ಲಿಗೆ ಮುಗಿದಿಲ್ಲವೆಂದು ತೋರುತ್ತದೆ. ಇದುವರೆಗೆ ಮುಂದಿನ ಭಾಗವು ಎಲ್ಲಿಯೂ ದೊರೆಯಲಿಲ್ಲ. ಓಲೆಗಳು ೩೦, ೪೭, ೧೦೦ ಮತ್ತು ೧೩೪—೧೩೬ ಇವು ಮುರಿದಿವೆ. ೧೩೫, ೧೩೬ ನೆಯ ಓಲೆಗಳಲ್ಲಿ ಒಂದೇ ಕಡೆ ಬರೆದಿದೆ. ಕೊನೆಯ ಓಲೆ ೧೩೭ ನೆಯದು. ಪುಸ್ತಕದ ಕೊನೆಯಲ್ಲಿ 'ವಿರೋಧಿಕೃತು ಸಂವತ್ಸರದ ಆಷಾಢ ಬಹುಳ ೧೦ ಯಲ್ಲು ಶ್ರೀಮತು ಅಮ್ಮಯ್ಯನವರಿಗೆ ತ್ರಿಸಂಧ್ಯಾ ಕಾಲದಲ್ಲು ಆಯುರಾರೋಗ್ಯ ಐಶ್ವರ್ಯಂ [ಗಯಿ] (ಗೆಯ್ಯು)ತ್ತಿರಲೆಂದು ಬರೆದು ಕೊಟ್ಟ ಪುಸ್ತಕಕ್ಕೆ ಮಂಗಳ ಮಹಾ ಶ್ರೀ. 'ದೇವರ ಚಿತ್ತಕ್ಕೆ ಕೋಪವಾದೀತು. ದೇವರ ದಯಮಾಡಿ[ಸ್ತ](ಸಿದ) ಮಾತೃಕೆ ಪ್ರಕಾರಕ್ಕೆ ಮಾತೃಕೆಯಲ್ಲಿ ತಪ್ಪಾಗಿ ಯಿದ್ದರೆ ಹಿರಿಯರ ಕೈಯ ತಿಳಿಸಿಕೊಂಡು ಬರೆದು ಇದೇನೆ. ಇಂತೀ ಬಿನ್ನಹ' ಎಂದಿದೆ.

ಈ ಗ್ರಂಥವು ಮೈಸೂರು ಕಾವ್ಯ ಕಲಾನಿಧಿಯವರಿಂದ ಮುದ್ರಿತವಾಗಿದೆ. ಇದು ಹಳೆಗನ್ನಡದ ಗದ್ಯಕಾವ್ಯ ಸರಣಿಯಲ್ಲಿ ಬರೆದಿದೆ. ಚಿಕದೇವರಾಜನ ಮತ್ತು ಅವನ ಪೂರ್ವಜರ ಚರಿತ್ರೆಯು ಇದರಲ್ಲಿ ಪ್ರತಿಪಾದಿತವಾಗಿದೆ. ಪ್ರಾಸಂಗಿಕವಾಗಿ ಶ್ರೀರಂಗರಾಯರ ವಂಶ ಪ್ರಭಾವವೂ ಯಾದವಗಿರಿ ಮಾಹಾತ್ಮ್ಯವೂ ಇದರಲ್ಲಿ ವರ್ಣಿತವಾಗಿದೆ. ಕವಿ

ತಿರುಮಲಾರ್ಯನೆಂಬವನು. ಇವನು ಚಿಕದೇವರಾಜ (ಮೈಸೂರು ದೊರೆ ೧೬೭೨-೧೭೦೪)ನ ಮಂತ್ರಿಯಾಗಿದ್ದನು. ಈತನು ಅಪ್ರತಿಮವೀರ ಚರಿತೆ, ಚಿಕದೇವರಾಜ ವಿಜಯ ಮುಂತಾದ ಗ್ರಂಥಗಳನ್ನು ಬರೆದಿದ್ದಾನೆ. ಇವನ ಕಾಲ ಕ್ರಿ. ಶ. ೧೬೪೫-೧೭೦೬ ಎಂದು ಕವಿ ಚರಿತ್ರೆಯಲ್ಲಿ ಹೇಳಿದೆ. ಆ ಬಗೆಗೆ ಕರ್ಣಾಟಕ ಕವಿ ಚರಿತ್ರೆ (೨ ನೆಯ ಸಂಪುಟ, ಪುಟ ೪೬೧) ಯನ್ನು ನೋಡಿ ತಿಳಿಯುವುದು.

No. 1230. ಚಿಕ್ಕದೇವರಾಜ ವಂಶಾವಳಿ by ತಿರುಮಲಾರ್ಯ- CIKKADĒVARĀJA VAMŚĀVAḶI BY TIRUMALĀRYA.

Substance, Srītāla. Size, 8⅞—9 × 1¾ inches. Pages, 310. Lines, 5 to 6 on a page. Extent, 1,500 granthas. Character, Kannada. Condition, slightly injured. Appearance, old. Mode of writing, good.

Incomplete. Breaks off in the course of the description of Karmayōga and Jñānayōga by Aḷahiya Singarārya to His Highness Doḍḍadēvarāya (father of Cikkadēvarāja of Mysore) as in the Gīta.

Same work as that described above (No. 1229.)

(ವಿ.ವಿ.)—

ಸಮಗ್ರ. ಮೊದಲ ಓಲೆಯಿಲ್ಲ. ಓಲೆಗಳು ೨, ೧೦೯—೧೧೧, ೧೨೯—೧೩೧ ಇವು ಮುರಿದಿವೆ. ೧೩೨, ೧೪೨ ಈ ಎರಡು ಓಲೆಗಳಲ್ಲಿ ಒಂದೇ ಕಡೆ ಬರೆದಿದೆ. ಕೊನೆಯ ಓಲೆ ೧೫೭ ನೆಯದು. ಮುಂದಣ ನಂಬರಿನಲ್ಲಿ (೧೨೩೧) ವರ್ಣಿತವಾಗಿರುವ ಪುಸ್ತಕವು ಇದರ ಮುಂದಣ ಭಾಗವಾಗಿದೆ. ಅದರಲ್ಲಿ ಆದಿಯಲ್ಲಿ ಎರಡು ಓಲೆಗಳು ಇರುತ್ತಿದ್ದರೆ ಇವೆರಡನ್ನು ಜೋಡಿಸಿ ಒಂದು ಸಮಗ್ರ ಪ್ರತಿಯೆಂದು ಪರಿಗಣಿಸಬಹುದಿತ್ತು. ಇದರ ಆದ್ಯಂತ ಭಾಗಗಳನ್ನು, ಸ್ವಲ್ಪಮಟ್ಟಿಗೆ ಉದಾಹರಿಸಲಾಗಿದೆ

Beginning :

. . . . . . ಂಗಳಿಂದೆ ದಶರಥಂಗೆತ್ತು ಮತ್ತಮೊಗೆದ ನಾರಾಯಣನ ಸಾಕ್ಷಿಯನ್ನಳಂತೆಯುಮೀತನ ಸೇನಾ ಧೂಳಿಗಳ್ ಮುಯ್ಯಕ್ಕಲೆಂದೊಡಲ್ಯಡೆದೆಬ್ಬಿಂದ ನಾಲ್ಗಡಲಂತೆಯುಂ * * * * *

End :

ಇಂತು ಶೋಕಾವಿಷ್ಟನಾಗಿ ತನ್ನಡಿಗೆರಗಿದ ಪಾರ್ಥನಂಗೆ ಅನಿತ್ಯವಾದ ಶರೀರಾದಿಗಳತ್ತಣಿಂ ಬೇರಾಗಿ ನಿತ್ಯವಾದ ಜೀವಾತ್ಮನಂ ತಿಳಿವ ಸಾಂಖ್ಯಮೆಂಬ ಬುದ್ಧಿಯುಂ ಫಲಸಂಗ ಕರ್ತೃತ್ವ ರಹಿತವಾದ ಕರ್ಮ ಸ್ವರೂಪಮಂ ತಿಳಿವ ಯೋಗಮೆಂಬ ಬುದ್ಧಿಯುಮಾತ್ಮಾವಲೋಕನ ಸಾಧನವಾದ ಸ್ಥಿರ ಬುದ್ಧಿಯುಂ ಪುಟ್ಟುವುದೆಂಬುದ[ಂ] (ನೆ) ರಡನೆಯ ಅಧ್ಯಾಯದೊಳಂ; ಈ ಕರ್ಮದಿಂದೀ ಫಲಮಂ ಸಾಧಿಪೆನೆಂಬ ಫಲಾಪೇಕ್ಷೆಯುಂ ಈ ಕರ್ಮಮೆನಗೆ ಫಲಮಂ ಸಾಧಿಪುದರಿಂದೆನ್ನದೆಂಬ ಸಂಗಮುಮು ನೀ ಕರ್ಮಮ ನಾನೆಸಗುವೆನೆಂಬ ಕರ್ತೃತ್ವಮುಮಂ ಕಳೆದು ಸತ್ವರಜಸ್ತಮೋ ಗುಣಂಗಳ್ ಕರ್ಮಂಗಳಂ ಗೆಯ್ಯುವುವೆಂದಾದೊಡಂ ಕರಣ ಕಳೇಬರಂಗಳನಿತ್ತ ಪರಮಾತ್ಮನೆ ಗೆಯ್ಯುವನೆಂದಾದೊಡಂ . . . . . .

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1231. ಚಿಕ್ಕ ದೇವರಾಜ ವಂಶಾವಳಿ-
CIKKADĒVARĀJA VAMŚĀVAḶI.

Substance, Sritāla. Size, 8⅞ × 1¾ inches. Pages, 235. Lines, 5 to 6 on a page. Extent, 1,100 granthas. Character, Kannada. Condition, much injured. Appearance, old. Mode of writing , good.

Begins with the reigns of Doḍḍadēvarāya and ends with Cikka-dēvarāya.

Same work as that described above (No. 1229).

(ವಿ-ವಿ.)—

ಅಸಮಗ್ರ. ಒಟ್ಟು ಓಲೆಗಳು ೧೧೮. ಇವುಗಳ ಎಡಗಡೆಯಲ್ಲಿ ೧೬೦ ರಿಂದ ೨೩೭ ರ ವರೆಗೂ ನೂಲನ್ನು ಪೋಣಿಸುವ ತೂತಿನ ಬಳಿಯಲ್ಲಿ ೧೮ ರಿಂದ ೧೩೫ ರ ವರೆಗೂ ಕ್ರಮವಾಗಿ ಅಂಕೆಗಳು ಗುರುತಿಸಲ್ಪಟ್ಟಿವೆ. ಕೊನೆಯ ಓಲೆಯಲ್ಲಿ ಒಂದೇ ಪಕ್ಕದಲ್ಲಿ ಬರೆದಿದೆ. ಇದು ಹಿಂದಣ ಪ್ರತಿಯ ಮುಂದಣ ಭಾಗವು. ಇದರಲ್ಲಿ ಎಷ್ಟು ಭಾಗವಿದೆ ಎಂಬುದಕ್ಕೆ ಕೆಳಗಡೆ ಆದ್ಯಂತಗಳನ್ನು ಉದಾಹರಿಸಲಾಗಿದೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ. ಮುಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿ ಇದರ ಪ್ರತ್ರಿಕೆಯು. ಇದರ ಆದ್ಯಂತ ಭಾಗಗಳು :—

Beginning :

. . . . . ನ ಕಲ್ಯಾಣ ಗುಣಂಗಳುಮಂ ಈ ಜಗಮೆಲ್ಲಮು ಮವನೊಡವೆಯು ಮಾಗಿರ್ಪುದೆಂಬುದುಮಂ ಪತ್ತನೆಯ ಅಧ್ಯಾಯದೊಳಂ ॥ * * *

End :

ಜಂಜ ತಂಜಾವೂರ್ಮಧುರೆಯ ಮನೆಗಳೊಳೆಱಿದು ಅವರಿತ್ತುದಂ ತ್ರಾತ್ರಿಯುವರಂ ಬೆಸಸಿಯುವರತ್ತಣಿಂದೆಳ್ದತ್ತಲುಂ ಪರಿದು ಎತ್ತಲುಂ ನೆಲೆಗಾಣದಿರೆ ಯವನನರಸಿಕಂಡು ಕಾಲ್ಗೆರಗಿಯೊಡಗೊಂಡು ಬಂದು ತನ್ನ ಮುಂದಣ ಕಡೆಗಡಿಯೆನಿಸುವ ಹಾಸನ ಬೇಲೂರ್ಗಳುತ್ತು ನೆಲೆಗೊಳಸಿ ಯವನತ್ತಣಿಂದ್ಯೆಗೂರು ಕೆಱಿಯ ಕೆರೆ ಹರಪನ ಹಳ್ಳಿ ಬಿಂಕನ ಕಲ್ಮದ್ದಗಿರಿ ನಿಡುಗಲ್ಮೊಂತಾದ ಪಲವುಂ ಹಟ್ಟಿ ಕೊಟ್ಟದ ದೊರೆಗಳ . . . . ಮೂಲ ಬಲಮಂ ತನ್ನಂ ಸೇರಿದ ತುಳುವ ಕೊಂಕಣ ಕೊಡಗು ಮಲಯಾಳಂಗಳ ದಳಮುಮಂ ಕೊಂಡು ಪಟ್ಟಣಕ್ಕೆ ನಡೆತಂದು,"

No. 1232. ಚಿಕ್ಕ ದೇವರಾಜ ವಂಶಾವಳಿ by ತಿರುಮಲಾರ್ಯ-
CIKKADĒVARĀJA VAMŚĀVAḶI BY TIRUMALĀRYA.

Substance, Paper. Size, 10⅜ × 9⅜ inches. Pages, 74. Lines, 20 on a page. Extent, 1,110 granthas. Character, Kannada, Condition, good. Appearance, new. Mode of writing fair.

Restored in 1916–17 from the Ms. described above (No. 1231).

(ವಿ-ವಿ.)—

ಅಸಮಗ್ರ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಇದು ಇದರ ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ (ನಂ. ೧೨೩೧) ಪ್ರತಿಕೆಯಾಗಿದೆ.

No. 1233. ಚಿಕ್ಕದೇವರಾಜ ವಂಶಾವಳಿ by ತಿರುಮಲಾರ್ಯ- CIKKADĒVARĀJA VAMSĀVAḶI BY TIRUMALĀRYA.

Substance, Paper. Size, 14⅞ × 8⅝ inches. Pages, 24. Lines, 45 to 54 on a page. Extent. 890 granthas. Character, Kannada. Condition, injured. Appearance, old, Mode of writing, not bad.

Begins on page 106 of the manuscript described under No. 895 *ante*. Incomplete.

Contains the story of Rājanṛpa, Cāmarāja, Immaḍirājarasa, Kanthiravanarasarāja complete and beginning portion of the story of the Doḍḍadēvarāja.

Same work as that described above (No. 1229).

(ವಿ-ವಿ.)—

ಅಸಮಗ್ರ. ಮೊದಲಿಂದ ದೊಡ್ಡ ದೇವರಾಜ ಚರಿತ್ರೆಯಾದಿಯು ಸ್ವಲ್ಪ ಭಾಗದವರೆಗೆ ಇದೆ. ಆ ಬಗೆಗೆ ಈ ಕೆಳಗೆ ಉದಾಹರಿಸಲಾಗಿದೆ. ಕಾಗದದ ಪುಸ್ತಕ ; ಶಿಥಿಲವಾಗಿದೆ. ಲಿಪಿ ಸಾಮಾನ್ಯವಾದುದು.

Beginning :

ಸ್ವಸ್ತಿ ಸಮಸ್ತ ಭೂಮಂಡಲ ಪುಂಡರೀಕ ಕರ್ಣಿಕಾಯಮಾನ ಕನಕಾಚಲದಿಶಾಪರ್ಯಸ್ತ ಪರಿಕರ್ಮಾಲಂಕರ್ಮೀಣ ಭಾರತವರ್ಷ ಮಂಡನಾಯಿಕ ಭರತ ಖಂಡೋದ್ದಂಡ ವೈಭವೋತ್ತಮಣಾರ್ಯಿತ ಕರ್ಣಾಟ ದೇಶದೊಳ್ * * *

End :

ಈ ಪ್ರೊಬ್ಬಿ ಭಾಗವತ ಶ್ರವಣಂ ಗೆಯ್ವಲ್ಲಿ ; ಗೊಲ್ಲವಳ್ಳಿಯೊಳೊಳಸಿ ಸುತನದೊಳೆಸೆವ ವಾಸುದೇವನಂ ನೆಪಮಿಲ್ಲದೆಡೆಯೆಡೆ ಯೊಳ್ಮೊಗವ ಮುದ್ದುನಗೆಯುಂ, ಒರ್ಗಯ್ಯೊಳೆಱೆದು ಚೆಂಬಾಯೊಳ್ಂಬುಗೊಳಸಿದ ಮೆಲ್ಲಡಿಯುಂಗುಟಮುಂ, ಮುತ್ತಿನೆಕ್ಕಸರದೊಳ್ ಕಟ್ಟಿನೇಲ್ದು ನೀಳ್ಕೆಯುಂ ನೀಳ್ಕದುಯ್ಯಾಲಾಡುವ ಕೆಂಬರಲ್ಸಿಂಡ ನಂಡಲೆವ ಮೆಱಗೆಯ್ಯುಂ, ಬಗೆಗರಗಿ ಪರಿತಂದು ನಿಟ್ಟಿಸಿ ಮಱೆದು ಮೊಗದೊಳ್ ಮೊಗವಿಟ್ಟು ಮುದ್ದಿಸಿ ಮೆ . . . . . .

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1234. ಚಿಕ್ಕದೇವರಾಜ ವಂಶಾವಳಿ by ತಿರುಮಲಾರ್ಯ- CIKKADĒVARĀJA VAMŚĀVAḶI BY TIRUMALĀRYA.

Substance, Palm-leaf. Size, 17 $\frac{3}{16}$ × 1 $\frac{3}{16}$ to 1⅜ inches. Pages, 84. Lines, 5 to 7 on a page. Extent, 850 granthas. Character, Grantha. Condition, injured. Appearance, old. Mode of writing, good.

Breaks off in the course of the history of "Doḍḍadēvarāja."

Same work as that described above (No. 1229).

(ವಿ-ವಿ.)—

ಅಸಮಗ್ರ. ಮೊದಲಿಂದ ದೊಡ್ಡದೇವರಾಯ ಚರಿತ್ರೆಯೊಳಗಣ ಶ್ರೀಕೃಷ್ಣ ಬಾಲಲೀಲಾ ವರ್ಣನೆಯವರೆಗಿದೆ. ಶಿಥಿಲವಾದ ಪ್ರತಿ. ಗ್ರಂಥಾಕ್ಷರದಲ್ಲಿ ಬರೆದಿದೆ. ಲಿಪಿ ಚೆನ್ನಾಗಿದೆ.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1235. ಚಿಕ್ಕದೇವರಾಜ ವಂಶಾವಳಿ by ತಿರುಮಲಾರ್ಯ-
CIKKADĒVARĀJAVAMŚĀVAḶI BY TIRUMALĀRYA.

Substance, Palm-leaf. Size, 17-3/16 × 1-9/16 inches. Pages 243. Lines, 5–6 on a page. Extent, 2,300 granthas. Character, Kannada. Condition, extremely injured. Appearance, old. Mode of writing, good.

Contains up to the "Doḍḍadēvarāja carite" complete and Dēvarāja carite incomplete.

Same work as that described above.

(ವಿ-ವಿ.)—

ಆದಿಯ ಕೆಲವು ಓಲೆಗಳು ಹುಡಿಯಾಗಿವೆ. ಅಲ್ಲದೆ ನಡುವೆ ಅಲ್ಲಲ್ಲಿ ಓಲೆಗಳು ತುಂಡಾಗಿವೆ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1236. ರಾಜಾವಳೀ ಕಥಾಸಾರ by ವಿಬುಧೇಂದು-
RĀJĀVAḶĪKATHĀSĀRA BY VIBUDHĒNDU.

Substance, paper. Size, 13 × 8½ inches. Pages, 655 (9 to 663). Lines, 20 on a page. Extent, 9,450 Granthas. Character, Kannada. Condition, good. Appearance, new. Mode of writing, good.

Begins of the 9th page of this manuscripts. Pages 1 to 7 contain the contents of this work. Eighth page is left blank.

Complete in 13 Adhikāras.

A huge work in prose describing the legends relating to Jainism and giving the accounts of several kings and poets.

The author Vibudhēndra is also known as Vibudhēndra Dēvacandra and Maleyūra Dēvacandra. He was the native of Kanakagiri (Maleyūru) and his principal deity was Pārśvanātha of Maleyūru. It is known from the genealogy of the poet described in this work (vide pp. 550 and 551, Chapter XI) that he was the son of Dēvayya and Kusumānjana, grandson of Dēvacandra and younger brother of Candrapārya and Padmarāja. He says that he had collected the matters for the work at the request of *Mr. Colin Mackenzie* who came to him on surveying the lands of Maleyūru in the lunar month Āśvīja of the year Raktākṣi corresponding to 1804. A.D. (vide pages 551 and 552) and compiled this work in 11 Adhikarās in the year Viḷambi, Śaka year 1760 corresponding to 1838 A.D. at the instance of *Vaidyarāja Sūripaṇḍita* who was under the patronage of *Mummaḍi Kṛṣnaraja*, king of Mysore. He states in the beginning of 12th Adhikāra that he added two more Adhikāras (viz. 12th and 13th) one of which deals with the history of Mysore kings upto *Kṛṣnarāja III*

(1794—1868) in the year Plava (1841 A.D.), at the instance of Dēvīrāmbe the queen of Cāmarāja, father of Kṛṣṇarāja III. The author quotes several Sanskrit ślōkas suited to the place here and there.

Beginning :

ಕಂದ॥ ಶ್ರೀಮತ್ಸಮಸ್ತ ಭುವನ ಶಿ ।
ರೋಮಣಿ ಸದ್ವಿನಯ ವಿನಮಿತಾಖಿಲಜನ ಚಿಂ ॥
ತಾಮಣಿಯೆನಿಪ್ಪ ಪರಮ ।
ಸ್ವಾಮಿಯಾನಘನುತಿಸಿ ಪಡೆವೆ ಶಾಶ್ವತ ಸುಖಮಂ ॥

ವಚನ॥ ಇಂತು ಇಷ್ಟದೇವತಾ ನಮಸ್ಕಾರಮಂ ಮಾಡಿ ಭಗವದರ್ಹತ್ಸರ್ವಜ್ಞ ಶಾಸನ ಸಮುದಿತ ಪ್ರಥಮಾನುಯೋಗ ಕಥಾಸಾರಾಮೃತ ಪಾರಾವಾರದ ಕಣಿವತಾರದೊಳೊಂದು ಬಿಂದುವಂ ತೋರುವಂತೆ ಸ್ವಲ್ಪವಾಗಿ ಗುರುತು ಮಾತ್ರಮಂ ತೋರುವೆಂ ; ಇದಂ ಮಕರಂದ ಗಂಧಮಂ ಮಾರುತಂ ಪ್ರಸರಿಪಂತೆ ಸತ್ಪುರುಷರೀ ಕಥೆಯಂ ಶಬ್ದದೋಷಮಂ ತಿದ್ದಿ ಬುಧರ್ಗರಿವಂತು ಪೇಳ್ವುವೆಂದವರಂ ನುತಿಸಿ ಹೊಸಕನ್ನಡ ವಾಕ್ಯಂಗಳಂ ವಿರಚಿಸುವೆನು.

ಕಂದ॥ ಶ್ರೀಸುಜನಸ್ತುತ ರಖಿಳ ಕ ।
ಳಾಸದನರ್ ಮೋಹತಿಮಿರಮಂ ಕಳೆದು ಕರಂ ॥
ಭಾಸುರ ವಿಚಾರ ದಕ್ಷರು
ವೈಷಮ್ಯಮನುಳಿದು ಕೇಳ್ವುದೀ ಸತ್ಕೃತಿಯಂ ॥

ವಚನ॥ ಆಕೃತಿಯಂ ವಿದ್ಯಾವಿಶಾರದರ್ ವಿಚಾರ ದಕ್ಷರು ವಿಜ್ಞಾನ ಸಂಪನ್ನರು ಮಿೂ ಭರತ ದಾರ್ಯಾಖಂಡದ ಪ್ರಪಂಚಮುಮನಾದಿಯಿಂ ಪೇಳ್ವುದನೆ ರಾಜಾವಳೀ ಕಥಾವತಾರ ಮೆಂಬಭಿಧಾನಮನಿಟ್ಟು ಪೇಳ್ವೆನೆಂತೆಂದೊಡೆ.—

ಲೋಕಂ ಸ್ವಾತ್ಮಪ್ರತಿಷ್ಠಿತಮು ಮನಾದಿ ನಿಧನಮು ಮಕೃತ್ರಿಮಮುಂ ಪೂರ್ವಾಪರ ಸಪ್ತೈಕ ಪಂಚೈಕ ರಜ್ಜು ವಿಸ್ತಾರಮುಂ ದಕ್ಷಿಣೋತ್ತರಗತ ಸಪ್ತರಜ್ವಾಯಾಮಮುಂ ತ್ರಸನಾಳಿಕಾಗರ್ಭೀಕೃತಮುಮನಂತಾನಂತಾಕಾಶ ಮಧ್ಯಸ್ಥಿತ ವಾಯುತ್ರಯ ಪರಿವೇಷ್ಟಿತಮು ಮಾಗಿರ್ಪುದು. ಷಡ್ದ್ರವ್ಯಭರಿತ ಮಪ್ಪೀಲೋಕ ಮಧೋ ಮಧ್ಯೋರ್ಧ್ವ ಭೇದಂಗಳಿಂ ತ್ರಿವಿಧಂ.

*   *   *   *   *

ಶ್ರೀ ಮದಾದಿ ಪರಮೇಶ್ವರಂ ಮಾಘ ಬಹುಳ ಚತುರ್ದಶಿಯೊಳು ಶಿವಲೋಕ ಪ್ರಾಪ್ತನಪ್ಪುದುಂ ದೇವೇಂದ್ರಾದಿ ಚತುರ್ನಿಕಾಯಾಮರರೆಯ್ದಿ ದಿವ್ಯಮಪ್ಪ ಜಲಗಂಧಾಕ್ಷತ ಪುಷ್ಪ ಚರುದೀಪ ಧೂಪ ಫಲಾರ್ಘ್ಯಂಗಳಿಂದನೇಕಾರ್ಚನೆಗಳಿಂದಾ ಕೈಲಾಸಮಂ ಪೂಜಿಸಿ ಪರಿನಿರ್ವಾಣ ಕಲ್ಯಾಣೋತ್ಸವಂಗಳಂ ಮಾಡಿ ಪೋಗಲಂದಿಂದಿತ್ತಲಾ ತಿಥಿಯು ಶಿವರಾತ್ರಿಯೆಂಬ ಪುಣ್ಯದಿನ ಮಾಯ್ತು.

ಕಂ॥ ಇಂತೀ ಕಥೆಯಂ ಕೇಳ್ವರ ।
ಭ್ರಾಂತಿಯು ನೆರೆಕೆಟ್ಟು ಬಳಿಕ ಮಾಯುಂ ಶ್ರೀಯುಂ ॥
ಸಂತಾನ ವೃದ್ಧಿ ಸಿದ್ಧಿಯು ।
ಸಂತತ ಸೌಖ್ಯಂಗಳಹ ವರಂಗಳೊಳಕ್ಕುಂ ॥

Colophon :

ಇದು ಸತ್ಯ ಪ್ರವಚನ ಪಾರವಾರ ಸಮುತ್ಪನ್ನ ಕಿಂಚಿನ್ಮಾತ್ರದಿಂ ವಿಬುಧೇಂದು ವಿರಚಿತ ರಾಜಾವಳೀ ಕಥಾಸಾರದೊಳಾದಿ ಬ್ರಹ್ಮನಿರೂಪಣಂ ಪ್ರಥಮಾಧಿಕಾರಂ.

End :

ಸ್ರ॥ ಶ್ರೀ ಮದ್ರಾಜಾಧಿ ರಾಜಾಖಿಲ ಸುಗುಣ ಗಣಾಲಂಕೃತಂ ಕೃಷ್ಣರಾಜ।
ಶ್ರೀ ಮಂತಾಶ್ರಿತ ವೈದ್ಯರಾಜನರ್ಹತ್ಪಾದಾಬ್ಜಲೀ ನಾಳನಿ।
ಸ್ಸೇಮಂ ಸದ್ಗುಣಿ ಸೂರಿಪಂಡಿತ ಜಗದ್ವಿಖ್ಯಾತ ವಿದ್ವಜ್ಜನ।
ಪ್ರೇಮಂ ಕಾರಿತ ಸತ್ಪ್ರಬಂಧ ಕಥನಂ ಭದ್ರಂ ಶುಭಂ ಮಂಗಳಂ ॥

ಕಂ॥ ಹಳಗನ್ನಡ ಬೆಳುಗನ್ನಡ।
ವೊಳಗನ್ನಡ ವೆಚ್ಚಗನ್ನಡಂ ಪೊಸತೆಂಬುದು ॥
ತೆಳುಗನ್ನಡ ಮಿಶ್ರದಿ ನಿದ।
ನಿಳೆಯೊಳು ಸತ್ಪುರುಷರೋದಿ ಕೇಳ್ವುದು ಸತತಂ ॥

ಇಂತೀ ಕಥೆಯಂ ಕೇಳ್ವರ।
ಭ್ರಾಂತಿಯು ನೆರೆ ಕೆಡುಗು ಬಳಿಕ ಮಾಯುಂ ಶ್ರೀಯುಂ ॥
ಸಂತಾನ ವೃದ್ಧಿ ಸಿದ್ಧಿಯು।
ನಂತ ಸುಖಂ ತಪ್ಪದಪ್ಪುದೆಂಬುದು ನಿರುತಂ ॥

Colophon :

ಇತಿ ಸತ್ಯ ಪ್ರವಚನ ಕಾಲಪ್ರವರ್ತನ ಕನಕಾಚಲ ಶ್ರೀ ಜಿನಾಧಾರಕ ಮಲೆಯೂರ ದೇವಚಂದ್ರ ಪಂಡಿತ ವಿರಚಿತ ರಾಜಾವಲೀ ಕಥಾಸಾರದೊಳ್ ಜಾತಿನಿರ್ಣಯ ನಿರೂಪಣಂ ತ್ರಯೋದಶಾಧಿಕಾರಂ.

(ವಿ-ವಿ.)—

ಸಮಗ್ರ. ಕಾಗದದ ಪ್ರತಿ. ಲಿಪಿ ಚೆನ್ನಾಗಿದೆ. ಈ ಪುಸ್ತಕದ ಮೊದಲಲ್ಲಿ ಈ ಗ್ರಂಥದ ಅಧಿಕಾರ ಮತ್ತು ವಿಷಯ ಇವುಗಳ ಅನುಕ್ರಮಣಿಕೆಯಿದೆ.

ಇದು ಗದ್ಯರೂಪದಲ್ಲಿ ಬರೆದಿದೆ. ಆದರೆ ಅಲ್ಲಲ್ಲಿ ಕೆಲವು ಶ್ಲೋಕಗಳೂ ಪದ್ಯಗಳೂ ದೊರೆಯುತ್ತವೆ. ಅಧಿಕಾರಗಳು ೧೩. ಇದರಲ್ಲಿ ಜೈನಮತಕ್ಕೆ ಸಂಬಂಧವಾದ ಹಲವು ಇತಿಹಾಸಗಳೂ ಪಲವು ರಾಜರ ಚರಿತ್ರೆಗಳೂ ಕವಿ ವಿಷಯಗಳೂ ಉಕ್ತವಾಗಿವೆ. ಹನ್ನೊಂದನೆಯ ಅಧಿಕಾರವ ಕೊನೆಯಲ್ಲಿ ಕವಿಯ ವಂಶಪರಂಪರೆ, ಆತನ ಇತರ ಗ್ರಂಥಗಳು, ಈ ಗ್ರಂಥ ನಿರ್ಮಾಣ ಕಾಲ, ಇದನ್ನು ಬರೆಯುವುದಕ್ಕೆ ಕಾರಣ ಈ ಮುಂತಾದ ವಿಷಯಗಳು ವಿಸ್ತಾರವಾಗಿ ಹೇಳಿವೆ. ಅವನ್ನೆಲ್ಲಾ ಕವಿಚರಿತ್ರೆಕಾರರು ಕವಿಚರಿತ್ರೆಯಲ್ಲಿ (ಸಂಪುಟ ೩, ಪುಟ ೧೪೭) ಎತ್ತಿ ಬರೆದಿರುತ್ತಾರೆ. ಅಲ್ಲದೆ ಅವರು ಜೈನ ಕವಿಗಳ ಚರಿತ್ರವನ್ನು ಬರೆವಾಗ ಹಲವು ಕಡೆ ಈ ಗ್ರಂಥದಿಂದ ಕವಿಚರಿತ್ರೆಯಲ್ಲಿ ಕೆಲವು ಅಂಶಗಳನ್ನು ಅನುವಾದ ಮಾಡಿದ್ದಾರೆ. ಕವಿಯು ತಾನು ಮಕ್ಕಂಜಿ ಸರದಾರರ ಸಲುವಾಗಿ ಈ ಕಥಾ ವಸ್ತುವನ್ನು ರಕ್ತಾಕ್ಷಿ ಸಂವತ್ಸರದಲ್ಲಿ ಎಂದರೆ ಕ್ರಿ. ಶ. ೧೮೦೪ ರಲ್ಲಿ ಸಂಗ್ರಹಿಸಿ ಮೈಸೂರು ದೊರೆ ಮುಮ್ಮಡಿ ಕೃಷ್ಣರಾಜರ ಆಶ್ರಿತನಾದ ವೈದ್ಯರಾಜ ಸೂರಿಪಂಡಿತನ ಪ್ರೋತ್ಸಾಹದಿಂದ ವ್ಯೋಮತುರ್ಗ ಶೈಲ ಶಶಿ ಸಂಖ್ಯಾತವಾದ

ಶಾಲಿವಾಹನ ಶಕವರ್ಷದಲ್ಲಿ ವಿಳಂಬಿ ಸಂವತ್ಸರದ (೧೭೬೦ ಎಂದರೆ ಕ್ರಿ. ಶ. ೧೮೩೮) ಲ್ಲಿ ಹನ್ನೊಂದು ಅಧಿಕಾರಗಳನ್ನೊಳಗೊಂಡ ಈ ಗ್ರಂಥವನ್ನು ವಿರಚಿಸಿದಂತೆಯೂ ಅನಂತರದ ಎರಡು ಅಧಿಕಾರಗಳನ್ನು ಚಾಮರಾಜೇಂದ್ರನ ಮಹಿಷಿಯಾದ ದೇವೀರಾಂಬೆಯ ಅಪೇಕ್ಷೆಯಂತೆ ಪ್ಲವ ಸಂವತ್ಸರದಲ್ಲಿ ಎಂದರೆ ಕ್ರಿ. ಶ. ೧೮೪೧ ರಲ್ಲಿ ಸೇರಿಸಿದುದಾಗಿಯೂ ಹೇಳಿದ್ದಾನೆ. ಈ ಬಗೆಗೆ ಏತದ್ಗ್ರಂಥವನ್ನೂ, ಕವಿಚರಿತ್ರೆಯನ್ನೂ ನೋಡುವುದು. ಅಲ್ಲದೆ ಕವಿ ವಿಷಯವಾಗಿ ಹಿಂದಣ ೩೮೮ ನೆಯ ನಂಬರನ್ನೂ ನೋಡಬಹುದು.

ಈ ಪ್ರತಿಯ ಕೆಲವು ಅಧಿಕಾರಗಳ ಕೊನೆಯಲ್ಲಿ "ವಿಬುಧೇಂದು ವಿರಚಿತೆ ರಾಜಾವಳೀ ಸಾರದೊಳ್" ಎಂದೂ ಮತ್ತೆ ಕೆಲವೆಡೆ "ವಿಬುಧೇಂದು ದೇವಚಂದ್ರ ವಿರಚಿತ" ಎಂದೂ ಇನ್ನು ಕೆಲವೆಡೆ "ಮಲೆಯೂರದೇವ ಚಂದ್ರ ಪಂಡಿತ ವಿರಚಿತ" ಎಂದು ಬರೆದಿವೆ.

No. 1287. ರಾಮಾನುಜ ವಿಜಯ by ದೊಡ್ಡ ತಿಮ್ಮದಾಸ-

RĀMĀNUJA VIJAYA BY DOḌḌATIMMADĀSA.

Substance, palm-leaf. Size, 11 5/8 × 1 1/8 inches. Pages, 316. Lines, 4 to 7 on a page. Extent, 2,100 granthas. Character, Kannada. Condition, injured. Appearance, old. Mode of writing, fair.

Incomplete.

A prose work describing the life of Rāmānujācārya and his system of philosophy. The author is Doḍḍatimmadāsa, son of Doḍḍatimmadāsa. For details see extracts below.

Beginning :

. . . . ಂಬಲ್ಲಿಗೆ. ಪ್ರಕರಣ ೧೩ ಕ್ಕಂ ಮಂಗಳ ಮಹಾ ಶ್ರೀ.—

ಕಂದ॥ ಕಮಲಾಲಯ ಸುಪ್ರಿಯಂ ।
ಕಮಲಶರಂ ಕಮಲಸುತನ ಪಡೆದ ಪವಿತ್ರಂ ॥
ಕಮಲಾಪ್ತ ಕೋಟಿ (ತೇಜಂ) ।
ಕಮಲಕರಂ ಪೂರ್ಣ ಚೆಲ್ವ ವೆಂಕಟ ರಮಣಾ ॥

ಮುಂದಣ ಕಥಾ ಪ್ರಸಂಗ ॥—ಹೇ ಮಹಾ ದೇವನೆ, ಸಕಲ ಲೋಕ ರಕ್ಷಕನೆ ಶ್ರೀ ಗೌರೀ ನಾಥನೇ! ಯತಿರಾಜರು ಶ್ರೀರಂಗನಾಯಕರ ಸನ್ನಿಧಿಯಲ್ಲಿ ಬಿಜಯಮಾಡಿರ್ದರು ಎಂದು ನನಗೆ ಬುದ್ಧಿಗಲಿಸಿದರಲ್ಲಿ ಯತಿರಾಜರು ಸಕಲ ಮಾನ್ಯವಿಲಸದ್ಗೋಷ್ಠಿಯಿಂದ ಪರವಾದಿಗಳ ಕೂಡೆ ತರ್ಕಮಂ ಮಾಡಿಯಾನು ಎಂದು ಕೃಪೆಮಾಡಿದಿರಿ. ಅವರ ಮಹಿಮೆಯನ್ನು ವಿಸ್ತರಿಸಿ ಬುದ್ಧಿಗಲಿಸಬೇಕು ಎಂದು ಬಿನ್ನಪಂಗೆಯ್ದ ನಾರದ ಮುನೀಶ್ವರಂಗೆ ಪೇಳುತಿರ್ದನದೆಂತೆಂದೊಡೆ :—

ಕೇಳೈ ನಾರದ ಮುನೀಶ್ವರನೆ! ಯತಿರಾಜರು ಶ್ರೀ ರಂಗದಲ್ಲಿ ಸಕಲ ಶಿಷ್ಯರು ಸಹಾ ಸುಖದಿಂದಿರುತ್ತಾ ಇರ್ದು ಸಮನಂತರದಲ್ಲಿ ಶ್ರೀ ರಂಗದಿಂದ ಒಬ್ಬ ದ್ವಿಜೋತ್ತಮನು ಉತ್ತರ ಯಾತ್ರೆಯಂ ಪೋಗಿರ್ದು ಯಜ್ಞಮೂರ್ತಿಗಳಿರ್ಪಂಥಾ ಸ್ಥಳಕ್ಕೆ ಹೋಗಿ ಅಲ್ಲೇ ನದೀತೀರದಲ್ಲಿ ಸ್ನಾನವಂ ಮಾಡುತ್ತಿರಲು ಶ್ರೀ ಯಜ್ಞಮೂರ್ತಿಗಳ ಶಿಷ್ಯವರ್ಗವು ಸ್ನಾನಕ್ಕೆ ಬರಲು ಈ ಯಾತ್ರಾ ಮಾರ್ಗವಾಗಿ ಬಂದ ಬ್ರಾಹ್ಮಣೋತ್ತಮನು ಬಹು ಶಾಸ್ತ್ರಯುಕ್ತದಿಂ ಪ್ರಾಜ್ಞನಾಗಿ

ಇವರ ಕೂಡೆ ವಾಗ್ಜಾಲದಿಂ ಪ್ರಸಂಗಮಂ ಮಾಡಲು ಆ ಯಜ್ಞಮೂರ್ತಿ ಶಿಷ್ಯರು ಏ ದ್ವಿಜೋತ್ತಮನೇ ನೀವು ಮಹಾ ಪ್ರಾಜ್ಞರು . . . . . ಎಂದು ಕೇಳಲು ನಾನು ದಕ್ಷಿಣ ದೇಶದಿಂ ಬಂದೆನೆನಲು ಆ ದೇಶದಲ್ಲಿ ಪ್ರಾಜ್ಞರಾಗಿದ್ದಂಥ ಸಕಲ ಶಾಸ್ತ್ರ ಸಂಪನ್ನ ರಾಗಿರ್ದಂಥ ವಿದ್ವಾಂಸರುಂಟೇ ಎಂದು ಕೇಳಲು ಆ ದೇಶದಲ್ಲಿದ್ದಂಥ ವಿದ್ವಾಂಸರುಗಳ ಪೇಳಲ್ಶಕ್ಯವೇ ! ಆ ಮ . . . . ಪರಮ ಪದಕ್ಕೆ . . . . ಶ್ರೀ ರಂಗದಲ್ಲಿ ಪರವಾಸುದೇವನ ಸನ್ನಿಧಿಯಲ್ಲಿ ರಾಮಾನುಜರು ಎಂಬ ಮಹಾತ್ಮರು ಷಡ್ದರ್ಶನ ಸ್ಥಾಪನ . . . . . ರ್ಯರೆಂಬ ಬಿರುದಂ ಪೊಗಳಕೊಳ್ಳುತ್ತೆ ಲಕ್ಷೋಪಲಕ್ಷ ಶಿಷ್ಯಾವಳಿ ಸಮೇತವಾಗಿ ವಾದಿಯೆಂಬಂಥ ಮದಾಂಧಗಜಕ್ಕೆ ಸಿಂಹೋಪಮಾನದಿಂ ಮಾಯಾವಾದಿ ಕೋಲಾಹಳ ಮಂತ್ರವಾದಿ ಭಯಂಕರ, ನಿಬಿಡಾಂಧಕಾರ ಎಂಬ ವಾದಿಗೆ ಪ್ರಚಂಡ ಸೂರ್ಯೋಪಮಾನ, ವಾದಿಯೆಂಬಂಥ ವನಕ್ಕೆ ದವಾನಲೋಪಮಾನ, ವಾದಿಯೆಂಬ ಸಮುದ್ರಕ್ಕೆ ತೀವ್ರ ಶರೋಪಮಾನ ದಿಂದೆ ತಮಗೂ ತಮ್ಮ ಭಕ್ತರಿಗೂ ಇದಿರೆ ಇಲ್ಲಾ ಎಂದು ಬಿರುದಾವಳಿಯಂ ಪೊಗಳಿಸಿಕೊಳ್ಳುತ್ತಾ ಬಿಜಯಂಮಾಡಿದ್ದಾರೆ.

* * * * *

ಏ ಯತಿರಾಜರೇ ಈತನೆ ಕೃತಾರ್ಥನು ದೇವರ ಕೃಪೆ . . . . ಹೆಸರ ಹೇಳದ ಹಾಗೆಲ್ಲ ಮುಕ್ತಿಯುಂಟು ಎಂದು ಬಹು ಆಹ್ಲಾದ ಗೊಂಡು ಎಂಬೆರುಮಾನಾರೆ ! ನಮ್ಮಾಳ್ವಾರು ಪಾಡಿದ ನೂರೆಂಟು ತಿರುವಡಿಯುಂಟು. ದೇವರು ಕೃಪೆಯಿಂದ ಅಡಿಯನಿಗೆ ಅರುಳ್ಸೆಯ್ಯ ಬೇಕು—ಎಂದು ಬಿನ್ನಹ ಮಾಡಲು, ಕೃಪೆಯಿಂದ ನೂಱೆಂಟು ತಿರುವಡಿ ಬುದ್ಧಿಗಳಿಸುತ್ತಿದ್ದರು ಎಂದು ಶ್ರೀ ಮಹಾದೇವನು ನಾರದ ಮುನೀಶ್ವರಂಗೆ ಉಪದೇಶಿಸಿದನು.

Colophon :

ಸ್ವಸ್ತಿ ಸಮಸ್ತ ಶ್ರೀಮದ್ರಾಮಾನುಜಾಚಾರ್ಯರ ಮತ ಸಂಪ್ರದಾಯ ಪ್ರಿಯ ಶಿಷ್ಯನಪ್ಪ ಶ್ರೀ ಲಕ್ಷ್ಮೀರಮಣ ಶ್ರೀಪಾದ ಭಕ್ತಿಯುಕ್ತ . . . . . . ಲೋದ್ಭವ ದೊಡ್ಡ ತಿಮ್ಮದಾಸನ ಕುಮಾರ ದೊಡ್ಡತಿಮ್ಮದಾಸ ವಿ(ರಚಿತಮಪ್ಪ ರಾಮಾನುಜ ವಿಜಯ ದೊಳ್ ಶ್ರೀರಂ)ಗ ಮಾಹಾತ್ಮ್ಯವೆಂಬ ಕೈವಲ್ಯ ಚಿಂತಾಮಣಿಯಲ್ಲಿ ಭಕ್ತಿ[ಯುಕ್ತದಿ]ಂದೆ ಬರೆದವರ್ಗೆ ಓದಿದವರ್ಗೆ ಕೇಳದವರ್ಗೆ ಪುತ್ರ ಮಿತ್ರ ಕಳತ್ರ . . . . ಸಿ, ಆಯುರಾ ರೋಗ್ಯೈಶ್ವರ್ಯದಿಂ ಧರ್ಮಾರ್ಥಕಾಮಾದಿಗಳನನುಭವಿಸಿಯುವರ ಪಿತೃಪಿತಾಮಹ ಪ್ರಪಿ ತಾಮಹಾದಿಗಳು ಸಕಲ . . . . . ನದೀ ಸ್ನಾನಾಶ್ವಮೇಧ ಮುಖ್ಯನಿ . . . . . . ಗಿ ಶ್ರೀಮನ್ನಾರಾಯಣನ ಶ್ರೀಪಾದಪದ್ಮ ಸನ್ನಿಧಿಯಲ್ಲಿ ನಿತ್ಯಮುಕ್ತರ . . . . ಕ್ತಿ ಸಾಮ್ರಾಜ್ಯ ಧುರೀಣನಾಗಿ ಪ್ರೊಪ್ಪುತ್ತಿರ್ಪರು ಎಂಬಲ್ಲಿಗೆ ಪ್ರಕರಣ ೧೪ ಕ್ಕಂ ಮಂಗಳ ಮಹಾ ಶ್ರೀ :—

ಕಂದ॥ ಚಿನ್ಮಯ ರೂಪಂ ಸತ್ಯ ಸು ।
ಸನ್ಮಾರ್ಗದೊಳಿಸೆವ ಭಕ್ತ ರಕ್ಷಮಹಾತ್ಮ್ಯಂ ॥
[ಮನ್ಮನೋ ಹೃದಯಾಬ್ಜ ನಿಧಿಯಲಿ ।] (?)
(ಮನ್ಮಾನ ಸಾಬ್ಜದಲಿ ನೀಂ) ।
ಸನ್ನುತದಿಂ ನೆಲಸು ಚೆಲ್ವವೆಂಕಟರಮಣಾ ॥

ಮುಂದಣ ಕಥಾ ಪ್ರಸಂಗ :—

End :

ರಾಮಾನುಜರ ಕೂಡೆ ವಿದ್ಗಕ್ಕೆ (?) ಎಪ್ಪತ್ತುಸಾವಿರ ಪಾಷಂಡಿಗಳು . . . . ಏಳುಸಾವಿರ ವಿದ್ವಾಂಸರು ಗಟಗಟಗಳು ವಿಂಗಡಿಸಿ ವಾದವಮಾಡಿ ಜೈಸಲಾರದೆ ಶಿಷ್ಯರಾದರು ಕೆಲರು; ಕೆಲಬರು ಓಡಿಹೋದರು. ರಾಜ್ಯವನಾಳುವ ರಾಜಸಹಿತ ಶಿಷ್ಯರಾಗಿ ಕೃತಾರ್ಥ ರಾದರು. ಶ್ರೀ ಮಧುರೆಯಿಂದ [ಲೂ] ಮಲಾಂಡ [ಕಂ] (ತಿಂ) ಡೊಳ್ ಮಣಿವಣ್ಣರನು ಪರಿಗ್ರಹಿಸಿ ರಕ್ಷಣವಮಾಡಿ, ಆ ಸ್ಥಳದಿಂದ ಶ್ರೀವಿಲಿಪುತ್ತೂರಿಗೆ ಬಿಜಯುಮಾಡಿ ಅಲ್ಲಿ ಶೂಡಿ ಕುಡುತ್ತ ನಾಚ್ಚಾರಮ್ಮನ ಮನೆಗೆ ಬಿಜಯು ಮಾಡಿದರು. ಅಲ್ಲಿ ಅಭಿಮಾನಿಸಿ, ಅಲ್ಲಿಂದ ನಾಗೂರು ನಾಗಪಟ್ಟಣದ ನಾರಾಯಣ ಸ್ವಾಮಿಯನ್ನು ಅಭಿಮಾನಿಸಿ ವೃದ್ಧಾಚಲಕ್ಕೆ ಬಿಜಯು ಮಾಡಿದರು. ವೃದ್ಧಾಚಲದಲ್ಲಿ ಕೇಶವನಾರಾಯಣ ಸ್ವಾಮಿಯನ್ನು ಉದ್ಧರಿಸಿ ಅಭಿಮಾನಿಸಿ ಪಾಷಂಡಿ ಮತಗಳ ನಿರ್ಧೂಮವಂ ಮಾಡಿ, ಅಲ್ಲಿಂದಲು, ಆ ಮಧುರಾಂತಕಕ್ಕೆ ಬಿಜಯುಮಾಡಿ ಮದುರಾಂತಕ್ಕಾದ ಆದಿನಾರಾಯಣ ಸ್ವಾಮಿಯು ರಕ್ಷಿಸಿ, ದ್ವಯಾರ್ಥವನ್ನುಪದೇಶಿಸಿ ಶಿಷ್ಯರಂ ಮಾಡಿಕೊಂಡು ಸಕಲ ಮತಗಳಂ ಖಂಡಿಸಿ ಶ್ರೀ ನಾರಾಯಣ ಸ್ವಾಮಿಯು . . . . .

(ಎ-ಎ.)—

ಅಸಮಗ್ರ. ಪ್ರಕರಣ ೧೪ ರಿಂದಿದೆ. ಮಧ್ಯದಲ್ಲಿ ಕೆಲವು ಓಲೆಗಳು ಅಲ್ಲಲ್ಲಿ ಹೋಗಿವೆ. ಅಲ್ಲದೆ ಪ್ರಕರಣ ಸಂಖ್ಯೆಯನ್ನೂ ಬರೆದಿಲ್ಲ. ಆದುದರಿಂದ ಈ ಪ್ರತಿಯಲ್ಲಿರುವ ಕೊನೆಯ ಪ್ರಕರಣವು ಎಷ್ಟನೆಯದೆಂದು ಹೇಳಲು ಸಾಧ್ಯವಿಲ್ಲವಾಗಿದೆ. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಗದ್ಯದಲ್ಲಿ ಬರೆದಿದೆ. ಪ್ರಕರಣಗಳಾದಿಯಲ್ಲಿ ಒಂದೊಂದು ಕಂದಪದ್ಯವಿದೆ. ಇದರಲ್ಲಿ ರಾಮಾನುಜಾಚಾರ್ಯರ ಚರಿತವೂ ವಿಶಿಷ್ಟಾದ್ವೈತ ಮತವೂ ನಿರೂಪಿತವಾಗಿದೆ. ಈ ವಿಷಯ ಗಳನ್ನು ಶಿವನು ನಾರದನಿಗೆ ಬೋಧಿಸಿದಂತೆ ಕವಿ ಹೇಳಿದ್ದಾನೆ. ಈ ಗ್ರಂಥಕ್ಕೆ ಕೈವಲ್ಯ ಚಿಂತಾಮಣಿಯೆಂಬ ಹೆಸರೂ ಇರುವಂತಿದೆ. ಕವಿಚರಿತ್ರಕಾರರು ಈ ಗ್ರಂಥದ ವಿಷಯವಾಗಿ "ನಮಗೆ ದೊರೆತ ಅಸಮಗ್ರ ಪ್ರತಿಯಲ್ಲಿ 25 ಪ್ರಕರಣಗಳಿವೆ ಪ್ರಕರಣಗಳ ಕೊನೆಯಲ್ಲಿ ಒಂದೊಂದು ಕಂದವಿದೆ" ಎಂದೂ ಕವಿಯ ವಿಷಯವಾಗಿ "ಸೂತಕುಲೋದ್ಭವ" ಎಂದೂ ಕವಿಚರಿತ್ರೆ (ಸಂಪುಟ ೨, ಪುಟ ೫೫೩) ಯಲ್ಲಿ ಹೇಳಿದ್ದಾರೆ. ಇಲ್ಲಿಯ ಈ ಪ್ರತಿಯಲ್ಲಿ ಹೀಗಿಲ್ಲ. ಈ ಬಗೆಗೆ ಉದಾಹೃತ ಭಾಗಗಳನ್ನು ನೋಡುವುದು.

ಕವಿ ದೊಡ್ಡ ತಿಮ್ಮದಾಸನ ಕುಮಾರ ದೊಡ್ಡ ತಿಮ್ಮದಾಸನು. ಇವನ ವಿಷಯವಾಗಿ ಮತ್ತೇನೂ ವಿಶೇಷ ಸಂಗತಿ ಗೊತ್ತಾಗುವುದಿಲ್ಲ.

No. 1238. ರಾಮಾನುಜ ವಿಜಯ by ದೊಡ್ಡ ತಿಮ್ಮದಾಸ.
RĀMĀNUJA VIJAYA BY DOḌḌATIMMADĀSA.

Substance, paper. Size, 10½ × 9⅜ inches. Pages, 146. Lines, 20 on a page. Extent, 2,100 granthas. Character, Kannada. Condition, good. Appearance, new.

Restored in 1916–17 from the manuscripts described above (D. 1237).

Incomplete.

(ವಿ-ವಿ.)—

ಅಸಮಗ್ರ. ಗ್ರಂಥಪಾತವಿದೆ. ಇದು ಹಿಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿಯ ಪ್ರತಿಗೆಯಾಗಿದೆ. ಕಾಗದದ ಪ್ರತಿ.

ಕಥೆಗಳು FABLES.

No. 1239. ಕಥೆಗಳು—ನಳಚರಿತ್ರೆ ಮುಂತಾದುವು.

KATHEGAḶU—NAḶACARITRE MUNTĀDUVU.

Substance, Handmade paper. Size, 8-13/16 × 6½ inches. Pages, 36. Lines, 18 to 20 on a page. Extent, 430 granthas. Character, Kannada. Condition, much injured. Appearance, old. Mode of writing, fair.

Begins on fol. 21 of the manuscript described under No. 1141 ante.

Contains the story of Naḷa incomplete and of Purupuccha, Purūravas, Bhagīrathi, Kārtavīrya, Karṇa, Bali, Mallirāja, Śibi, Mañjakavi (a king), Māndhāta and Jīmūta incomplete. The stories herein are written briefly and described according to the legends of Vīraśaivas.

Beginning :

. . . . . ದ ಮುತುವರ್ಣಿ ನಳಗೆ ಸಂಬಳವ ಕೊಟ್ಟು ಇಟ್ಟುಕೊಂಡಿರಲು ಇತ್ತ ದಮಯಂತಿಯು.

* * * *

ಕ್ಷತ್ರಿಯ ಕುಲವ ಮಾಡಬಹುದೆ ಎಂದು ಹಾರುವಗೆ ಕೇಳಲು ಮಾಡಬಹುದೆನ್ನಲು ಚಿನ್ನದ ಗೋವ ಮಾಡಿಸುತಿರ್ದ್ದನು.

ಪುರುಪುಚ್ಛನು ಎಂಬದಕ್ಕೆ ಕಥೆ.— ಬ್ರಹ್ಮನ ಮಗ ಸ್ವಯಂಭು ಮನು. ಅವನ ಸತಿ ಸತ್ಯರೂಪ ಯಾಕೆಯ ಮಗ ಪ್ರಿಯವ್ರಹ.

* * * *

ಸರ್ವಜನರು ಧರ್ಮಸ್ವರೂಪನು ಸತ್ಯಸದಾಚಾರಿಯೆಂದು ಕೀರ್ತಿಸುವಂತೆ ಇರ್ದು ಪುರು ಪುಚ್ಛರಾಯನು ಸ್ವರ್ಗಕ್ಕೆಯ್ದಿದನು.

ಪುರೂರವ ಭೂಮಿಪಾಲಕ ನೊಪ್ಪುತ್ತಿಹನು ಎಂಬುದಕ್ಕೆ ಕಥೆ.— ಹದಿನಾಲ್ಕು ಮನುಗಳ . . . ಕ . . ವಾದ ಪ್ರಿಯವ್ರತನ ಪುತ್ರರು ಕುರು.

* * * *

ಸುಖದಲ್ಲಿರುತ್ತ ಪುರೂರವಂ ಶಿವನ ಕುರಿತು ತಪವಂಮಾಡಿ ಚಕ್ರವರ್ತಿ ಪದವ ಪಡೆದು ಶಿವಭಕ್ತಿ ಸುಖದೊಳರ್ದು ಸ್ವರ್ಗವ ಪಡೆದನು.

ಸ್ವರ್ಣದಿಯ ತಂದ ಭಗೀರಥನೆಂದು ಕೇಳರಸೆ ಎಂಬುದಕ್ಕೆ ಕಥೆ : ಪೂರ್ವದ ತ್ರೇತಾಯುಗ ದಲ್ಲಿ ಒಂದು ಸರಿ ಗರ್ಭಿಣಿಯಾಗಿ ತನಗೆ ನರಮಾಂಸವ ಬೇಕೆಂದು ಗಂಡಿಗೆ ಪೇಳಲು, ನಾ ತೋಳನೋ ಹುಲಿಯೋ . .

* * * *

ಭಗೀರಥನು ಯಜ್ಞಾದಿ ಮಹಾ ಷೋಡಶದಾನವ ಮಾಡುತ್ತ ಲಕ್ಷದ ಮೇಲೆ ಎರಡು ಸಾವಿರ ಅಯ್ನೂರು ವರುಷ ರಾಜ್ಯವನ್ನಾಳಿ ಸ್ವರ್ಗಕ್ಕೆ ಹೋದನು.

ಜಮದಗ್ನಿಯು ಕೊಂದ ಕಾರ್ತವೀರ್ಯನೆಂಬುದಕ್ಕೆ ಕಥೆ ॥ ಒಂದು ಕಲ್ಪದಲ್ಲಿ ಶಿವನು ಕಶ್ಯಪ ಬ್ರಹ್ಮನ ಮರ್ತ್ಯಕ್ಕೆ ಕಳುಪಿದರೆ ಋಚೀಕ ಮುನಿಯು ಹೆಂಡತಿ ಸತ್ಯವತಿಗೆ ಜಮದಗ್ನಿಯಾಗಿ ಹುಟ್ಟಿದನು.

* * * *

ಪರಶುರಾಮನು ಸಮುದ್ರಕ್ಕೆ ಗುರಿಯಾಗಿ ಸತ್ತುಹೋದನು.

ಉಮಾಪತಿ ಬೇಡಿ ಕವಚವನಿತ್ತು ಹತಕರ್ಣನೆಂಬುದಕ್ಕೆ ಕಥೆ ॥ ಕುಂಭೋದರನೆಂಬ ರಕ್ಕಸನು ತಪವಮಾಡುವಾಗ ಶಿವ ಮೆಚ್ಚಿ ಬೇಡು ಎನಲು ಆಗ ಸಿಳುಕವಚವಪಡೆದು ತೊಟ್ಟುಕೊಂಡು ಲೋಕವನೆಲ್ಲ ಸಂಹರಿಸಿ ಮುನಿಗಳ ಹುಡುಕುತ ಬರುವಾಗ ನರನಾರಾಯಣರೆಂಬ ಮುನಿಗಳು—

* * * *

ಬಳಿಕ ಅರ್ಜುನನಲ್ಲಿ ಪಡೆದ ಪಾಶುಪತಾಸ್ತ್ರವಕೂಗಿ ಗಿರಿಜಾದೇವಿಯರು ಕೊಟ್ಟಂತಾ ಅಸ್ತ್ರದಿಂದ ಕರ್ಣನ ಶಿರವ ಕತ್ತರಿಸಲು ಅವಮೃತ್ಯುವಾದನು ಎಂದು ವೈವಸ್ವತಮನು ಜೈಮಿನಿಗೆ ಹೇಳದನು ।

ಬಲಿ ಮೊದಲಾದವರು ಕೀರ್ತಿವಲ್ಲಭರು ಎಂಬುದಕ್ಕೆ ಕಥೆ .— ಉತ್ತರ ದೇಶದ ಮೇಘಪುರದಲ್ಲಿ ಒಬ್ಬ ವಿಧವೆಯು ಮಗ ತಾಯು ಮಾತಕೇಳದೆ.

* * * *

ಚರ್ಮವನುಟ್ಟುಕೊಂಡು ಆದಿಭೈರವನೆಂಬ ಶಿವನೊಪ್ಪಿದನು.

ಭಲ್ಲಕಿ ಎಂಬ ಪಟ್ಟಣದಲ್ಲಿ ಮಲ್ಲಿರಾಜನೆಂಬ ಶೈವಭಕ್ತನಿಹನು. ಆತನ ಸತಿ ಹೆರುವಾಗ ಮುನ್ನೂರು ಜೋಯಿಸರುಗಳಿಗೆ ಪಟ್ಟವನಿಕ್ಕಿರುವಾಗ ಶಿಶು ಜನಿಸಿತ್ತು.

* * * *

ಸವಾಲಕ್ಷವ ಕೊಟ್ಟು ಗಾರುಡಿಗನ ಮೆಚ್ಚಿಸಿ ಭೋಜರಾಜನುದಾರ ಕೀರ್ತಿಯಿಂದ ಒಪ್ಪುತ್ತಿದನು.

ಉತ್ತರ ದೇಶದಲ್ಲಿ ವಂಜರಿನದಿಯು ತೀರದಲ್ಲಿರ್ದ ರಾಯರತ್ನಾಪುರವೆಂಬ ಪಟ್ಟಣದಲ್ಲಿ ಶಿಬಿ ಚಕ್ರವರ್ತಿ ಎಂಬ ರಾಯನು ಯಜ್ಞಾದಿ ಕರ್ಮಗಳನು ಷೋಡಶಮಹಾದಾನವನು ಮಾಡುವುದ ಕೇಳ.

* * * *

ಆ ಹಕ್ಕಿಯನೂ ತನ್ನ ಮಾಂಸವನೂ ತುಲೆಯುಲಿಕ್ಕಿ ತಕ್ಕಡಿಯಲ್ಲಿ ತೂಗುವಾಗ ಆ ಹಕ್ಕಿಗೆ ಸರಿಬಾರದಿರಲು ಮತ್ತೆ ತನ್ನ ದೇಹವನ್ನೆಲ್ಲಾ ಕೊಯ್ದುಕೊಟ್ಟುಹಾಗೆ ಕೀರ್ತಿಕಾರಣ ವ್ಯರ್ಥತಾ ಸತ್ತುಹೋದನು ॥

ಉತ್ತರ ಭುವನದಲ್ಲಿ ಬಂಗಾಳವೆಂಬ ಪಟ್ಟಣದಲ್ಲಿ ಹುಂಜಕರಿಯೆಂಬ ರಾಜನಿರುತ್ತಿರ್ದ

* * * *

ಮಂತ್ರಿಗೆ ಸಕಲೈಶ್ವರ್ಯವನಿತ್ತು ಷೋಡಶಮಹಾ ದಾನದಿಂದ ಸ್ವರ್ಗವನೆಯ್ದಿದನು.

ಮಾಂಧಾತ ಕೀರ್ತಿಯಿಂದ ಕಟ್ಟನೆಂಬುದಕ್ಕೆ ಕಥೆ — ಇಕ್ಷ್ವಾಕರಾಜನ ಮಗ ಕುಕ್ಷಿ. ಅವನ ಮಗ ಬಾಣ, ಅವನ ಮಗ ಅನರಣ್ಯ. ಅವನ ಮಗ ದುಂದುಮಾರ.

* * * *

ವಿಷ್ಣುವ ಕುರಿತು ಭಕ್ತಿಯ ಮಾಡಿ ಮುಕ್ತಿಯಂ ಕಂಡುದಿಲ್ಲ ॥

ಗಾಂಧರ್ವಪುರದಲ್ಲಿ ಮೇಘವಾಹನ್ನನ ಸುತ ನಂದನಾಥ. ಆತಗೆ ಜೀಮೂತನೆಂಬ ಸುತನಾಗಿ ಸಕಲೈಶ್ವರ್ಯದಲ್ಲಿ ಬಾಳುವಾಗ ಅರಿರಾಯರು ದಂಡೆತ್ತಿಬಂದು ಪುರವಂ ಮುತ್ತಲು.

* * * *

ಮೂವರಿಗೆಯೂ ಪ್ರಾಣವ ಶಿವನಿತ್ತು ಈ ಮೂವರೊಳಗೆ ಆರು ಪರೋಪಕಾರಿಗಳು (ಎಂದು) ಕೇಳಲು ಜೀಮೂತನಿತ್ತ, ಪ್ರಾಣವ ನಚ್ಚರಿ . . . ದು ಹರಿಯಜೇಂದ್ರಾದಿಗಳು ಕೊಂಡಾಡಿದರು.

(ವಿ-ವಿ.)—

ಆದಿಯಲ್ಲಿರುವ ನಳದಮಯಂತೀ ಕಥೆಯು ಅಸಂಪೂರ್ಣವಾಗಿಯೂ ಇತರ ೧೧ ಕಥೆಗಳು ಸಂಪೂರ್ಣವಾಗಿಯೂ ಇವೆ. ಬಹಳ ಶಿಥಿಲ. ತಪ್ಪುಗಳಿವೆ. ಇತರ ವಿಷಯಗಳನ್ನು ಉದ್ಧೃತ ಭಾಗದಿಂದ ತಿಳಿಯುವುದು.

No. 1240. ಬತ್ತೀಸ ಪುತ್ತಳಿ ಕಥೆ by ದೇವಣ.
BATTĪSAPUTTAḶIKATHE BY DĒVAṆA.

Substance, Palm-leaf, Size, 17¼ × 1⅜ inches. Pages, 233. Lines, 5 to 8 on a page. Extent, 3,045 granthas. Character, Kannada. Condition, very much injured. Appearance, old. Mode of writing, good.

Complete.

Describes the stories narrated by the thirty-two images carved to the throne of king Vikramāditya, to King Bhōja, when he went to ascend the throne.

The author is Dēvaṇa or Dēvaṇārya son of Kali Pāṇḍuraṅganātha. He is also the author of Vaidyāmṛta, Vāmanakathe, Śakunaprapañca, and Dakṣādhvaradhvamsa caritre. His date is fixed as about 1725 A.D. For details see extracts below.

Fol. 88-*b* is left blank.

Beginning :

ಮ. ವಿ. ॥ ನೆಗಳ್ದ ಜ್ಜೈನಿಯಿ ನಿಂಪ್ರವೆತ್ತ ಪೊಳಲಂ ಭೋಜೇಂದ್ರ ನಾಜ್ಞಾಪಿಸಲ್ ।
ಮಿಗೆ ಧಾರಾಪುರ ಮೆಂಬ ದೊಂದು ಪೆಸಱಿಂ . . . . . . ।
. . . . ॥
. . . . ಧಾ ।
ರೆಗಳಂ ಖಡ್ಗ . . . . ಸಮಿಸಿದಂ ಶ್ರೀಸೋಮ . . . ಪಂ ॥

* * * *

ನಾನಾತೆರದ ಬೇಟೆಗಳಂ ಪರಿಹರಿದು ಬೇಂಟೆಯಾಡಿ ಮೃಗಂಗಳ ಬಾಧೆಯಂ ಪರಿಹರಿಸಿ, ಬೇಟೆಯಾಡಿ ದಣಿದು ರಾಜೇಂದ್ರಂ ಧಾರಾಪುರದತ್ತ ತಿರಿಗಿ ಬಹುಸಮುಖದೊಳ್ ಬಂದು ಭೂಸ್ಥಳ ದೊಳು ಧಾರಾಪುರದ ಸಮೀಪದಲ್ಲಿ ಮುನ್ನ ಬತ್ತೀಸ ಪುತ್ತಳಿಯ ಸಿಂಹಾಸನವ ನಿಕ್ಷೇಪಿಸಿದ ಸ್ಥಳ ದಲ್ಲಿ ಅಡವಿ ಬೆಳೆದು ಯಿರಲಾಗಿ ಆ ಅಡವಿಯಂ ಕಡಿದು ಹೊಲನಂ ಮಾಡಿ . . . . ರಾಗಿ, ಜೋಳ, ನವಣೆ, ಉಳಗೆ. [ಖಂಮುಗೆ] (ಕಂಬು)? ಸಾವೆ, ಹಾರಕ, ಬರಗು ಮುಂತಾದ ಧಾನ್ಯಂಗಳಂ ಬಿತ್ತಿ ಆ ಹೊಲಕ್ಕೆ ಬಹ ಮೃಗಪಕ್ಷಿಗಳ ಸೋವ ಲ್ಕೆಂದಾ ಸ್ಥಳದಲ್ಲಿ ಮಂಚಿಗೆಯನಿಕ್ಕಿ ಕಾಯ್ದುಕೊ . . . . . ದಿ ಗೊಂಡು ಭೋಜರಾಯಂ ಬರುತಿರಲಾಗಿ ಆ ಬ್ರಾಹ್ಮಣರಾಯ ಪರಿವಾರವಂ ಕಂಡು ಎಲೆ, ಪರಿವಾರವೆ, ಎನ್ನ ಪೊಲನೊಳು ಕಡಲೆ, ಗೋಧಿ, ತೊಗರಿ, ಸಿಕವೆ, ಬೆಳುವಸಿ, ಖಂಮುಗೆ, ರಾಗಿ ಮೊದಲಾದ ಧಾನ್ಯಂಗಳಂ ಮೆದ್ದು . . . . . . ಡಿಸಿ ಮದಾನದ ಮೇಲೆ ಹೋಗಿ ಎಂದು ಕರೆವಿನಂ ಆ ಪರಿವಾರಂ ಬಂದು ಹೊಲನಂ ಪೊಕ್ಕು ಧಾನ್ಯಂಗಳಂ ಪೊಯ್ದು ತಿನ್ನುತ್ತಿರಲು ಮಂಚಿಗೆಯ ನಿಳದು ಪಕ್ಕಿಸೋವಲೆಂದು ಬರುತ್ತಿದ್ದನು. ಈ ಪರಿವಾರವೆನ್ನ ಹೊಲನಂ ಸೂರೆಮಾಡುತ್ತಾರೆ. ಮೋಹಿತೆಯೊ, ಮೋಹಿತೆಯೊ, ವಿಧಿಯೇ ಯೆಂಬ ನಾ ವೇಳೆಯಲ್ಲಿ ಪರಿವಾರ ಕಂಡು ಕಡೆಗೆ ಚೆಲ್ಲಿ ರಾಯನಾಜ್ಞೆಗಂಜಿ ಹೋದರು. ಮತ್ತಾ ಆ ಬ್ರಾಹ್ಮಣನು ಮಂಚಿಗೆಯ ಹತ್ತಿ ಕುಳಿತವನು ಎಲೆ ಪರಿವಾರನೆ, ಬನ್ನಿ ಬನ್ನಿ ಎಂಬನು.

* * * *

ಅವರವರ ಇಂಗಿತಾಕಾರಗಳ ನರಿತು ಅವರವರ ಮನದ ಬಗೆಯರಿದ ದಣಿವಂತೆ ಉಚಿತಾರ್ಥ ವಂ ಕೊಡುವ ಚಮತ್ಕಾರ . . . . . ಮೆಯು ವಿಕ್ರಮಾದಿತ್ಯರಾಯಂಗಲ್ಲದೆ ಬೇರೆ ಮತ್ತೊಬ್ಬರಿಗೂ ಕೊಡದೆಂದು ಪುತ್ತಳಿಯ ಮಂಡಿಯನಿಕ್ಕಿ ಕೈಪೊಯ್ದು ಭಾಪು ಧನಿಕ ನೆಂಬರೆ ಕುಬೇರಗೆಣೆ, ದಾನಿ ಯೆಂಬರೆ ಕರ್ಣಗೆಣೆ, ಸತ್ಯನಿಧಿ ಯೆಂಬರೆ ಹರಿಶ್ಚಂದ್ರಗೆಣೆ, ಭೋಗ ದಲ್ಲಿ ಇಂದ್ರಂಗೆಣೆ, ವಿವೇಕದಲ್ಲಿ ಸ . . . ತಿ, ರೂಪಿನಲ್ಲಿ ಮನ್ಮಥ, ದಾನದಲ್ಲಿ ಬಲೀಂದ್ರ, ಕೀರ್ತಿ ಪ್ರತಾಪ [ವನ] (ಗಳ) ಲ್ಲಿ ಷೋಡಶಮಹಾರಾಯರು ಷಟ್ಚಕ್ರವರ್ತಿಗಳ ಗೆಣೆ - ಕಣಾ ನಮ್ಮ ವಿಕ್ರಮಾದಿತ್ಯರಾಯಂ [ಗೆಂ] (ಎಂ) ದು ಒಂದು ಪುತ್ತಳಿ ನುಡಿದುದು.

ಎರಡನೆಯ ಕಥೆ-

ಕಂ॥ ಕಥೆಯಂ ಪೇಳುವುದನ್ಯ ।
ವ್ಯಥೆಯಂ ಪರಿಹರಿಪ ಸಕಲ ಸಾರಾಂಬುಧಿಯಂ ।
ಮಥಿಸಲ್ಕವ ಶೀತಾಂಶು ।
ಪ್ರಥಿತಮೆನಲ್ ತೋ . . . ಜನರ ಸೊಬಗಿನ ಕಣಿಯೆ ॥

ವ॥ ಅದೆಂತೆನೆ— ಎರಡನೆಯ ದಿನಂ ಭೋಜರಾಜಂ ಸ್ನಾನ ದೇವತಾರ್ಚನೆಯಂ ಮಾಡಿ ಆಜ್ಯ ನಿರೀಕ್ಷಣ, ಕಪಿಲಾದರ್ಶನ, ಗೋದಾನ, ಭೂದಾನ, ವಸ್ತ್ರದಾನ, ಕನ್ಯಾದಾನ ಅನ್ನದಾನ ಮೊದಲಾದ ಷೋಡಶಮಹಾದಾನಂಗಳಂ ಮಾಡಿ ಸುಗಂಧ ಮಾಲ್ಯ ವಸ್ತ್ರಾಭರಣಂಗಳಿಂದ ಅಲಂಕೃತನಾಗಿ ತಾಂಬೂಲಕರವುಳ್ಳವನಾಗಿ ಪ್ರಧಾನ ಚಿತ್ರಶರ್ಮನ ಕೈಲಾಗಿನಲ್ಲಿ ನವರತ್ನಖಚಿತ ಮಾದ ಹಾವುಗೆಯಂ ಮೆಟ್ಟಿ ಉಗ್ಗಡಿಸುವ ಪಾಠಕರ ಸಂಭ್ರಮದಿಂದ ಚಾವಡಿಗೆ ಬಂದು ಬತ್ತೀಸ ಪುತ್ತಳಿ ಸಿಂಹಾಸನಕ್ಕೆ ಕಾಲಿಡಲಾಗ ಎರಡನೆಯ ಪ್ರತ್ತಳಿ ಹೋ ಹೋ ನಿಲ್ಲು. ಎಲೈ ಭೋಜರಾಜ!

ನಮ್ಮ ವಿಕ್ರಮಾದಿತ್ಯನಂತೆ ವೀರ್ಯ ವಿತರಣವುಳ್ಳೊಡೆ ಈ ಸಿಂಹಾಸನವನೇರು; ಅಲ್ಲವೆ ಕೆಲಸಾರು. ಮೀರಿ ಕುಳಿತೆಯಾದರೆ ತಲೆ ಸಹಸ್ರ ಹೋಳಹುದು ಕಣಾ ಎನ್ನಲಾಗಿ ಪ್ರಭಾಪ ಚಿತ್ರಶರ್ಮ ನಿಂತೆಂದಂ.

End :

ಮತ್ತೊರ್ವ ಪಲವುಕಾಲ ತಪಂ ಬಡೆದು ರಸಾಯನ ವಿದ್ಯೆಯುಂ ಅದೃಶ್ಯಕರಣಮುಂ ಪಡೆವೆನೆಂದು ಉತ್ತರ ದಿಶಾಭಾಗದೊಳೊಂದು ಓಂಕಾರ ಕ್ಷೇತ್ರ . . . . . ಮ ಮಹಾ ತಪಸ್ಸಂ ಮಾಡಿಯುದರಿಂ ಫಲಮಂ ಕಾಣದೆ ವಿಕ್ರಮಾದಿತ್ಯಂಗೆ ಪೇಳ್ವೆನೆಂದು ಬರುತಿರ್ಪನ್ನೆಗಂ ಕಂಡಾತಂಗೆ ರಸಾಯನ ರತ್ನಮಂ ಅದೃಶ್ಯಕರಣ ರತ್ನಮಂ . . . . . ದೊಳಿರ್ದ ಕಣಾ ಎಂಬ ಪುತ್ತಳಿಯ ನುಡಿಗೆ ಚಿತ್ರಶರ್ಮಂ ವಿಸ್ಮಿತನಾಗಿ ಭೋಜರಾಜ ನೊಳಂತೆಂದಂ. ಈ ಪುತ್ತಳಿಯ ಸಿಂಹಾಸನಂ ಅಸಾಧ್ಯಮೆಂದು ಪೇಳುತ್ತಂ ಭೋಜರಾಯನ ಕೈವಿಡಿದರಮನೆಯೊಳಗಂ ಪುಗಲೊಡಂ ನೃಪಂ . . . . ಧ್ಯಮಪ್ಪ ವಸ್ತು ಅಸಾಧ್ಯಮಾಯಿತೆಂದು ಬೆಱಗಾಗಿರ್ಪನ್ನೆಗಮಿತ್ತ ಕೈಲಾಸದಿಂದಂ ವೀರಭದ್ರಂ ಮೊದಲಾದ ಗಣೇಶ್ವರರೆಳ್ತಂದಾ ಸಿಂಹಾಸನಮಂ ಕೈಲಾಸಕ್ಕೆ ಕೊಂಡು ಪೋದೊಡಾ ಭೋಜರಾಜಂ ಚಿತ್ರಶರ್ಮಂ ವೆರಸಿ ಇಂತೆಂದಂ ॥

ಕಂ॥ ಆಗದುದೇನಂ ಮಾಡಿದೊ ।
ಡಾಗದು ತನಗಪ್ಪುದಾಗದಿರದೀ ಯೆರಡಂ ॥
ನೀಗಲ್ಬಾರದು ಚಿಂತಾ ।
ಶೋಕಮ ನಪಹರಿಸುವೌಷಧಂ ಪರಿಣಾಮಂ ॥
ಅಹುದಹುದು ಆಗದಾಗದು ।
ಬಹುದುಃಖಂ ಬಡಲು ಬೇಡ ಪುರುಷಂ ಧೃತಿಯಿಂ ॥
ದಿಹುದಿಹುದು ಮುನ್ನ ಬೈಚಿ ।
ಟ್ಟಿಹುದದ ವಿಧಿ ಊದದಿಹುದೆ ವರಕವಿಚಂದ್ರ ॥
ಅಪ್ಪುದಿದು ವಾಗದಿದು ಮೆಂ ।
ದಿಪ್ಪುದ ನೊಱೆದಱಿದು ಚಿಂತೆಯಿಂ . . . . . ನಂನಂ ।
ತಪ್ಪದೆ ಬಾಳ್ವಂ ಬಲ್ಲವ ।
ನಪ್ಪಿಂ ಚಿಂತಿಸಲದೇತಕೆಂಬುದನುಸುರ್ದಂ ॥

ಇಂತೆಂಬ ನೀತಿಯಿಂ ಚಿಂತೆಯುಂ ಬಿಟ್ಟು ಈ ಪುತ್ತಳಿಯ ಸಿಂಹಾಸನಂ ಕೈಸಾರ್ದು ಪೋದುದಕ್ಕೆ ಮನದೊಳನುತಾಪಂಗೊಳ್ಳದೆ ಇಹುದೆಂದು ಚಿತ್ರಶರ್ಮಂ ಸಂತವಿಟ್ಟೊಡಂಬಡಿಸೆ ರಾಜೇಂದ್ರ ಚೂಡಾಮಣಿ ಭೋಜರಾಜಂ ಧಾರಾಪುರದೊಳ್ ಸುಖರಾಜ್ಯಂ ಗೈವುತ್ತಿರ್ದನೆಂಬುದು ಪೂರ್ವಕಥಾ ವೃತ್ತಾಂತಮಂ ಪಾರ್ವತೀದೇವಿಯುವರಿಗೆ ಪರಮೇಶ್ವರಂ ನಿರೂಪಿಸಿದ ಬೃಹತ್ಕಥೆಯುಂ, ಕ್ಷೇಮೇಂದ್ರ ಭೂಭುಜಂ ಪೇಳ್ದ ಪದಿನೆಂಟನೆಯ ಲಂಬಕದ ಬತ್ತೀಸ ಪುತ್ತಳಿಯ ಕಥಾ ಪ್ರಬಂಧಮಂ ಜಗದೊಳ್ ಪರೆದಿಕ್ಕೆ ಸಂತತಂ ॥

ವೃ॥ ವಿನುತ ಬೃಹತ್ಕಥಾ ರಸದೊಳುಳ್ಳ ಜಗಕ್ಕೆ ನೆಗಳ್ತೆ ವೆತ್ತಸಂ— ।
ದನುಪಮ ವಿಕ್ರಮಾರ್ಕನ ಸುವೀರತೆಯುಂ ಕಡುಭೋಗದೇಳ್ಗೆಯುಂ ।

ಜನನುತಮಾದ ಪುತ್ತಳಿಯ ಸತ್ಕಥೆಯಂ ಕವಿಪಾಂಡು - ರಂಗನಾ ।
ಘನ ಸುತ ಭಾಳಲೋಚನ ಕರಂ ಕವಿದೇವನಿದಂನೆಗಳ್ಚಿದಂ ॥
ಸಲೆ ವೈದ್ಯಾಮೃತಮಂ ನೆಗಳ್ತೆವಡೆದಿಪ್ಪ ವಾಮನ ಶ್ರೀಕಥಾ ।
ನೆಲೆಯುಂ ಮೋಹ್ ಶಕುನಪ್ರಪಂಚ ಜಯಮಂ ಬತ್ತೀಸ - ಸತ್ಪುತ್ರಿಕಾ ।
ಸ್ಥಲ ಸಿಂಹಾಸನದೊಂದು ಸತ್ಕಥೆಗಳಂ ದಕ್ಷಾಧ್ವರಧ್ವಂಸನು ।
ಜ್ವಲಚಾರಿತ್ರಮನೆಯ್ದ ವರ್ಣಿಸಿದನೀ ಭಾಳಾಕ್ಷದೇವೋತ್ತಮಂ ॥
ಕುಳಿರ್ವೆಲರಂತೆ ನಂದನದ ಮೂಲವ ತಣ್ಣೆಳಲಂತೆ ಪುಷ್ಪಮಂ ।
ಡಳನವ ಗಂಧದಂತೆ ಪುದಿದಿಂಗದಿರಂತೆ ನಿಜಪ್ರಿಯಾಂಗನೋ ।
ಜ್ವಳ ರತಿಯಂತೆ ಚಂದನದಂತೆ ಇಂದಿನ ಸೌರಭದಂತೆ ಚಾರುಪು— ।
ತ್ತಳಿಯ ಕಥಾ ರಸಂ ಸುಧಿಗಳಂ ತಲೆದೂಗಿಸದೇ ನಿರಂತರಂ ॥
“ಬತ್ತೀಸಪುತ್ತಳಿ ಕಥೆಯಲ್ಲಿ ಮೂವತ್ತೆರಡನೆಯ ಕಥೆಸಮಾಪ್ತಂ ॥

ಮಂಗಳಮಹಾ ಶ್ರೀ—

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪುಸ್ತಕವು. ಅನೇಕ ಓಲೆಗಳು ಮುರಿದಿವೆ. ತುಂಬಾ ಹುಳು ತಿಂದಿದೆ. ಲಿಪಿ ಚೆನ್ನಾಗಿದೆ.

ಇದು ಚಂಪೂರೂಪದಲ್ಲಿ ಬರೆದಿದೆಯಾದರೂ ಗದ್ಯವೇ ಹೆಚ್ಚು. ಇದರಲ್ಲಿ ಕಂದ, ವೃತ್ತ, ಸಂಸ್ಕೃತ ಶ್ಲೋಕಗಳು ಈ ಪದ್ಯಜಾತಿಗಳಿವೆ. ೩೨ ಕಥೆಗಳಿವೆ.

ಗ್ರಂಥ ವಿಷಯ :—ಧಾರಾನಗರದ ಸಮೀಪದ ಒಂದು ಹೊಲದಲ್ಲಿ ಹೊಲಕಾಯುವ ಒಬ್ಬನು ಮಂಚಿಗೆ (ಧಾನ್ಯಗಳ ಕಾವಲಿಗಾಗಿ ಸಜ್ಜುಗೊಳಿಸಿದ ಸಣ್ಣ ಮಂಚ) ಯನ್ನೇರಿರುವಾಗ ಒಂದು ಬುದ್ಧಿಯಿಂದಲೂ, ಇಳಿದಾಗ ಇನ್ನೊಂದು ಬುದ್ಧಿಯಿಂದಲೂ ಇರುವುದನ್ನು ಪ್ರಧಾನ ಚಿತ್ರಶರ್ಮನೊಡನೆ ಬೇಟೆಯಿಂದ ಹಿಂದಿರುಗಿ ಬರುತ್ತಿದ್ದ ಭೋಜರಾಯನು ಕಂಡು ಆಶ್ಚರ್ಯ ಪಡುವನು. ಆ ಮಂಚಿಗೆಯುಳ್ಳ ಸ್ಥಳವು ವಿಶೇಷವುಳ್ಳುದಾಗಿರುವುದೆಂದು ಚಿತ್ರಶರ್ಮನಿಂದ ತಿಳಿದು ರಾಜನು ಆ ಹೊಲವನ್ನು ಮಾಲೀಕನಿಂದ ಕೊಂಡು ಕೊಂಡು ಆ ಸ್ಥಳವನ್ನು ಅಗೆಯಿಸುವನು. ಅಲ್ಲಿ ನವರತ್ನಮಯವಾಗಿ ಮೂವತ್ತೆರಡು ಬೊಂಬೆಗಳುಳ್ಳ ದಿವ್ಯ ಸಿಂಹಾಸನವಿರಲಾಗಿ ಅದನ್ನು ತೆಗೆಯಿಸಿ ತೊಳೆಯಿಸಿ ಆಸ್ಥಾನದಲ್ಲಿಡಿಸಿ ಪೂಜೆಮಾಡಿ ಏರುವುದಕ್ಕೆ ಹೋದಾಗ ಆ ಸಿಂಹಾಸನದಲ್ಲಿದ್ದ ಒಂದನೆಯ ಬೊಂಬೆಯು ಮನುಷ್ಯರಂತೆ ಮಾತಾಡುತ್ತಾ ರಾಜನನ್ನು ಕುರಿತು ಅದು ವಿಕ್ರಮಾದಿತ್ಯರಾಜನ ಸಿಂಹಾಸನವೆಂದೂ, ವಿಕ್ರಮನಷ್ಟು ಸಾಹಸ ಪರಾಕ್ರಮ ವಿತರಣೌದಾರ್ಯ ಧೈರ್ಯಗಳುಳ್ಳವನಾದರೆ ಏರಬಹುದೆಂದೂ, ಮೀರಿ ಏರಿದರೆ ತಲೆ ಸಾವಿರ ಹೋಳಾಗುವುದೆಂದೂ ಹೇಳತಡೆಯುವುದು. ಪ್ರಧಾನನಾದ ಚಿತ್ರಶರ್ಮನು ಭೋಜರಾಜನ ಸಾಹಸ ಮುಂತಾದುವುಗಳ ಬಗೆಗೆ ಹಿಂದೆ ನಡೆದ ಸಂದರ್ಭವೊಂದನ್ನು ಎತ್ತಿ ಕಥಾರೂಪವಾಗಿ ವರ್ಣಿಸಲು ಆ ಬೊಂಬೆಯು (ಪುತ್ತಳಿಯು) ಅದಕ್ಕಿಂತಲೂ ಅತಿಶಯವಾಗಿ ವಿಕ್ರಮಾದಿತ್ಯನ ವಿಷಯದಲ್ಲಿ ಕತೆಯನ್ನು ವಿಸ್ತರಿಸಲಾಗಿ ರಾಜನು ಖಿನ್ನನಾಗಿ ಪ್ರಧಾನನೊಡನೆ ತರಳುವನು. ಹೀಗೆಯೇ ಮೂವತ್ತೆರಡು ದಿನಗಳು ನಡೆಯುವುದು. ಆಗ ರಾಜನು ತನಗದು ಅಸಾಧ್ಯವಾಯಿತೆಂದು ಚಿಂತಿಸುತ್ತಿರುವಷ್ಟರಲ್ಲಿಯೆ ಕೈಲಾಸದಿಂದ ವೀರಭದ್ರ

ಮುಂತಾದ ಪ್ರಮಥಗಣಗಳು ಬಂದು ಆ ಸಿಂಹಾಸನವನ್ನು ಕೈಲಾಸಕ್ಕೆ ತೆಗೆದುಕೊಂಡು ಹೋಗಲಾಗಿ ಚಿತ್ರಶರ್ಮನು ರಾಯನನ್ನು ಸಂತವಿಟ್ಟೊಡಂಬಡಿಸಿದ ಬಳಿಕ ಮನಸ್ಸಿಗೆ ನೆಮ್ಮದಿ ತಂದುಕೊಂಡು ಸುಖದಿಂದ ಎಂದಿನಂತೆ ರಾಜ್ಯಭಾರಮಾಡುವನು, ಎಂದು ಕ್ಷೇಮೇಂದ್ರ ಕವಿಯು ಬೃಹತ್ಕಥಾಮಂಜರಿಯ ೧೮ ನೆಯ ಲಂಬಕದ ಬತ್ತೀಸ ಪುತ್ತಳಿಕಥಾಪ್ರಬಂಧವನ್ನು ಕನ್ನಡಿಸಿದಂತೆ ಕವಿಹೇಳಿದ್ದಾನೆ. ಇದರ ಕೆಲವು ಕಥೆಗಳ ಕೊನೆಯಲ್ಲಿ "ಇಂತೀ ದೇವಣಾರ್ಯ ವಿರಚಿತಮಪ್ಪ ಬತ್ತೀಸ ಪುತ್ತಳಿ ಕಥೆಗಳೊಳ್" ಎಂದಿದೆ. ಈ ಗ್ರಂಥವನ್ನು ಕವಿ ಗದ್ಯರೂಪವಾಗಿಯೂ ಬರೆದಿರುವಂತೆ ತಿಳಿಯುತ್ತದೆ. ಅದು ಮೈಸೂರು ಕಾವ್ಯ ಕಲಾನಿಧಿಯಲ್ಲಿ ಮುದ್ರಿತವಾಗಿದೆ.

ಕವಿ ದೇವಣ ಅಥವಾ ದೇವಣಾರ್ಯನು. ಇವನಿಗೆ ಭಾಳಲೋಚನನೆಂಬ ಅಪರ ನಾಮಧೇಯವೂ ಇದೆ. ಇದು ಒಂದುವೇಳೆ ಬಿರುದಾಗಿರಬಹುದು. ಇವನ ತಂದೆ ಕಲಿ ಪಾಂಡುರಂಗನಾಥನು. ಕವಿ ಬತ್ತೀಸಪುತ್ತಳಿ ಕಥೆಯನ್ನಲ್ಲದೆ ವೈದ್ಯಾಮೃತ, ವಾಮನಕಥೆ, ಶಕುನ ಪ್ರಪಂಚ, ದಕ್ಷಾಧ್ವರಧ್ವಂಸ ಚಾರಿತ್ರ ಇವನ್ನೂ ಬರೆದಿರುವುದಾಗಿ ಹೇಳಿದ್ದಾನೆ. ಕವಿಯ ಕಾಲದ ವಿಷಯವಾಗಿ ಕವಿಚರಿತ್ರೆಯಲ್ಲಿ ಇವನ ಬತ್ತೀಸ ಪುತ್ತಳಿಕಥೆಯ ಒಂದು ಪ್ರತಿಯಲ್ಲಿ ಯಲಹಕ್ಕನಾಡ ಪ್ರಭು ಈ ಕಥೆಯನ್ನು ಕೇಳಿದಂತೆ ಹೇಳಿರುವುದರಿಂದ ಕವಿ ಆತನ ಆಶ್ರಿತನಾಗಿದ್ದಿರಬಹುದು. ಈ ಪ್ರತಿ ಕ್ರಿ.ಶ. 1817 ರಲ್ಲಿ ಬರೆದುದಾದುದರಿಂದ ಗ್ರಂಥವು ಆ ಕಾಲಕ್ಕೆ ಹಿಂದೆ ಹುಟ್ಟಿರಬೇಕು. "ಕವಿಯ ಕಾಲವು ಸುಮಾರು ಕ್ರಿ.ಶ. 1725 ಆಗಿರಬಹುದೆಂದು ಊಹಿಸುತ್ತೇವೆ", ಎಂದಿದೆ.

ಈ ಕಥೆಗೆ ಮೂಲ ಮುಂತಾದ ವಿಷಯವಾಗಿ ಮುಂದೆ ಭೇತಾಳ ಪಂಚವಿಂಶತಿ ಕಥೆಗಳನ್ನು ವರ್ಣಿಸುವೆಡೆಯಲ್ಲಿ ಸೂಚಿಸಿದೆ. ಉಳಿದ ವಿಷಯಗಳನ್ನು ಉದಾಹೃತ ಭಾಗಗಳಲ್ಲಿ ನೋಡಿ ತಿಳಿಯುವುದು.

No. 1241. ಬೇತಾಳ ಪಂಚವಿಂಶತಿ.
BĒTĀḶAPAÑCAVIMŚATI.

Substance, paper. Size, 9-9/16 × 7⅜ inches. Pages 171. Lines, 16 on a page. Extent, 2,480 granthas. Character, Kannada. Condition, much injured. Appearance, old. Mode of writing, good.

Wants pages 49 to 72, 193 and 194, otherwise complete. The last page is marked as 197.

Guṇādhyakavi wrote Bṛhatkathe in Paiśāci language on the lines of this work Kṣēmēndra wrote Bṛhatkathāmanjari in Sanskrit and Sōmadēva-Bhatta wrote Kathāsaritsāgara in eighteen lambakas (chapters), of which the stories described in the work under notice form a part.

This is a campu work with more of prose than poetry. The story runs thus :—One Puṣpadanta, a servant of Śiva, for the fault of overhearing the private conversation of Śiva and Pārvati, was cursed by Pārvati to be born as a Bētāla. A prince in the guise of an ascetic with a view to win over Bētāla by sacrificing King Vikramāditya was taking to that king every day one fruit containing a precious stone. Once at the request of prince ascetic, Vikramāditya goes to Vindhya mountain, and while bring-

ing Bētāla he tells the king, his own previous history and also the wicked intention of the prince. Thereupon the king kills the prince and takes a promise from Bētāla that he will obey the king's commands whenever he wants. The prince is again brought to life by Bētāla and Bētāla freed from his curse goes to Kailāsa, in his real form.

The author of the work is not known.

Beginning :

ಪದ್ಯ ॥ ಕಂ ॥ ಶ್ರೀಮದ್ಗಿರಿಸುತೆಯುರಸಂ ।
ಸೋಮಧರಂ ಮುರ (? ಭುಜ) ಗ ಭೂಷಣಂಹರಿವಂದ್ಯಂ ॥
ಕಾಮಾಂತಕ ನಮಗೀವ (ನೀನೆಮಗೆ) ಮ- ।
ನೋಮುದಮಂ ಕರುಣಿಸೊಲ್ದು ಭಾಗ್ಯೋದಯಮಂ ॥

ಟೀ ॥ ಪರಮೇಶ್ವರನೆ ! ನೀನು ಹಿಮಗಿರಿಯ ಕನ್ನಿಕೆಗೆ ಅರಸಾದವನು ; ಚಂದ್ರನಂ ಶಿರೋಭೂಷಣವಾಗಿ ಧರಿಸಿದವನು ; ಸರ್ಪಗಳೇ ಭೂಷಣವಾಗಿದ್ದವನು ; ವಿಷ್ಣುವಿನ ಕಯ್ಯ ಸ್ತೋತ್ರವ ಮಾಡಿಸಿಕೊಳ್ಳಪಟ್ಟವನು ; ಕಾಮನ ದಹಿಸಿದವನು. ಇಂಥಾ ಪರಮೇಶ್ವರನೆ ! ನೀನು ನಮಗೆ ಒಲಿದು ಸಂತೋಷದಿಂದಲು ಸಕಲ ಭಾಗ್ಯಂಗಳಂ ದಯಪಾಲಿಸೆಂದು ಕವೀಶ್ವರನು ದೇವತಾ ಸ್ತೋತ್ರವಂ ಮಾಡಿದನು. ಪೀಠಿಕೆ ಪ್ರಕರಣ ವಚನವು—

ಮೇರು ಪರ್ವತದ ದಕ್ಷಿಣ ದಿಗ್ಭಾಗದಲ್ಲಿಯು ವೈರಣಾವತಿ ಯೆಂಬ ಪುರದಲ್ಲಿ ವಿಕ್ರಮಾರ್ಕರಾಯನೆಂಬ ರಾಜೇಂದ್ರ ಚಂದ್ರಮಂ ರಾಜ್ಯವನಾಳುತಿರ್ದನಾತನ ವಿಚಿತ್ರ ಸದ್ಗುಣ ಚಾರಿತ್ರಂಗಳೆಂಥಾವೆಂದರೆ.—

* * * *

ಟೀ ॥ ಪುಲಿ ತೊಗಲುಳ್ಳಂಥವನಾಗಿ ಹಣೆಯಲ್ಲಿ ವಿಭೂತಿಯಂ ಧರಿಸಿ ಕೊರಳೊಳು ರುದ್ರಾಕ್ಷಿಗಳಂ ಹಾಕಿ ಎರಡನೆಯ ಪರಮೇಶ್ವರನಂದದಿ ಈ ರಾಯನ ಸಭಾಸ್ಥಾನಕ್ಕಂ ಈ ಶಾಂತಶೀಲನೆಂಬ ಮುನೀಶ್ವರನು ಬಂದು ಎಂದಿನಂತೆ ರಾಯಂಗಾಶೀರ್ವಾದವಂ ಮಾಡಿ ಫಲವಂ ಕಾಣಿಕೆಯಂ ಕೊಡಲಾನೃಪಂ ಯೆಸುಕೊಂಡು ಜೋಗಿಯ ಬದೀಲಿ ಯಿದ್ದಮರ್ಕಟಕ್ಕೆ ಕೊಡಲು ಅದು ತನ್ನ ದಂತಂಗಳಿಂದ ಕಚ್ಚಿ ಭಕ್ಷಿಸುವೆನೆಂದು ಆ ಫಲವಂ ಸೀಳಲು ಅದರೊಳಗೊಂದು ಅನರ್ಘ್ಯವಾದ ರತ್ನಂ ಯಿರಲು ಅದಂ ಕಂಡಾ ಸಭೆಯೆಲ್ಲಾ ಙೂ ಬೆರಗಾಗಿ ಆರತ್ನವಂ ನೋಡಿ ಅದಕ್ಕೆ ರತ್ನ ಜಗತ್ತಿನಲ್ಲಿ ಯಿಲ್ಲವೆಂದು ಕೊಂಡಾಡಿ ಅರಸು ಆ ಮುನೀಶ್ವರನಂ ನೋಡಲಾ ಮುನೀಶ್ವರನಿಂತೆಂದಂ. ಎಲೆ ರಾಯ ! ಮೊದಲು ನಾಕೊಟ್ಟ ಫಲಂಗಳೊಳಗೆ ಇಂಥಾ ಅನರ್ಘ್ಯವಾದ ರತ್ನಂಗಳುಂಟೆಂದು ಪೇಳಲು ಅದಕ್ಕೆ ನೃಪಂ ಬೆರಗಾಗಿ ತನ್ನ ಹಡಪಿಗ ಸುಬುದ್ಧಿಯ ಮುಖಮಂ ನೋಡುವಂ ನೃಪನ ಮನೋಧರ್ಮವಂ ತಿಳಿದು ಬಂಡಾರದ ಮನೆಗೆ ಯಿತ್ತಂದು ಫಲಂಗಳಂ ಹಾಕಿರ್ದ ಪೆಟ್ಟಿಗೆಯಂ ತಂದು ಭೂಪನ ಮುಂದಿಳುಹಲು ಆ ಭೂಪಾಲ ಪೆಟ್ಟಿಗೆಯ ಮುಚ್ಚಳಂ ತೆಗೆದು ಅದರೊಳಗಿರ್ದ ದಿವ್ಯ ರತ್ನಂಗಳಂ ನೋಡಿ ಪರೀಕ್ಷಿಸಿ ಚೋದ್ಯಂ ಬಟ್ಟು ಆ ಹಡಪಿಗಂಗೆ ಆ ರತ್ನಂಗಳೆಲ್ಲವಂ ಕೊಟ್ಟು ಮರ್ಕಟನ ಕೈಯಲ್ಲಿರ್ದ ರತ್ನಮಂ ಜೋಗಿಗೆ ಕೊಟ್ಟು ಅವನಂ ಮನ್ನಿಸಿ ಕಳುಹಿ, ಮುನೀಶ್ವರನ ಕೈಪಿಡಿದು ಏಕಾಂತ ಗೃಹಕ್ಕಂ ಕರೆದೊಯ್ದು ಎಲೈ ಮುನೀಶ್ವರನೆ ! ಇಂತಪ್ಪ ದಿವ್ಯ ರತ್ನಂಗಳಂ ಕೊಟ್ಟು ನನ್ನಿಂದ ನೀನು ಕೊಂಬ ಕಾರ್ಯಂಗಳೇನೆಂದು ಬೆಸಗೊಳಲಾ ಮುನೀಶ್ವರನಿಂತೆಂದಂ—"ಅಹೋ ರಾಯಾ!

ಎನ್ನ ನುಡಿಯಂ ಉದಾಸೀನವಮಂ ಮಾಡದೆ ನಾಹೇಳ್ದುಪದೇಶಕ್ಕೆ ವ್ಯತಿರಿಕ್ತಮಂ ಮಾಡದೆ ಅನುಕೂಲವಂ ಮಾಡಿಕೊಡುವೆನೆಂದೆನಗೆ ನಂಬುಗೆಯು ಕೊಡು " ಎಂದು ರಾಯನ ಕೈಯ್ಯ ನಂಬುಗೆಯಂ ಕೊಂಡು ಮಹಾಹರ್ಷಿತನಾಗಿ ಯಿಂತೆಂದಂ. ಎಲೆ ! ರಾಜೋತ್ತಮಾ ! ಹೇಳುವೆ ಕೇಳು. ಅದೆಂತೆಂದೊಡೆ—ಎನಗೊಂದು ವ್ರತಮುಂಟು. ಅದೇನೆಂದರೆ ಬೇತಾಳ ಸಿದ್ಧನೆಂ ಬಾತನಂ ಎನಗೆ ತಂದುಕೊಟ್ಟೆಯಾದರೆ ನನ್ನ ವ್ರತಮೀಡೇರುವುದು.

* * *

ಎಲೆ ರಾಯಾ ! ಈ ಪಥದೊಳು ನಾವಿರ್ವರೆ ಹೊರ್ತಾಗಿ ಮತ್ತಾರುಯಿಲ್ಲವು, ಮೇಲೆ ನೀನು ರಾಜಕುಮಾರನು. ಈ ಘೋರಾರಣ್ಯದೊಳಿನ್ನಂ ಕಟ್ಟಿಕೊಂಡು ಪಥವಂ ನಡೆಯುತಕ್ಕ ಪಥವು ಸಲೆ ಹೋಗದು. ಹೋಲತ್ತ ಹೊತ್ತುಂ ಹೋಗದು. ಅದು ಕಾರಣ ಪೂರ್ವದಲ್ಲಿ ಶ್ರೀ ಪರಮೇಶ್ವರಂ ಪಾರ್ವತೀದೇವಿಯೊಡನೆ ಪೇಳ್ದ ಬೃಹತ್ಕಥೆಗಳೊಳಗಣ ಕಥೆಯಂ ನಿನಗೊಂದು ನಾಪೇಳ್ವೆ. ನೀನಾ ಕಥೆಯಂ ಕೇಳ್ದು ನಿನ್ನ ಮನದಲ್ಲನುಭವಿಸಿಕೊಂಡು ನೋಡಿ ನಿನಗೊಮ್ಮೆ ತೋಚದಿರಲು ಹೇಳದಿರು. ತೋಚಿಹೇಳದೆ ವಂಚನೆಯಂ ಮಾಡಿದರೆ ನಿನ್ನ ತಲೆ ಸಹಸ್ರ ಹೋಳಹುದೆಂದು ನೃಪಂಗೆ ಕಟ್ಟುಮಾಡಿ ಮುಂದೆ ಕಥಾ ಪ್ರಸಂಗಮಂ ಹೇಳಲಾರಂಭಿಸಿ ಬೇತಾಳಂ ಪೇಳುತಿದ್ದಾನು.

Colophon :

ಇತಿ ಪೀಠಿಕಾ ಪ್ರಕರಣಂ ಸಮಾಪ್ತಂ.

— ೧ ಪ್ರಥಮ ಕಥಾ —

ಎಲ ವಿಕ್ರಮಾದಿತ್ಯರಾಯನೆ ಕೇಳು, ಉತ್ತರ ದಿಕ್ಕಿನಲ್ಲಿ ವಾರಣಾಸಿಯೆಂಬ ಪುಣ್ಯ ಕ್ಷೇತ್ರ ವಿಹುದು. ಅದರ ಮಹಿಮೆಯೆಂತೆಂದೊಡೆ—

* * * *

ನಾ ಪೇಳ್ದ ಕಥೆಗಳ ಸಂದಿಗ್ಧಗಳೆಲ್ಲವಂ ಅರುಹಿದನು. ಈ ಕಥೆಯಂ ಕೇಳ್ದು ತಾನಿಲ್ಲದ ಬಲ್ಲವಿಕೆಯಂ ಮಾಡದಲೆ ಉಳ್ಳುದು ಉಳ್ಳುದಾಗಿ ಪೇಳ್ದನಿವಂ. ಅನೃತವಾದಿಯಲ್ಲವು. ಇವಂ ಸರ್ವಜ್ಞನು. ಇವನಿಂದೆನ್ನ ಶಾಪ ವಿಶಾಪವಾಯಿತೆಂದರಿದು ಇವಂ ಮಹಾ ಪುರುಷನೆಂದು ನೆನೆದವಂಗೆ ಪ್ರಸನ್ನನಾಗಿ ನಾನಿವಂಗೇ ಉಪಕಾರಮಂ ಮಾಳ್ಪೆನೆಂದು ಮನದೊಳು ನಿಶ್ಚೈಸಿ ಬೇತಾಳಂ ವಿಕ್ರಮನೊಡನೆ ಎಲೆ ವಿಕ್ರಮಾರ್ಕರಾಯ ! ನಿನ್ನ ಮೇಲೆ ಈ ಪಾಪಿ ದ್ವಿಜನಾದ ಶಾಂತಶೀಲನೆಂಬ ವಿಪ್ರಂ (?) ಕಪಟ ಕೃತ್ಯಮಂ ನೆನೆದು ನಿನ್ನಂ ಕೊಂದೆನಗೆ ಬಲಿಯನಿಕ್ಕಿ ತಾನೆನ್ನ ನಾಳುವೆನೆಂದು ಮಾಯೋಪಾಯದಿಂದ ನಿನ್ನಂ ನಂಬಿಸಿ ಯೆನ್ನಂ ತನಗೆ ತಂದುಕೊಡ ಕಳುಹಿ ದನು. ನೀನದನರಿಯೆ ಯೆಂದೆಲಾ ವಿಕ್ರಮಂ ಬೆರಗಾಗಿ - ಯಾ - ಬೇತಾಳನಂ ಬೆಸಗೊಳಲಾ ಬೇತಾಳಂ ವಿಕ್ರಮನೊಡನೆ ಯಾ ವೃತ್ತಾಂತವಂ ಸವಿಸ್ತಾರವಾಗಿ ಪೇಳುವೆ ಕೇಳೆಂದಿಂತೆಂದನು.

Colophon :

ಇತಿ ಬೇತಾಳ ಪಂಚವಿಂಶತಿ ಕತೆಗಳೊಳಗಿನ ಇಪ್ಪೆತ್ತೈದನೆ ಕಥೆ ಸಂಪೂರ್ಣವು.

ಕಂದ ॥ ಹರುಷಂಮಿಗೆ ಕೈಲಾಸದ ।
ಪುರದೊಳಗೊಪ್ಪಿರ್ದ ನಭವನದ್ವಯು ರೂಪಂ ॥
ವರ ಕರುಣಾಳಗೆ ಬೇಡಿದ ।
ವರವಂ ಕುಡುತಿರ್ದ ಹಂಪೆಯ ವಿರೂಪಾಕ್ಷಂ ॥

End :

ಈ ಬೇತಾಳಂ ಎಲೆ ವಿಕ್ರಮಾರ್ಕರಾಯ ! ಶಾಂತ ಶೀಲಂಗೆ ವಾಗ್ದತ್ತವಂಮಾಡಿದ ಗಾಂಧರ್ವ ಪದವಿಯು ನೀತೆಗೆದುಕೋ ಎಂದೆನಲಾ ವಿಕ್ರಮ ಧರಣಿಪಂ ಯೆನಗೊಲ್ಲೆನೆನಲು ಯೀ ಬೇತಾಳಂ ಅವಂ ಮಾಡಿದ ವ್ರತ ಸಾರ್ಥಕ ಲಭ್ಯವು ನಿನಗಲ್ಲದೆ ಇನ್ನಾರದಲ್ಲವೆಂದು ಅತ್ತಿ ಬಲಾತ್ಕಾರವಾಗಿ ಗಾಂಧರ್ವ ಪದವಿಯಂ ಕೊಡಲಾಗಲು ದೇವೇಂದ್ರಾದಿ ದೇವತೆಗಳು ಈ ವಿಕ್ರಮ ಧರಣಿಪನ ಮೇಲೆ ಪುಷ್ಪ ವೃಷ್ಟಿಯಂ ಕರೆಸಲು ಇದಂ ನೋಡಿ ಅಷ್ಟದಿಕ್ಪಾಲಕರು ಆಶ್ಚರ್ಯಬಟ್ಟು ರಾಯನಂ ಹರಸಿ ಬೀಳ್ಕೊಂಡು ಪೋಗಲಿತ್ತಲೀ ವಿಕ್ರಮಾರ್ಕ ಭೂಪತಿಯು ತನ್ನ ಪುರಕ್ಕೆ ಬಂದು ತಾಮಾಡಿದ ಅಸಹಾಯ ಶೂರತ್ವವು ಸಾಫಲ್ಯವಾಯಿತೆಂದು ಅತಿಹರುಷದಿಂದ ಧನ ಕನಕ ವಸ್ತುವಾಹನ ಭೂಧಾನ ಗೋದಾನ ಕನ್ಯಾದಾನ ಮೊದಲಾದ ದಾನಂಗಳೆಲ್ಲವಂಮಹಾಭೂರಿಯಾಗಿ ಭೂಸುರರ್ಗೆ ಕೊಟ್ಟು ದೇವೋತ್ಸವಂಗಳಂ ಮಾಡಿಸಿ ಸಕಲ ದೇವರ್ಗಳಿಗೆ ವಂದಿತನಾಗಿ ರಾಜ ಸಿಂಹಾಸನಾ ರೂಢನಾಗಿ ಮುನ್ನಿಗಿಮ್ಮಿಗಿಲಾಗಿ ಮಹಾಧರ್ಮದಿಂದ ದುಷ್ಟನಿಗ್ರಹ ಶಿಷ್ಟ ಪರಿಪಾಲನೆಯಂ ಮಾಡಿಕೊಳ್ಳುತ್ತ ಸಕಲ ರಾಯರ್ಗಳಿಂದಲು ನೃಪಗಜ ಕಂಠೀರವನೆಂದೆನಿಸಿಕೊಂಡು ಮಹಾ ನೀತಿಯಾಗಿ ರಾಜ್ಯಮನ್ನಾಳುತ್ತಿರಲಿತ್ತಲೀ ಬೇತಾಳಂ ರಾಯನ ಸನ್ನಿಧಿಯಲ್ಲಿ ಮುಕುಳಿತ ಹಸ್ತನಾಗಿ ನಿಂದು ಎನಗೇನು ಆಜ್ಞೆಯಂ ಪಾಲಿಸುತ್ತೀರಿ ? ಎಂದು ಬೆಸಗೊಳಲಾ ವಿಕ್ರಮಂ ನಾನು ನಿನ್ನಂ ಸ್ಮರಿಸಿದಾಗಲು ಎನಗೆ ಪ್ರಸನ್ನನಾಗೆಂದು ಅಪ್ಪಣೆಯಂ ಕೊಡಲಾ ಬೇತಾಳಂ ವಿಕ್ರಮಂಗೆರಗಿ ಬೀಳ್ಕೊಂಡು ತನ್ನ ಶಾಪವಿಶಾಪವಾಯಿತೆಂದರಿದು ಶಾಪ ವಿಮುಕ್ತನಾಗಿ ದಿವ್ಯ ಶರೀರವಂ ಧರಿಸಿ ಪುಷ್ಪದಂತನೆಂಬ ನಾಮದಿಂದ ಮುನ್ನಿನ ತನ್ನಿರವಾದ ಕೈಲಾಸಪುರಕ್ಕೆಯ್ದಿ ಶಿವ ನೊಡ್ಡೋಲಗದಲ್ಲಿ ಪ್ರವೇಶಿಸಿ ದೇವದೇವಿಯರಿಗೆ ವಂದನೆಯಂಗೆಯ್ದು ಮುನ್ನಿನ ತನ್ನ ಊಳಿಗದಲ್ಲಿ ಉಮಾಪತಿಯಂ ಭಜಿಸಿಕೊಳ್ಳುತ್ತ ಸುಖದಿಂದಿರ್ದನು.

Colophon :

ಇತಿ ಬೇತಾಳ ಪಂಚವಿಂಶತಿ ಕಥೆಗಳು ಸಂಪೂರ್ಣವು.

ವಿ.ವಿ.—ಸಮಗ್ರ. ಆದರೆ ನಡುವೆ ೪೯ ರಿಂದ ೭೦ ಮತ್ತು ೧೯೩, ೧೯೪ ಈ ಪುಟಗಳಿಲ್ಲ. ಕೊನೆಯ ಪುಟ ಸಂಖ್ಯೆ ೧೯೭. ಶಿಥಿಲವಾದ ಪುಸ್ತಕ. ಲಿಪಿ ಚೆನ್ನಾಗಿದೆ. ಕಾಗದಗಳು ತುಂಬಾ ಹಳೆಯವು.

ಇದು ಚಂಪೂ ರೂಪದಲ್ಲಿದೆ. ಆದರೆ ಗದ್ಯ ಭಾಗವೇ ಹೆಚ್ಚು. ಗ್ರಂಥ ವಿಷಯ.—"ಕೈಲಾಸದಲ್ಲಿ ಪರಮಶಿವನು ಪಾರ್ವತಿಗೆ ರಹಸ್ಯವಾಗಿ ಹೇಳಿದ ಕಥೆಗಳನ್ನು ಶಿವಗಣದಲ್ಲೊಬ್ಬನಾದ ಪುಷ್ಪದಂತನು ಅಗೋಚರನಾಗಿ ಆ ಸ್ಥಳದಲ್ಲಿಯೇ ಇದ್ದುಕೊಂಡು ಕೇಳಿದ ತಪ್ಪಿಗಾಗಿ ವಿಂಧ್ಯಪರ್ವತದಲ್ಲಿ ಬೇತಾಳನಾಗಿರಬೇಕೆಂದು ಪಾರ್ವತಿ ಶಪಿಸುವಳು. ಬೇತಾಳನನ್ನು ಸಾಧಿಸಿ ಗಂಧರ್ವ ಪಟ್ಟವನ್ನು ಪಡೆಯಬೇಕೆಂಬ ಇಚ್ಛೆಯಿಂದ ಒಬ್ಬ ರಾಜಕುಮಾರಯತಿಯು ಶಾಂತಶೀಲನೆಂಬ ಅಭಿಧಾನವಂ ತಳೆದು ನಿತ್ಯವೂ ರತ್ನಗರ್ಭ ಫಲಗಳನ್ನು ವಿಕ್ರಮಾದಿತ್ಯ ರಾಜನಿಗೆ ತಂದು ಕಾಣಿಕೆಯಾಗಿ ಕೊಟ್ಟು ಆಶೀರ್ವದಿಸಿ ಹೋಗುತ್ತಿದ್ದನು. ರಾಜನು ಆ ಮುನಿಯ ಇಚ್ಛೆಯೇನೆಂಬುದನ್ನು ತಿಳಿದು ಅವನಿಗಾಗಿ ಬೇತಾಳನನ್ನು ತರಲು ವಿಂಧ್ಯಪರ್ವತಕ್ಕೆ ಹೋಗಿ ಸಾಹಸದಿಂದವನನ್ನು ಗೆದ್ದು ಹೊತ್ತುಕೊಂಡು ಬರುವಾಗ ಬೇತಾಳನು ಪ್ರಶ್ನ ರೂಪದಿಂದ ಇಪ್ಪತ್ತೈದು ಕಥೆಗಳನ್ನು ರಾಜನಿಗೆ ಹೇಳುವನು. ರಾಜನು ಅವೆಲ್ಲಕ್ಕೂ ಸದುತ್ತರವನ್ನು ಹೇಳಲು ಬೇತಾಳನು ಮೆಚ್ಚಿ ತನ್ನ ಶಾಪವಿಮೋಚನ ಕಾಲವನ್ನರಿತು ತನ್ನ ಪೂರ್ವೋತ್ತರಗಳನ್ನು ರಾಜನಿಗೆ ತಿಳಿಸಿ ಆ

ಮುನೀಶ್ವರನು ವಿಕ್ರಮನನ್ನು ಬಲಿಗೊಡಬೇಕೆಂದು ಎಣಿಸಿರುವ ಕಪಟವನ್ನೆಲ್ಲ. ವಿವರವಾಗಿ ಹೇಳುತ್ತ ಅವನೊಡನೆ ಮುನಿಯು ಬಳಿಗೆ ಬರುವನು. ರಾಜನು ಮಂತ್ರವಾದಿಯಾದಾ ರಾಜಕುಮಾರ ಮುನಿಯನ್ನು ಬೇತಾಳನಿಗೆ ಬಲಿಕೊಟ್ಟು ಗಂಧರ್ವ ಪಟ್ಟವನ್ನು ಪಡೆದು ಬೇತಾಳನಿಂದ ಮುನಿಯನ್ನು ಬದುಕಿಸಿ ಅವನ ರಾಜ್ಯಕ್ಕೆ ಕಳುಹಿಸಿಕೊಡುವನು. ಬಳಿಕ ಬೇತಾಳನು ರಾಜನು ನೆನೆದಾಗ ಅವನಿರುವೆಡೆಗೆ ಬಂದು ಅವನಿಚ್ಛೆಯನ್ನು ಸಲ್ಲಿಸುವುದಾಗಿ ಮಾತುಕೊಟ್ಟು ಶಾಪ ವಿಮುಕ್ತನಾಗಿ ನಿಜರೂಪದಿಂದ ಕೈಲಾಸಕ್ಕೆ ಶಿವಸನ್ನಿಧಿಗೆ ತೆರಳುವನು." ಇದರಲ್ಲಿ ಇನ್ನೂ ಅನೇಕ ಚಮತ್ಕಾರಗಳಿವೆ. ಆ ಬಗೆಗೆ ಗ್ರಂಥವನ್ನು ನೋಡುವುದು.

"ಗುಣಾಢ್ಯನೆಂಬ ಕವಿ ಪೈಶಾಚಿಕ ಭಾಷೆಯಲ್ಲಿ 'ಬೃಹತ್ಕಥೆ' ಯನ್ನು ಬರೆದನು. ಅದನ್ನವಲಂಬಿಸಿ ಕ್ಷೇಮೇಂದ್ರನು ಸಂಸ್ಕೃತದಲ್ಲಿ "ಬೃಹತ್ಕಥಾ ಮಂಜರಿ" ಎಂದು ರಚಿಸಿದನು. ಅದನ್ನೆ ಸೋಮದೇವ ಭಟ್ಟನು ಕಥಾ ಸರಿತ್ಸಾಗರವೆಂಬ ಹೆಸರಿಟ್ಟು ಹದಿನೆಂಟು ಲಂಬಕಗಳಾಗಿ ವಿಸ್ತರಿಸಿ ಬರೆದನು." ಅದರಲ್ಲಿ ಈ ಬೇತಾಳ ಪಂಚವಿಂಶತಿ ಕತೆಗಳು ಏಕ ದೇಶದಲ್ಲಿ ಅಡಕವಾಗಿವೆ. ಬೇತಾಳ ಮತ್ತು ವಿಕ್ರಮಾದಿತ್ಯರಿಗೆ ನಡೆದ ಪ್ರಶ್ನೋತ್ತರಗಳು ಹೇಗೆಂಬುದನ್ನು ಉದ್ಧೃತ ಭಾಗಗಳಿಂದ ತಿಳಿಯಬಹುದಾಗಿದೆ. ಈ ಕಥೆಗಳು ಮನೋಹರಗಳಾಗಿಯೂ ಸರ್ವರೂ ಓದಲು ಅರ್ಹಗಳಾಗಿಯೂ ಇವೆ. ಕತೆಗಳು ಪ್ರಪಂಚದ ಅನೇಕ ಭಾಷೆಗಳಲ್ಲಿ ಭಾಷಾಂತರವನ್ನು ಪಡೆದವುಗಳಾಗಿವೆ. ಇವು ಪದ್ಯದಲ್ಲಿಯೂ ವಿರಚಿತವಾಗಿವೆ. ಆ ಬಗೆಗೆ ಮುಂದೆ ನೋಡುವುದು. ಕವಿಯಾರೆಂಬುದು ಇದರಿಂದ ಗೊತ್ತಾಗುವುದಿಲ್ಲ.

No. 1242. ಬೇತಾಳ ಪಂಚವಿಂಶತಿ.

BĒTĀḶA PAÑCAVIMŚATI.

Substance, Palm-leaf. Size, $8\frac{7}{8} \times 1\frac{7}{8}$ inches. Pages, 134. Lines, 4 to 6 on a page. Extent, 700 granthas. Character, Kannada. Condition, injured. Appearance, old. Mode of writing, good.

Incomplete.

Similar to the above. This work contains an introductory portion—not found in the previous work—leading on to the main story about Bētāḷa and Vikramāditya. The stories in this are described as narrated by an image in the throne of King Vikrama to King Bhōja. The name of the author is not known. For particulars see extracts below.

Beginning :

ಶ್ರೀ ಮಹಾಮೇರುವಿ ಪರ್ವತ ದಕ್ಷಿಣದಿಕ್ಕಿನಲ್ಲು ಐವತ್ತಾರು ದೇಶಂಗಳುಂ ಆ ದೇಶಗಳೊಳಗೆ ಕಾಶ್ಮೀರ ದೇಶ ಉಂಟು. ಆ ದೇಶದೊಳಗೆ ಧಾರಾಪುರವೆಂಬ ಪಟ್ಟಣವುಂಟು. ಆ ಪಟ್ಟಣದಲ್ಲಿ ಭೋಜರಾಜನೆಂಬ ಅರಸುಂಟು. ಚಿತ್ರ ಶರ್ಮನೆಂಬಾ ಮಂತ್ರಿ ಸಹಿತ ಸುಖದಿಂದ ರಾಜ್ಯವನಾಳುತ್ತ ಇರಲು, ಒಂದಾನೊಂದುದಿನ ವಿಕ್ರಮರಾಯನು ಪೂರ್ವದಲ್ಲಿ ಏರುತ್ತಿದ್ದ ಸಿಂಹಾಸನವಂತಂದು ತಾನು ಒಡ್ಡೋಲಗವಂ ಕೊಡುವಾ ಹಜಾರದಲ್ಲು ಇರಿಸಿ ಆ ಭೋಜ ಮಹಾರಾಯನು ಶುಚಿರ್ಭೂತನಾಗಿ ಬಂದು ಚಿತ್ರಶರ್ಮ ಮೊದಲಾದ ಮಂತ್ರಿಗಳು ಕಾಳಿದಾಸ ಸಹಿತ ವರರುಚಿ ಮೊದಲಾದ ಕವೀಶ್ವರರು ಸಹಿತ ಎಪ್ಪತ್ತು ಎರಡು ನಿಯೋಗವಂ ಕೂಡಿ ಆ ಭೋಜಮಹಾರಾಯನು ಮೂವತ್ತೆರಡು ದಿನದೊಳ್ ಸಿಂಹಾಸನವನೇರುವೆನೆಂದು ಬರುತಿರಲಾಗಿ ಸಿಂಹಾಸನಕ್ಕೆ

ಸುತ್ತಕುಳಿಸಿ ಮೂವತ್ತೆರಡು ಪುತ್ತಳಿಯುಂಟು. ಅದರೊಳಗೊಂದು ಪುತ್ತಳಿ ಆ ಭೋಜರಾಯನ ಕೂಡೆ ಇಂತೆಂದುದು. ಎಲೆ ಭೋಜಮಹಾರಾಯನೇ ! ಇದು ವಿಕ್ರಮರಾಯನೇರುವ ಸಿಂಹಾಸನ. ಆತನ ಮರ್ಯಾದೆಯಲ್ಲಿ ವಿವರಣ, ವಿತರಣ, ಧೈರ್ಯಗುಣವುಂಟಾ ? ಇಲ್ಲದಿದ್ದರೆ ಬ್ಯಾಡಾ ಎನ್ನಲಾಗಿ ಆದೀತೆಂದು ಪುತ್ತಳಿನುಡಿಯಲಾಗಿ ಚಿತ್ರಶರ್ಮನೆಂಬ ಮಂತ್ರಿಯು ಕೇಳಿ, ಎಲೆ ರಾಯ, ಪುತ್ತಳಿಯ ಕಯ್ಯ ವಿಕ್ರಮರಾಯನ ಕತೆಯಂ ಚೆನ್ನಾಗಿ ಪರಾಕಿಲ್ಲದೆ ಲಾಲಿಪುದೆಂದು ಬಿನ್ನಹ ಮಾಡಲಾಗಿ ಆ ಭೋಜರಾಯನು ವರರುಚಿಯೆಂಬಾ ಕವೀಶ್ವರನ ಮೊಗವಂ ನೋಡಿ ಮನಸಿಗೆ ಚಿಂತೆತೋರಿ ದುಃಖಕ್ಲೇಶ ಇಂತಿವೆಲ್ಲ ಬಂದು ಗ್ರಾಮದಲ್ಲಿ ಸಂತೋಷವಂ ಪಟ್ಟು ನಿಶ್ಚಿತ ಮನಸ್ಕನಾಗಿ ಧೈರ್ಯದೊಳಿರ್ದವಂಗೆ, ಎಣೆಯಿಲ್ಲವಲ್ಲ ಎನ್ನಲಾಗಿ ಆ ವರರುಚಿಯು ಕೇಳಿ ಸಂತೋಷವಂಪಟ್ಟು ಎಲೆರಾಯ, ಧೈರ್ಯಂ ಸರ್ವತ್ರ ಸಾಧನವೆಂಬ ನೀತಿಯುಂಟಾಗಿ ಧೈರ್ಯಕ್ಕೆ ಸರಿಯಿಲ್ಲ. ಆದರೆ ನಾನೊಂದು ಪೂರ್ವ ವೃತ್ತಾಂತವಂ ಪೇಳು [ತಿದ್ದ] (ತ್ತೇ) ನದೆಂತೆನೆ—

* * * *

End :

(ಬೇತಾಳನು ವಿಕ್ರಮಾದಿತ್ಯನಿಗೆ ಹೇಳಿದ ಕೊನೆಯ ಕಥೆ)

ದಕ್ಷಿಣಾವತಿ ಯೆಂಬ ಪಟ್ಟಣದಲ್ಲಿ ಧರ್ಮಸೇನನೆಂಬ ರಾಯನು ಚಂದ್ರಮತಿಯೆಂಬ ಸತಿಯು, ಲಾವಣ್ಯವತಿಯೆಂಬ ಮಗಳು ಸಹ ಸುಖದಿಂದ ರಾಜ್ಯವಂ ಗೆಯ್ಯುತ್ತಿರಲು ಒಂದಾನೊಂದು ದಿವಸ ಅನ್ಯರಾಜ್ಯದರಾಯರು ದಂಡೆತ್ತಿ ಒಂದು ಪಟ್ಟಣಕ್ಕೆ ಮುತ್ತಿಗೆಯಂ ಹಾಕಲಾಗಿ. ಸರ್ವಸ್ವವನ್ನೂ ತೆಗೆದುಕೊಳ್ಳಲಾಗಿ ಆ ಅರಸಿನ ಹೆಂಡತಿ ಮಗಳು ಓಡಿಹೋಗಿ ಒಂದು ಘೋರಾರಣ್ಯವನ್ನು ಸೇರಿಯಿರಲಾಗಿ ಅಲ್ಲಿ ಒಬ್ಬ ರಾಕ್ಷಸ[ನ]ಂ ಕಂಡುಅರಸಿನ ಕೂಡೆ ಯುದ್ಧವಂ ಮಾಡಿ ಆ ಅರಸು ರಾಕ್ಷಸ ಇಬ್ಬರೂಸತ್ತರು. ಆ ತಾಯಿ ಮಗಳು [ಇಬ್ಬರೂ ಅರಣ್ಯವಬಿಟ್ಟುಹೋಗುತ್ತ ಇಬ್ಬರೂ ಬಳಲಿ ನೀರಡಿಸಿ ಒಂದು ಸರೋವರಕ್ಕೆ ಬಂದು ಅಲ್ಲಿ ನೀರಂ ಕುಡಿದು ಶ್ರಮಮಂ ತಂಪಿಸಿಕೊಂಡು ಅಲ್ಲಿ ಇರಲಾಗಿ ಅಲ್ಲಿಗೆ ಪರರಾಜ್ಯದ ರಾಯಂ ಚಂದ್ರಸೇನನೂ ಆತನ ಮಗ . . . . . . ಕ್ರಮವನು ಇಬ್ಬರೂ ಬೇಟೆಯ ನಾಡ . . . . . ಂಗ ಮಂ ಕಂಡು ತಂದೆ ಮಗ ಯಿರ್ವರೂ ಮೃಗದ ಬೆಂಬಳಿಯ ಇರ್ವರೂ ಬಂದು ಮೃಗವಂ ಕೊಂದು ಮಹತ್ತಾಗಿ ಬಳಲಿ ತಾವಿಬ್ಬರೂ ಆ ಸರೋವರಕೆ ನೀರು ಕುಡಿದೇವು ಎಂದು ಬರುತ್ತಿರಲಾಗಿ ಇಬ್ಬರು ಸ್ತ್ರೀಯರ ಹಜ್ಜೆಯಂ ಕಂಡು ಚಿಕ್ಕ ಹಜ್ಜೆಯ ಸ್ತ್ರೀಯಂ . . . . ತನಗೆ ಯೆಂದನು. ದೊಡ್ಡ ಹಜ್ಜೆಯ ಸ್ತ್ರೀಯ ಕು . . . . ತನಗೆ ಯೆಂದನು. ಈ ಮರಿಯಾದೆಯಲ್ಲಿ ತಂದೆ ಮಕ್ಕಳು ಇಟ್ಟುಕೊಂಡು ಹಜ್ಜೆವಿಡಿದರ . . . . . . ಯಂ ವಿಡಿದನು. ಅವರ ತಾಯಿ ಚಂದ್ರಮತಿಯನ್ನು ಪಿಡಿದನು. ತಾಯಿ ದೀರ್ಘವಾಗಿ ಮಗನಿಗೆ . . . . . . ಳು. ಮಗಳು ಸದ್ಯ ತಂದೆಗೆ ಸತಿಯಾದಳು . . . ,

(ವಿ-ವಿ.—)

ಅಸಮಗ್ರ. ಕೊನೆಯಲ್ಲಿ ಸ್ವಲ್ಪಭಾಗ ಹೋಗಿದೆ. ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಹಿಂದಣ ಮತ್ತು ಈ ಪ್ರತಿಗಳಿಗೆ ಕಥಾ ಕಥನ ಕಾರಣ ಮುಂತಾದ ವಿಷಯಗಳಿಗೆ ವ್ಯತ್ಯಾಸಃದೆಯಾಗಿ ಅದನ್ನಿಲ್ಲಿ ಬರೆಯಲಾಗಿದೆ. ಧಾರಾನಗರದ ಭೋಜರಾಜನಾಸ್ಥಾನದಲ್ಲಿ ರಾಜನು ವಿಕ್ರಮಾದಿತ್ಯನ ಸಿಂಹಾಸನವನ್ನೇರುವ ಸಂದರ್ಭದಲ್ಲಿ 'ಧೈರ್ಯಂ ಸರ್ವತ್ರ ಸಾಧನಂ' ಎಂಬುದಕ್ಕೆ ರಾಜನಿಗೆ ವರರುಚಿ ಕವಿ "ಕಸಪೊರಕೆಗಳನ್ನು ಮಾರಿ ಜೀವಿಸುತ್ತಿದ್ದ ಒಬ್ಬನ ಅನುಗ್ರಹಾರ್ಥನಾಗಿ ಅವನಿಗೆ ಬೇಕಾದ ಭಾಗ್ಯವನ್ನು ಕೊಟ್ಟು ಅವನ ಕಸಪೊರಕೆಗಳನ್ನು ಕೊಂಡು

ಇಟ್ಟುಕೊಂಡುದಕ್ಕಾಗಿ ಅದು ಅಮಂಗಳವೆಂದು ಭಾಗ್ಯಲಕ್ಷ್ಮಿ, ಜಯಲಕ್ಷ್ಮಿ, ವರಲಕ್ಷ್ಮಿ, ಪುರುಷ ಲಕ್ಷ್ಮಿ ಇವರು ರಾಜನನ್ನು ಕೈಬಿಟ್ಟರು. ರಾಜನು ಅವರು ಬಿಟ್ಟು ಹೋದರೂ ಲಕ್ಷ್ಯ ಮಾಡದೆ ಧೈರ್ಯ ಲಕ್ಷ್ಮಿಯನ್ನು ಬಿಡದ ಕಾರಣ ಆ ನಾಲ್ವರೂ ಮರಳಿ ಬಂದು ರಾಜನನ್ನೇ ಆಶ್ರಯಿಸಿದರು "—ಎಂಬ ಕಥೆಯನ್ನು ಹೇಳಿದುದಕ್ಕೆ ಭೋಜರಾಜನು ವರರುಚಿಗೆ ಅಮಿತವಾದ ಭಾಗ್ಯವನ್ನು ಕೊಟ್ಟುದಕ್ಕೆ ಮಂತ್ರಿ ಚಿತ್ರಶರ್ಮನು ರಾಯನನ್ನು ಶ್ಲಾಘಿಸಲು ಸಿಂಹಾಸನದ ಪುತ್ತಳಿಯೊಂದು ವಿಕ್ರಮಾದಿತ್ಯನ ಕೀರ್ತಿ ಪ್ರತಾಪಗಳನ್ನು ಪೇಳತೊಡಗಿ ವಿಕ್ರಮನು ಬೇತಾಳನನ್ನು ಹಿಡಿದು ತಂದುದು, ಅವರಿರ್ವರಿಗೂ ನಡೆದ ಕಥೆ ಮುಂತಾದುವನ್ನು ಹೇಳುವುದು. ಈ ಪುಸ್ತಕದ ಕೊನೆಯ ಭಾಗವು ಹೋಗಿದೆಯಾಗಿ ಉಪಸಂಹಾರವು ಹೇಗಿದೆಯೆಂಬುದನ್ನು ಹೇಳಲಾಗುವುದಿಲ್ಲ. ವಿಕ್ರಮನು ಬೇತಾಳನನ್ನು ಸ್ವಾಧೀನಪಡಿಸಿಕೊಂಡುದಕ್ಕೆ ಇದರಲ್ಲಿ ಹೇಳುವುದೇನೆಂದರೆ—

"ಉಜ್ಜಯಿನಿ ಎಂಬ ಪಟ್ಟಣದಲ್ಲಿ ನಮ್ಮ ರಾಯನು ಐಶ್ವರ್ಯ ಸಂಪನ್ನನಾಗಿ ದೇಶದೇಶಕ್ಕೆ ಕೀರ್ತಿವಂತನಾಗಿ ಸುಖದಿಂದ ರಾಜ್ಯವನ್ನಾಳುತ್ತ ಇರಲಾಗಿ ಒಂದು ದಿನ, ಸೂರ್ಯಾಸ್ತಮಯವಾಗಲು ವಿಕ್ರಮರಾಯನು ರಾತ್ರಿಕಾಲ [ವಿಹಹವಂ ಮಾಡುತ್ತ] ಪಟ್ಟಣದ ಬೀದಿ ಬೀದಿ ಕೇರಿ ಕೇರಿಯಲ್ಲಿ ಸಕಲ ಚೋದ್ಯಗಳಂ ನೋಡುತ್ತ ಬರುತ್ತಿರಲಾಗಿ ಮುಂದೆ ಒಂದೆಡೆಯೊಳು ಒಂದು ಚಂಡಿಕೆ ಯಾಲಯದೊಳಗಿರ್ದ ಪರದೇಶಿಗಳೆಲ್ಲರೂ ಹೊರವಂಟು ಹೋಗುತ್ತ ಯಿರಲಾಗಿ ಅವರೊಳಗೊಬ್ಬ ಸಧ್ಧಮನು ಊರ ಹೊರಟು ಬೇಗದಿಂ ಓಡಿಬಂದು ವನವಂ ಪುಗಲಾಗಿ ಆರಾಯಂ ಕಂಡು ಬೆಂಬತ್ತಿ ಬರಲಾಗಿ ಪೋಡಿಹೋದತಾವಲ್ಲಿ ವೃಕ್ಷಂಗಳಾಗಲು ವೃಕ್ಷದ ಮೇಲೆ ಯಾತ ಬೇತಾಳಂಗಳು ಸೇರಿ [ಹವು] (ಹುದನ್ನು) ಆ ಮಹಾರಾಯಂ ಕಂಡು ವಿಸ್ಮಯಂ ಬಟ್ಟು ಮುಂದೆ ನೋಳ್ಪಾಗ ಚಂಡಿಕೆಯಾಲಯಮಿರಲು ಅದರ ಮುಂದೆ ಯೋರ್ವ ದಿವ್ಯಕನ್ಯಕೆ ನವಿಲೋಪಾದಿಯಲ್ಲಿ ನಲಿದಾಡುತ್ತಿರಲು ಅವಳಂ ಕಂಡು ರಾಯಂ ಚೋದ್ಯವಂ ಪಟ್ಟು ಆಕೆಗೆ ಮನಸೋತು ಚಂಡಿಕಾದೇವಿಗೆ ನಮಸ್ಕಾರವಂ ಮಾಡಿ ಅವಳ ಸಮೀಪಕ್ಕೆ ಬರುತ್ತಿರಲಾಗಿ ಅವಳು ತಾಳದ ವನಕ್ಕೆ ಪೊಕ್ಕು ಮಹಾವೀರನಾಗಿ ನೀನಾರಯ್ಯ ಎನಲು ನಾನು ವಿಕ್ರಮನು. ನಿನಗೆ ಮನಸೋತು ಬಂದೆನು. ಎನ್ನಲಾಗಿ ಈಕೆಯು ಉದ್ಯಾನವಂ ಪೊಕ್ಕು ಬಂದಾಗಲಿ ಇವ[ನೆ](ನು) ವೀರನು, ಇವನಿಂದ ಒಂದು ಕಾರ್ಯವ ಕಾಣಬೇಕೆಂದು ಎಲೆ ರಾಯ! ನನ್ನ ಕೂಡೆ ನೆತ್ತವ ನಾ(ಡು) ಎನ್ನಲು ಹಾಗೇ ಆಗಲಿಯೆಂದು ಇರ್ವರೂ ನೆತ್ತವನಾಡಿ ರಾಯಂ ನೆತ್ತವಂ ಸೋತದ್ದರಿಂದ ಈಕೆಗೆ ನಾನು ಸೋತೆನೆ ಎಂದು ವಿಸ್ಮಯಂಪಟ್ಟು ಈಕೆಗೆ ಸೋಲವೆಂತೋ ನೋಡಬೇಕೆಂದು ಎಲೆ ಪ್ರಿಯೆ ನಿನಗೇನು ಅನರ್ಘ್ಯವಾದ ವಸ್ತು ಬೇಕೋ ತಂದು ಕೊಡುವೆ ಎನ್ನಲು ಎಲೆ ರಾಯನೆ ನನಗೆ ಮತ್ತೇನೂ ವಸ್ತು ಬೇಡ. ಪಾತಾಳ ಲೋಕದಲ್ಲಿ ಯಿಪ್ಪತ್ತೈದು ಯೋಜನದಲ್ಲಿ ಒಂದು, ದೊಡ್ಡಿತ್ತಾದ ವಟವೃಕ್ಷವಿದ್ದಿತು. ಅದರ ಮೇಲೆ ಮಹತ್ತಾದಂಥ ಬೇತಾಳನಿದ್ದನು. ಅವನ ಮಾನವರ ಕೈಯ್ಯಲಾಗದು. ನೀನು ಧೈರ್ಯ ಪುರುಷನು. ಆತನ ಕೊಂಡುಬಾ (ಎನಲು ಆ ರಾಯಂ ಯೊಸತಿ ಹೇಳಿದ ಕುರುಹಿನಿಂದ ಬಂದು ಆ ವಟವೃಕ್ಷವಂ ಕಂಡು ಮರದ ಕೊಂಬನೇರಿ [ವಿದ್ಯಾವತರಣೆ] (ವಿದ್ಯೆಯ ಮಹಿಮೆ) ಯಿಂದ ಬೇತಾಳನಂ ಪಿಡಿದು ಹೆಡಗಯ್ಯಂ ಕಟ್ಟಿಕೊಂಡು) ಬೆನ್ನೊಳು ಪೊತ್ತುಕೊಂಡು ಬರುತ್ತಿರಲಾಗಿ ಅದು ಒಂದು ಕತೆಯಂ ಹೇಳಿತು. ಅದೆಂತೆನೆ—"

ಈ ಪ್ರತಿಯ ಆದಿ ಭಾಗವನ್ನು ಮಾತ್ರ ನೋಡಿದರೆ ಬತ್ತೀಸಪುತ್ತಳಿ ಕಥೆಗಳ ಭ್ರಾಂತಿಯನ್ನುಂಟು ಮಾಡುತ್ತದೆ ಭಾಷೆಯು ಸಾಮಾನ್ಯವಾದುದು. ಗ್ರಂಥ ಕರ್ತನಾರೆಂಬುದು ಇದರಿಂದ ಗೊತ್ತಾಗುವುದಿಲ್ಲ.

No. 1243. ಬೇತಾಳ ಪಂಚವಿಂಶತಿ.
BĒTĀḶA PAÑCAVIMŚATI.

Substance, palm-leaf. Size, $11\frac{5}{8} \times$ 1-5/16 inches. Pages, 125. Lines, 4 to 6 on a page. Extent, 742 granthas. Character, Kannada. Condition, injured. Appearance, old. Mode of writing, fair.

Complete in 501 verses.

This is a poem written in Sāṅgatyametre. The third line in each stanza is formed by repetition of the second line of the same in full at the beginning which is a peculiarity. The story herein is similar to that of the works described above (D. Nos. 1241 and 1242).

Beginning :

ಹರಿಯ ಸುತನ ಶಿರವನು ಕರದಲಿ ಪಿಡಿದ ।
ಹರಿಯ ಮಂಡೆಯೊಳಿಟ್ಟು ಬೆಳಗುವ ॥
ಹರಿಯ ಮಂಡೆಯೊಳಿಟ್ಟು ಬೆಳಗುವ ಮುಕ್ಕಣ್ಣ ।
ಹರಗೆ ನಾನೊಲಿದು ಶರಣೆಂಬೆ ॥
ಜನಮೋಹನವೆಂಬ ಪಟ್ಟಣದಧಿಪತಿ ।
ಜನಕನಾತನ ಸುತನಾ ಚಂದ್ರ ॥
ಜನಕನಾತನ ಸುತನಾ ಚಂದ್ರ ಶೇಖರಗೆ ।
ವನಿತೆಯರು ಮೂವರು ಕೇಳ ॥
ಮಡದಿಯೊರ್ವಳಿಗೆ ಮುಡಿಯ ಭಾರಕ್ಕೆ ।
ನಡುವುಡಿವುದು ಮತ್ತೊರ್ವಳು ॥
ನಡುವುಡಿವುದು ಮತ್ತೊರ್ವಳ ಜೊನ್ನವು ।
ಬಿಡದೆ ಸೋಕಲು . . . . . ಳಿಂದ ॥
ಮತ್ತೊರ್ವಳು ಮಂದಾನಿಲ ಸೋಂಕಲು ।
ಚಿತ್ತ ಕೊರಗಿ ಕಂದುವಳೀಗ ॥
ಚಿತ್ತ ಕೊರಗಿ ಕಂದುವಳೀಗ ನಾಲ್ವರೊ ।
ಳುತ್ತಮ ಸುಖಿಯಾರೆಂದೆನೆ ॥
ಈ ಮೂವರು ಸತಿಯರನನುಭವಿಸುವ ।
ಭೂಮಿಪನತಿಸುಖಿಯೆಂದೆನೆ ॥
ಭೂಮಿಪನತಿಸುಖಿಯೆಂದೆನೆ ವೇತಾಳ ।
ತಾಮೆಚ್ಚಿ ಮರದ ಕೊಂಬೆಗೆ ಅಡರಿದ ॥ (?)
ಒಡನೆ ಬೆಂಬತ್ತಿ ವಿಕ್ರಮ ವೇತಾಳನ ।
ಬಿಡದೆ ಬೆನ್ನೊಳು ಪೊತ್ತು ಬರುತಿರೆ ॥
ಬಿಡದೆ ಬೆನ್ನೊಳು ಪೊತ್ತು ಬರುತಿರೆ ಅವನೊಳು ।
ನುಡಿದುದು ಮತ್ತೊಂದು ಕತೆಯ ॥

End :

ವಂಚನೆಯಿಲ್ಲದೆ ವಿಕ್ರಮರಾಯ ಪೇಳಲು ।
ನೀಂ ಚದುರನು ಎಂದು ಪೇಳಲು ॥

ನೀಂ ಚದುರನು ಎಂದು ಪೊಗಳಲು ವೇತಾಳ ।
ಪಂಚವಿಂಶತಿ ಕಥೆ ಮುಗಿದುದು ॥
ಧರೆಯೊಳು ನಿನ್ನಂಥ ದೊರೆಗಳ ಕಾಣೆನು ।
ಗಿರಿಜೆಯಾರಸನು ಏಕಾಂತದಿ ॥
ಗಿರಿಜೆಯರಸನು ಏಕಾಂತದಿ ಪೇಳದ ।
ವರಕಥೆಗುತ್ತ ರ[ವನು] ಕೊಟ್ಟ ॥
ಭೂಮಿಯೊಳುಳ್ಳನರರು ಪೇಳ್ವುದೆಂದರೆ ।
ಸಾಮಾನ್ಯ ವಲ್ಲವೀ ಕೃತಿಯು ॥
ಸಾಮಾನ್ಯವಲ್ಲವೀ ಕಥೆಯನು ತಿಳಿದರೆ ।
ಭೂಮಿಪ ನಿನಗೆಣೆಯಿಲ್ಲೆಂದ ॥
ಧರಣಿಯೊಳಗೆ ಜನಿಸಿದ ಮಾನವರಿಗೆ ।
ಅರಿದಲ್ಲದ ಕಥೆಯು ನಾಪೇಳ ॥
ಅರಿದಲ್ಲದ ಕಥೆಯನು ಪೇಳ ನೆಱೆಮೆಚ್ಚಿ ।
[ನಾನು] (ನೆಱೆ) ಮೆಚ್ಚಿದೆ ಬೇಡಿ ಕೊಳೆನೆ ।
ಬೇಡುವುದೇನು ನಾನುಡಿದ ಮಾತಿಗೆ ।
ಕೋಡಿಯಿಲ್ಲದೆ ವರವೀಯೆನೆ ವೇತಾಳ ।
ರೂಢೀಶನೊಳು ನುಡಿದನು ಕಾಣ ॥
ನಂಬು ಎನ್ನಯ ಭಾಷೆಯ ವಿಕ್ರಮರಾಯ
ಬೆಂಬಳ ಬರುವೆ ನೀ ನೆನೆದಂತೆ ॥
ಬೆಂಬಳ ಬರುವೆ ನೀ ನೆನೆದಂತೆ ಹರಿಬ್ರಹ್ಮ ।
ಶಂಭುವಿನಾಣೆ ನೀ ಕೇಳೆಂದ ॥

Colophon :

ಅಂತು ಕಥೆ ೨೫ ಕ್ಕಂ ಪದನು ೫೦೧ ಕ್ಕಂ ಮಂಗಳ ಮಹಾ ಶ್ರೀ.—

(ವಿ-ವಿ.)—

ಸಮಗ್ರ.—ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ.

ಇದು ಸಾಂಗತ್ಯದಲ್ಲಿ ಬರೆದಿದೆ. ಕಥೆ ೨೫, ಪದ್ಯಗಳು ೫೦೧. ಹಿಂದಣ ಗ್ರಂಥ ಕಥೆಗಳಿಗೂ ಇದರಲ್ಲಿರುವುವುಗಳಿಗೂ ಸ್ವಲ್ಪ ವ್ಯತ್ಯಾಸವು ಕಂಡು ಬರುತ್ತದೆ. ಆ ಬಗೆಗೆ ಈ ಎರಡು ಗ್ರಂಥಗಳನ್ನೂ ನೋಡುವುದು.

No. 1244. ಬೇತಾಳ ಪಂಚವಿಂಶತಿ-
BĒTĀḶA PAÑCAVIMŚATI.

Substance, palm-leaf. Size, 8 × 1¼ inches. Pages, 8. Lines, 6 on a page. Extent, 32 granthas. Character, Kannada. Condition, very much injured. Appearance, old. Mode of writing, fair.

Begins on fol. 1-a. The other works herein are :—(1) Hitōpadēśa 5-a. (2) Pāṇḍavagītā (Skt.) 11a, (3) Candraśēkhara stuti (Skt.) 13a.

Contains some portions of the stories 19 to 21 only.

Same work as that described above (D. 1242).

(ವಿ-ವಿ.)—

ಅಸಮಗ್ರ. ಸಾಂಗತ್ಯದಲ್ಲಿದೆ. ಅತ್ಯಂತ ಶಿಥಿಲವಾದ ಪ್ರತಿ. ಓಲೆಗಳು ಒಂದೊಂದೂ ಮುರಿದಿವೆ. ೧೯. ೨೦, ೨೧ ಈ ಕೆಲವು ಕಥೆಗಳವೆ. ಲಿಪಿ ಚೆನ್ನಾಗಿದೆ. ಇದರೊಡನೆ ಪಾಂಡವ ಗೀತೆ, (ಸಂಸ್ಕೃತ) ಚಂದ್ರ ಶೇಖರ ಸ್ತುತಿ (ಸಂಸ್ಕೃತ) ಇವುಗಳೂ ಇವೆ.

No. 1245. ಶುಕಸಪ್ತತಿ by ಚಿಕ್ಕುಪಾಧ್ಯಾಯ-

ŚUKASAPTATI BY CIKKUPĀDHYĀYA.

Substance, paper. Size, 9⅝ × 7 inches. Pages, 73. Lines, 19 to 23. on a page. Extent, 920 granthas. Character, Kannada. Condition, much injured. Appearance, old. Mode of writing, good.

Incomplete.

Contains from the course of Pīṭhikāsandhi to the end of the 7th story.

Śukasaptati is a well-known collection of 70 moral stories alleged to have been narrated to a king by a parrot. This present work is a rendering of the Sanskrit original described under No. 12212 of the Descriptive Catalogue of Sanskrit Manuscripts, Volume XXI. The value of these stories had been expressed by Mr. Brown for which see under D. No. 837 of the Descriptive Catalogue of Telugu Manuscript, Volume III. The contents of the present work are the same as those of the poetical work by Śarajānāga described under No. 1057 ante.

No. 219 of the D.C. Vol. II of the Kannada manuscripts will give full details regarding the author.

Beginning :

ಶ್ರೇಷ್ಠನುಂಟಾಗಿ ಆತನೆಂತಪ್ಪನು, ಸ್ವಾಮಿ ಕಾರ್ಯದಲ್ಲಿ ಹಿತವನು. ಆಸಕ್ತಿವುಳ್ಳವನು. ಪ್ರತಿ ದಿವಸದಲ್ಲಿಯೂ ರಾಜ ಸನ್ಮಾನವುಳ್ಳಂಥವನು. ಯುದ್ಧರಂಗದಲ್ಲಿ ಹಿಂದಕ್ಕೆ ತಿರುಗದಂಥಾ ಭೃತ್ಯ ಧರ್ಮದಲ್ಲಿ ಆಸಕ್ತಿಯನುಳ್ಳಂಥಾ ನಿತ್ಯವು ರಾಜಾಜ್ಞೆಯಿಂದಲಿ ಸಕಲ ಪ್ರವೃತ್ತಿ ನಿವೃತ್ತಿಗಳ ನಡಸಿಕೊಂಡು ಬರುವಂಥಾ ನೈವೇದಿತಾನ್ನವೆ ಭೋಜನವಂ ಮಾಡುತ್ತ ಇರುವನಾಗಿ ತನ್ನ ಒಡೆಯನು ಅರಸು ಉನ್ನತಾಸನಸ್ಥನಾಗಿ ಇರು[ವು]ತ್ತಾ ಇರಲಾಗಿ ತಾನು ನಮ್ರನಾಗಿ ದೂರದಲ್ಲಿ ಕೈಮುಗಿದು ಕೊಂಡು ಭ್ರೂ ಸಂಜ್ಞೆಯಿಂದಲೇ ರಾಜ ಮನೋಧರ್ಮವನರಿದು ನಿಯೋಗಿಸ್ತ (ಸಿದ) ಉಾಳಿಗವಂ ಮಾಡುತ್ತ, ಶುಚಿತ್ವವನುಳ್ಳಂತಾವನಾಗಿ ದಿವಾಕಾಲದೊಳ್ ಸದಾ ಸೇವಾಧರಿತನಾಗಿ ರಾತ್ರಿಯಲ್ಲಿ ಅರ್ಧ ರಾತ್ರಿಪರಿಯಂತ್ರವು ಇದ್ದು ಒಡೆಯನ ಅನುಜ್ಞೆಯಂ ಪಡೆದು ತನ್ನ ಮನೆಗೆ ಹೋಗುವನು. ಈ ರೀತಿಯಲ್ಲಿ ಭೃತ್ಯ ಲಕ್ಷಣಾ ಲಕ್ಷಿತನಾಗಿ ಇರುವಂತಾ ದೇವದಾಸನೆಂಬ ಹೆಸರುನುಳ್ಳಂಥಾ ಭೃತ್ಯ ಶ್ರೇಷ್ಠನು ಇರಲಾಗಿ ಆತನಿಗೆ ಪತಿವ್ರತಾ ಶಿರೋಮಣಿಯಾದಂತಾ ಒಬ್ಬ ಸ್ತ್ರೀಇಹಳು.

* * * *

Colophon :

ಇತಿ ಶುಕಸಪ್ತತಿ ಕಥಾಸು ಪೀಠಿಕಾ ಪ್ರಕರಣಂ ॥

ಗದ್ಯ ॥

ಇದು ಚತುರ್ಮುಖ ಶಂಕರ ಪುರಂದರ ಪ್ರಮುಖ ಸುರಭುಜಂಗ ಪ್ರಕರ ಮಣಿ ಮಕುಟ ಮಂಜುರುಚಿ ಪಿಂಜರಿತ ಪಾದನಾದ ಯಾದವಗಿರಿ ನಾರಾಯಣ ಪಾದಸೇವಾಧುರೀಣ ಬಿರುದಂತೆಂಬರ ಗಂಡ ರಾಜಾಧಿರಾಜ ರಾಜಪರಮೇಶ್ವರ ಪ್ರೌಢ ಪ್ರತಾಪ ಶ್ರೀ ವೀರನರಪತಿ ಚಿಕ್ಕದೇವ ಮಹಾರಾಜ ಕೃಪಾಲಬ್ಧ ಸರ್ವತಂತ್ರ ಸ್ವತಂತ್ರ ಶ್ರೀ ಚಿಕ್ಕುಪಾಧ್ಯಾಯ ವಿರಚಿತಮಪ್ಪ ಶುಕಸಪ್ತತಿಯೊಳ್ ಪೀಠಿಕಾ ಪ್ರಕರಣಂ ಸಮಾಪ್ತಂ ।

End :

ಆ ವಿಷ್ಣು ದಾಸನು ಸ್ತಂಭದೋಪಾದಿ ಮರ[ಣ]ದೋಪಾದಿ ನಿಂತಿದ್ದು, ಜಿತೇಂದ್ರಿಯನಾದ ಕಾರಣ, ಮನಸ್ಸಿನಲ್ಲಿ ನಿಶ್ಚಲನಾಗಿಯೇ ಇದ್ದನು. ಆ ಸ್ತ್ರೀಯರು ನಾಲ್ವರು ಬೇರೆ ಬೇರೆ ಆಲಿಂಗನವಂಮಾಡಿ ಸ್ತಂಭ ಪ್ರಾಯನಾಗಿ ಇರುವ ವಿಷ್ಣುದಾಸನೆಂಬ ಶೂದ್ರನನ್ನು ಬಿಟ್ಟು ಆಚೆಯಲ್ಲಿ ನಿಂತು, ಬೇರೆ ಬೇರೆ ಒಂದೊಂದು ಮಾತನಾಡಿದರು. ಏನೆಂದು ಎಂದರೆ, ಇವನು ನಪುಂಸಕನು ; ಶೂದ್ರನು, ಬಹು ಪಾಪಾತ್ಮನು, ನಿದ್ರಾಸಕ್ತನು, ಮನ್ಮಥೋದ್ರೇಕ ರಹಿತನು, ಎಂದು ಕೊಂಡು ದೇವ ಗಂಧರ್ವ ಕಿನ್ನರ ಸೇವ್ಯವಾದ ಸ್ವರ್ಗಮಂ ಪ್ರವೇಶಿಸಿದರು. ವಿಷ್ಣು ದಾಸನು ಧರ್ಮಾತ್ಮನಾದ ನಾರಾಯಣ ಯೋಗ ಪ್ರಭಾವದಿಂದ ದುಸ್ತ್ಯಜವಾದ ವಿಷಯಂಗಳಂ ಜಯಿಸಿ ಸೂರ್ಯೋದಯವಾಗುತ್ತಲೇ ತನ್ನ ಮನೆಗೆ ಹೋದನು. ಅಲ್ಲಿ ತಂದೆತಾಯಿಗಳಿಬ್ಬರ ಕೂಡೆ ಈ ಅಪ್ಸರಸ್ತ್ರೀಯರ ಚೇಷ್ಟೆಗಳಂ ಹೇಳಲಾಗಿ ಆ ತಂದೆ ತಾಯಿಗಳೂ ಕಾಮಭಯಮಂ ಮಾಡಿ ಸಾಹಸಯುಕ್ತನಾಗಿ ಇರುವ ಮಗನಂ ನೋಡಿ ಸಂತೋಷವನೆಯ್ದಿದರು ಎಂಬ ಕಥಾ ವೃತ್ತಾಂತಮಂ ಗಿಣಿಯು ವಹ್ನರಾಯನಿಗೋಸ್ಕರ ಗೀರ್ವಾಣಭಾಷೆಯಿಂ ಪೇಳ್ವುದು. ಕೇಳೆಲೆ ರಾಯ ! ಮನಃ ಕ್ಲೇಶವ ಮಾಡುವಂಥಾ ಈ ದುರ್ಬುದ್ಧಿಯಂ ಬಿಡು. ಇಹಪರದಲ್ಲಿ ಫಲಪ್ರದವಿಲ್ಲ. ಸಜ್ಜನರಿಗೆ ನಿಂದಿತವಾದುದು ಎಂದು ಹೇಳಿ ಸುಖದಲ್ಲಿ ಮನೆಗೆ ಹೋಗು. ಈಕೆಯಿಂದ ನಿನಗೆ ಪ್ರಯೋಜನವಿಲ್ಲವೆಂದು ಶುಕವು ಆಡಿದಂಥಾ ವಾಕ್ಯಮಂ ಕೇಳಿ ಉದಯವಾಗುತ್ತಲೇ ನಿರ್ವಾಣ ಹೃದಯನಾದ ಅರಸು ತಿರುಗಿ ತನ್ನರ ಮನೆಗೆ ಹೋದನು.

Colophon :

ಇತಿ ಶುಕಸಪ್ತತಿ ಕಥಾಸು ಸಪ್ತಮ ದಿನಾಲಾಪಾನೀಕಾನಿ ॥

ಮಂಗಳ ಮಹಾ ಶ್ರೀ :—

(ವಿ-ವಿ.)—

ಅಸಮಗ್ರ ಅತ್ಯಂತ ಶಿಥಿಲ. ಪೀಠಿಕಾ ಪ್ರಕರಣದಿಂದ ಏಳನೆಯ ಕಥೆಯ ಕೊನೆಯ ವರೆಗೆ ಇದೆ. ಕವಿ ಚಿಕ್ಕುಪಾಧ್ಯಾಯನೆಂಬವನು. ಚಿಕ್ಕ ದೇವರಾಯನ ಆಸ್ಥಾನದಲ್ಲಿ ಪ್ರಧಾನನಾಗಿದ್ದನು. ಸಂಸ್ಕೃತ ಭಾಷೆಯಲ್ಲಿರುವ ಶುಕಸಪ್ತತಿಯ ಭಾಷಾಂತರವು. ಇವನು ಕಮಲಾಚಲ ಮಾಹಾತ್ಮ್ಯ ಮೊದಲಾದ ಅನೇಕ ಗ್ರಂಥಗಳನ್ನು ಬರೆದ ಪ್ರೌಢನು. 17 ನೆಯ ಶತಮಾನದವನು.

ಎಪ್ಪತ್ತು ಕಥೆಗಳನ್ನು ಗಿಳಿಯು ಹೇಳುವುದರಿಂದ ಈ ಗ್ರಂಥಕ್ಕೆ ಶುಕಸಪ್ತತಿಯೆಂದು ಹೆಸರಾಯಿತು.

No. 1246. ಶುಕಸಪ್ತತಿ by ಚಿಕ್ಕುಪಾಧ್ಯಾಯ.

ŚUKASAPTATĪ by CIKKUPĀDHYĀYA.

Substance, paper. Size, 10-7/16×9-7/16 inches. Pages 70. Lines, 20 on a page. Extent, 920 granthas. Character, Kannada. Condition, fair. Appearance, new. Mode of writing, good.

Restored in 1927–28 from the Ms. described above (No. 1245).

(ವಿ-ವಿ.)—

ಅಸಮಗ್ರ. ಬರೆವಣಿಗೆ ಚೆನ್ನಾಗಿದೆ. ಹಿಂದೆ ವರ್ಣಿತವಾದ ಪುಸ್ತಕದ ಪ್ರತಿಯಾಗಿದೆ.

No. 1247. ಸೌಂದರ್ಯ ಕಥಾರತ್ನ by ರಾಮನೃಪ or ರಾಮೇಂದ್ರ.

SAUNDARYAKATHĀRATNA by RĀMANṚPA or RĀMĒNDRA.

Substance, palm-leaf. Size, 13⅞×1-5/16 inches. Pages, 235. Lines, 5–6 on a page. Extent, 3,020 granthas. Character, Kannada. Condition, much injured. Appearance, old. Mode of writing, fair.

Begins on fol. 11-*a* of the Ms.

The other works herein are :—(1) Dharmanīti, fol. 1-*a*. (2) Kanti-samasyagaḷu, fol. 6-*a*. Begins from the 27th stanzas of the 34th sandhi.

Foll. 1–3, 10, 31, 32, 34, 39, 41, 42, 96, 103, 117, 123, 126, 130–133, 136 and 138 are missing. 140th fol. is the last. Foll. 30-b, 88-b and 89-a are left blank. This written in Tripadi metre describes the stories narrated by the images carved in the throne of King Vikramārka to Citraśarma, the minister of Bhōja. The author Rāmanṛpa was the son of King Cennapa. He holds that it is not relevant to accept difference between ರ and ಱ and ಲ and ೞ in putting Prāsa in poems. Mr. Narasimhacarya is of the opinion that the author belongs to 16th century.

Beginning :

. . . ಯು ಸುಪರೀಕ್ಷಕರು ವಿಚಾರಿಸಿ ॥ ೧೬ ॥
ಬಿಡೆಯೊಂದರೆ ಮಾತ್ರ ಬೆಚ್ಚುಗವಲ್ಲದೆ ।
ಕಡೆಮೊಯಾದಡೆ ರಾಗರಸದಿಂದ ॥
ಕಡೆಮೊಯಾದರೆ ರಾಗರಸದಿಂದ ನೆರೆಕೂಡಿ ।
ನಡೆದೀ ಕೃತಿ ಸುಜನರು ಮೆಚ್ಚೆ ॥ ೧೭ ॥

. . . . . . ಮೆಂಬ ಸೂತ್ರಗಳರಿಯದೆ
ಕೃತಿವೇಳೆನು ರಾಘವಾಂಕಾದಿ ।
ಕೃತಿವೇಳೆನು ರಾಘವಾಂಕಾದಿಗಳು ಸಾ್ರ ।
ಸತೆಗಿಟ್ಟ ರಱಲಱಗಳು ದುಷ್ಟಾ ॥ ೧೮ ॥

ಪದವಿಧಿ ಕನ್ನಡ ಕಂಬಾಸಸು . . . . . .

. . . . ಕಾಣಲೆಂದಡೆ ಶಬ್ದ ॥

ಸೂತ್ರದ ಟೀಗಾಣ ನೆಂದಡೆ ಶಬ್ದ ವಿಸ್ತ್ರಮು ।

ದೊದರುಂಟುರಿ ಪದನೆಸವೆದ ॥ ೧೯ ॥

ನಿರಸವೆಯು ದೋಷಗಳಪ ಶಬ್ದಾನ್ವ ।

ಕಾರಕವ ಕ್ರಿಯನಿಬದ್ಧ ॥

ಕಾರಕವ ಕ್ರಿಯ ನಿಬದ್ಧಗಳು ಬಂದ ।

ಕಾರೆಯುದ್ದ ತಿದ್ದಿ ಸತ್ಕವಿಗಳು ॥ ೨೦ ॥

ಪರ್ರ್ಯಾಯ ವೀಕಬ್ಬಕೆ ನಾಮ ರೂಪ ಸೌಂ ।

ದರ್ರ್ಯ ಕಥಾರತ್ನವೆಂಬುದು ॥

ಸೌಂದರ್ರ್ಯ ಕಥಾರತ್ನವೆಂಬುದ ನೀಬುಧ ।

ವ . . . . ಕ್ಷಿಸಿ ॥ ೨೧ ॥

ನುತ ಚಿನ್ನ ಪಾಖ್ಯ ನೃಪಾತ್ಮಜ ರಾಮಭೂ ।

ಪತಿಗರ್ಭಾಂಬುಧಿ ಚಂದ್ರಮ ॥

ಪತಿಗರ್ಭಾಂಬುಧಿ ಚಂದ್ರಮ ರಾಮೇಂದ್ರ ।

ಕೃತಿವೇಳ್ದನು ಸುಜನರು ಮೆಚ್ಚೆ ॥ ೨೨ ॥

ಅಂತು . . .

End:

ಇದಾನಮ್ಮಯ ವೀರವಿಕ್ರಮ ಪಿತರಣ ।

ದೊದವೆಂದು ಪುತ್ತಳಿ ಪೇಳಲು ।

ಒದವೆಂದು ಪುತ್ತಳಿ ಪೇಳಲು ಕತೆಯಲ್ಲಿ

ಮುದದಿ ಮೂವತ್ತೊಂದು ಮುಗಿದುದು ॥ ೪೪ ॥

. . . . . . ಸೌಂದರ್ರ್ಯ ಕಥಾರತ್ನ ।

ದಾದಿ ತೊಡಗಿ ರಾಮ ನೃಪ ಪೇಳ್ದ ।

ಆದಿ ತೊಡಗಿ ರಾಮ ನೃಪ ಪೇಳ್ದಡೆ ಸಂಧಿ ।

ಯಾದವು ಮೂವತ್ತ ನಾಲ್ಕಲ್ಲಿ ॥ ೪೫ ॥

ಅಂತು ಸಂಧಿ ೩೪ ಕ್ಕಂ ಪದನು ೧೯೨೦ ಕ್ಕಂ ಮಂಗಳ ಮಹಾ ಶ್ರೀ.

* * *

ಪುತ್ತಳಿಯಿಂತಾಡಿದನುಡಿ ಗೇಳುತ್ತ ।

ಚಿತ್ರ ಕರ್ಮನು ತಮ್ಮ ಭೋಜನ ॥

ಕೇಳುತ್ತ ಚಿತ್ರ ಕರ್ಮನು ತಮ್ಮ ಭೋಜನ ।

ಉತ್ತಮ ಕಥೆಗೇಳೆಂದುದು ॥ ೨ ॥

ಧಾರಾಪುರದೊಳು ಭೋಜಮಹೀಶಗ ।

ಭೀರದೊಡ್ಡೋಲಗ ದಿಂದಿರೆ ॥

ಗಭೀರದೊಡ್ಡೋಲಗ ದಿಂದಿರೆ ವರರುಚಿ ।
ಸಾರಕವೀಶ . . . . . . ॥ ೪ ॥
ಆವೇಳೆ ಸಕಲ ಕವೀಶ್ವರರಿದಿರೊಳು ।
ಭೂವರ ಕಾಳಿದಾಸನು ಮುಖರೊಡೆಸಾಗ ।
ನೀವಿನ್ನು ಕೇಳಿ ಬೇಳುವೆ ನೊಂದ ॥ ೫ ॥

ಕ್ಲೇಶದುಃಖ . . . . . ನ್ಯೊವರಿಯಾವಿ ।
ಳಾಸಗಳಾದ ಕಾಲದಿ ಧೈರ್ಯ ।
ವಿಳಾಸಗಳಾದ ಕಾಲದಿ ಧೈರ್ಯದಲಿ ಸಂ ।
ತೋಷಿಪ ನಾವವಗೆಣೆಯಿಲ್ಲ ॥ ೬ ॥

ಎಂದಾ ಮಾತನು ಕೇಳುತ ವರರುಚಿ ।
ಯಾನಂದದಿ ಧೈರ್ಯ . . . .

(ವಿ-ವಿ.)—

ಅಸಮಗ್ರ. ಒಂದನೆಯ ಸಂಧಿಯ ೨೭ ನೇ ಪದ್ಯದಿಂದ ೩೪ ನೇ ಸಂಧಿಯವರೆಗೆ ಸಂಪೂರ್ಣವಾಗಿದೆ. ೩೫ ನೇ ಸಂಧಿಯ ೬ ಪದ್ಯಗಳೂ ಇವೆ. ಇದರಲ್ಲಿ ಒಟ್ಟು ಓಲೆಗಳು ೧೧೯. ಓಲೆಗಳ ಸಂಖ್ಯೆಯು ೪ ರಿಂದ ಆರಂಭಿಸಿ ೧೫೦ ರಲ್ಲಿ ಮುಗಿಸಿದೆ. ಮಧ್ಯದಲ್ಲಿ ೧೦, ೩೧, ೩೨, ೩೪, ೩೯, ೪೧, ೪೨, ೯೬, ೧೦೩, ೧೧೭, ೧೨೩, ೧೨೬, ೧೩೦-೧೩೩, ೧೩೬, ೧೩೮ ಎಂಬ ಸಂಖ್ಯೆಯ ಓಲೆಗಳು ನಷ್ಟವಾಗಿವೆ. 30, 88, 9 ನೆಯ ಓಲೆಗಳ ಒಂದೇ ಪುಟದಲ್ಲಿ ಬರೆದಿದೆ. ತ್ರಿಪದಿ ರೂಪದಲ್ಲಿದೆ.

ಭೋಜರಾಜನ ಮಂತ್ರಿಯಾದ ಚಿತ್ರಕರ್ಮಗೆ ವಿಕ್ರಮಾರ್ಕನ ಸಿಂಹಾಸನವಲ್ಲಿದ್ದ ಪುತ್ತಳಿಗಳು ಹೇಳಿದ ಕಥೆಗಳು ಈ ಗ್ರಂಥದಲ್ಲಿವೆ. ಕವಿ ರಾಮೇಂದ್ರನು. ಪ್ರತಿ ಸಂಧಿಯ ಅಂತ್ಯದಲ್ಲಿಯೂ ರಾಮರಾಯ, ರಾಮನೃಪ, <u>ಕಾಕೊಳಲ</u> ರಾಮೇಂದ್ರ ಮೊದಲಾದ ಅಂಕಿತಗಳಲ್ಲಿ ಯಾವುದಾದರೊಂದು ದೊರೆಯುತ್ತದೆ.

ಕವಿಯ ಕಾಲವು ಸುಮಾರು ಕ್ರಿ. ಶ. 1550 ಆಗಿರಬಹುದೆಂದು ಕವಿ ಚರಿತ್ರೆಯಲ್ಲಿ ಶ್ರೀ ನರಸಿಂಹಾಚಾರ್ಯರು ಬರೆದಿರುವರು.

No. 1248. ಸೌಂದರ್ಯ ಕಥಾರತ್ನ by ರಾಮನೃಪ or ರಾಮೇಂದ್ರ.
SAUNDARYAKATHĀRATNA by RĀMANṚPA or RĀMĒNDRA.

Substance, paper. Size, 10-7/16 × 9⅜ inches. Pages, 158. Lines, 20 on a page. Extent, 3,020 granthas. Character, Kannada. Condition, good. Appearance, new. Mode of writing, not bad.

Restored in 1920–21 from the Ms. described above (D. 1247).

Begins on page No. 13 of the Ms. The other works herein are (1) Kantisamasyagaḷu (1, 1–6). (2) Dharmanīti (pp. 7–12).

(ವಿ-ವಿ.)—

ಅಸಮಗ್ರ. ಹಿಂದೆ ವರ್ಣಿಸಿದ ಪುಸ್ತಕದ ಪ್ರತಿಯಾಗಿದೆ.

RHETORICS.

ಅಲಂಕಾರ.

No. 1249. ಅಪ್ರತಿಮ ವೀರಚರಿತೆ by ತಿರುಮಲಾರ್ಯ.

APRATIMAVĪRACARITE by TIRUMALĀRYA.

Substance, palm-leaf. Size, 13⅝ × 1-11/16 inches. Pages, 150. Lines, 6–7 on a page. Extent, 1,575 granthas. Character, Kannada. Condition, much injured. Appearance, old. Mode of writing, good.

Complete.

This is a treatise on rhetoric in four chapters. First the definitions of the well-known Sanskrit Ālaṅkārikās such as Vāmana, Mammaṭa and Appayyadīṣkita are given. Then the poet in his own words explains and illustrates the definitions. This seems to be a panegyric of Cikadēva alias Apratimavīra Mahārāja of Mysore. The author Tirumalārya who was a court poet and also a minister of Cikadēvarāya, King of Mysore (1672—1704). He is also the author of Cikadēvarājavijaya, Cikadēvarāja vamśāvali, etc. For details regarding the author see extracts below and under No. 1127 ante.

Name of the scribe :—Kṛṣṇappa grandson of [Ōbapati] (Obalapati ?) Ayyangār of Mēlukōṭe.

Beginning :

ಕಂ॥ ಶ್ರೀವರನಖಿಳ ಜಗಜ್ಜ- ।
ನ್ಮಾವನ ಮುಖದಿವ್ಯಲೀಲ ನಾಶ್ರಿತ ಸುಲಭಂ ॥
ದೇವಂ ಚಿಕದೇವೇಂದ್ರಂ ।
ಗಾವಗ ವೊಲ್ದೀಗೆ ಸಕಲ ಸಂಪತ್ತುಗಳಂ ॥ ೧ ॥
ಸಿರಿದರನ ಬಗೆಯೊಳೊಗೆದಾ ।
ಗಿರಿಶನ ಶಿರದಲ್ಲಿ ನೆಲಸಿ ಸನ್ಮಾರ್ಗ ದೊಳೇ ।
ಚರಿಸುವ ಚಂದ್ರನ ವಂಶಂ ।
ಪರಿಶುದ್ಧತೆವೆತ್ತು ನೆಗಳ್ದ್ದ ದೇಸಜ್ಜಗಿಯೇ ॥ ೨ ॥
ಆವಂಶ ದತಿಶಯುಂಗಳ ।
ನಾವಂ ತಿಳದಾತನಲ್ಲ ಪುಟ್ಟಿದ ದೊರೆಗಳ್ ।
ದೇವೇಂದ್ರ ನೆಣೆಗೆ ಸಂದರ್ ।
ಗೋವಿಂದನುಮುದಿಸಿವಂದನಿರ್ವ್ಯಯ್ಯಾಂದಂ ॥ ೩ ॥
ಆ ಕೃಷ್ಣ ವಂಶದೊಳ್ ಮನು- ।
ಜಾಕೃತಿ ವೆತ್ತೆಸೆವ ರಾಜಧರ್ಮವೆನಲ್ಕ- ।
ಪ್ರಾಕೃತ ಚರಿತಂ ವೈರಿನಿ ।
ರಾಕೃತಿ ಕೃತಿ ನೆಗಳ್ದ ನೊಗೆದು ದೊಡದೇವೇಂದ್ರಂ ॥ ೪ ॥

ಆದೊಡದೇವೇಂದ್ರನೊಳ ।
ತ್ಯಾದರದಿಂ ಭವ್ಯಶೀಲ ನಾಶ್ರಿತ ಸುಲಭಂ ।
ಯಾದವಗಿರಿ ನಾರಾಯಣಾ ।
ನಾದಂ ಚಿಕದೇವರಾಯ ವೆಸರೊಳ್ಗ್ವರಂ ॥ ೫ ॥
ಪಿಂತಣ ವಿಕ್ರಮ ನಳದು ।
ಷ್ಯಂತಾತ್ಮಜ ರಂತಿದೇವರಂ ತಪ್ರತಿಮಂ ॥
ತಾಂ ತಳೆದಿಳೆಯುಂ ಧರ್ಮದೊ ।
ಳಂತೆಂಬರ ಗಂಡ ಬಿರುದ ನಾಂತೆಸೆದಿರ್ಕುಂ ॥ ೬ ॥

ವ॥ ಇಂತಪ್ಪ ಚಿಕದೇವ ಮಾರಾಯಂ ಶ್ರೀ ರಂಗಪಟ್ಟಣದೊಳ್ ರತ್ನ ಸಿಂಹಾಸನಾರೂಢನಾಗಿ ಸಾಮ್ರಾಜ್ಯಂ ಗೆಯ್ಯುತ್ತಿರೆ, ಇವನಾ—

ಕಂ॥ ಪಡುವಣ ಮೂಡಣ ತೆಂಕಣ ।
ಗಡಿಗೋಂಟೆಯ ಕಾಪುಗೊಂಡ ಪಡೆವಳರಾಯಾ ॥
ಕಡೆಲ ಕಡೆಲ್ತಡಿ ದೊರೆಗಳ ।
ಪಡೆಯುಂ ಗೆಲ್ದಾರ್ಪಿನಿಂದೆ ಕಪ್ಪಂ ಗೊಂಬರ್ ॥
ಖಡಗಣ ಗಡಿಗಾಪಿನವರ್ ।
ಗುಡುಗಾಡಿಸಿ ಗೋಲಕೊಂಡ ವಿಜಯಾಪುರಮಂ ॥
ಕಡಿದು ಮರಾಟರ ಪಡೆಯಂ ।
ಪೊಡವಿಯ ಬಲ್ಪೊರೆಯ ನಿಳಪಿ ಬಣ್ಣಿಗೆ ವಡೆವರ್ ॥
ಇಂತೆಣ್ದೆಸೆಗೆಲ್ದಾಯಾ ।
ಅಂತರವರಿತಲ್ಗಿ ನಿಲಿಸಿ ನಿಜಸೇವಕರಂ ।
ಸಂತತಮುಂ ಸಕಲ ಪ್ರಜೆ ।
ಸಂತಸಮಿರ್ಪಂತೆ ಕಾಪುಗೆಯ್ದನು ಗೊಳಕುಂ ॥
ಈತೆರಮಿರು ತೆಡೆಯೊಡೆ ಸಂ ।
ಗೀತದ ಸಾಹಿತ್ಯ ದೊಳ್ಪನಾರಯ್ದದಱಿಂ ।
ಖ್ಯಾತಿಗೆ ವಂದ ಪ್ರತಿಮಂ ।
ಪ್ರೀತಿಯೊಳಾದರಿಕು ಮುಱಳ್ ವಿದ್ವಜ್ಜನಮಂ ॥

ಕಂ॥ ಅನಿಬರ್ ನಲ್ಗಬ್ಬಿಗ ರೊಳ ।
ಮನಿತರ ಸಾಧಾರಣಾಭಿಮಾನಂ ಬಿಡದಾ ।
ಘನ ನಪ್ರತಿಮಂ ಬಳೆಯಿಕು ।
ಮನುವೆತ್ತಾ ತಿರುಮಲಾರ್ಯ ನಂತುಱು ಪೆಗಲ್ದಂ ॥ ೧೧ ॥
ನರಪತಿ ಚಿಕದೇವೇಂದ್ರಂ ।
ಕರೆದೊಲ್ಮೆಯೊಳೊರ್ಮೆ ತಿರುಮಲಾರ್ಯನ ನೊರೆದಂ ॥
ನಿರವಿಸು ನೀಂ ಕಬ್ಬದ ನುಡಿ ।
ಪುರುಳ್ಗಳೊಳ್ದೊಡವಿನಿರವನೆಂದಪ್ರತಿಮಂ ॥

ತನ್ನಸಿರಿ ತನ್ನ ನೇಮಂ ।
ತನ್ನೊಳ್ಗೆಳೆ ತನ್ನ ಭಾಗ್ಯಮೀ ಚಿಕದೇವೇಂ ।
ದ್ರಂ ನೇಮ ವಿತ್ತನೆಂದೊಲ ।
ವಿನ್ನಿರವಿಸಿ ತಿರುಮಲಾರ್ಯ ನುನ್ನತಿವೆತ್ತಂ ॥
ಅಕ್ಕರಿಗರೆರ್ದೆಗೆ ಸಂತಸ ।
ಮಕ್ಕಂದ ಪ್ರತಿಮ ವೀರ ಚರಿತಾಭಿಧೆಯಿಂ ॥
ಸಕ್ಕದದಿಂ ಲಕ್ಕಣಮಂ ।
ಲಕ್ಕಮ ನೊಳ್ಗನ್ನಡಂಗಳಿಂ ವಿವರಿಸಿದಂ ॥

ವ॥ ಈ ಅಪ್ರತಿಮವೀರ ಚರಿತಮೆಂಬಲಂಕಾರ ಗ್ರಂಥದ ನಾಲ್ಕುಂ ಪ್ರಕರಣಂಗಳೊಳ್ ಸಂಗ್ರಹಮೆಂತೆನೆ—

ಕಂ॥ ಕಬ್ಬದ ಲಕ್ಕಣಮಂ ನ ।
ಲ್ಗಬ್ಬಂ ಮುಂತಾದ ಭೇದದಿರವಂ ಬಳಕಾ ॥
ಕಬ್ಬದ ನುಡಿ ಪುರುಳೆರಡರ ।
ಸಬ್ಬಗುಣಂಗಳುಮನವರೊಳೊವೊರ್ದಲುಸಿರ್ದಂ ॥
ರೀತಿಗಳರವಿದು ಶಯ್ಯೆಯು ।
ಜಾತಿಯಿಂದಿಂತಿಂತು ಪಾಕವೃತ್ತಿ ವಿಭೇದಂ ॥
ಜಾತಿನ ಪೆಯ್ಸರಿ ದೊಡವುಗ ।
ಳೀತೆರಮೆಂದಾ ಬಳಿಕ್ಕ ಬಗೆವುಗೆಟ ವೇಟ್ಟಂ ॥
ಮೂರುವದ ನೆಳವದಂಗಳ ।
ತೋಱಿದ ಪೊಲ್ಪವಣಿದೆಂದು ಬಗೆಯೆ ಬುಧರ್ಕಳ್ ॥
ನೂರು ಪುರುಳ್ದೊಡವುಗಳಂ ।
ಬೇರೆಯೆ ಬಣ್ಣಿಸಿದನವರ ಭೇದಂಗಳುಮಂ ॥

ಬಳಿಕ್ಕೆ—

ಇರವಂ ತಿಳದು ಪೊಸಂಬ ।
ರ್ನಿರವಿಸಿದಾ ಪತ್ತು ಮೈದು ಪೊಳ್ದೊಡವುಗಳಂ ॥
ಬೆರಕೆಗಳ ಬಗೆಗಳೈದುಮ ।
ನೊರೆದಂ ಚಿಕದೇವರಾಯನೊಪ್ಪುವ ತೆರದಿಂ ॥

ವ॥ ಇದರೊಳ್ ಕಾವ್ಯ ಲಕ್ಷಣದೊಳ್ ಉತ್ತಮ ಕಾವ್ಯಮೆಂಬುದು—

"ತದದೋಷೌ ಶಬ್ದಾರ್ಥೌ ಸಗುಣಾವನಲಂಕೃತೀ ಪುನಃ ಕ್ವಾಪಿ".

* * * *

ವ॥ ಇಂತಪ್ಪ ಕಾವ್ಯಂಗಳ್ ಗದ್ಯ ಮಯಂ ಪದ್ಯ ಮಯಂ ಗದ್ಯ ಪದ್ಯ ಮಯಮೆಂದು ಮೂಱುಂ ತೆರಂ. ಇವಱೊಳ್ ಚಿಕದೇವರಾಜ ವಂಶಾವಳಿ ಮುಂತಾದುವು ಗದ್ಯ ಕಾವ್ಯಂಗಳ್. ಚಿಕದೇವರಾಜ ಶತಕಂ ಮುಂತಾದುವು ಪದ್ಯ ಕಾವ್ಯಂಗಳ್. ಚಿಕದೇವರಾಜ ವಿಜಯಂ ಮುಂತಾದುವು ಗದ್ಯ ಪದ್ಯೋಭಯಾತ್ಮಕವಪ್ಪ ಕಾವ್ಯಂಗಳ್. ಇ[ವ](ದ)ರ್ಕೆ ಚಂ[ಬು](ಪು)ವೆಂದುಂ ವಸ್ತುಕವೆಂದುಂ ಪೆಸರ್.

ಇಂತಪ್ಪ ಕಾವ್ಯ ಗುಣಂಗಳ್ ಶಬ್ದಗುಣಂಗಳೆಂದುಮರ್ಥ ಗುಣಂಗಳೆಂದುಮೆರಡುಂ ತೆರಂ. ಶಬ್ದ (ಶಬ್ದಾರ್ಥ) ಗುಣಂಗಳ್ ಮೂರೇ ಸರಿಯೆಂದು ಕಾವ್ಯ ಪ್ರಕಾಶದೊಳ್ ಮಮ್ಮಟಂ ಪೇಳ್ದಂ; ಇರ್ಪತ್ತು ನಾಲ್ಕೆಂದು ಪ್ರತಾಪ ರುದ್ರೀಯದೊಳ್ ವಿದ್ಯಾನಾಥಂ ಪೇಳ್ದಂ; ಇರ್ಪತ್ತು ಗುಣಂಗಳೆಂದಲಂಕಾರ ಸೂತ್ರದೊಳ್ ವಾಮನಂ ಪೇಳ್ದಂ. ಈ ಪಕ್ಷಂಗಳೊಳ್ ಓಜಃ ಪ್ರಸಾದ ಮಾಧುರ್ಯಂಗಳೆಂಬ ಮೂಱೇ ಗುಣಂಗಳೆಂದು ನಿರವಿಸಿದೊಡೆ ಪ್ರಸಿದ್ಧಮಾದ ಶ್ಲೇಷ ಸೌಕುಮಾರ್ಯಾದಿ ಗುಣಂಗಳ್ ತಿಳಿಯದೇ ಪೋಕುಂ. ಶಬ್ದಾರ್ಥ ಗುಣಂಗಳಂ ಬೇರ್ಪಡಿಸಿ ಪೇೞದೆ ಇರ್ಪತ್ತುನಾಲ್ಕು ಗುಣಂಗಳೆಂದೊಡೆ ವಿವೇಕಂ ತೋರದು. ಅದಱಿಂ ಶಬ್ದ ಗುಣಂಗಳ್ ಪತ್ತು, ಅರ್ಥ ಗುಣಂಗಳ್ ಪತ್ತು ಎಂಬ ಪಕ್ಷಮೆ ಲೇಸು. ಅವಾವುವೆನೆ:—

ಸೂತ್ರ॥ " ಓಜಃ ಪ್ರಸಾದ ಶ್ಲೇಷ ಸಮತಾ ಸಮಾಧಿ ಮಾಧುರ್ಯ ಸೌಕುಮಾರ್ಯೋದಾರ ತಾರ್ಥ ವ್ಯಕ್ತಿ ಕಾಂತಯೋ ಬಂಧ ಗುಣಾಃ "

* * * *

ಕಾಂತಿಯೆನೆ—

" ದೀಪ್ತ ರಸತ್ವಂ ಕಾಂತಿಃ "

ಪದ್ಯಮಂ ಕೇಳ್ವಾಗಳ್ ರಸಂ ತೋಱುತ್ತುವರೆಯದು ಕಾಂತಿಯೆನಿಪುದು. ಎಂತೆನೆ.—

ಚಂ॥ ನೆಸುನೆಸು ಸಾಣ್ಚಿ ತೊಂದಿನಿಸು ಬಾಗಿದ ಸುಣ್ಮೊಗವೊಂದು ಪಕ್ಕದೊಳ್ ।
ಮುಸಗಿಮುರಲ್ದು ಮಾರ್ಪೊಳೆದು ಬೆಂಗರು ನೂಂಕೆ ಕಡಂಗಿ ಕೊಂಕುವಾ ।
ಪೊಸವಗೆ ನೋಟಮಂಡಲೆವ ಮೆಯ್ಸಿಲನಂ ಬರೆವ್ರೋಜೆಯೊಪ್ಪದೊಳ್ ।
ಪೊಸಸಿರಿ ಯೊಂದಿನಿಂದ[ದಿ](ಳ)ದಿಱಿತೊಳ್ ಚಿಕದೇವ ನೃಪಾಲ ಚಂದ್ರಮಾ ॥

ಇವು ಪತ್ತುಮರ್ಥಗುಣಂಗಳ್.—

Colophon :

ಇದು ಶ್ರೀಮನ್ಮಹಾರಾಜಾಧಿರಾಜ ರಾಜ ಪರಮೇಶ್ವರ ಪ್ರೌಢ ಪ್ರತಾಪನಪ್ರತಿಮ ವೀರನರಪತಿ ಶ್ರೀ ಚಿಕದೇವ ಮಹಾರಾಜ ಕೃಪಾ ಪರಿಪಾಲಿತ ಶ್ರೀ ತಿರುಮಲಾರ್ಯ ವಿರಚಿತಮಪ್ಪ ಶ್ರೀ ಮದಪ್ರತಿಮ ವೀರಚರಿತಮೆಂಬಲಂಕಾರಗ್ರಂಥದೊಳ್ ಕಾವ್ಯ ನಿರೂಪಣಾದಿ ಪ್ರಥಮ ಪ್ರಕರಣಂ ಸಂಪೂರ್ಣಂ.—

ಎರಡನೆಯ ಪ್ರಕರಣದೊಳ್ ರೀತಿಯೆಂಬುದು—

" ರೀತಿರ್ನಾಮ ಗುಣಶ್ಲಿಷ್ಟ ಪದಸಂಘಟನಾಮತಾ "

End :

ಏಕವಾಚಕಾನುಪ್ರವಿಷ್ಟ ಸಂಕರಮೆಂಬುದು—

" ಖಿಥ ಶೋಭಾವಹೇ ಯತ್ರ ಪ್ರತೀಯೇತಾಮಲಂಕೃತೀ ।
ತತ್ರೈಕವಾಚಕಾನುಪ್ರವಿಷ್ಟ ಸಂಕರ ಇಷ್ಯತೇ ॥ "

ಆವೆಡೆಯೊಳೆರಡು ಮಲಂಕಾರಂಗಳ್ ಮುಂಪಿಂ ತೋರ್ಪುದೆಂಬಂಗಿಂಗಿ ಭಾವಮುಂ ಒಂದು ಪೆಱತೊಂದಂ ಮಱಸುತ್ತೆ ನೆಲೆಯಿಲ್ಲದಿರ್ಪ ಸಂದೇಹಮುಂ ಪೆಱತೊಂದಂ ಮಱಸುತ್ತೆ

ನೆಲೆಯಿಲ್ಲದಿರ್ಪ ಸಂದೇಹಮುಂ ಪೆಱತೊಂದಲಂಕಾರಕ್ಕಂ ಅಂಗಿಗಳಾಗಿರ್ಪ ಸಮ ಪ್ರಾಧಾನ್ಯಮು ಮಿಲ್ಲದೆ ಎಲ್ಲೆಡೆಯೊಳಂ ತೋಱುಯುದು ಏಕವಾಚಕಾನುಪ್ರವಿಷ್ಟ ಸಂಕರಂ ಎಂತೆನೆ—

ಮ. ಸ್ರ.॥ ಶ್ರುತಿಯುಂ ಕಾಪಿಟ್ಟು ಗೋತ್ರೋನ್ನತಿಯನೆಸಗಿ ಮಾಸಿಂಗಮಂ ಪೋಲ್ತು ಗಾಢೋ।

[ದ್ಧ](ನ್ನ)ತಿಯಿಂ ವಿಕ್ರಾಂತಿಗೆಯ್ದಾಕ್ರಮಿಸಿ ವಸುಧೆಯಂ ದುಷ್ಟರಾಜನ್ಯ ರಂಗೆ।

ಲ್ದತಿ ಮಾತ್ರಂ ಧಾರ್ಮಿಕಂ ತಾನೆನಿಸಿ ಯದುಕುಲೌನ್ನತ್ಯಮಂ ಪೊಣ್ಮೆಸುತ್ತ।

ಪ್ರತಿಮಂ ಲೋಕೈಕವೀರಂ ಬಗೆವುಗೆ ಕಲಿಯಂ ತೊಳ್ಪ ಸಾಮ್ರಾಜ್ಯವಾಳ್ಗಂ॥

ಇದಱೊಳ್ ಪ್ರಕೃತಮಾದ ರಾಜ ವರ್ಣನದೊಳ್ ವಿಶೇಷಣಾದಿ ಸಾಮ್ಯದಿಂದ ಪ್ರಕೃತ ಮಾದ - ಭಗವದ್ವ್ಯಾಪಾರಂ ತೋರ್ಪುದಱಿಂ ಸಮಾಸೋಕ್ತಿಯುಂ ಪತ್ತುಂ ಭಗವದವತಾರಂಗಳ್ ಕ್ರಮದಿಂ ತೋರ್ಪುದಱಿಂ ರತ್ನಾವಳಿಯುಮೆಂಬೆರಡಲಂಕಾರಂಗಳೊಂದೆ ಪದ್ಯದೊಳಪ್ಪು ದಱಿಂದಿದೇಕವಾಚಕಾನುಪ್ರವಿಷ್ಟಸಂಕರಮೆನಿಪ್ಪುದು. ಇಂತು ಸಂಕರಂ ನಾಲ್ಕುತೆಱಂ.—

ಇದು ಶ್ರೀಮನ್ಮಹಾರಾಜಾಧಿರಾಜ * * ಶ್ರೀಮದ ಪ್ರತಿಮವೀರ ಚರಿತ ಮೆಂಬ ಲಂಕಾರ ಗ್ರಂಥದೊಳ್ ನವೀನಾಲಂಕಾರಾದಿ ನಿರೂಪಣಂ ಚತುರ್ಥ ಪ್ರಕರಣಂ ಸಂಪೂರ್ಣಂ.

ಅಪ್ರತಿಮವೀರ ಗ್ರಂಥಮೆಂಬಲಂಕಾರ ಗ್ರಂಥಂ ಸಂಪೂರ್ಣಂ.

(ವಿ-ವಿ.)—

ಸಮಗ್ರ. ಅತಿ ಶಿಥಿಲವಾದ ಪ್ರತಿ. ಕೆಲವು ಓಲೆಗಳು ಮುರಿದಿವೆ. ಲಿಪಿ ಚೆನ್ನಾಗಿದೆ. ಪುಸ್ತಕದ ಕೊನೆಯಲ್ಲಿ. "ಹರಿ[ದ](ತ) ಸಗೋತ್ರದ ಆಪಸ್ತಂಭ ಸೂತ್ರದ ಯಜುಶ್ಶಾಖಾಧ್ಯಾಯಿ ಮೇಲುಗೋಟಿ [ಓಬಪತಿ] (ಓಬಳಪತಿ) ಅಯ್ಯಂಗಾರ ಕೌಮಾರ ಕೃಷ್ಣಪ ಬರೆದ ಪುಸ್ತಕಂ" ಎಂದಿದೆ.

ಇದು ಅಲಂಕಾರ ಗ್ರಂಥ; ನಾಲ್ಕು ಪ್ರಕರಣಗಳನುಳ್ಳುದು. ಮೊದಲನೆಯದರಲ್ಲಿ ಈ ಗ್ರಂಥ ನಿರ್ಮಾಣ ನಿಮಿತ್ತವನ್ನು ಹೇಳಿದ ತರುವಾಯ ಕಾವ್ಯಲಕ್ಷಣ, ಶಬ್ದಾರ್ಥಗುಣ ವಿವರಣೆಗಳೂ; ಎರಡನೆಯದರಲ್ಲಿ ರೀತಿ ಶಯ್ಯೆ, ಪಾಕ, ವೃತ್ತಿ ಅನುಪ್ರಾಸ ಮುಂತಾದ ಶಬ್ದಾ ಲಂಕಾರಗಳೂ ಮೂರನೆಯದರಲ್ಲಿ ಉಪಮೆ ಮುಂತಾದ ನೂರು ಅರ್ಥಾಲಂಕಾರಗಳೂ ನಾಲ್ಕನೆಯ ದರಲ್ಲಿ ರಸವದಲಂಕಾರ ಮುಂತಾದ ಹದಿನೈದು ಆಧುನಿಕಾಲಂಕಾರಗಳೂ ಹೇಳಿವೆ. ಕವಿ ಸಂಸ್ಕೃತ ಗ್ರಂಥಗಳ ಲಕ್ಷಣಗಳನ್ನು ಸ್ವೀಕರಿಸಿ ಅವಕ್ಕೆ ಕನ್ನಡದಲ್ಲಿ ವೃತ್ತಿಯನ್ನು ಬರೆದು ಸಂಸ್ಕೃತ ಉದಾಹರಣ ಪದ್ಯಗಳನ್ನು ಕೊಟ್ಟು ಲಕ್ಷಣ ಸಮನ್ವಯ ಮಾಡಿದ್ದಾನೆ. ಕನ್ನಡದಲ್ಲಿ ಅಲಂಕಾರ ಗ್ರಂಥವು ಇಷ್ಟು ವಿಸ್ತರವಾಗಿ ಬರೆದಿರುವುದು ಮತ್ತಾವುದೂ ಇಲ್ಲ. ಇದನ್ನು ಅತ್ಯುತ್ತಮ ಗ್ರಂಥಗಳಲ್ಲಿ ಒಂದು ಎನ್ನಬಹುದು. ಇದು ಮೈಸೂರು ಕಾವ್ಯ ಕಲಾನಿಧಿಯವ ರಿಂದ ಮುದ್ರಿತವಾಗಿದೆ.

ಕವಿ ತಿರುಮಲಾರ್ಯನೆಂಬುವನು. ಶ್ರೀ ವೈಷ್ಣವ ಮತದವನು. ಈತನು ಮೈಸೂರು ದೊರೆಯಾಗಿದ್ದ ಚಿಕದೇವರಾಜನ (ಕ್ರಿ. ಶ. ೧೬೭೨-೧೭೦೪) ಆಸ್ಥಾನ ವಿದ್ವಾಂಸನೂ ಮಂತ್ರಿಯೂ ಆಗಿದ್ದಂತೆ ಗೊತ್ತಾಗುತ್ತದೆ. ಈತನು ಈ ಗ್ರಂಥವನ್ನಲ್ಲದೆ ಚಿಕದೇವರಾಜ ವಿಜಯ, ಚಿಕ್ಕದೇವರಾಜ ವಂಶಾವಳಿ, ಚಿಕದೇವರಾಜ ಶತಕ ಮುಂತಾದ ಗ್ರಂಥಗಳನ್ನು ಬರೆದಿದ್ದಾನೆ. ಈತನ ಪಾಂಡಿತ್ಯವೂ ಕವಿತೆಯೂ ಶ್ಲಾಘ್ಯವಾದುವುಗಳು. ಉಳಿದ ವಿಷಯಗಳನ್ನು ಉದಾಹೃತ ಭಾಗಗಳಿಂದಲೂ ಕವಿ ಚರಿತ್ರೆಯಿಂದಲೂ ತಿಳಿಯುವುದು.

No. 1250. ಅಪ್ರತಿಮವೀರ ಚರಿತೆ by ತಿರುಮಲಾರ್ಯ.
APRATIMAVĪRACARITE by TIRUMALĀRYA.

Substance, paper. Size, 14¾ × 8-15/16 inches. Pages, 74. Lines, 21, 23 and 32 to 43 on a page. Extent, 1,508 granthas. Character, Kannada. Condition, injured. Appearance, old. Mode of writing, from pages 131 to 171 and 188 to 204, good from page 172 to 187 not bad.

Begins on page 131 of the manuscript described under No. 895 ante.

Contains up to the end of Anupalabdhī Alankāra in the 4th Prakaraṇa. Wants the illustration of the last Alankāra (i.e., Kāraṇālankāra) in the 3rd Prakaraṇa. The folios of this Ms. are bound disorderly. For continuous portion of this work we have to see foll. 68*a* to 87*a*, 96*a* to 103*b* and 88*a* to 95*a* respectively.

Same work described as above.

(ವಿ-ವಿ.)—

ಅಸಮಗ್ರ. ಮೂರನೆಯ ಪ್ರಕರಣದ ಕೊನೆಯಲ್ಲಿ ಸ್ವಲ್ಪ ಭಾಗವಿಲ್ಲ. ಮೊದಲಿಂದ ನಾಲ್ಕನೆಯ ಪ್ರಕರಣದ ಅನುಪಲಬ್ಧ್ಯಲಂಕಾರದವರೆಗಿದೆ. ಇದರೊಡನೆ ಇನ್ನೂ ಅನೇಕ ಪುಸ್ತಕಗಳಿವೆ. ಅವನ್ನು 895 ನೆಯ ನಂಬರಿನಲ್ಲಿ ನೋಡಿತಿಳಿಯುವುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1251. ಕವಿರಾಜಮಾರ್ಗ by ನೃಪತುಂಗ.
KAVIRĀJAMĀRGA by NṚPATUNGA.

Substance, Śrītāla. Size, 13⅝ × 2-1/16 inches. Pages, 34. Lines, 11–12 on a page. Extent, 1,794 granthas. Character, Kannada. Condition, slightly injured. Appearance, old. Mode of writing, good.

Begins on fol. 1*a*. The other work is :—Rasaratnākara 18*a*.

Incomplete.

This is a work on rhetoric, the earliest Kannada work traced so far. It is written in Kanda metre and vṛttas. The work is divided into 3 Paricchēdas or Chapters. The first treats of faults in Poetry, the second deals with Śabdālankāra while the third is concerned with Arthālankāras. The author refers to northern and southern styles of composition and classifies Kāvyas as Bedaṇḍe and Cattāṇa. It is noteworthy that most of the verses in the last chapter of this work are mere literal translations from the Kāvyādarśa of Dandian of 6th century A.D. The author Nṛpatunga, (814—877 A.D.) the Rāṣṭrakūṭa King is also called Amōghavarṣa. For full information concerning Nṛpatunga and his Kavirājamārga, see Karṇāṭakakavicarite, Vol. I (Pp. 16–20) and Mr. Pathak's Introduction to his own edition of Kavirājamārga, published in Mr. Rice's Bibliotheca Carnāṭika Series.

Beginning :

ಕಂ॥ ಶ್ರೀ ತಳ್ತುರದೊಳ್ ಕೌಸ್ತುಭ ।
ಜಾತದ್ಯುತಿ ಬಳಸಿ ಕಾಂಡಪಟದಂತಿರೆ ಸಂ ॥
ಪ್ರೀತಿಯಿನಾವಗಮಗಲಲ್ ।
ನೀತಿ ನಿರಂತರನುದಾರನಾ ನೃಪತುಂಗಂ ॥

ಕೃತಕೃತ್ಯ ಮಲ್ಲನ ಪ್ರತಿ ।
ಹತವಿಕ್ರಮನೊಸೆದು ವೀರನಾರಾಯಣನ ॥
ಪ್ಪತಿಶಯಧವಳಂ ನಮಗೀ ।
ಗತರ್ಕಿತೋಪ ಸ್ಥಿತ ಪ್ರತಾಪೋದಯಮಂ ॥

ಶ್ರೀವಿಶದ[ಪ](ವ)ರ್ಣೆ ಮಧು ।
ರಾಪ್ರೋಚಿತೆ ಚತುರ ರುಚಿರ ಪದರಚನೆ ಚಿರಂ ॥
ದೇವಿ ಸರಸ್ವತಿ ಹಂಸ(ವಿ)
ಭಾವದೆ ನೆಲೆಗೊಳ್ಗೆ ಕೂರ್ತು ಮನ್ಮಾನಸದೊಳ್ ॥

* * *

ಶ್ರುತದೊಳ್ ಭಾವಿಸಿ ನೋಟಿತ್ತೊಡೆ ।
ಸತ(ತಂ) ಕವಿ ವೃಷಭರಾ ಪ್ರಯೋಗಂಗಳೊಳಂ ॥
ಕೃತಿಪರಿಚಯ ಬಲನಪ್ಪನ ।
ನತಿಶಯಧವಳನ ಸಭಾಸದರ್ ಮನ್ನಿಸುವರ್ ॥ ೫ ॥

* * *

ಅದಱಿಂ ಪರಮಾಗಮ ಕೋ ।
ವಿದನಪ್ಪುದು ಪೂರ್ವಕಾವ್ಯ ರಚನೆಗಳಂ ತಾಂ ॥
ಮೊದಲೊಳ್ ಕಲ್ತಂಗಲ್ಲದೆ ।
ಪದದೊಳ್ ಜಾಣಿಂ ಬೆಡಂಗುಮಕ್ಕುಮೆ ಕೃತಿಯೊಳ್ ॥ ೯ ॥

ಜಡಜನರು ಮೆಲ್ಲಮೋದಂ ।
ತಡೆಯದೆ ಕಲ್ಗಂ ಗುರೂಪದೇಶ ಕ್ರಮದಿಂ ॥
ನುಡಿವಲ್ಮೆಯಲ್ಲದೇಂ ಕ ।
ಲ್ತೊಡನೋದುವುವಲ್ತೆ ಗಿಳಿಗಳುಂ ಪುರುಳಿಗಳುಂ ॥ ೧೦ ॥

ಪ್ರತಿ ಭಾವತ್ವಮುಮಕೃತಕ ।
ಚತುರತೆಯುಂ ಪರಮ ಬುಧಜನೋಪಾಸನಮುಂ ॥
ಕೃತಿಪರಿಚಯಮುಂ ತರ್ಕಂ ।
ಪ್ರತೀತಿಯುಂ ವಾಗ್ವಿದಗ್ಧತಾ ನಿಪುಣತೆಯೊಳ್ ॥ ೧೧ ॥

ಕವಿಭಾವ ಕೃತಾನೇಕ ।
ಪ್ರವಿಭಾಗ ವಿವಿಕ್ತ ಸೂಕ್ತ ಮಾರ್ಗಂ ಕಾವ್ಯಂ ॥
ಸವಿಶೇಷ ಶಬ್ದರಚನಂ ।
ವಿವಿಧಾರ್ಥ ವ್ಯಕ್ತಿ ವರ್ತಿತಾಲಂಕಾರಂ ॥ ೧೨ ॥

ನರಲೋಕಚಂದ್ರ ಮತದಿಂ ।
ಪರಮಾಲಂಕಾರಮುಂ ಶರೀರಮು ಮೆಂದಿಂ ॥
ತೆರಡಕ್ಕುಂ ಭೇದಂ ಬಹು ।
ಪರಿಕರಮೂ ಕಾವ್ಯವಸ್ತು ಪುರುಷಂಗೆಂದುಂ ॥ ೧೭ ॥
ಅವರೊಳ್ ಶರೀರ ಮೆಂಬುದು ।
ಕವಿಪ್ರದಾನ ಪ್ರಯೋಗ ಪದ ಪದ್ಧತಿಯೊಳ್ ।
ದ್ವಿವಿಧಮೆನಿಕ್ಕು ಮುದತಿಶಯ ।
ಧವಳೋಕ್ತ ಕ್ರಮದೆ ಗದ್ಯ ಪದ್ಯಾಖ್ಯಾತಂ ॥ ೧೮ ॥

* * *

ವಿಮಳೋದಯ ನಾಗಾರ್ಜುನ ।
ಸಮೇತ ಜಯ ಬಂಧು ದುರ್ವಿನೀತಾದಿಗಳೀ ॥
ಕ್ರಮದೊಳ್ ನೆಗಳ್ಚಿ ಗದ್ಯಾ ।
ಶ್ರಮ ಪದ ಗುರುತಾ ಪ್ರತೀತಿಯಂ ಕೈಕೊಂಡರ್ ॥ ೧೯ ॥
ಪದ್ಯಂ ಸಮಸ್ತ ಜನತಾ ।
ಹೃದ್ಯಂ ಪದವಿದಿತಪಾದ ನಿಯಮ ನಿವೇದ್ಯಂ ॥
ವಿದ್ಯಾಪಾರ ಪರಾಯಣ ।
ಮಾದ್ಯಂ ಸದ್ವೃತ್ತಿ ವೃತ್ತ ಜಾತ್ಯಾಯತ್ತಂ ॥ ೨೦ ॥
ಪ್ರ[ಗುಣಿ](ಣಿ)ತ ಗುಣಸೂರಿ ನಾರಾ ।
ಯಣ ಭಾರವಿ ಕಾಳಿದಾಸ ಮಾಘಾದಿಗಳೀ ॥
ಗಣಿದದೊಳೆ ಮಹಾ ಕಾವ್ಯ ।
ಪ್ರಣಯಮ ನಾಗಿಸಿದರಮಲ ಕವಿ ವೃಷಭರ್ಕಳ್ ॥ ೨೧ ॥
ನುಡಿಗೆಲ್ಲಂ ಸಕ್ಕದ ಕ ।
ನ್ನಡದೊಳ್ ಚತ್ತಾಣಮುಂ ಬೆದಂಡೆಯು ಮೆಂದೀ ॥
ಗಡಿನ ನೆಗಳ್ತೆಯ ಕಬ್ಬದೊ ।
ಳೊಡಂ ಬಡೆಲ್ ಮಾಡಿಸರ್ ಪುರಾತನ ಕವಿಗಳ್ ॥ ೨೨ ॥

ಪರಮ ಶ್ರೀ ವಿಜಯ ಕವೀ
ಶ್ವರ ಪಂಡಿತ ಚಂದ್ರ ಲೋಕಪಾಲಾದಿಗಳಾ ॥
ನಿರತಿಶಯ ವಸ್ತು ವಿಸ್ತರ ।
ವಿರಚನೆ ಲಕ್ಷ್ಯಂ ತದಾದ್ಯ ಕಾವ್ಯಕ್ಕೆಂದುಂ
ಕಂದಮುಮಮಳಿನ ವೃತ್ತಮು ।
ಮೊಂದೊಂದೆಡೆಗೊಂದು ಜಾತಿ ಜಾಣ್ಗೆಸೆಯೆ ಬೆಡಂ ।
ಗೊಂದಿವರೊಳಮರೆ ಪೇಳಲ್ ।
ಸುಂದರ ರೂಪಿಂ ಬೆದಂಡೆಗಬ್ಬಮದಕ್ಕುಂ
ಕದಂಗಳ್ ಪಲವಾಗಿರೆ ।
ಸುಂದರ ವೃತ್ತಂಗಳಕ್ಕರಂ ಚಾಪದಿ ಮ ॥

ತ್ರ್ಯಂದಲ್ಲಿ ರೀತಿಕೆ ಶಿವದಿಗ ॥
ಳಂದಂ ಬೆತ್ತ್ರಸೆಯೆ ಪೇಟಿತ್ತೊದ್ದಡದು ಚತುತ್ರಾಂ ॥ ೩೫ ॥

ಕಾವೇರಿಯಿಂದ ಮಾ ಗೋ
ದಾವರಿ (ವರ) ಮಿರ್ದ ನಾಡದಾ ಕನ್ನಡದೊಳ್ ॥
ಭಾವಿಸಿದ ಜನಪದಂ ವಸು ।
ಧಾವಳಯ ವಿಲೀನ ಶಿಶದ ವಿಷಯ ವಿಶೇಷಂ ॥ ೩೬ ॥

ಅದಱೊಳಗಂ ಕಿಸುವೊಳಲಾ ।
ವಿಚಿತ್ರ ಮಹಾ ಕೊಪಣ ನಗರದಾ ಪುಲಿಗೆರೆಯಾ ।
ಸದಭಿಸ್ತುತ ಮಪ್ಪೊಂ ಕುಂ ।
ದದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ॥ ೩೭ ॥

ಪದನಱಿದು ನುಡಿಯಲುಂ ನುಡಿ ।
ದುದನಱಿದಾರಯಲು ಮಾರ್ಪರಾ ನಾಡವರ್ಗಳ್ ।
ಚದುರರ್ ನಿಜದಿಂ ಕುರಿತೋ ।
ದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್ ॥ ೩೮ ॥

*   *   *   *   *

ದ್ರುತವಿಲಂಬಿತ ॥ ಉಪಮಿತಾಕ್ಷರಮೆಲ್ಲಿಯುಮೇಕರೂ ।
ಪಪರಿವೃತ್ತಿಯೊಳೊಂದಿದ ಮಾಟಿಕೆಯಿಂ ॥
ದುಪಚಿತ ಕ್ರಮ ಮಕ್ಕುಮಿದೆಂದು ಮ ।
ಭ್ಯುಪಗಮಕ್ಕೆ ಗುಣೋದಯ ಕಾರಣಂ ॥ ೧೪೬ ॥

ಸಮುಚಿತ ನೃಪತುಂಗದೇವ ಮಾರ್ಗ ।
ಕ್ರಮಮುಮನಭಿಮುಖರ್ಕಳಪ್ಪರ್ (?)
ಕ್ರಮಸಹಿತಮಗವ್ಯ ರೂಪಕಾವ್ಯ ।
ಕ್ರಮಪದ ನಿರಪಾಯ ಕೆಯ್ದುಲಾರ್ಪರ್ ॥ ೧೪೭ ॥

ಅತಿಶಯಧವಳೋರ್ವಿ ಪೋದಿತಾಲಂ ।
ಕೃತಮತಿ ನುತ್ತಿ ನಿರಂತರ ಪ್ರತೀತಂ ॥
ಶ್ರುತಿಯುವತಿ ಕೃತೋಪಚಾರ ಸಾರ ।
ಸ್ವತಗುಣಗಣದಿಂದೆ ಕೃತ್ಯಮಕ್ಕುಂ ॥ (?) ೧೪೮ ॥

ಚಂ ॥ ನುಡಿಗಳೊಡಂಬಡಲ್ ಬಗೆ (ದ) ವ್ರೊಲ್ಬಗೆಯುಂ ಮಿಗಲೀಯದೊಂದೆ ನಾ ॥
ಣ್ಣುಡಿಯು ನೆಡೆಗೆ ಕನ್ನಡದ ಮಾತಿನೊಳಾ ವಿಕಟಾಕ್ಷರಂಗಳೊಳ್ ।
ತೊಡರದೆ ಸಕ್ಕದಂಗಳ ಪದಂ ಪವಣಾಗಿರೆ ಮೆಲ್ಪುವೆತ್ತು ದಾಂ ।
ಗುಡಿವಿಡಿದಂತೆ ನೀಳ್ವನಿತ ಪೇಳ್ವುದು ನೀತಿ ನಿರಂತರ ಕ್ರಮಂ ॥ ೧೪೯ ॥

ಮ.ವಿ. ॥ ಸಕಳಾಳಾಪ ಕಳಾ ಕಳಾಪ ಕಥಿಕ ವ್ಯಾವೃತ್ತಿಯೊಳ್ಕೂಡಿ ಚಿ ।
ತ್ರಕರಂಬೊಲ್ಪರ ಭಾಗ ಭಾವ ವಿಲಸದ್ವರ್ಣ ಕ್ರಮಾವೃತ್ತಿಯಂ ।

ಪ್ರಕಟಮಂ ಮಾಡಿರೆ ಬೇಡ್ದಿ ಚಿತ್ರಕೃತಿಯಂ ವ್ಯಾವರ್ಣಿಸುತ್ತಂಕವಿ ।
ಪ್ರಕರ ಶ್ರೀ ವಿಜಯ ಪ್ರಭೂತ ಮನಿದಂ ಕೈಕೊಳ್ವುದೀ ಮಾಟಿಕ್ಕೆಯಿಂ
॥ ೧೪೦ ॥

Colophon :

'ಇದು ಪರಮ ಶ್ರೀ ನೃಪತುಂಗ ದೇವಾನುಮತಮಪ್ಪ ಕವಿರಾಜಮಾರ್ಗದೊಳ್ ದೋಷಾ ದೋಷಾನುವರ್ಣನ ನಿರ್ಣಯಂ ಪ್ರಥಮ ಪರಿಚ್ಛೇದಂ—

End :

ಕಂ ॥ ಕರೆ ಕರೆದು ಮನೋಧೃತಿಯಿಂ ।
ನೆರೆವಾಕೆಯೊಳರ್ದಳಲ್ಲದುಳ್ದೊಡೆ ನಿನ್ನಾ ।
ವಿರಹಾನಳನಾ ತಾಪದೆ ।
ಕೊರ . . . . ॥ ೧೯೨ ॥
ಪುಳಕಿತ ಕಪೋಲ ಫಲಕಂ ।
ವಿಳಸಿತ ಮದಿರಾರುಣೇಕ್ಷಣಂ ಸ್ಫುರಿತೋಷ್ಠಂ ॥
ಕೆಳದೀ ನಿನ್ನಮುಖಂ ತಳ
ಮಳಗೊಳಸುಗುಮಿಂತು ನಿಭೃತ ಶೃಂಗಾರ (ರಸಂ) ॥ ೧೯೩ ॥

(ವಿ-ವಿ.)—

ಅಸಮಗ್ರ. ೧, ೨ ಪರಿಚ್ಛೇದಗಳೂ ೩ ನೆಯದರಲ್ಲಿ ೧೯೩ ಪದ್ಯಗಳೂ ಇವೆ. ಕಡೆಯ ಭಾಗ ಸ್ವಲ್ಪವಿಲ್ಲ. ಕಡೆಯಲ್ಲಿ ಕೆಲವು ಓಲೆಗಳು ಮುರಿದುಹೋಗಿವೆ. ಇದರೊಡನೆ ರಸರತ್ನಾಕರದ ಒಂದೋಲೆ ಯಿದೆ. ಇದು ಸ್ವಲ್ಪಮಟ್ಟಿಗೆ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದಕ್ಕೆ ಪತ್ರ ಸಂಖ್ಯೆಯನ್ನು ಹೊಸದಾಗಿ ಕೊಟ್ಟು ಎಣಿಕೆಮಾಡಿದೆ.

ಇದು ಲಕ್ಷಣ ಗ್ರಂಥವು. ಕಂದವೃತ್ತಗಳಲ್ಲಿ ಬರೆದಿದೆ. ಇದರಲ್ಲಿ ೩ ಪರಿಚ್ಛೇದಗಳಿವೆ. ಮೊದಲನೆಯದರಲ್ಲಿ ದೋಷಾದೋಷಾನು ವರ್ಣನ ನಿರ್ಣಯವೂ, ಎರಡನೆಯದರಲ್ಲಿ ಶಬ್ದಾಲಂಕಾರವೂ, ಮೂರನೆಯದರಲ್ಲಿ ಅರ್ಥಾಲಂಕಾರವೂ ಹೇಳಿವೆ. ಇದುವರೆಗೆ ದೊರೆತಿರುವ ಕನ್ನಡ ಗ್ರಂಥಗಳಲ್ಲಿ ಇದು ಮೊದಲನೆಯದು. ಕನ್ನಡ ಭಾಷೆಯಲ್ಲಿ ದಕ್ಷಿಣೋತ್ತರ ಮಾರ್ಗಗಳೆಂಬ ಎರಡು ವಿಧವಾದ ಶೈಲಿಗಳೂ ಬೆದಂಡೆ, ಚತ್ತಾಣಗಳೆಂಬ ಎರಡು ಬಗೆಯ ಕಾವ್ಯಗಳೂ ರೂಢಿಯೆಂಬುದನ್ನು ಇದರಲ್ಲಿ ಕವಿ ತಿಳಿಸುತ್ತಾನೆ. ಈ ಗ್ರಂಥವು ಮೈಸೂರು ಓರಿಯಂಟಲ್ ಲೈಬ್ರರಿಯವರಿಂದಲೂ ಮದ್ರಾಸ್ ಸಕಳ ಕಲಾಶಾಲೆ (ಯೂನಿವರ್ಸಿಟಿ) ಯವರಿಂದಲೂ ಮುದ್ರಿತವಾಗಿದೆ.

ಕವಿ ನೃಪತುಂಗನೆಂಬವನು. ಇವನು ದೊರೆಯಾಗಿದ್ದಂತೆಯೂ ಗೊತ್ತಾಗುತ್ತದೆ. ಇನ್ನುಳಿದ ವಿಷಯಗಳನ್ನು ಉದಾಹೃತ ಭಾಗಗಳಿಂದಲೂ ಕವಿ ಚರಿತ್ರೆಯಿಂದಲೂ ಕೆ. ಬಿ. ಪಾಠಕರು ಇಂಗ್ಲಿಷ್ ಭಾಷೆಯಲ್ಲಿ ಬರೆದ ಉಪೋದ್ಘಾತದಿಂದಲೂ ತಿಳಿಯುವುದು ಕವಿಯ ಕಾಲವು ಕ್ರಿ.ಶ. ೮೧೪—೮೭೭ ಎಂದು ಕವಿಚರಿತ್ರಕಾರರು ಬರೆಯುತ್ತಾರೆ.

No. 1252. ಕಾವ್ಯಾವಲೋಕನ by ನಾಗವರ್ಮ II

KĀVYĀVALŌKANA by NĀGAVARMA II.

Substance, Śrītāla. Size, 13⅝ × 2-1/16 inches. Pages, 12. Lines, 10–11 on a page. Extent, 340 granthas. Character, Kannada. Condition, injured. Appearance, old. Mode of writing, good.

Begins on fol. 17*a* of the Ms. described under No. 12 ante wherein this work is omitted to be mentioned in the list of other works.

Contains from the beginning of the 2nd Adhikarana (Kāvyamālā-vyāvṛtyadhikaraṇa) to the illustration of Nirōṣṭya (a kind of crooked speech) in the 3rd Adhikaraṇa (Guṇavivēkādhikāraṇa).

The first Adhikaraṇa named Śabdasmṛti has been described under No. 12 ante with the title " Sabdasmṛti " which makes the former portion of this work.

A standard work on poetics consisting of Sūtrās or rules in verse and their illustration by stanzas which are mostly quotations from various Poets. It is the only substantive work in Kannada language that concerns with almost all subjects relating to poetical composition. This work is divided into 5 Adhikaraṇas, viz., Śabdasmṛti, Kāvyamālā-vyāvṛtti, Guṇavivēka, Rītikramarasanirūpaṇa and Kavisamaya each of which being subdivided into Prakaraṇas or sections.

For the particulars regarding the author see under No. 1 ante.

Beginning :

ವೃ ॥ ಪ್ರತಿಭಾನಂ ಕಾವ್ಯ ವಿದ್ಯಾ ಪ್ರಚಯ ಪರಿಚಯಂ ವೃದ್ಧಸೇವಾನುರಾಗಂ ।
ಸತತಾಭ್ಯಾಸ ಪ್ರಯತ್ನಂ ಕವಿತೆಗೆ ನಿಯತಂ ಕಾರಣಂ ಪೇಳ್ವೊಡಂತಾ ।
ಪ್ರತಿಭಾನಂ ಶಕ್ತಿ ಲೋಕಾಗಮ ಸಕಳ ಕಳಾ ವೇದನಂ ವಿದ್ಯೆ ಶಾಸ್ತ್ರಾ।
ನ್ವಿತನಪ್ಪಂ ವೃದ್ಧನಾಲಸ್ಯಮುಳದೆಸಪ್ರಯೋಗಮಭ್ಯಾಸ ಕರ್ಮಂ ॥
ಕಂ ॥ ಕೃತವಾರಿ ನಿಧಿಯಪಾರಮ ।

ನತಿಪ್ರಬಂಧಾಭಿಯೋಗ ರಾರೆಯಿದ್ದೊಡಂ ।
ಕೃತಪುಣ್ಯಂಗಲ್ಲದೆ ವಿ ।
ಶ್ರುತ ಕವಿತಾ ರತ್ನಮಲ್ಲಿ ಸಂಭವಿಸುಗುಮೇ ॥

ಮದುವಿಲ್ಲದಿಭಂ ಮಧು ವಿ ।
ಲ್ಲದ ಕುಸುಮಂ ಚಂದ್ರನಿಲ್ಲದೊಂದಿರುಳಾರ್ಪಿ ।
ಲ್ಲದ ನೃಪತಿ ಕವಿತೆಯಿಲ್ಲದ ।
ವಿದಗ್ಧತಾ ಗುಣಮದೇಂ ಮನಂಗೊಳಿಸುಗುಮೇ ॥

Colophon :

ಇದು ಕಾವ್ಯಮಲವ್ಯಾವೃತ್ತಿಯೊಳ್ ಪದ ಪದಾರ್ಥ ಸಂಧಿದೋಷ ಪ್ರಕರಣಂ ಪ್ರಥಮ ಪ್ರಕರಣಂ ॥

* * * * *

ಸಾರವಿಚಾರ ಚಂಚುರ ಮತಿ ಪ್ರಸರಂ ಪರಿಪಕ್ವ ಶಾಸ್ತ್ರ ಸಂ।
ಸ್ಕಾ [ರ] ನುಪೇತ ಕಾತುಕರಸಂ ವಿದಿತಾಗಮ ಲೋಕವೃತ್ತನು।
ತ್ಸರಿತ ಮತ್ಸರಂ ಸುಜನ ವತ್ಸಲನೆಲ್ಲಿಯು ನೀತನೆಂದು ಕೈ।
ವಾರದೆ ಬಣ್ಣಿಕುಂ ವಿಬುಧಮಂಡಳ ಪಂಡಿತ ನಾಗವರ್ಮನಂ॥

Colophon :

ಇದು ಸಕಲ ಸುಕವಿಜನ ಮನಸ್ಸರೋಜ ನೀರಾಜ
ಹಂಸಾಯ ಮಾನಾನೂನ ಕವಿತಾಗುಣೋದಯ
ಶ್ರೀ ನಾಗವರ್ಮ ಪ್ರಣೀತಮಪ್ಪ ಕಾವ್ಯಾ
ವಲೋಕನದೊಳ್ ಕಾವ್ಯಮಲವ್ಯಾವೃತ್ತಿ
ದ್ವಿತೀಯಾಧಿಕಾರಂ.

ಇದು ಸೌಂದರ್ಯ ಗುಣಪ್ರಕಾಶಮಿದು ತಾನಗ್ರಾಮ್ಯತಾಧಾನ ದಿಂ।
ತಿದು ಭಾಸ್ವತ್ಪರ ಭಾಗರಮ್ಯಮಿದು ಬಂಧಾಶ್ಲೇಷ ವಿಚ್ಛಿತ್ತಿಗಾ।
ಸ್ಪದಮೆಂದೆಂದುಚಿತಪ್ರಯೋಗ ವಿಧಿಯಿಂ ಸೈತಿರ್ಪಿನಿಂತಿರ್ದ ಬೇ।
ಳ್ದುದು ಪೂ ಮಾಲೆಯ ನಿಂಬಿನಿಂ ಸಮೆವವ್ರೋಲ್ಸತ್ಕಾವ್ಯಮಂ ಕಬ್ಬಿಗಂ॥

* * * * *

End :

॥ ಏಕಾಕ್ಷರಿ ॥

ಶ್ಲೋ॥ ನಿನ್ನಿನೇ ನಿನ್ನ ನಾನನ್ನ। ನಿನ್ನ ನೆನ್ನನ ನೂನನಂ॥
ನುನ್ನನ್ನೈನನ್ನ ನೈನೇನೇ। ನೇ ನಿನ್ನಂ ನಿನ್ನನಾನುನೆ॥

॥ ನಿರೋಷ್ಠ್ಯಂ ॥

ಕಂದ॥ ನೆಗಟಿನೆಯು ತಿಸ್ಥಿತಿ ಚೆತ್ತದಿ।
ನಗಲೆ ಕರಂ ನಿಜದೆ ತನ್ನ ತರಳತೆ ಕೆಲದಿಂ॥
(ದಗಲದೆ) ನಾಳೇ ಜಂಘಂ।
ನಗಿಸಿತ್ತಾ ನಗದ ನಗದ ಋಷಿ ಸಂಹತಿಯಂ॥

॥ ಅತಾಲವ್ಯಂ ॥

ಶ್ಲೋ॥ ರೂಪುಂ ಸೊಬಗು ಮಣ್ಮಿಂ ನಾ॥
ಣ್ಣಾಪು ಮಾರ್ಪುಂ ಪ್ರಭುತ್ವಮುಂ॥
ಕೋಪಮಂ ಮಾಟ್ಪುದು (೦) ತನ್ನೊಳ್।
ಭೂಪಂ ತಾಂ (ಕೊಲ್ಲ ಮಾತನಂ)॥

(ವಿ.ವಿ.)—

ಅಸಮಗ್ರ. ಕಾವ್ಯಮಲವ್ಯಾವೃತ್ತ್ಯಧಿ ಕರಣವು ಪೂರ್ಣವಾಗಿದೆ. ಗುಣವಿವೇಕಾಧಿಕರಣ ದಲ್ಲಿ ಮಾರ್ಗವಿಭಾಗದರ್ಶನ ಪ್ರಕರಣವೂ ಶಬ್ದಾಲಂಕಾರ ನಿರ್ಣಯ ಪ್ರಕರಣವೂ ಇವೆ. ಶಬ್ದಾಲಂಕಾರ ನಿರ್ಣಯ ಪ್ರಕರಣದ ಕೊನೆಯಲ್ಲಿ ನಾಲ್ಕು ಸೂತ್ರಗಳಲ್ಲಿ ಇದೇ ಪುಸ್ತಕದ ಆರಂಭದಲ್ಲಿರುವ ಈ ಗ್ರಂಥದ ಪ್ರಥಮಾಧಿಕರಣವು 'ಶಬ್ದಸ್ಮೃತಿ' ಎಂಬ ಹೆಸರಿನಿಂದ ದಿ. ನಂ. ೧೨ ರಲ್ಲಿ ವರ್ಣಿತವಾಗಿದೆ. ಶ್ರೀತಾಳ ಪ್ರತಿ. ಶಿಥಿಲವಾಗಿದೆ. ಲಿಪಿ ಚೆನ್ನಾಗಿದೆ.

ಇದು ಲಕ್ಷಣ ಗ್ರಂಥವು. ಶಬ್ದ ಸ್ಮೃತಿ, ಕಾವ್ಯಮಲವ್ಯಾವೃತ್ತಿ, ಗುಣ ವಿವೇಕ, ರೀತಿ ಕ್ರಮ ರಸನಿರೂಪಣ, ಕವಿ ಸಮಯಗಳೆಂಬ ಐದು ಅಧಿಕರಣಂಗಳಿವೆ. ಮೊದಲನೆಯ ಅಧಿಕರಣ ದಲ್ಲಿ ಸಂಜ್ಞಾ, ಸಂಧಿ, ನಾಮ, ಸಮಾಸ, ತದ್ಧಿತ ಆಖ್ಯಾತಗಳೆಂಬ ಆರು ಪ್ರಕರಣಗಳೂ; ಎರಡನೆಯದರಲ್ಲಿ ಪದ, ಪದಾರ್ಥ ಸಂಧಿದೋಷ ವಿನಿಶ್ಚಯ, ವಾಕ್ಯ ವಾಕ್ಯಾರ್ಥ ದೋಷಾನು ಕೀರ್ತನಗಳೆಂಬ ಎರಡು ಪ್ರಕರಣಗಳೂ; ಮೂರನೆಯದರಲ್ಲಿ ಮಾರ್ಗ ವಿಭಾಗ ದರ್ಶನ, ಶಬ್ದಾಲಂಕಾರ ನಿರ್ಣಯ, ಅರ್ಥಾಲಂಕಾರಗಳೆಂಬ ಮೂರು ಪ್ರಕರಣಗಳೂ; ನಾಲ್ಕನೆಯದ ರಲ್ಲಿ ರೀತಿ, ರಸಗಳೆಂಬ ಎರಡು ಪ್ರಕರಣಗಳೂ; ಐದನೆಯದರಲ್ಲಿ ಅಸಮಾಖ್ಯಾತಿ, ಸದ ಕೀರ್ತನ, ನಿಯಮಾರ್ಥ, ಐಕ್ಯಗಳೆಂಬ ನಾಲ್ಕು ಪ್ರಕರಣಗಳೂ ಇವೆ. ಈ ಗ್ರಂಥವು ಮೈಸೂರು ಗವರ್ನ್ಮೆಂಟಿನವರಿಂದ ಮುದ್ರಿತವಾಗಿದೆ. ಕವಿ ೨ ನೆಯ ನಾಗವರ್ಮನು. ಇವನು ಈ ಗ್ರಂಥವನ್ನಲ್ಲದೆ ಭಾಷಾಭೂಷಣ, ವಸ್ತುಕೋಶಗಳೆಂಬ ಗ್ರಂಥಗಳನ್ನು ಬರೆದಿದ್ದಾನೆ. ಕವಿಯ ಕಾಲವು ಸು: ೧೧೪೫ ಇರಬಹುದೆಂದು ಕವಿ ಚರಿತ್ರಕಾರರು ಬರೆಯುತ್ತಾರೆ. ಉಳಿದ ವಿಷಯಗಳನ್ನು ಉದಾಹೃತ ಭಾಗಗಳಿಂದಲೂ, ಮುದ್ರಿತ ಪುಸ್ತಕದಿಂದಲೂ ಕವಿ ಚರಿತ್ರೆಯಿಂದಲೂ ತಿಳಿಯುವುದು.

No. 1253. ರಸರತ್ನಾಕರ by ಸಾಳ್ವ
RASARATNĀKARA by SĀḶVA.

Substance, Śrītāla. Size, 18×2-3/16 inches. Pages, 54. Lines, 9 on a page. Extent, 850 granthas. Character, granthas. Condition, slightly injured. Appearance, old. Mode of writing, good.

Begins on fol. 20 (ಖೈ khai) *a*. The other work herein is Sṛngāra-ratnākara fol. 1 (ಕ ka) -a.

Complete.

A work on poetics dealing with the characteristic of a hero, heroine and a good poetry in general and the nature of Rasa or poetic sentiment detail, which is considered the very essence of a good poetry. The author is Sāḷva, a Jaina by religion, who lived in about 1550 A.D. He is also known to be the author of Bhārata, Vaidya sangraha, Śārādā vilāsa, etc. This work has been published by the Madras University in the year 1932 A.D.

In numbering the folios in this Ms. the system of ' Akṣarasankhya " is adopted by the copyist. The numbers 1–12 are represented by a series of a consonent as follows :—

ಕ, ಕಾ, ಕಿ, ಕೀ, ಕು, ಕೂ, ಕೇ, ಕೈ, ಕೋ, ಕೌ, ಕಂ, ಕಃ, etc.

Beginning :

ಕಂ॥ ಆನಂದ ದಿಂತಿಳಿದ ।

. . . . ॥

. . . . .

. . . . ||

ಇಂತು ನಾಗವರ್ಮ ಕವಿ ಕವಿಮಾದಿಗಳ ಮಾರ್ಗ [ಮ] ದಿಂ

ರಸಭಾವಾದಿಗಳನೆಲ್ಲ ವಿದ್ವತ್ಸಭೆಗ . . . .

. . . . |

. . . ಮನೋಧರ್ಮದ ಶಾಸ್ತ್ರಂ ಚಿದ್ವಿ ||

ದ್ಯಾರ್ಥಿಗೆ ಹೇಯೋಪಾದೇ |

ಯಾರ್ಥ ಜ್ಞಾನಾರ್ಥ ಮಪ್ಪುದೀ ರಸ ಶಾಸ್ತ್ರಂ ||

. . . .

. . . .

. . . . . | ಮಾವುದು ಮೆಂದಡೆಗೆ ಭರತಶಾಸ್ತ್ರಕ್ರಮದಿಂ ||

ನಾಗವರ್ಮನಿಂತಪ್ಪು ಗೆಯ್ದನದಱ ವಿಚಾರಮೆಂತೆಂದೊಡೆ :—

* * * * *

ಕಂ|| ಸಾರಂ ಸಂಸಾರದೊಳ್ ಬ |

ಲಾರತ್ನಂ ಸಾರಮಲ್ಲಿ ಯೌವನಮದಱೊಳ್ ||

ಸಾರಂ ಮಧುರಾಕಾರಂ |

ಸಾರಂ ಮತ್ತಲ್ಲಿ ಯಧಿಕ ಮನುಕೂಲರಸಂ ||

"ಭೋಗರತ್ನಂ ಮೃಗಾಕ್ಷಿ" ಯೆಂದಪ್ಪುದಱಿಂದೆಲ್ಲಾರಸದೊಳಂ ಶೃಂಗಾರರಸಮೆ ಲೋಕಕ್ಕೆ ಸೊಗಯಿಪ್ಪುದಾದ ಕಾರಣದಿಂ ಮೊದಲೊಳ್ ಶೃಂಗಾರ ರಸಂ ಪೇಳಲ್ಪಟ್ಟುದು. ಅಲ್ಲಿ ಮತ್ತೆ ಕೆಲಂಬರ್; ಆರ್ದ್ರಸ್ಥಾಯಿ ಸ್ನೇಹ ರಸಮೆಂಬರ್; ಅದು ರತ್ಯಾದಿಯೊಳಂತರ್ಭಾವಂ. ಸ್ತ್ರೀ ಸ್ತ್ರೀಯರ್ಗೆ ಪುರುಷರ್ ಪುರುಷರ್ಗೆ ಸ್ನೇಹ ಮಾದುದೆಂದೊಡೆ ಇದುವುಂ ರತಿಯೊಳಂತರ್ಭಾವಂ. ರಾಮಲಕ್ಷ್ಮಣ ಮೊದಲಾದ ವರಸ್ನೇಹಂ ವೀರದೊಳಂತರ್ಭಾವಂ. ಮಾತಾಪಿತೃಗಳ್ಗೆ ಬಾಲಕವರ್ಮಾಟ್ಟಿ ಸ್ನೇಹಂ ಭಯದೊಳಂತರ್ಭಾವಂ. ಪುತ್ರಾದಿಕೆಂಗಳಲ್ಲಿಯುಂ ವೃದ್ಧಂಗವಿಂತಱಿವುದು.

* * * * *

ಮತ್ತಂ ರುದ್ರಭಟ್ಟನ ರಸಕಳಿಕೆಯ ಪದ್ಧತಿಯಿಂ ಶೃಂಗಾರೋದ್ದೀಪನಂ ಚತುಷ್ಕಮಾದಲ್ಲಿ :—

ಕಂ|| ಆಲಂಬನಮುರುಗುಣ ಚೇ |

ಷ್ಟಾಲಂಕೃತಿಯುಂ ತಟಸ್ಥಮೆನಿಪೀ ನಾಲ್ಕುಂ ||

ಮೇಲಾದುದ್ದೀಪನ ಮಿ |

ನ್ನಾಲಂಬನ ಗುಣಮೆ ರೂಪ ಯೌವನ ಮುಖ್ಯಂ ||

* * * * *

ಅಮೃತಾನಂದಿಯಿಂದೀ ಭಾವಾದಿತ್ರಯಂಗಳ್ಗ ಸಮುದ್ಭವಂಗಳ್. ಶೋಭಾದಿ ಸಪ್ತಕಂಗಳ್ ಶೃಂಗಾರ ಭಾವಜಂಗಳ್. ಮುಂದಣ ಪತ್ತುಂ ಸ್ವಾಭಾವಿಕಂಗಳ್.

ಕಂ॥ ವಿಲಸಿತ ಭಾವಂ ಮನದ ಮೊ।
ದಲವಿಕ್ರಿಯೆ ಮುಂದಣೆಸೆವಲಂಕಾರಂ ದಲ್।
ಒಲಿದು(ಂ) ಸಿಂಗರದೊ [ಳದು] (ಳ್) ತಾಂ।
ಸಲೆ ನೇತ್ರ ಭ್ರೂವಿಕಾರಮಿತ್ತೊಡೆ ಹಾವಂ॥

* * * *

ಸಂಕೀರ್ಣ ಶೃಂಗಾರ ಮೆಂದೊಡದು ವಿಭಾವಾನುಭಾವಂ (ಗಳ) ನೆರವಿ. ವ್ಯಸ್ತಮಾ ದೊಡದು ಅನುಭಾವಂ. ವಿಭಾವಾನುಭಾವಂಗಳನೆ ಈ ಪೆಸರಿಂ ಪೇಳ್ದುದೆಂದೊಡದು ರಸಸಂಕರಂ. ಮಿಕ್ಕ ರಸಂಗಳ್ ನಾಗರೂಪ ಕ್ರಿಯಾತ್ಮಕ ಮೆಂದೊಡದು ವಿಭಾವಾನುಭಾವಂಗ ಳಲ್ಲದೆ ಯಿಂತಲ್ಲಿ ಪೇಳ್ದಾಚಾರ್ಯರುಮಿಂತೆಂದು ನಿರೂಪಿಸಿದುದಿದಲ್ಲದರಿಂದ ವಿದ್ವಜ್ಜನಂಗಳ್ ಮಾಟಿತ್ಕೆಯಿಂ ಪೇಟಿತೆಂದು ಬೆಸಸಲೊಡನಿಂತೊಡರ್ಚಿದೆಂ.

Colophon :

ಇದು ಶತೇಂದ್ರ ಮುನೀಂದ್ರ ವಂದಿತಾರ್ಹತ್ಪರಮೇಶ್ವರ ಪಾದಾರ ವಿಂ [ದಮದ] (ದಾಮಂದ) ಮಕರಂದಾನಂದಿತ ಭೃಂಗಾಯಮಾಣ ಕವಿಸಾಳ್ವ ವಿರಚಿತಮಪ್ಪ ಶೃಂಗಾರರಸ ರತ್ನಾಕರದೊಳ್ ಶೃಂಗಾರ ಪ್ರಪಂಚಂ ಪ್ರಥಮಾಶ್ವಾಸಂ:—

ಕಂ॥ ಮಿಗೆ ಹಾಸಮೆ ಹಾಸ್ಯರಸಂ॥
ನೆಗಳ್ಗುಂ ಪರಿಹಾಸಕಾದಿ ಯಾಲಂಬನ ಮು॥
ವ್ರೊಗೆದವರ ವಿಕೃತ ವೇಷಾ।
ದಿಗಳುದ್ದೀಪನ ವಿಭಾವ ಮಪ್ಪುದೆನಿಪ್ಪರ್॥

End :

ಕಂ॥ ಇಂದು ವರವಾರು ವಿೂತೆಲಿ।
ದಿಂದಂ ಕನ್ನಡದೊಳಾರ್ಯರಾ ಎಂಬಿನ ಮೊ॥
ಳ್ಪಂದೆ . . . . ।
. . . . ಕವಿಸಾಳ್ವಂ॥

ಈ ಕೃತಿ ಕವಿಕೃತ ಸುತಕವಿ।
ತಾಕಾಂತೆಗೆ ತಾನೆ ನವರಸಂ ಸಲೆ (ರಸ) ರ।
ತ್ನಾಕರ . . . . . . ।
. . . . . ರೆಂದುರ್ವರಯೊಳ್।

Colophon :

ಇದು ಶತೇಂದ್ರ ಮುನೀಂದ್ರ (*) (*) ರಸರತ್ನಾಕರದೊಳ್ ಭಾವಾಧಿಕರಣಂ ಚತುರ್ಥ ಪ್ರಕರಣಂ.

(ವಿ-ವಿ.)—

ಸಮಗ್ರ. ಮುದ್ರಿತ ಪುಸ್ತಕದಲ್ಲಿ ಈ ಪುಸ್ತಕಾರಂಭದಲ್ಲಿ ಕೊಟ್ಟಿರುವ ಪದ್ಯಕ್ಕಿಂತಲೂ ಹಿಂದಕ್ಕೆ ಕೆಲವು ಪದ್ಯಗಳವೆ. ಈ ಪ್ರತಿ ಸ್ವಲ್ಪಮಟ್ಟಿಗೆ ಶಿಥಿಲವಾಗಿದೆ. ಗ್ರಂಥಾಕ್ಷರದಲ್ಲಿ ಬರದಿದೆ. ಇದರೊಡನೆ ಶೃಂಗಾರರತ್ನಾಕರ ವೆಂಬ ಪುಸ್ತಕವೂ ಇದೆ.

ಇದು ಲಕ್ಷಣ ಗ್ರಂಥವು. ಮುಖ್ಯವಾಗಿ ಇದರಲ್ಲಿ ರಸಪ್ರಕ್ರಿಯೆಯು ಪ್ರತಿಪಾದಿತವಾಗಿದೆ. ಶೃಂಗಾರ ಪ್ರಪಂಚ ರಸವಿವರಣ, ನಾಯಕನಾಯಿಕಾ ವಿವರಣ, ಭಾವಾಧಿಕರಣ ಎಂದು ನಾಲ್ಕು ವಿಭಾಗಗಳಾಗಿವೆ. ಅಮೃತಾನಂದಿ, ರುದ್ರಭಟ್ಟ, ವಿದ್ಯಾನಾಥ, ಹೇಮಚಂದ್ರ, ನಾಗವರ್ಮ. ಕವಿ ಕಾಮ ಇವರುಗಳ ಮಾರ್ಗವನ್ನು ಅನುಸರಿಸಿ ಕವಿ ಈ ಗ್ರಂಥವನ್ನು ಬರೆದಿದ್ದಾನೆ. ಪ್ರಾಚೀನ ಕವಿಗಳಾದ ಪಂಪ, ರನ್ನ ಮುಂತಾದವರ ಗ್ರಂಥಗಳಿಂದ ಪದ್ಯಗಳನ್ನು ಲಕ್ಷ್ಯಗಳಾಗಿ ತೆಗೆದುಕೊಂಡಿದ್ದಾನೆ. ಈ ಗ್ರಂಥವು ಮದ್ರಾಸ್ ವಿಶ್ವವಿದ್ಯಾನಿಲಯದವರಿಂದ ಮುದ್ರಿತವಾಗಿದೆ.

ಕವಿ ಸಾಳ್ವನೆಂಬವನು. ಜೈನಮತದವನು. ಇವನ ಕಾಲವು ಸು. ೧೫೫೦ ಎಂದು ಕವಿ ಚರಿತ್ರಕಾರರು ಬರೆಯುತ್ತಾರೆ. ಇವನು ಈ ಗ್ರಂಥವನ್ನಲ್ಲದೆ ಭಾರತ, ವೈದ್ಯ ಸಾಂಗತ್ಯ, ಶಾರದಾವಿಲಾಸ, ಮುಂತಾದ ಗ್ರಂಥಗಳನ್ನೂ ಬರೆದಿರುವಂತೆ ಗೊತ್ತಾಗುತ್ತದೆ. ಉಳಿದ ವಿಷಯಗಳನ್ನು ಉದಾಹೃತ ಭಾಗಗಳಿಂದಲೂ ಮುದ್ರಿತ ಪುಸ್ತಕದಿಂದಲೂ ಕವಿಚರಿತ್ರೆಯಿಂದಲೂ ತಿಳಿಯುವುದು.

No. 1254. ರಸರತ್ನಾಕರ by ಸಾಳ್ವ
RASARATNĀKARA by SĀḶVA.

Substance, śrītala. Size, 13⅜ × 2 inches. Pages, 2. Lines, 10 on a page. Extent, 42 granthas. Character, Kannada. Condition, slightly injured. Appearance, old. Mode of writing, good.

Begins on fol. 18-*a* of the manuscript described under No. 1251 ante.

Contains the last portion of the 2nd Āśvāsa and the beginning of the 3rd Āśvāsa only.

Same work as that described above.

(ವಿ.-ವಿ.)—

ಅಸಮಗ್ರ. ೨ ನೆಯ ಆಶ್ವಾಸ (ಪ್ರಕರಣ) ದ ಕೊನೆಯ ಭಾಗವೂ ೩ ನೆಯದರ ಮೊದಲ ಭಾಗವೂ ಇರುವ ಒಂದೋಲೆಯು ಇದೆ. ಸ್ವಲ್ಪಮಟ್ಟಿಗೆ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಕವಿರಾಜ ಮಾರ್ಗಮುಂತಾದುವಿವೆ. ಆ ಬಗೆಗೆ ನಂ. 1251 ನ್ನು ನೋಡುವುದು ಹಿಂದೆ ವರ್ಣಿತವಾದ ಗ್ರಂಥವೇ ಆಗಿದೆ.

No. 1255. ಶೃಂಗಾರ ರತ್ನಾಕರ by ಕಾಮ.
ŚṚNGĀRARATNĀKARA by KĀMA.

Substance, palm-leaf. Size, 11⅝ × 1⅝ inches. Pages, 10. Lines, 7 on a page. Extent, 130 granthas. Character, Kannada. Condition, much injured. Appearance, old. Mode of writing, very good.

Begins on fol. 195-*a* of the Ms. described under No. 1146 ante.

Incomplete.

Contains up to the 54th stanza in the first Paricchēda.

This is a work on poetics divided into 4 Paricchēdas. It is also called "Rasavivēka" which deals with Rasa or poetic sentiment in Kannada language. The date of the author is about 1200 A.D. For other particulars regarding the work see extracts given below.

Beginning :

ಮ.ಸ್ರ.॥ ಉಮೆಯಂ ಶೃಂಗಾರಮಾ ಕೈದುಗಳ ಬಳಗದಿಂ ವೀರಮಾರುಂಡಮಾಲಾ ।
ಧರದಿಂ ಭೀಭತ್ಸಮಾಪನ್ನಗನೆನಿತಾ ಭಯಂ ಬಿಕ್ಷು ಕಾರುಣ್ಯಮಾನಾ ।
ಗ್ನಮೆ ಹಾಸ್ಯಂ ಭಾಳನೇತ್ರಾದ್ಭುತ ಮುಳಿವ ಮರುಳ್ತಂಡದಿಂ ರೌದ್ರಮಾಚಂ ।
ದ್ರಮನಿಂ ಶಾಂತತ್ವ ಮಾಗಲ್ ನವರಸಭರಿತಂ ಶಂಭುರಕ್ಷಿಕ್ಕೆ ನಮ್ಮಂ ॥ ೧ ॥

ಸ್ರ॥ ಶ್ರೀರಾಮಾನಂದನಂ ವಿಶ್ರುತ ವಿಶದ ಯಶೋ ರಂಜಿತಂ ಪ್ರೋಲ್ಲಸಚ್ಛೀಲಂ ।
ಗಾಂಭೋದಾರಾತ್ಮನುದ್ಯದ್ಗುಣ ವಿಲಸಿತ ಧರ್ಮಂ ಜಗತ್ಸ್ರೀವ್ಯಭ ।
ವ್ಯಾಕಾರಂ ರಾಜಪ್ರಿಯಂ ಕೋಮಲನತನು ವಿಲಾಸಾಸ್ಪದಂ ಕಾಮಿನೀ ವೃಂ ।
ದಾರಾಧ್ಯಂ ಕಾಮದೇವಂ ಪೊಸಯಿಸುಗೆ ಜಗಕ್ಕೆಯ್ದೆ ಶೃಂಗಾರದೊಳ್ಪಂ ॥ ೨ ॥

*   *   *   *

ಮ-ವಿ.॥ ಜಗದೊಳ್ ಸನ್ನಿದಮಾದ ನಾಣ್ನುಡಿಗಳಂ ಛಂದಕ್ಕೆ ಬರ್ಪಂತುನೆ ।
ಟ್ಟಗೆ ಮಾತಾಡುವ ಬಲ್ಮೆ ಚಿತ್ತದೊಳೊಱಲ್ದಿರ್ದರ್ಥಮಂ ಕೂಡೆನಾ ।
ಲಗೆಯಿಂ ರಂಜಿಪುದೊಂದು ಜಿನ್ನಣಮದಿನ್ನಾವಂಗೆ ಪುಣ್ಯೈಕ ಭಾ ।
ಗಿಗೆ ಸೈಪಿಂ ದೊರೆಕೊಳ್ಗುಮಾತನೆ ವಲಂ ಶೃಂಗಾರ ರತ್ನಾಕರಂ ॥ ೧೦ ॥

ಪದವೆತ್ತಿರ್ದ ಗಭೀರ ಭಾವಗುಣದಿಂ ಲಾವಣ್ಯಲೀಲಾ ವಿಲಾ ।
ಸದಿ ನುದ್ಯದ್ಗುಣ ಶೋಭೆಯಿಂ ವಿವಿಧ ಭೂಭೃದ್ಭೂರಿ ಸಂಭಾವಿತಾ ।
ಸ್ಪದದಿಂದಂ ಭುವನ ಪ್ರಸಿದ್ಧಿ ನಿಲೆ ತತ್ಕಾವ್ಯಂ ಜಗತ್ಸೇವ್ಯ ಮ ।
ಪ್ಪುದಱಿಂದಂ ಕವಿ ಕಾಮದೇವನೆ ವಲಂ ಶೃಂಗಾರ ರತ್ನಾಕರಂ ॥ ೧೧ ॥

ಕಂ॥ ಮೃದು ಮಧುರ ವಚನ ರಚನೆಯಿ ।
ನುದಾತ್ತ ಕವಿವೃಷಭ ನೃಪ ಕದಂಬ ವಿಪಶ್ಚಿ ॥
ದ್ಧೃದಯಮನಿಕರ್ಗಳಗೊಳುತಿ ।
ರ್ಪುದಱಿಂ ಕವಿಕಾಮನಿಂತು ದೆಸೆದೆಸೆಗೆಸೆದಂ ॥ ೧೨ ॥

ನಿರುಪಮ ಕವಿತಾರಸಮಂ ।
ಪರಕವಿ ಬುಧರತ್ನರಾಜಿ ಬಣ್ಣಿಸೆ ನಾಮಂ ।
ತರಮಂಡಳಕರ ಚಕ್ರೀ ।
ಶ್ವರ ಸಭೆಯೊಳ್ ನೆಗಳ್ದನಿಂತು ಕವಿಮುಖ (ಮಣಿ?) ಮುಕುರಂ ॥ ೧೩ ॥

ಮ.ವಿ.॥ ಸುಕರಂ ಶ್ಲಿಷ್ಟಪದ ಪ್ರಸಾದ ಸಮತಾ ಸದ್ಭಾವ ಮಾಧುರ್ಯವಾ ।
ಕ್ಸುಕುಮಾರತಾದಿ ಕದಂಬ ಕೋಚಿತ ರಸಾರ್ಥವ್ಯಕ್ತಿ ಸೂಕ್ತಂ ಚಿರಾ ।
ಧಿಕತೇಜೋ ವರಕಾಂತಿ ಭಾಷಿತ ಸಮಾಧಿವ್ಯಾಪಕೋದಾರ್ಥ ಸೌ ।
ಖ್ಯಕರಾಳಂಕೃತಮಾಗೆ ಪೇಳ್ದ ಕೃತಿಯಂ ಸೇವ್ಯರ್ ಮನಂಗೊಳ್ವರೇ ॥ ೧೪ ॥

End :

ಮ.ವಿ. ॥ ಎನಿತಂ ಬಾರಿಪೆನೆನ್ನವೊಾತ ನಿನಿಸಂ ಕೈಕೊಳ್ಳೈ ನೀಂ ನಿನ್ನಮು ।
ನ್ನಿನಕೂಸಾಟವುನೆಲ್ಲಿಯುಂ ಬಿಸುಡೆ ನಿನ್ನಂ ಸ್ವೈರಿಡಲ್ಬಾರದಿ ।
ನ್ನಿನಿಸಂ ಮಾಡಿದೆ ಮಾಡಿದಂದದಿ ನಿರಾ ಸಾಕೆಂದು ಕೂಡಾಟ ಮೋ ।
ಪನೆ ಕೇಳ್ಸಲದೆ ಸತ್ಕ್ರಾಡಂ ಮರೆವೆನೇ ನೀನಾಡಿದಾಟಂಗಳಂ ॥ ೫೪ ॥
(ಇದು ರೌದ್ರ ಶೃಂಗಾರಂ)

(ವಿ.ವಿ.)—

ಅಸಮಗ್ರ ಒಂದನೆಯ ಪರಿಚ್ಛೇದದಲ್ಲಿ ಮೊದಲಿಂದ ೫೪ ಪದ್ಯಗಳವೆ. ಶಿಥಿಲವಾದ ಪ್ರತಿ. ಲಿಪಿ ಉತ್ತಮವಾಗಿದೆ. ಇದರೊಡನೆ ಲೀಲಾವತೀ ಪ್ರಬಂಧವಿದೆ. ಅದು ಡಿ. ೧೧೪೬ ನೆಯ ನಂಬರಿನಲ್ಲಿ ವರ್ಣಿತವಾಗಿದೆ. ಮುಂದಣ ನಂಬರಿನಲ್ಲಿ ವರ್ಣಿತವಾಗಿರುವ ಪ್ರತಿ ಇದರ ಪ್ರತಿಕೆಯು.

ಇದು ಲಕ್ಷಣ ಗ್ರಂಥವು. ನಾಲ್ಕು ಪರಿಚ್ಛೇದಗಳವೆ. ಮೊದಲನೆಯದರಲ್ಲಿ ನವರಸ ವಿವರಣೆಯೂ ಎರಡನೆಯದರಲ್ಲಿ ಭಾವಭೇದ ನಿರ್ಣಯವೂ ಮೂರನೆಯದರಲ್ಲಿ ನಾಯಕನಾಯಿಕಾ ವಿಚಾರವೂ ನಾಲ್ಕನೆಯದರಲ್ಲಿ ಸಖಸಖೀ ಸಂಭೋಗ ವಿಪ್ರಲಂಭ ಪ್ರಮಾವಸ್ಥಾದಿ ವಿವರವೂ ಇದೆ. ಈ ಗ್ರಂಥಕ್ಕೆ ರಸವಿವೇಕವೆಂಬ ಮತ್ತೊಂದು ಹೆಸರೂ ಇದೆ. ರಸ ವಿಷಯವನ್ನು ಕನ್ನಡದಲ್ಲಿ ವಿವರವಾಗಿ ಹೇಳುವ ಗ್ರಂಥಗಳಲ್ಲಿ ಇದು ಮೊದಲನೆಯದು. ಈ ಗ್ರಂಥದಿಂದ ಸಾಳ್ವ ಮುಂತಾದವರು ಲಕ್ಷ್ಯ ಪದ್ಯಗಳನ್ನು ಸ್ವೀಕರಿಸಿದ್ದಾರೆ. ಇದು ಮೈಸೂರು ಕಾವ್ಯಕಲಾನಿಧಿಯವರಿಂದ ಮುದ್ರಿತವಾಗಿದೆ. ಕವಿ 'ಕಾಮ' ನೆಂಬವನು. ಇವನ ಕಾಲವು ಸು. ೧೨೦೦ ಎಂದು ಕವಿ ಚರಿತ್ರಕಾರರು ಬರೆಯುತ್ತಾರೆ. ಉಳಿದವಿಷಯಗಳನ್ನು ಉದಾಹೃತ ಭಾಗಗಳಿಂದಲೂ ಮುದ್ರಿತ ಪುಸ್ತಕದಿಂದಲೂ ಕವಿ ಚರಿತ್ರೆಯಿಂದಲೂ ತಿಳಿಯುವುದು.

No. 1256. ಶೃಂಗಾರ ರತ್ನಾಕರ by ಕಾಮ.
ŚṚNGĀRARATNĀKARA by KĀMA.

Substance, paper. Size, 10-5/16 × 9½ inches. Pages, 12. Lines, 20 on a page. Extent, 130 granthas. Character, Kannada. Condition, good. Appearance, new.

Restored in 1933–34 from the Ms. described above (D. No. 1255).

(ವಿ.ವಿ.)—

ಅಸಮಗ್ರ. ಇದು ಹಿಂದಣ ನಂಬರಿನಲ್ಲಿ (ದಿ. ೧೨೫೫) ವರ್ಣಿತವಾಗಿರುವ ಪ್ರತಿಯ ಪ್ರತಿಕೆಯಾಗಿದೆ.

No. 1257. ಶೃಂಗಾರ ರತ್ನಾಕರ by ಕಾಮ.
ŚṚNGĀRARATNĀKARA by KĀMA.

Substance, Śrītāla. Size, 18 × 2-3/16 inches. Pages, 36. Lines, 7–10 on a page. Extent, 504 granthas. Character, grantha. Condition, slightly injured. Appearance, old. Mode of writing, good.

Begins on fol. 1 (ಕ ka) a of the manuscript described under No. 1253 ante.

Wants verses 1–12 in the beginning, otherwise complete.

Foll. 8*b* and 19*b* are left blank.

Same work as that described under No. 1255 ante.

Beginning :–

ಸುಕರಂ ಶ್ಲೇಷವಿದ (ಪದ ?) ಪ್ರಸಾದ ಸಮತಾ ಸದ್ಭಾವ ಮಾಧುರ್ಯವಾಕ್ ।
ಸುಕುಮಾರಾದಿ ಕದಂಬಕೋಚಿತರಸಾರ್ಥವ್ಯಕ್ತಿ ಸೂಕ್ತಂ ಚಿದಾ ।
ಧಿಕತೇಜೋವರ ಕಾಂತ ಭಾಷಿತ ಸಮಾಧಿ ವ್ಯಾದ ಕೋದಾತ್ತ ಸಾ ।
ಖ್ಯಕರಾಲಂಕೃತ ಮಾಗೆ ಪೇಟ್ದ ಕೃತಿಯುಂ ಸೇವ್ಯಮ್ಮಾರ್ಗನಂ ಗೊಳ್ಳರೇ ॥

ಅವರಿಂದೀತನ ವಾಣಿಯುಲ್ಲದೆ ಗಭೀರೋದಾರ ಶೃಂಗಾರ ಸಾ ।
ರದೊಳುದ್ಭಾವಿಸದೆಂದು ಪಂಡಿತ ಜನಂ ನೀನೆಯ್ದೆ ಪೇಳಲ್ಕೆ ವೇ ।
ಳ್ಪುದಿದಂ ಭಾವರಸ ಪ್ರಪಂಚಮನೆನಲ್ ಶೃಂಗಾರ ರತ್ನಾಕರಾ ।
ಖ್ಯದಿ ನಿಂತೀಕೃತಿಯುಂ ಮನಂ ಗೊಳಸಿದಂ ಶೃಂಗಾರ ರತ್ನಾಕರಂ ॥

ಸರಸೀಜೋದ್ಭವ ಕರ್ಣಿಕಾಭವ ಕುಬೇರಾಪತ್ಯ ಪಾಂಚಾಲಕೊ ।
ಬರ ವಾತ್ಸ್ಯಾಯನ ಚಂದ್ರದತ್ತಕ ಮನಸ್ಸಂಜಾತ ನಾರಾಯಣಾ
ಮರಸಿಂಹಾದಿಗಳಂ ನೆಗಟ್ತೆವಡೆದಾ ಶೃಂಗಾರ ಮಾಗಳ್ಕರಂ ।
ದೊರೆವೆತ್ತತ್ತೆನೆ ಬೇಱೆ ವಿಸ್ತರಿಸಿದಂ ಶಂಗಾರ ರತ್ನಾಕರಂ ॥

ಭವಪಾದಾಂಬುಜ ಷಟ್ಪದಂ ನವರಸವ್ಯಾಪಾರಮುಂ ಭಾವಸಂ ।
ಭವಮುಂ ನಾಯಕ ನಾಯಿಕಾ ಸಖಸಖೀ [ತದ್ವಿಪ್ರ] ಸಂಭೋಗ ತದ್ವಿಪ್ರಲಂ ।
ಭಟ ಪ್ರಸ್ತುತ ವೈಶಿಕಾದಿ ರಸಶಾಸ್ತ್ರೋದ್ಭೂತ ಸನ್ಮಾರ್ಗ ವೃ ।
ತ್ತಿ ವಿಕಲ್ಪಂಗಳುಮಂ ಮನಂ ಗೊಳಸಿದಂ ಶೃಂಗಾರ ರತ್ನಾಕರಂ ॥

ಕಂ॥ ಅವರೊಳ್ ರಸಭಾವಮೆ ಮು ।
ಖ್ಯವಪ್ಪ ಕಾರಣಾದಿನಿಲ್ಲಿ ಮೊದಲೊಳ್ತತ್ವಂ ।
ಭರವಿಧಿಯನವರ ವರ್ಣ್ಣಮು ।
ನವರಧಿದೈವಂಗಳಂ ಮನಂಗೊಳ್ ಪೇಟ್ವೆಂ ॥

ಶೃಂಗಾರದಿಂದೆ ಹಾಸ್ಯಂ ।
ಸಂಗಳಸಿದ ರೌದ್ರದಿಂದೆ ಕರುಣಂ ಸ್ಫುಟಮೀ
ರಾಂಗದಿನದ್ಭುತವೆಂದುಂ ।
ಪಿಂಗದೆ ಬೀಭತ್ಸುವಿನಿಂ (ಭತ್ಸದಿಂ) ಭಯಾನಕಮೊಗೆಗುಂ ॥

* * *

ಕಂ ॥ ಚದುರ ತಮರ್ವ್ವನೆ ರಸ ಭಾ ।
ವದ ನಿಧಿ ಮಹಿಮಾಂಬು ರಾಶಿ ವಿನಯ ನಿಧಾನಂ ॥
ಸುದತೀ ಮನೋಭಿರಾಮಂ ।
ಮದನಾಗಮ ಸೂತ್ರಧಾರ ನೀ ಕವಿಕಾಮಂ ॥

Colophon :

ಇದು ವಿನಮದಮರ ನಿಕರ ಮಕುಟ ಮಣಿಗಣ ಕಿರಣಮಣೀಯ ಶಿವಪದಾಂಭೋಜ ಭೃಂಗಾಯಮಾನ ಸರಸ್ವತೀ ಪ್ರಸಾದಾ ಸಾದಿತ ಕವಿತಾ ಪ್ರಭಾವಂ ಕವಿಕಾಮ ದೇವ ವಿರಚಿತ ಮಪ್ಪ ರಸವಿವೇಕ ನಾಮ [ಕ] ಶೃಂಗಾರ ರತ್ನಾಕರದೊಳ್ ನವರಸ ವ್ಯಾವರ್ಣನಂ ಪ್ರಥಮ ಪರಿಚ್ಛೇದಂ ॥

— ದ್ವಿತೀಯ ಪರಿಚ್ಛೇದಂ —

ಕಂ॥ ಶ್ರೀನಿಧಿ ವಿವೇಕನಿಧಿ (ಕವಿ ।
ತಾನಿಧಿ) ಸೌಭಾಗ್ಯನಿಧಿ ಯಶೋನಿಧಿ ವರ ವಿ-॥
ದ್ಯಾನಿಧಿ ವಿಳಾಸನಿಧಿ ಮಹಿ ।
ಮಾನಿಧಿ ಮಾನನಿಧಿ ದಾನನಿಧಿ ಕವಿಕಾಮಂ ॥

ಕಂ ॥ ಪರಮ ಪ್ರೇಮಾವಸ್ಥಾಂ ।
ತರದ ವಿಭೇದಕ್ಕೆ ವಿವಿಧ ಮಧುರೋಕ್ತಿಗಳಿಂ ॥
ವಿರಚಿಸಿದ ನುದಾ [ಹರಣ] (ಕೃತಿಯಿಂ)
ಪರಿಣತಿಯೊಳ್ ಸುಕರ ಸುಕವಿಮುಖ ಮಣಿಮುಕುರಂ ॥

Colophon :

ಇದು ವಿನಮದಮರ * * ರಸವಿವೇಕ (ನಾಮ) ಶೃಂಗಾರರತ್ನಾಕರದೊಳ್ ಸಖ ಸಖೀ ಸಂಭೋಗ ವಿಪ್ರಲಂಭ ಪ್ರವಾಸಾವಸ್ಥಾ ವಿಸ್ತರಂ ಚತುರ್ಥಪರಿಚ್ಛೇದಂ ॥—

(ವಿ-ವಿ.)—

ಅಸಮಗ್ರ. ಮೊದಲ ಪ್ರಕರಣದಾದಿಯಲ್ಲಿ ೧೩ ಪದ್ಯಗಳಿಲ್ಲ. ಇಲ್ಲದಿದ್ದರೆ ಪೂರ್ಣವೆನ್ನ ಬಹುದಿದ್ದಿತ್ತು. ಇದು ಸ್ವಲ್ಪ ಮಟ್ಟಿಗೆ ಶಿಥಿಲವಾಗಿದೆ. ಗ್ರಂಥಾಕ್ಷರದಲ್ಲಿ ಬರೆದಿದೆ. ಇದರೊಡನೆ ರಸರತ್ನಾಕರವೆಂಬ ಮತ್ತೊಂದು ಪುಸ್ತಕವೂ ಇದೆ. ಆ ಬಗೆಗೆ ಡಿ.ನಂ. ೧೨೫೩ನ್ನು ನೋಡುವುದು.

ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1258- ಶೃಂಗಾರ ರತ್ನಾಕರ by ಕಾಮ.
ŚṚNGĀRARATNĀKARA by KĀMA.

Substance, paper. Size, 9¼ × 7¼ inches. Pages, 6. Lines, 16 on a page. Extent, 72 granthas. Character, Kannada. Condition, much injured. Appearance, old. Mode of writing, fair.

Begins on page 314 of the manuscripts described under No. 19 ante.

Contains verses 1–14 and 26–31 in the first Pariccheda.

Same work as that described above.

(ವಿ-ವಿ.)—

ಅಸಮಗ್ರ. ಪ್ರಥಮ ಪರಿಚ್ಛೇದದಲ್ಲಿ ೧-೧೪, ೨೭-೩೧ ಪದ್ಯಗಳವೆ. ಈ ನಡುವೆ ಕೆಲವು ಸಂಖ್ಯಾ ಶಬ್ದಗಳು ಬರೆದಿವೆ. ಅತ್ಯಂತ ಶಿಥಿಲವಾದ ಪ್ರತಿ. ಇದರೊಡನೆ ಇನ್ನೂ ಕೆಲವು ಪುಸ್ತಕಗಳವೆ. ಅವಾವುವೆಂಬುದನ್ನು ಹಿಂದಣ ೧೯ ನೆಯ ನಂಬರಿನಲ್ಲಿ ನೋಡಿ ತಿಳಯುವುದು.

ಇದು ಹಿಂದೆ ವರ್ಣಿತವಾಗಿರುವ ಗ್ರಂಥವೇ ಆಗಿದೆ.

No. 1259. ಶೃಂಗಾರಸೂತ್ರೋದಾಹರಣ by ಚಿಕ್ಕುಪಾಧ್ಯಾಯ.

SṚNGĀRASŪTRŌDĀHARAṆA by CIKKUPĀDHYĀYA.

Substance, palm-leaf. Size, 11¾ × 1-1/16 inches. Pages, 104. Lines, 4 on a page. Extent, 546 granthas. Character, Kannada. Condition, very much injured. Appearance, old. Mode of writing, good.

Begins on fol. 148 of the manuscript described under No. 257 ante, wherein the name of this work has been mentioned as "Rangaswāmiya Sṛngārasūtrōdāharaṇegaḷu".

Complete.

Contains songs written in illustration of the original sūtras taken mostly from Sṛngāraratnākara and Rasaratnākara. God Ranganātha worshipped at Srirangapaṭṭaṇa is made the hero. The author is Cikkupādhyāya.

Beginning :

॥ ಸೂತ್ರ ॥

ಕಂ ॥ ವಿಲಸಿತ ಭಾವಂ ಮನದ ಮೊ।
ದಲ (ವಿ) ಕ್ರಿಯೆ ಮುಂದಣ್ಣೆಸೆವಲಂಕಾರ ಕರಂ ॥
[ಬ] (ದ) ಲಿದು (ಂ) ಸಿಂಗರದೊ [ಳದು] (ಳ್) ಕಾಂ।
ಸಲೆ ನೇತ್ರ ಭ್ರೂವಿಕಾರಮಿತ್ತೊಡೆ ಹಾವಂ ॥

॥ ರಾಗ ॥ ॥ ತಾಳ ॥

ಪಲ್ಲವಿ ॥ ಭಾವವೀ ಬಗೆಯಾಗಿ ಬಗೆಗೊಂಡಿದೆ ।
ದೇವ ಶ್ರೀರಂಗನನು ಕಾಮಿಸಿದ ಕಾಮಿನಿಗೆ ॥

ಚರಣಗಳು ॥ ಮೊದಲ ಮೊಲದೊರ್ವರನು ಮೊಗಸಿ ನೋಡುವುದಿಲ್ಲ ।
ಮೆದೆದಾರಳಾಪ್ತ ಸಖಿಯರು ಪೇಳ್ವ (ದ) ॥
ಪದೆದು ಯೋಗಿಯು ತೆರದಿ ತದ್ಧ್ಯಾನಪರೆಯಾಗಿ ।
ಮುದದಿಂದಿರುವ ರೀತಿ ಮುಂಬರಿದಿದೆ ॥ ೧ ॥

ಅಗಿದು ಮತ್ತೊಂದುಲಿಗೆ ಆನತಾನನೆಯಾಗಿ ।
ಸೊಗಸಿನಿಂ * * ವಾರ್ತೆಯನೆ ಕೇಳದೆ ॥
ಬಗೆ ಬಗೆಯ ನೋಟದಿಂ ಬಿಡ ಬಿಡದೆ ಭಾವಿಸುತ ।
ಸೊಗಸಿನಿಂ ಪುಳಕ ನಿಮಿರಿಸುತೆ ಪೆಚ್ಚಿರುವವಳ ॥ ೨ ॥

ಕೊಡಗೂಸು ತನೆಮುಡುಗಿ ಬಾಯ್ದೆರೆಯಿನೊಳ್ನಗೆಯು ।
ನೊಡನೆ ನೂಸುತ ಚಿಕ್ಕದೇವನೃಪನ ।
ಬಿಡದಾಳ್ದ ರಂಗನೊಳು ಕೂಡವೇಳ್ಕಂದಿರುವ ।
ಮಡದಿ ರನ್ನೆಯು ಪರಿಯ ಪರಿಕಿಸು ಪೊಡರಿದಕಟ ॥ ೩ ॥

(ಇದು ಭಾವ)

। ರಾಗ ॥ ನಾದನಾಮಕ್ರಿಯೆ ॥

ಪಲ್ಲವಿ ॥ ಪರಿಕಿಸು ದೇವೋತ್ತುಂಗ ನಿನ್ನ ।
ಯೆರೆಯಳ ಹಾವವ ನೆಲೆ ಸಿರಿ ರಂಗ ॥

ಚರಣಗಳು :— ಮಿರುಪೊಡಲಿನ ಕಡು ಚೆನ್ನೆ ಚೆಲ್ವ ।
ಬೆರೆನೊಸಲಿನ ಪೆಣ್ಮಣಿ ಮೋಹನ್ನೆ ।
ಇರುತೆನ್ನ ಪಕ್ಕದೊಳ್ ನಿನ್ನೆ ನಿನ್ನ ।
ಬರೆ ಗಂಡುಸುರೆ ನಿಟ್ಟೆಸಿದಳೇನೋ ಸನ್ನೆ ॥ ೧ ॥

ಪೊಳೆವಿನಿದುಟಿಯ ವೈಯ್ಯಾರಿ ಬೆಂಪು ।
ದಳೆದ ಪಲ್ವರಿಸೆಯ ಮೋಹನಾಕಾರೆ ।
ಗಿಳಿದೇರನ ಕೈಕಠಾರಿ ನಿನ್ನ ।
ಪೊಳಸಿಗೆ ಪೊಂಚಿಕೊಂಡಿಕಳಾ ನಾರಿ ॥ ೨ ॥

ಚಿಕ್ಕದೇವೇಂದ್ರನ ಪೊರೆವ ಶ್ರೀರಂಗ ।
ನಿಕ್ಕುವುದೆನ್ನ ನಿರಿಗೆಯ ಸರವ ॥
ದಿಕ್ಕರಿಸದೆ ನೆರೆ . . . ರವು ಅನುಗ್ಯೆ ।
ಯ್ಯಕ್ಕಟ . . . . ಪರಾಮರಿಸುವಳರವ ॥ ೩ ॥

(ಇದು ಹಾವ).

*   *   *   *

॥ ಸೂತ್ರ ॥

ಕಂ ॥ ನಯನರತಿ ಚಿಂತೆ ಸಂಕ ।
ಲ್ಪಯುತಂ ಜಾಗರತೆ ಕಾರ್ಶ್ಯಮರತಿಯುಮಾನಂ ॥
ಪ್ರಯಂ ವಿಮೋಹಂ ಮೂರ್ಛ್ಛಾ ।
ಶ್ರಯ (೦) ಮರಣ ಮಿಂತವಸ್ಥೆ ದಶವಿಧಮಕ್ಕುಂ ॥

ಚಕ್ಷು ಪ್ರೀತಿಯು ದಿನಿಯನ ।
ನೀಕ್ಷಿಪುದುರೆ ನೆನೆವುದದು ಮನಸ್ಸಂಗಂ ಲೋ ।
ಲಾಕ್ಷಿ ಮನದಲ್ಲಿ ಸಂಕ ।
ಲ್ಪಕ್ಷೇಪದೆ ನೆನೆವುದದುವೆ ಸಂಕಲ್ಪಾಖ್ಯಂ ॥

॥ ರಾಗ ॥

ಪಲ್ಲವಿ :— ನೋಟದಾಟದ ಬೆಡಗ ಬಣ್ಣಿಪ ನ ।
ಘಾಟದ ಕವಿಯಾವನೋ ॥

ಚರಣಗಳು ॥ ಮಕುಟದೊಳಡಗೊಳುತೆ ।
ಮಕರ ಕುಂಡಲಕೆ ಮೈವೆಚ್ಚಿ ನಿಂದುರ್ ॥
ಸುಕಪೋಲ ಕಣ್ಪುರ್ಬುಗಳೊಳು ನೋಳ್ಪ ।
ಸಕವನೇ ವಣ್ಣಿಪೆ ॥ ೧ ॥

ಸರ್ವಾವಯವಗಳನು ಸಲೆ ನಿಂದುರ್ ॥
ಪರ್ವಿ ಪರಿವು ಪೊಳೆದು ॥
ಉರ್ವುತೆಯುಪಮಾನ ವೀವರಿಲ್ಲೆಂದುರೆ ।
ಬೀರ್ವರಿವುತೆ ನಿಟ್ಟಿಪ ॥ ೨ ॥

ಚಿಕದೇವ ನೃಪನ ನಾಳ್ದ ರಂಗನಾ ।
ಯಕನೊಡನೊಡವೆರೆವಾ ॥
ಸಕತಿನಿಂವೀಕ್ಷಿಸಿ ನಾತ್ವಿಕೋದಯ ವಾಂತ ।
ಚಕಿತ ಮೃಗೇಕ್ಷಣೆಯು ॥ ೩ ॥

(ಚಕ್ಷುಃ ಪ್ರೀತಿ).

॥ ರಾಗ ॥

ಪಲ್ಲವಿ:— ಚಿಂತೆಯನು ಚಿತ್ತದೊಳು ತಾಳ್ದಿರ್ದಳ ।
ಚಿಂತಾಯಕ ರಂಗ ಚಿತ್ತೈಸಿ ಪೊರೆಯುವಳ ॥

ಚರಣಗಳು ॥ ಬೇರೊಂದ ನೆನೆಯುಳುರೆ ಬೇವಸಗೊಳುತಿರುತೆ ।
ಹಾರೈಸಿ ನಿನ್ನನೆ ಹಂಬಲಿಸುತ ॥
ನೀರ ನಿನ್ನಯ ರೂಪದಾಳಿಯೊಳು ಬೆಚ್ಚಿಕ್ಕು ।
ಧಾರಿಣಿಯುಂ ಮಾಗಸಮುಂ ನೀನೆ ಮಯಮಾಗೆಣಿಸಿ ॥ ೧ ॥

ಎಂದು ವಂದಪನೊ ಯೆನ್ನಕ್ಷಿಗಳಗಾನಂದ ।
ವೆಂದಪ್ಪುದೋ ಬಹನೋ ಬಾರನೋ ಎಂದು ॥
ಕಂದಿ ಕರಗುತ ಮನದಿ ದಂದುಗಂಬಡುತೆಣಿಕೆ ।
ಯಿಂದ ಪರವಶದರ್ಶನೆಂದಂದು ಕಳವಳಪ ॥ ೨ ॥

ನಿನ್ನ ಮಾಯೆಯ ಮಹಿಮೆ ಯೆಂತೆಂತೊ ತಿಳಿಯದೀ ।
ಚೆನ್ನೆಯನು ಚದುರಿಂದ ನೆರೆವಂದವ ॥
ನನ್ನಿಯಿಂದೆಸಗಕಟ ಚಿಕದೇವ ನೃಪನೊಡೆಯ ।
ಪನ್ನಗಾಧಿಪತಲ್ಪ ಪರಮ ಪಶ್ಚಿಮ ರಂಗ ॥ ೩ ॥

(ಮನಸ್ಸಂಗ).

End :

॥ ಸೂತ್ರ ॥

ಕಂ ॥ ಕುಪಿತಾತಿ ಹರ್ಷವಚನ ।
ಪ್ರಪಂಚೆ ಮತಿಸಂಚಳತ್ವಮುಂ ಚಪಳತೆಯಿಂ ॥
ವಿಪರೀತ ವೃತ್ತಿಯಿಂದಾ ।
ತೃಪತಿಗೆ ನೆವವಿಲ್ಲ (ಟ್ಟ) ಕಾರಣಂ ದೂರುತ್ಕಂ ॥

ಮುಳಯಿಸಿದೊಡೆ ಮುಳಯದೆ ಪತಿ।
ತಿಳವೆ ಮನಂಗೊಂಡು ತಿಳಯಲೊಲ್ಲದೆ ನಲ್ಲಂ ॥
ಮುಳಯಿಸದೆ ಮುಳವ ತಿಳಪದೆ।
ತಿಳವಬಲೆ ಜಘನ್ಯೆಯೆಂಬ ಪೆಸಱಂ ಪಡೆಗುಂ ॥

॥ ರಾಗ ॥ ಮಧುಮಾಧವಿ ॥

ಪಲ್ಲವಿ :— ಜಾಣೆ ಜಘನ್ಯೆಯ ವಚನ ರಚನೆಯ।
ಜಾಣಮೆಯನು ರಂಗ ಜಾಣ ನೀ ತಿಳಯ ॥

ಚರಣಗಳು :—ಸುಡುಸುಡು ಪೋಗೆನೆಂಬೆನೆ ಮಿರಗೊಡದು।
ಒಡನೆ ಪೋದೊಡೆ ನೋಡದಿರೆ ನೆಂದೊಡೊಸೆದು ॥
ಕಡುಪಿನಿಂ ನಯನಂಗಳಂತಿರದಿರದು।
ಗಡನೋಡೆ ನಗಲೊಲ್ಲೆಯನೆ ನಗೆಗೆಡದು ॥ ೧ ॥

ನಗೆಯಿನವನ ಪ್ರಮವಾಳಲೊಲ್ಲನೆನಲು।
ಬಗೆಮೋಲ್ವಾಯ್ದವನನು ಪೊಗಳಸಲು ॥
ಪಗಲಿರುಳೆನ್ನದೆ ಹತ್ತಿರಿಪ್ಪವೊಲು।
ಮೊಗಸಿಹುದೇನೀ ಮಾಯದೆದೆ ದಿಗಿಲು ॥ ೨ ॥

ದಿಗಿಲು ಡಿಳ್ಳಸಿ ಯನ್ನ ಚಿಕದೇವ ನೃಪನ।
ಬಗೆಯಲಿ ತಾಳ್ದ ಶ್ರೀರಂಗ ಒಲ್ಲಹನ ॥
ನಗಲದೆ ನೆರೆದಿರೆಂದಪುದೀ ಹದನ।
ಸೆಗಳಸೆಂಬಳು ಯೆನ್ನ ಮೋಹದ ಸದನ ॥ ೩ ॥

(ಇದು ಜಘನ್ಯ ನಾಯಿಕೆಯ ವಚನ)

॥ ರಾಗ ॥

ಪಲ್ಲವಿ :— ಎಂತೊ ಜಘನ್ಯ ನಾಯಕಿಯ ಕೋಪವ।
ನೆಂತು ಸೈರಿಸಿ ತಾಳ್ಪುದಕಟಕಟ ॥

ಚರಣಗಳು :—ನುಡಿದೊಡೆ ಗನ್ನಗದುಕ ಹನ್ನಸಗಳ।
ನುಡಿಯೆಂಬೆ ನಿನ್ನ ನಾಣಿಲಿ ತನಹ।
ನೊಡನೆಯುಸಿದ್ರೊಡೆ ಯೊಂದೊಂದು ಪಳಿಯುಕ್ಕು।
ಬಿಡುಬಿಡೀ ಬಂಡಾಟದ ಬಗೆಯನೆಂದೆಂಬ ॥ ೧ ॥

ತುಡುಗುಣಿತನವ ಬಿಡೆನ್ನ ಬದುಕೇನೆಂಬ।
ಕಡುಮುನಿಸೆನಗೆ ಕಂಗೆಟ್ಟೋತುವೆ ॥
ಒಡಿದು ಒಡಿದು ಸೊಪ್ಪು ಸೊವಡು ಗೆಯ್ದಪೆನೆಂಬ।
ನುಡಿದೋರಿ ನುಣ್ಣೋಟದಿಂದ ನೋಡುತ್ತಿರ್ಪ ॥ ೨ ॥

ನೆರೆಚಿಕ್ಕದೇವೇಂದ್ರನ ಪೊರೆದ ರಂಗ।
ಅಱುಗುಲಿತನವನುಳದು ಯೆನ್ನಯ।

ಪೊರೆಯೊಳು ಪೊರೆಯುನೆಸಗದೆ ಪೊಂದಿರುಯೆಂದು ।
ನೆರೆತ್ರನೆನ್ನೊಳು ತಾನೆ ತಿಳದು ತಿಳವ ತೋರ್ಪ ॥ ೩ ॥

(ಇದು ಜಘನ್ಯ ನಾಯಿಕೆಯ ಕೋಪ).

॥ ರಾಗ ॥

ಪಲ್ಲವಿ :— ನೆರೆ ಜಘನ್ಯೆಯ ಸುಪ್ರಸನ್ನತೆ ಯಿದು ।
ಎಱಕಗೊಂಡೆದೆಯೊಳಗೆ ಯೆಂತೆಂತೊ ಸೊಗಸುತ್ತಿದೆ ॥

ಚರಣಗಳು ॥ ಮುಳಿಸಱಿದೆಱಗೆ ಪೋಡಿಗೆಯ್ದಿದ್ದು ಮನಗುಡದೆ ।
ತ್ರಳರು ತ್ರಳರಿಲ್ಲ ನೀನಿರ್ಪುದೇನು ॥
ಎಳಸಿಯಿರದೆನಗೆಂದು ಯೆಂತೆಂತೊ ಅಳಲ್ದಳಲ್ದು ।
ಪಳಪಳನೆ ಕಣ್ಣೀರ ಪರಿಪರಿಯನುದುರಿಸುವ ॥ ೧ ॥

ಬರಿದೊಡಂಬಡಿಕೆಗೊಳಗಾಗದಿರೆಯೆಳ್ದು ।
ಪರಿದೆಯ್ದುವನಿತಱತೊಳ್ ಪದಱಿವಂದು ।
ಕರವಿಡಿಯಲೊಡಮುರಿಚೆ ಕಾಲ್ಗೆಱಗಿಯುಮರ್ದಪ್ಪಿ ।
ಸರಸವಾತಾಡುತ್ತೆ ಸೆಜ್ಜೆವನೆಗೆಳೆದೊಯ್ವ ॥ ೨ ॥

ಜಾಣ ಚಿಕದೇವನಾಣತಿಗೆ ನಿಲದಿರ್ದೊ ।
ಡೂಣೆಯವೆ ಎಂದೆನ್ನೊಳೊರೆದ ತೆರದಿ ॥
ಕಾಣಿಸೆನಗೀವಗೆಯ ಕರುಣಿ ಪಶ್ಚಿಮ ರಂಗ ।
ಬಾಣಪಂಚಕನ * * ಯೊಳೆನ್ನ ತಣಿಸೆಂಬ ॥ ೩ ॥

(ಜಘನ್ಯ ನಾಯಿಕೆಯ ಪ್ರಸಾದ).

॥ ರಾಗ ॥

ಪಲ್ಲವಿ :— ತರುಣಿ ತನ್ನೊಡನೆಂದು ತವಕದಿಂ ನೆರೆದೊಂದು ।
ಪರಿಯ ಬಣ್ಣಿಸುವ್ರದರರೆಯೆನಗರಿದು ॥

ಚರಣಗಳು :—ಬೆಂಡೇಳೆಯಲರ್ಗಣ್ಣು ಬೆಮರುಣ್ಮೆ ನಾಣ್ಸೂಸೆ ।
ಕೊಂಡು ಕೊನೆಯ ಕೊರಳುಲಿ ಸುಯ್ಯೊದು ।
ಲಂಡಿಸಿಯೊಳಗಿಳದಿರೆ ರೋಮಾಂಚನವೆಡೆ ।
ಗೊಂಡಿರೆ ಝುಮ್ಮೆಂದಂಗವ್ರೊಲೆದು ತೂಗೆ ॥ ೧ ॥

ಮಿಡುಕೋಡಿದ ಪುರ್ಬು ಕೆಚ್ಚುಗುಂದಿದ ಕುಚ ।
ನಡುಕಂಗೆಟ್ಟುಱಾಱಿದ ಸೇದೆ ।
ಒಡನೇಳ್ವ ಪುಳಕವದೊಯ್ಯಾರ ವೆತ್ತಿರೆ ।
ಗುಡಿಗಟ್ಟ ಕೊನರ್ವ ಸಾತ್ವಿಕೋದಯಗಳು ॥ ೨ ॥

ಮೊಗದೊಳು ಮೊಗ ತೋಳ್ಗೊಳ್ತೋಳು ಬಾಯಿದೆರೆ ।
ಯೊಗುಮಿಗೆಯಿಂ ಬಾಯಿದೆರೆಯೊಳಿರ್ದು ॥
ಚಿಗದೇವ ನೊಡೆಯ ರಂಗೇಶ ಯೆಂದೊಂದು ।
ಪಗೆಯಲಿದೋರಿ ಯೊಡನೆ ಪೆಂಪೇರಿ ॥ ೩ ॥

(ಸಂ * ಗ ಶೃಂಗಾರ).

(ವಿ-ವಿ.)—

ಸಮಗ್ರ. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಇದರೊಡನೆ ಇನ್ನು ಕೆಲವು ಪುಸ್ತಕಗಳವೆ. ಅವಾವುವೆಂಬುದನ್ನು ಹಿಂದಣ ೨೫೭೭ ನೆಯ ನಂಬರಿನಲ್ಲಿ ನೋಡಿ ತಿಳಿಯ ಬಹುದು.

ಇದರಲ್ಲಿ ಸೂತ್ರರೂಪವಾಗಿ ಕಂದ ಪದ್ಯಗಳೂ ಉದಾಹರಣ ರೂಪವಾಗಿ ಹಾಡುಗಳೂ ಇವೆ ಸೂತ್ರಗಳು ಶೃಂಗಾರ ವಿಷಯವಾದವುಗಳು. ಶೃಂಗಾರರತ್ನಾಕರ, ರಸರತ್ನಾಕರ ಗ್ರಂಥಗಳಲ್ಲಿರುವ ಲಕ್ಷಣ ಸೂತ್ರಗಳನ್ನೇ ಕವಿ ತೆಗೆದುಕೊಂಡು ಅವುಗಳಿಗೆ ಉದಾಹರಣೆಗಳನ್ನು ಸ್ವಂತವಾಗಿ ಹಾಡಿನ ರೂಪದಲ್ಲಿ ರಚಿಸಿದ್ದಾನೆ. ಈ ಒಂದೊಂದು ಹಾಡೂ ಪಲ್ಲವಿ, ಚರಣಗಳಿಂದ ಕೂಡಿದೆ ಮತ್ತು ಬೇರೆ ಬೇರೆ ರಾಗವನುಳ್ಳುದಾಗಿದೆ. ಈ ಹಾಡುಗಳು ನಾಯಕ ನಾಯಿಕಾ ಸಂಬಂಧವನ್ನುಳ್ಳವಾಗಿದೆ. ಶ್ರೀರಂಗಪಟ್ಟದಲ್ಲಿರುವ ಪಶ್ಚಿಮ ರಂಗನಾಥಸ್ವಾಮಿಯನ್ನೇ ನಾಯಕನನ್ನಾಗಿ ಹೇಳಿ ಅವನಲ್ಲಿ ಸ್ತ್ರೀಯರಿಗೆ ಶೃಂಗಾರ ವಿಷಯವನ್ನು ಕವಿ ಕಲ್ಪಿಸಿದ್ದಾನೆ. ಹಾಡುಗಳ ಕೊನೆಯಲ್ಲಿ ತನ್ನರಾಜನಾದ ಚಿಕದೇವರಾಜನ ಹೆಸರನ್ನೂ ಸೂಚಿಸುವ ಉದ್ದೇಶದಿಂದ ಚಿಕದೇವರಾಯನನ್ನು ಪೊರೆವ (ರಕ್ಷಿಪ ಮುಂತಾಗಿ) ರಂಗನಾಥ (ರಂಗನಾಯಕ, ರಂಗೇಶ ಮುಂತಾಗಿ) ನು ಎಂದು ಒಂದೊಂದರಲ್ಲಿಯೂ ಹೇಳಿದ್ದಾನೆ.

ಕವಿ ಚಿಕ್ಕುಪಾಧ್ಯಾಯನು. ಇವನ ವಿಷಯವಾಗಿ ತಿಳಿಯ ಬಯಸುವವರು ಹಿಂದಣ ೨೫೭೭ ನೆಯ ನಂಬರನ್ನೂ ಕವಿಚರಿತ್ರೆ (ಸಂಪುಟ ೨) ಯನ್ನೂ ನೋಡುವುದು.

No. 1260. ಶೃಂಗಾರಸೂತ್ರೋದಾಹರಣೆ by ಚಿಕ್ಕುಪಾಧ್ಯಾಯ.
ŚṚNGĀRASŪTRŌDĀHARAṆE by CIKKUPĀDHYĀYA.

Substance, paper. Size, $10\frac{3}{8} \times 9\frac{1}{2}$ inches. Pages, 55. Lines, 20 on a page. Extent, 546 granthas. Character, Kannada. Condition, good. Appearance, new. Mode of writing, good.

Restored in 1930–31 from the Ms. described above (D. No. 1259).

Complete.

(ವಿ-ವಿ.)—

ಸಮಗ್ರ. ಕಾಗದದ ಪ್ರತಿ. ಇದು ಹಿಂದೆ ವರ್ಣಿತವಾಗಿರುವ ಪ್ರತಿಯ ಪ್ರತಿಕೃತಿಯಾಗಿದೆ. ಲಿಪಿ ಚೆನ್ನಾಗಿದೆ.

No. 1261. ಸಭಾಪತಿ ಲಕ್ಷಣವು.
SABHĀPATI LAKṢAṆAVU.

Substance, palm-leaf. Size, $11 \times 1\frac{1}{8}$ inches. Pages, 23. Lines, 5 on a page. Extent, 140 granthas. Character, Kannada. Condition, very much unjured. Appearance, old. Mode of writing, good.

Begins on fol. 61-*a* of the manuscript described under No. 936 ante.

Deals with the characteristics of the President of the assembly.

Beginning :

ಸಭಾಕಲ್ಪತರುಂ ವಂದೇ । ವೇದಶಾಖೋಪ ಶೋಭಿತಂ ॥
ಶಾಸ್ತ್ರಪುಷ್ಪಂ ಸಮಾ [ಂಕಿಲಾ] (ಯುಕ್ತಂ) । ವಿದ್ವದ್ಭ್ರಮರ ಶೋಭಿತಂ ॥

*　　*　　*　　*

ಕಂ॥ ಶ್ರೀರಮ್ಯಂ ನುತಗುಣ ಕ್ಯಂ ।
ಗಾರಂ ರಾಜಾನ್ವಯ ಪ್ರಕಾಶಂ ನುತದಾ ।
ಸಾರೂಢಂ ಸಕಲ ಕಲಾ ।
ಪಾರಂಗತನೊಪ್ಪುತಿರ್ದ ಸಭಾಪತಿಯೆನಲುಂ ॥ (?)

End :

ಗಾಂದಾರಾ ಕೇರಳಾ ಗುರ್ಜರಾ ಕುಂತಳಾ ಅವಂತೀ ದ್ವಾರಕಾ ಮಧುರಾ . . . . ದ ಭಾಷೆಯುಂ ಬಲ್ಲವನಾಗಿ, ಇಂದ್ರ, ಅಗ್ನಿ, ಯಮ ನೈಋತ್ಯ . . . . . ಋ ತಾನಾಗಿಹಂತ ತಾನು ಸಭಾಪತಿಯು ತಾನಕ್ಕೆ ಯೋ . . . .

Colophon :

(ಸಭಾಪತಿ ಲಕ್ಷಣಂ) ಸಮಾಪ್ತಂ.

(ವಿ.ವಿ.)—

ಸಮಗ್ರವೆನ್ನಬಹುದು. ಅತ್ಯಂತ ಶಿಥಿಲವಾದ ಪ್ರತಿ. ಲಿಪಿ ಚೆನ್ನಾಗಿದೆ. ಕೊನೆಯಲ್ಲಿ ಒಂದು ಓಲೆಯ ಒಂದು ಬದಿಯಲ್ಲಿ ಶಕುನ ವಿಷಯ ಸಂಬಂಧವಾದ ಮೂರು ಪಂಕ್ತಿಗಳಿವೆ. ಇದರೊಡನೆ ಸಿದ್ಧ ನೀತಿ, ಚೋಳರಾಜ ಸಾಂಗತ್ಯಗಳಿವೆ.

ಇದು ಪದ್ಯ ಗದ್ಯಗಳಲ್ಲಿ (ಚಂಪೂ) ಬರೆದಿದೆ. ಸಂಸ್ಕೃತ ಶ್ಲೋಕಗಳೂ ಇವೆ. ಸಭಾನಾಯಕನ ಲಕ್ಷಣ ಮುಂತಾದುವು ಇದರಲ್ಲಿ ಉಕ್ತವಾದ ವಿಷಯವು.